UNIVERSAL
LIBRARY
OU_200873
UNIVERSAL
LIBRARY

ಕನ್ನಡ

ಪದ್ಯಸುಧಾದಾಯಿನಿ.

— ಇದರಲ್ಲಿ —

ಆಧುನಿಕ ಕವಿವರ್ಯರುಗಳಾದ ಶ್ರೀಗುರು ವಾದಿರಾಜ ಸ್ವಾಮಿ
ಗಳವರು, ವೆಂಕಣ್ಣ ಕವಿಗಳು, ವಾಸುದೇವ ಪ್ರಭುಗಳು,
ಶೇಷ ಪ್ರಭುಗಳು, ಕವಿ ರಾಮಕೃಷ್ಣಯ್ಯನವರು,
ತಲಚೇರಿ ವಾಸುದೇವ ಶ್ಯಾನಭಾಗರು, ಬಂಗ್ಲೆ
ನಾರಾಯಣ ಕಾಮತರವರು, ಹರಿದಾಸ
ಲಕ್ಷ್ಮೀನಾರ್ಣಪ್ಪಯ್ಯನವರು, ಇವರು
ಗಳಿಂದ ವಿರಚಿತವಾದ ಅನೇಕ
ಉತ್ತಮೋತ್ತಮವಾದ
ಪದ್ಯಗಳಿರುತ್ತವೆ.

ಮೂಲ್ಕಿಯಲ್ಲಿರುವ ಉಡಿಯಾವರ ಕೊಂಗ ಶ್ಯಾನಭಾಗರಿಂದ
ಸಂಗ್ರಹಿಸಿ, ಪರಿಶೋಧಿಸಿ,

ಪ. ನಾರಾಯಣ ಪ್ರಭುಗಳವರಿಂದ

ಸ್ವಕೀಯ ಉಡುಪಿ ಪ್ರಭಾಕರ ಮುದ್ರಾಯಂತ್ರದಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

1927.

ಇದರ ಸಂಪೂರ್ಣ ಹಕ್ಕು ಪ್ರಕಾಶಕರದಾಗಿರುತ್ತದೆ.

(All Rights Reserved.)

Price: 0—12—0]   [ಬೆಲೆ: 0—12—0

Printed & Published by
P. N. PRABHU,
at the
PRABHAKARA PRESS, UDIPI.

ನೋಡಬೇಕು!

|| ಕಲೌ ತದ್ಧರಿಕೀರ್ತನಾತ್ ||

ಎಂಬ ಉಕ್ತಿಯಂತೆ ಈ ಕಲಿಯುಗದಲ್ಲಿ ಪರಮಾತ್ಮನ ನಾಮಸಂಕೀರ್ತನೆಗಳಿಂದಲೇ ಮುಕ್ತಿ ದೊರೆಯುತ್ತದೆಂಬುದು ಶಾಸ್ತ್ರಸಿದ್ಧಾಂತವು. ಇದಕ್ಕನುಸರಿಸಿ ಪ್ರಸಿದ್ಧ ಪುರಾತನ ಕವಿವರ್ಯರುಗಳಿಂದ ವಿರಚಿತವಾದ ಕನ್ನಡ, ಮರಾಠಿ, ಹಿಂದುಸ್ಥಾನಿ ಭಾಷೆಯ ಅನೇಕಾನೇಕ ಅತ್ಯುತ್ತಮ ಪದ್ಯ ವ ಕೀರ್ತನೆಗಳನ್ನು ಬಹಳ ಕಾಲದಿಂದಲೂ. ಬಹು ಪರಿಶ್ರಮದಿಂದಲೂ ಸಂಗ್ರಹಿಸಿ **ಪದ್ಯರತ್ನಾಕರ**ವೆಂಬ ಗ್ರಂಥವನ್ನು 1. 2. 3ನೇ ಭಾಗಗಳಾಗಿ ಈ ಮೊದಲೇ ಪ್ರಕಟಿಸಲ್ಪಟ್ಟಿರುತ್ತದೆ.

ಅಂತೆಯೇ ಆಧುನಿಕ ಕವಿಗಳ ಭಕ್ತಿರಸಭರಿತವಾದ ಪದಗಳನ್ನು ಸಹ ಸಂಗ್ರಹಿಸಿ ಪ್ರಕಟಪಡಿಸಬೇಕಾಗಿ ಬಹು ಕಾಲದಿಂದಲೂ ಬಹಳ ಆಶೆಯಿಂದಿದ್ದ ನನಗೆ ಅವನ್ನು ಸಂಗ್ರಹಿಸುವುದು ಕಷ್ಟಸಾಧ್ಯವಾಗಿ ಈ ಕುರಿತು ಶ್ರೀಯುತ ಮೂಲ್ಕಿ ಕೊರಗ ಶ್ಯಾನಭಾಗರಲ್ಲಿ ಬಿನ್ನವಿಸಿ ಕೊಂಡದ್ದಕ್ಕೆ ಅವರು ಹೆಚ್ಚಿನ ಸಾಹಸಪಟ್ಟು ಸಂಗ್ರಹಿಸಿ ಅದರ ಸಂಪೂರ್ಣಹಕ್ಕು ಸಮೇತ ನನಗೆ ಕೊಟ್ಟು ನನ್ನ ಈ ಕೋರಿಕೆಯನ್ನು ನೆರವೇರಿಸಿಕೊಟ್ಟ ಬಗ್ಗೆ ಅವರಿಗೆ ತುಂಬಾ ಕೃತಜ್ಞನಾಗಿರುತ್ತೇನೆ.

ಈ ವಿನಾ, ಶ್ರೀ ಬಂಗ್ಲೆ ನಾರಾಯಣ ಕಾಮತ್‌ರವರ ಪದ್ಯಗಳನ್ನು ದೊರಕಿಸಿಕೊಟ್ಟ ಮೂಲ್ಕಿ ವೇ|| ಸದಾನಂದ ಸಾಂತಯ್ಯ ಭಟ್ರವರಿಗೂ, ತಲಚೇರಿ ಶ್ರೀ ವಾಸುದೇವ ಶ್ಯಾನಭಾಗರ ಬಾಬತ್ತು ಇನ್ನೂ ಕೆಲವು ಪದ್ಯಗಳನ್ನು ಕಳುಹಿಸಿಕೊಟ್ಟ ಶ್ರೀಯುತ ಕುಡ್ವಾ ಕೃಷ್ಣ ಕಿಣಿಗಳವರಿಗೂ ಹೆಚ್ಚಿನ ಆಭಾರಿಯಾಗಿರುತ್ತೇನೆ.

ಇದರಲ್ಲಿ ಕೊಟ್ಟಿರುವ ಪದ್ಯಗಳು ಹೊರತಾಗಿ ಇಂಥ ಕವಿಗಳ ಇನ್ನೂ ಅನೇಕ ಪದ್ಯಗಳೂ ಅಲ್ಲಲ್ಲಿ ಇರಬಹುದು. ಇದರಲ್ಲಿಲ್ಲದ ಅಂಥಾ ಪದ್ಯಗಳು ಯಾರ ಕೂಡೆಯೂ ಇದ್ದಲ್ಲಿ ಪ್ರೀತಿಯಿಂದ ಅವುಗಳನ್ನು ಕಳುಹಿಸೋಣಾಗಿ ಇದರ ದ್ವಿತೀಯ ಭಾಗವನ್ನು ಮುದ್ರಿಸಲು ಪ್ರೋತ್ಸಾಹವಿತ್ತು ತತ್ಪುಣ್ಯಭಾಗಿಗಳಾಗ ಬೇಕಾಗಿ ವಿನಯ ಪೂರ್ವಕ ವಿನಂತಿಯಾಗಿರುತ್ತದೆ.

ಪ್ರಭಾಕರ ಮುದ್ರಾಯಂತ್ರದ ಆಫೀಸು,
ಉಡುಪಿ, ತಾ. 1-7 1927.

ಇತಿ ಸಜ್ಜನವಿಧೇಯ,
ಪ. ನಾರಾಯಣ ಪ್ರಭು,
ಪ್ರಕಾಶಕ.

ವಾಚಕಮಹಾಶಯರಲ್ಲೊಂದು ವಿಜ್ಞಾಪನೆ.

ಮಹನೀಯರೇ,

ಈ ಪುಸ್ತಕದಲ್ಲಿ ಕೊಟ್ಟಿರುವ ಪದ್ಯಸಂಕೀರ್ತನೆಗಳು ಪ್ರಯತ್ನದಿಂದ ಸಂಗ್ರಹಿತವಾದುವುಗಳು. ಇವರಲ್ಲಿ ರಚಿಸಿದ ಕವಿಗಳು ತಮ್ಮತಮ್ಮ ಕೃತಿಗಳನ್ನು ತಕ್ಕ ಪುಸ್ತಕಗಳಲ್ಲಿ ಚೊಕ್ಕಟವಾಗಿ ಬರೆದಿಡದೆಯೂ, ಅವನ್ನು ಮುದ್ರಿಸಿ ಪ್ರಚಾರಪಡಿಸದೆಯೂ, ತಮ್ಮ ಆಯುಷ್ಕಾಲವನ್ನು ಕಳೆದರು. ಈ ಎಲ್ಲಾ ಕೃತಿಗಳು ಯಾರ ಸ್ವಾಧೀನ ಆದರೂ ಬಹಿರಂಗವಾಗದೆ ತನ್ನಂತೆಯೇ ನಾಶವಾಗುತ್ತಾ, ಇನ್ನು ಸ್ವಲ್ಪಕಾಲಗಳಲ್ಲಿಯೇ ನಿಶ್ಶೇಷವಾಗುವುವೆಂದು ತಿಳಿದು ಆ ಮಹನೀಯ ಕವಿಗಳ ಲೋಕೋದ್ಧಾರ ಕರ್ತವ್ಯವನ್ನು ಚಿಂತಿಸಿದವರಾಗಿ, ಉದಾರಗುಣಸಂಪನ್ನರಾದ ದಿವಂಗತ ಶ್ರೀಯುತ ಮಂಗಳೂರು ಅಮ್ಮೆಂಬಳ ಸುಬ್ರಾಯಪೈಗಳವರು ಪ್ರೇರೇಪಣೆಯಿತ್ತ ಪ್ರಕಾರ ಇವರಲ್ಲಿರುವ ಅನೇಕ ಕೃತಿಗಳನ್ನು ಸಂಗ್ರಹಿಸುವುದರಲ್ಲಿ ನನಗೆ ಹೆಚ್ಚು ಸಮಯವೂ, ಶ್ರಮವೂ ಬೇಕಾಯಿತು. ಇದರಲ್ಲಿ ಅನೇಕ ತಪ್ಪುಗಳಿರಬಹುದಾದರೂ ಸುಜ್ಞರು ಮುಂದಿನ ಮುದ್ರಣದಲ್ಲಿ ಸರಿಪಡಿಸಲು ಅನುಕೂಲವಾಗುವಂತೆ ತಿಳಿಸಿದರೆ ಮಹತ್ತಾದ ಉಪಕಾರವೆಣಿಸುವೆನು. ಇದಲ್ಲದೆ ಈ ವಿನಹಾ ಇನ್ನೂ ಅಚ್ಚುಹಾಕದೆ ಉಳಿದಿರುವ ದಿವಂಗತ ವೆಂಕಣ್ಣ ಕವಿಗಳ, ವಾಸುದೇವ ಪ್ರಭುಗಳ, ಇವರ ಪುತ್ರ ಶೇಷ ಪ್ರಭುಗಳ, ಕವಿ ರಾಮಕೃಷ್ಣಯ್ಯನವರ, ಹರಿದಾಸ ಲಕ್ಷ್ಮೀನಾರ್ಣಪ್ಪಯ್ಯನವರ, ತಲಚೇರಿ ವಾಸುದೇವ ಶ್ಯಾನಭಾಗರ, ಬಂಗ್ಲೆ ನಾರಾಯಣ ಕಾಮತ್ ರವರ ಮೊದಲಾದ ಯೋಗ್ಯ ಸುಧಾರಕ ಕವಿಗಳ ಸಂಕೀರ್ತನೆಗಳು, ಯಕ್ಷಗಾನ, ದಂಡಕಾರ ಮೊದಲಾದ ಕಾವ್ಯರೂಪ ಪ್ರಬಂಧಗಳನ್ನು ಒದಗಿಸಿ ಕೊಡುವವರಿಗೆ ಯಾ ಅವರೇ ಅಚ್ಚುಹಾಕಿಸಿ, ಆ ಕಾವ್ಯಗಳನ್ನು ಪ್ರಚಾರಕ್ಕೆ ತರುವವರಿಗೆ ನಾನು ಕೃತಜ್ಞನಾಗಿರುವೆನು.

ಈ ನನ್ನ ಅತ್ಯಾತುರ ಲೋಕಸೇವೆಯಲ್ಲಿ ಸಹಾಯಕರಾದ ಮಹಾನುಭಾವರಾದ ಪಾವಂಜೆಯ ಎಸ್. ಜಿ. ಎಸ್. ಸಂಸ್ಕೃತ ಶಾಲಾ ಉಪಾಧ್ಯಾಯ ಶ್ರೀಯುತ ಟಿ. ಬಿ. ವೆಂಕಟರಮಣಾಚಾರ್ಯರು ಮತ್ತು ಪಾವಂಜೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ಅರ್ಚಕ ವಾಸುದೇವ ಭಟ್ಟರವರು ಸಹಾ ಅತೀ ಪ್ರೀತಿಯಿಂದ ಈ ಪುಸ್ತಕವಲ್ಲಿ ಸೇರಿಸಿ, ಛಾಪಿಸುವಂತೆ ಮೂಲ್ಕಿ ಬಪ್ಪನಾಡು ಹರಿದಾಸ ಲಕ್ಷ್ಮೀನಾರ್ಣಪ್ಪಯ್ಯನವರು ರಚಿಸಿದ ಕೆಲವು ಕೃತಿಗಳನ್ನು ನನಗೆ ಕೊಟ್ಟಬಗ್ಗೆ ನಾನು ಅವರಿಗೆ ಅತೀ ಕೃತಜ್ಞನಾಗಿರುತ್ತೇನೆ.

ಹೀಗೆಯೇ ಮಹನೀಯರು ಇನ್ನು ಮುಂದೆಯೂ ಇಂಥಹ ಸಂಕೀರ್ತನೆಗಳನ್ನು ಒದಗಿಸಿ ರವಾನಿಸಿಕೊಡುವಂತೆ ಸಾದರದಿಂದ ಬೇಡಿಕೊಳ್ಳುತ್ತೇನೆ.

ಇದನ್ನು ಮುದ್ರಿಸಿ, ಪ್ರಕಟಿಸುವ ಸಂಪೂರ್ಣ ಹಕ್ಕು ಸ್ವಾತಂತ್ರ್ಯವನ್ನು ಉಡುಪಿ ಪ್ರಭಾಕರ ಛಾಪಖಾನೆಯ ಮುಖ್ಯಾಧಿಕಾರಿಗಳಾದ ಶ್ರೀಯುತ ಪ. ನಾರಾಯಣ ಪ್ರಭುಗಳವರಿಗೆ ಕೊಟ್ಟಿರುತ್ತೇನೆ.

ಇಂತಿ ವಾಚಕಶಿರೋಮಣಿಗಳ ಅತ್ಯಂತ ವಿಧೇಯ,

ಮೂಲ್ಕಿ.
ತಾ. 10—8—1925.

ಉ. ಕೊರಗ ಶ್ಯಾನಭಾಗ.

ಅನುಕ್ರಮಣಿಕೆ.

ಪದ್ಯನಂಬರು.	ಪದ್ಯಗಳು.	ಪುಟ.
	ಅ	
೩೬	ಅಲ್ಲಲ್ಲಲ್ಲಲ್ಲಾ ಸುಖವಿನ್ನೆಲ್ಲಿ	೩೨
೩೭	ಅಂಗುಲ್ಯಾಕೇ ಕವಾಟಂ	೩೩
೪೨	ಅಚ್ಯುತಾನಂತ ಗೋವಿಂದ	೫೭
೭೨	ಅಮವಾ ಇದೇನೆ ಇಂದಿನ	೯೫
೯೨	ಅಭಯ ಬೇಡೊ ಸುಮನ	೧೧೦
	ಆ	
	ಆರಿಗುಸುರುವೆ । ಇಂದೆನ್ನಘ	೩೯
	ಇ	
೧೦೭	ಇಂಥಾ ಸುಖವಾಂತುನಂತೆ	೧೨೪
	ಈ	
೪೭	ಈರೇಳು ಜಗದೊಳು ನೀನೇ	೬೫
	ಎ	
೬	ಎಣಿಸಲಳವೆ ನಿನ್ನ । ಗುಣದ	೧೦
೭	ಎನ್ನನುದ್ಧರಿಸಲಾಗದೆ । ಚನ್ನ	೧೦
೮	ಎನ್ನಪ್ಪ ಕಂದನೇ ಚಿಣ್ಣಾ	೧೧
೧೫೪	ಎಂದಿಗೆ ದೊರಕುವನು।	೧೪೬
	ಏ	
೩೫	ಏನನೆಂಬೆನು ಕೃಷ್ಣನ ...	೩೨
	ಏಣಾಕ್ಷಿ ಬರಿದೆನ್ನ ಊಣೆಯ	೩೭
	ಒ	
೩೩	ಒಬ್ಬನೆ ದೇವ ಕೇಶಾ। ನರಹರಿ	೩೦
	ಓ	
೧೨೩	ಓಂ ನಮೋ ಭಗವತೇ	೧೩೦
	ಕ	
೧೫	ಕಂಜಾಕ್ಷ ಕಾಯಯ್ಯ ...	೧೪
೨೨	ಕಲಯೇ ತ್ವಂ ವೇದನಾಯಕ	೧೮
೨೩	ಕಲಯೇ ಶ್ರೀವೆಂಕಟೇಶಂ	೧೮
೫೨	ಕರುಣಿಸೊ ಭಾಗ್ಯಪ್ರದಾ	೭೨
೫೮	ಕರುಣಿಸೆನ್ನನು ವೆಂಕಟೇಶ	೭೮
೬೬	ಕರುಣದಿ ಪಾಲಿಸೆನ್ನ	೮೮
೧೦೩	ಕರುಣಿಸೆಮ್ಮನು ನರಹರಿ	೧೨೨
೧೧೨	ಕಂಡುದನು ಪೇಳ್ವೆ ಬ್ರಹ್ಮಾ	೧೨೬
೧೩೭	ಕರುಣಿಸಬಾರದೆ ಕಂಜ	೧೩೭
೧೫೧	ಕಂಡೂ ಕೃತಾರ್ಥನಾದೆ	೧೪೪
೧೫೬	ಕರುಣಾಕರ ಪರಮೇಶ್ವರ	೧೪೭
೬೨	ಕೃಷ್ಣ ಹರೇ ಜಯ ಕೃಷ್ಣ	೮೨
	ಕಾಯೊ ಶ್ರೀಕರ ಕೇಶವಾ	೪೦
೧೨೧	ಕಾಯಬೇಕು ದೇವದೇವ	೧೩೦
೨೪	ಕುಣಿದಾಡೊ ಕೃಷ್ಣ ...	೧೮
೧೮	ಕೇಳಬಲ್ಲನೆ ಯೆನ್ನ ಮಾತನು	೧೬
೧೩೦	ಕೈಮ್ಯ ಮುಗಿವೆ ಗುರು	೧೩೩
೧೪	ಕೊಂಡಾಡಲಳವೆ ನಿನ್ನಯ	೧೪
೩೨	ಕೋಲು ಕೋಲೆನ್ನಿರೋ	೨೮
	ಗ	
೧೬	ಗಾಡಿಗಾರ ಕೃಷ್ಣರನ್ನ ಬಿಡ	೧೫
೪೫	ಗೋವಿಂದಾ ಹರಿ ಗೋವಿಂ	೬೩
	ಚ	
೭೦	ಚಂದಿರವದನೆ ಕೇಳಿಂದು	೯೩
೮೦	ಚಂದವೇನೊ ಗೋವಿಂದ	೧೦೨

ಪದ್ಯನಂಬರು.	ಪದ್ಯಗಳು.	ಪುಟ.
	ಜ	
೧೯	ಜಯಮಂಗಲಂ ನಿತ್ಯಶುಭ	೧೬
	ಜಯ ಹರಿಭಕುತರಿಗಹುದು	೪೪
೮೯	ಜಯ ಜಯ ಹೇ ಕೊಲ್ಲಾ	೧೦೭
೯೮	ಜಯ ಮಂಗಳಂ ನಿತ್ಯಶುಭ	೧೧೪
೧೨೨	ಜಗದಂಬೆ ಭಗವತೀ	೧೩೦
೧೪೦	ಜನನಿ ರುದ್ರಾಣೀ। ರಕ್ಷಿಸು	೧೩೮
೧೪೨	ಜಯತು ಜಯ ನೃಹರಿ।	೧೩೯
	ತ	
೧೩೮	ತಪ್ಪುಗಳೆಲ್ಲವ ಒಪ್ಪಿಕೊಳ್ಳೊ	೧೩೭
೧೦೫	ತಾಳಲೆಂತೈ ಹರಿಯೆ	೧೨೩
೪	ತೋರೇ ಬೇಗನೆ ತೋಯಜ	೮
೯೪	ತೋರಿಸೈ ದಯಾಸಾರ	೧೧೦
	ದ	
೧೧೯	ದಕ್ಷಸುತಾತನಯಾ। ಶ್ರೀ	೧೨೯
೧೨೮	ದಯ ಮಾಡಿ ನಡಸು। ಶಾರದೆ	೧೩೨
೧೩೪	ದಯಮಾಡೆ ಬ್ಯಾಗೇ	೧೩೫
೧೩೬	ದಂಡಿಸದೆನ್ನನು ದಯ	೧೩೬
೧೧೮	ದೀನೋದ್ಧಾರೀ। ನೃಹರಿ	೧೨೯
೨	ದೇವರಾ ದೇವನೇ ಬಾರೋ	೭
೫೫	ದೇವೀ ಸುಜನಸಂಜೀವಿ	೭೫
	ಧ	
೨೫	ಧಾಂ ಧಾಂ ಧಾಂ ಧಾಂ	೧೯
	ನ	
೧೭	ನಂದಗೋಪನ ಕಂದ	೧೫
೨೯	ನಮೋ ಭೈರವಾ। ನಮೋ	೨೫
೬೧	ನರಸಿಂಹಂ ಭಜ ನರಸಿಂಹಂ	೮೧
೭೬	ನಮೋ ನಮೋ ಶ್ರೀವಿಷ್ಣು	೯೯
೭೭	ನಂಬು ನಂಬು ಸೀತಾರಾಮ	೯೯
೧೦೧	ನರಹರಿ ನಾರಾಯಣ	೧೧೭
೧೧೩	ನರಹರಿಯಾ ನೋಡಿರೈ	೧೨೭
೧೨೭	ನಲಿದಾಡಿದಳ್ ನಳಿನಾಂ	೧೩೨
೧೪೬	ನಂಬಿದೆ ನಿನ್ನ ನಂಬಿದೆ	೧೪೨
೧೪೮	ನಮೋನಮಸ್ತೇ ಉಮಾ	೧೪೨
೧೫೨	ನಮೋ ಯತಿಕುಲ ತಿಲಕಾ	೧೪೫
೧೫೯	ನಂಬಿದೆ ನಿನ್ನ ಗಣೇಶ।	೧೪೮
೪೪	ನಾರಸಿಂಹ ನಮೋ ನಮೋ	೬೦
೧೫೫	ನೀಲಮೇಘಶ್ಯಾಮ ರಾಮ	೧೪೬
೨೬	ನುತಿಸಲೆನ್ನಳವೆ ನಿನ್ನಾ	೨೧
೬೫	ನುತಿಸಲೆನ್ನಳವೆ ಕೀರ್ತಿಯ ಶ್ರೀರಾಮನ ಮೂರ್ತಿಯ	೮೬
೭೯	ನುತಿಸಲಳವೆ ಕೀರ್ತಿಯ ಭುವನೇಂದ್ರರರ್ಥಿಯ	೧೦೦
೧	ನೆನವೆ ನಾರಾಯಣನ ಪಾದ	೧
೨೧	ನೋಡು। ಮನದಿ ಕೊಂ	೧೭
	ಪ	
೩೮	ಪತಿವ್ರತೇ। ದ್ರುಪದಸುತೇ	೩೮
೮೮	ಪ್ರಣತೇ ಶ್ರೀವಿಷ್ಣು ವೈಷ್ಣವ	೧೦೬
೧೪೬.	ಪರಮೇಶ್ವರಿ ಪಾರ್ವತಿಸತಿ	೧೪೧
೫೩	ಪಾಹಿ ಶ್ರೀಮಹಾದೇವಾ	೭೩
೫೪	ಪಾಲಿಸೆ ಮಹಾದೇವೀ ಲೋ	೭೪
೮೨	ಪಾಲಿಸು ಶ್ರೀಹರಿಯೇ	೧೦೩

ಪದ್ಯನಂಬರು.	ಪದ್ಯಗಳು.	ಪುಟ.
೯೦	ಪಾಲಿಸೈ ಶ್ರೀವೆಂಕಟೇಶ್ವರಾ	೧೦೮
೧೧೫	ಪಾಲಿಸು ಕರುಣದಿ ಲಾಲಿಸಿ	೧೨೮
೧೨೦	ಪಾಲಿಸೈ ತ್ರಿಶೂಲಿಯೇ	೧೨೯
೧೩೩	ಪಾಲಿಸು ಮಹಮ್ಮಾಯಿ	೧೩೫
೧೪೪	ಪಾಹಿ ಪಾರ್ಥಸಾರಥೇ	೧೪೧
೧೪೯	ಪ್ರಾಣಾಂತರ್ಗತ ಪ್ರಾಣಾ	೧೪೩
೧೩೨	ಪಿಡಿಯೆನ್ನ ಕೈಯ್ಯ। ಜಗನ್ನ	೧೩೪
೨೭	ಪೊಗಳಲಿನ್ನಳವೆ ನಿನ್ನಾ	೨೨
೧೧೪	ಪೊರೆಯುವದೆಮ್ಮನು । ನರ	೧೨೭

ಬ

ಪದ್ಯನಂಬರು.	ಪದ್ಯಗಳು.	ಪುಟ.
೯	ಬಂದಾನಲ್ಲೆ ಭಾಗ್ಯನಿಧಿ	೧೨
೧೦೬	ಬಪ್ಪ ಶುಭಾಶುಭ ತಪ್ಪ	೧೨೪
೧೩೯	ಬಂಡೆ ಭವತ್ಪದಯುಗಾರ	೧೩೮
೫	ಬಾಲನೇನೇ ನಿನ್ನ ಮಗನು	೯
೩೪	ಬಾರೋ ದೇವಾ । ಸುಜ	೩೧
೫೯	ಬಾರೋ ಬೇಗ ಬಾರೋ	೭೯
೧೪೧	ಬಾರಮ್ಮ ಸರಸ್ವತಿ ಬಾ	೧೩೯
೧೫೮	ಬಾ ಬಾ ಬಾ ಹರಿಯೆ	೧೪೭
೧೦	ಬಿಡೆನೊ ಬಿಡೆನೊ ನಿನ್ನ	೧೨
೩೦	ಬಿಂದುಮಾಧವಾ ನಮೋ	೨೬

ಭ

ಪದ್ಯನಂಬರು.	ಪದ್ಯಗಳು.	ಪುಟ.
೧೧	ಭಕುತರಪರಾಧವ ಬಗೆಯ	೧೩
೪೦	ಭಕ್ತಿಯಲಿ ಭಜಿಸು ಹರಿಯಾ	೪೯
೧೩೫	ಭಕತಸಂಸಾರಿ ಹರಿ । ತಕಟ	೧೩೬
೬೮	ಭಾವಕೀ ನೋಡಿವನ್ಯಾರೀ	೮೯

ಪದ್ಯನಂಬರು.	ಪದ್ಯಗಳು.	ಪುಟ.

ಮ

ಪದ್ಯನಂಬರು.	ಪದ್ಯಗಳು.	ಪುಟ.
೧೩	ಮನ್ನಿಸೆನ್ನ ಮಧುಸೂದನ	೧೪
	ಮಂಗಳ ಜಯ ಮಂಗಳ	೪೫
೮೫	ಮಂಗಳಾರತಿಯ ಪಾಡಿ	೧೦೫
೯೬	ಮಂಗಳಾಂಗ ಮನ್ನಿಸು	೧೧೩
೧೦೯	ಮಂದರಧರನ ನೋಡಿ	೧೨೫
೧೧೧	ಮಂಗಲಂ ರಥಾಂಗಪಾಣೆ	೧೨೬
೧೫೦	ಮನವೆ ಶ್ರೀನಾರಾಯಣ	೧೪೩
೧೫೩	ಮನವು ನಿನ್ನಲಿ ನಿಲ್ಲಲಿ	೧೪೫
೪೬	ಮಾತೊಂದೊಲಿಸಬಾರದೆ	೬೫
೧೫೭	ಮಾತೆ ಸರಸ್ವತಿ ಮಂಗಳ	೧೪೭

ಯ

ಪದ್ಯನಂಬರು.	ಪದ್ಯಗಳು.	ಪುಟ.
೩	ಯಾನ ರೀತಿಯಿಂದ ಎನ್ನನು	೮
೫೭	ಯಾಕೆ ನೀನಿಲ್ಲಿ ಪವಡಿಸಿದೆ	೭೭

ರ

ಪದ್ಯನಂಬರು.	ಪದ್ಯಗಳು.	ಪುಟ.
೭೯	ರಮಣಿ ಇಂದಿನಲಿ ನೋಡ	೯೧
೧೪೩	ರಕ್ಷಿಸು ಮನದಾಪೇಕ್ಷೆಯ	೧೪೦
೩೧	ರಾಮರಾಮೆನ್ನಿರೋ। ಸೀತಾ	೨೭
೬೩	ರಾಮ ಹರೇ ಜಯ ರಾಮ	೮೪

ವ

ಪದ್ಯನಂಬರು.	ಪದ್ಯಗಳು.	ಪುಟ.
೭೫	ವಂದೇ ಶ್ರೀಕೃಷ್ಣಂ ಗೋ	೯೮
೧೦೪	ವರ್ಣಿಸಲಿನ್ನಳವೆ ಸಂಪೂ	೧೨೩
೧೩೧	ವಲ್ಲೀದೇವಿಯ ವಲ್ಲಭನೇ	೧೩೪
೮೧	ವಾಣಿ ವರದೇ ವರಪದ್ಮ	೧೦೨

ಪದ್ಯನಂಬರು.	ಪದ್ಯಗಳು.	ಪುಟ.
೧೨	ವೇಣುನಾದಪ್ರಿಯ ಗೋ	೧೩
೪೯	ವೆಂಕಟರಮಣಗೆ । ಶ್ರೀನಾರ	೬೭
೫೧	ವೆಂಕಟೇಶ ಜಯ: ನಮೋ	೭೦
೫೬	ವೆಂಕಟರಮಣ ದೇವರ ದೇವ	೭೬
೬೦	ವೆಂಕಟೇಶ ನಮೋ ನಮೋ	೭೯

ಶ

ಪದ್ಯನಂಬರು.	ಪದ್ಯಗಳು.	ಪುಟ.
೨೦	ಶ್ರೀಗಣಪ ಶರಣು । ಶಿವ	೧೭
೨೮	ಶ್ರೀಲೋಲ ವೆಂಕಟೇಶನ	೨೪
	ಶ್ರೀನಿವಾಸನ ಸಾರಿದವರಿಗೆ	೪೨
	ಶ್ರೀಕೃಷ್ಣನ ಕೃಪೆಯು ।	೪೩
೩೯	ಶ್ರೀನರಹರಿ ಶರಣಾಗತ	೪೬
೪೧	ಶ್ರೀಕೃಷ್ಣನೊಲಿದ ಭಕುತ	೫೪
೪೩	ಶ್ರೀಶ ಕ್ಷೀರಾರ್ಣವನಿಲಯ:	೫೮
೫೦	ಶ್ರೀಲೋಲ ಪಾಲಿಸೆನ್ನಾ	೬೮
೬೪	ಶ್ರೀಹರಿ ಕೃಷ್ಣಮುರಾರಿ	೮೫
೭೩	ಶ್ರೀರಾಧಾವಲ್ಲಭ । ಸಜ್ಜನ	೯೭
೭೪	ಶ್ರೀವೈಕುಂಠಪತೇ । ವಿಶ್ವ	೯೮
೭೮	ಶ್ರೀರಘೂತ್ತಮ ರಾಘವಾ	೧೦೦
೮೪	ಶ್ರೀಹರಿಯೇ ಎನ್ನ ಮರೆ	೧೦೪
೮೬	ಶ್ರೀಮನೋಹರ ಕೃಷ್ಣ	೧೦೫
೯೧	ಶ್ರೀರಾಮ ಸೀತಾಪತೇ	೧೦೯
೯೭	ಶ್ರೀಮನೋಲ್ಲಭ ನಾರಾ	೧೧೪
೯೯	ಶ್ರೀಭುವನೇಂದ್ರ ದಯಾ	೧೧೫
೧೦೨	ಶ್ರೀವ್ಯೊಳಲಂಕೇಶಾಯ	೧೨೧
೧೧೦	ಶ್ರೀಶಾ ಸರ್ವೇಶಾ ···	೧೨೫
೧೧೭	ಶ್ರೀಶ ಸುರಾಧೀಶ ನರ	೧೨೮
೧೨೪	ಶ್ರೀರಮಾವರ ಸುರಚಿರ	೧೩೧
೧೨೬	ಶ್ರೀಗಜವಕ್ತ್ರ ಪವಿತ್ರ ನಮೊ	೧೩೧
೧೬೦	ಶ್ರೀ ಗೌರೀಸುಕುಮಾರ	೧೪೮

ಸ

ಪದ್ಯನಂಬರು.	ಪದ್ಯಗಳು.	ಪುಟ.
೬೭	ಸಮಯವಿದಲ್ಲ ರನ್ನ। ತಾಳೊ	೮೯
೭೧	ಸರಸಿಜಾಕ್ಷ ಇವನ ನಿಜವ	೯೪
೮೩	ಸ್ವರ್ಣಕೆತ್ತಿಗೆಯಾದ ಚಲುವ	೧೦೩
೧೦೮	ಸಾಕು ಸಾಕು ನರಹರಿಯೆ	೧೨೪
೧೨೫	ಸಿದ್ಧಸಾಧ್ಯಾರಾಧ್ಯಂ ।	೧೩೧
೧೨೯	ಸುಬ್ರಹ್ಮಣ್ಯ ಸ್ವಾಮಿತೇ	೧೩೩

ಹ

ಪದ್ಯನಂಬರು.	ಪದ್ಯಗಳು.	ಪುಟ.
೪೮	ಹರಿಕೃಷ್ಣ ಎನಬಾರದೇ	೬೬
೮೭	ಹರಿ ಸರ್ವೋತ್ತಮ ಶ್ರೀ	೧೦೬
೯೩	ಹರ ವಿಧಿವರದ ಶ್ರೀಹರಿ	೧೧೦
೧೪೫	ಹರೇ ಶಂಕರಾ ಪಾರ್ವತೀ	೧೪೧
೯೫	ಹ್ಯಾಗೆ ಪೋಗಲಿ ಯದುಪ	೧೧೨
೧೦೦	ಹಿಂಗದೆ ಮನದಣಿಯೆ	೧೧೬

ಕ್ಷ

ಪದ್ಯನಂಬರು.	ಪದ್ಯಗಳು.	ಪುಟ.
೧೧೬	ಕ್ಷೀರಸಾಗರ ಶಯನಾ ।	೧೨೮

॥ ಅನುಕ್ರಮಣಿಕೆ ಸಮಾಪ್ತಃ ॥

॥ ಶ್ರೀ ಗಣೇಶಾಯ ನಮಃ ॥

ಲಕ್ಷ್ಮೀಪತೇ ಕಮಲನಾಭ ಸುರೇಶ ವಿಷ್ಣೋ ।
ವೈಕುಂಠ ಕೃಷ್ಣ ಮಧುಸೂದನ ಪುಷ್ಕರಾಕ್ಷ ॥
ಬ್ರಹ್ಮಣ್ಯ ಕೇಶವ ಜನಾರ್ದನ ವಾಸುದೇವ ।
ದೇವೇಶ ದೇಹಿ ಕೃಪಣಸ್ಯ ಕರಾವಲಂಬಂ ॥ ೧ ॥

ಶ್ರೀಗುರುವಾದಿರಾಜಕೃತ ಪದಗಳು.

॥ ಸ್ವಪ್ನಾಧ್ಯಾಯ ॥

(ಈ ಸ್ವಾಮಿಯವರಿಗೆ ಶ್ರೀಹಯಗ್ರೀವದೇವರು ಪ್ರತ್ಯಕ್ಷವಾಗಿ ಹೇಳಿದ ಸದ್ಬೋಧೆಯು.)

॥ ೧ ॥ ॥ ಭಾಮಿನಿಷಟ್ಪದಿ ॥

ನೆನವೆ ನಾರಾಯಣನ ಪಾದವ । ನೆನವೆ ನಾರಾಯಣಿಯ ಚರಣವ । ನೆನೆದು ಪ್ರಾಣನ ಪದವ ಭಾರತಿದೇವಿಯಂಘ್ರಿಯನೂ ॥ ನೆನೆದು ಶ್ರೀಹಯವದನ ಸ್ವಪ್ನದೊ । ಳೆನಗೆ ಪೇಳಿದ ಪದವ ಲೋಕದ । ಜನಕೆ ಸಂಗ್ರಹವನ್ನು ಮಾಡುವೆನವನ ಕೃಪೆಯಿಂದಾ ॥ ೧ ॥ ಎನ್ನ ಸೇವೆಯ ಬೇಸರದೆ ದಿನ । ದಿನ್ನ ಮಾಡುವ ಮಾನವರ್ಗೆ ಪ್ರ । ಸನ್ನನಹೆನು ಕೃಪಾಳು ಎಂಬುದು ಎನಗೆ ಬಹುಬಂದೂ ॥ ಮನ್ನದಲಿ ಬೇಸತ್ತುಕೊಂಡರೆ । ಮಣ್ಣು ಹೊಸದೆ ಬಿಡೆನು ಅದರಿಂ । ದುನ್ನತೋನ್ನತ ಪೂಜೆಗಳನನುದಿನದಿ ಮಾಡೆಂದಾ ॥ ೨ ॥ ಕೇಳು ಮಾನವ ನಾನು ಭಕ್ತರು । ಪೇಳಿದಂದದಿ ನಲಿದು ಅವರನು । ಲಾಲಿಸುತ ಪಾಲಿಸುತ ಬಿಡೆನೆಂಬುದು ನಿದಾನವಿದೂ ॥ ಆಲಸವ ಮಾಡಿದಡೆ ತಾಳೆನು । ಕಾಲಕಾಲದೊಳೆನ್ನ ಪೂಜೆಯ । ಮೇಲು ಮೇಲನೆ ಮಾಡು ನೀ ಕೊಂಡಾಡು ಕುಣಿದಾಡೂ ॥ ೩ ॥ ದೀನ ಮಾನವ ನಾನು

ಭಕ್ತರ । ಧೀನವೆಂಬುದು ತಪ್ಪದವರೆನ । ಗೇನ ಮಾಡಿದರದನು ಕೈ ಕೊಂಬೆನು ಸರಾಗದಲೀ ॥ ಹಾನಿಗಳ ಕೊಡಿಸುವೆನು ಎನ್ನೊಳುದಾ । ಸಿನವ ಮಾಡಿದರೆ ನೀ ನೆರೆ । ಜಾಣನಾಗಿರು ಮರೆಯದೆನ್ನಯ ಪಾದ ನೆನವುತಿರೂ ॥ ೪ ॥ ಮಿಕ್ಕ ದೇವರ ತೆರದಿ ನಾ ಮರೆ । ಹೊಕ್ಕವರ ಬಿಡೆನೆನ್ನ ಕರುಣಕ । ಟಾಕ್ಷವೀಕ್ಷಣ ಖಳರ ಶಿಕ್ಷಿಸಿ ಎನ್ನವರ ಪೊರೆವೇ ॥ ಸೊಕ್ಕಿ ನಡೆದರೆ ಅವರ ತಕ್ಕವೆ । ದುಃಖಗಳ ತೋರಿಸುವೆ ಕೆಡಿಸೆನು । ದಿಕ್ಕುದೆಶೆ ನೆರೆ ನಂಬಿದವರೊಳುಪೇಕ್ಷೆ ಸಲ್ಲದಲೈ ॥ ೫ ॥ ಅಂಜಬೇಡೆಲೆ ಮನುಜ ನಾ ಜಡ । ಕುಂಜರನ ಕಾಯ್ದವನು ಪರಂಗೆ । ಸಂಜೆಯನು ತೋರಿಸಿ ಧನಂಜಯನಸುವ ಪೊರೆದವನೂ ॥ ಕಂಜಲೋಚನೆ ಕರೆಯೆ ವಸ್ತ್ರದ । ಪುಂಜಗಳ ಕೊಟ್ಟವಳ ಸಲಹಿದೆ । ಭಂಜಿಸಿದೆ ನಂಜುಂಡನಾ ವೈರಿಯನು ನಾನರಿಯಾ ॥ ೬ ॥ ಜಲಧಿಯೊಳಗಾಡಿದೆನು ಬೊಮ್ಮಗೆ । ಕಲಿಸಿದೆನು ಶ್ರುತಿತತಿಯ ನೀರೊಳು । ಮುಳುಗಿದದ್ರಿಯನೆತ್ತಿಕೊಟ್ಟೆನು ಸುರರ ಸುಧೆಗಾಗೀ ॥ ಇಳೆಯ ವೈರಿಯ ಕೊಂದೆ ಪಿತನಿಂ । ದಳಿವ ಶಿಶುವನು ಪೊರೆದೆ ಬಳಿಕಾ । ಬಲಿಯ ಬೇಡಿದೆ ರಾಯರನು ತಲೆಕೆಳಗು ಮಾಡಿದೆನೈ ॥ ೭ ॥ ಅಂಬುಧಿಯ ನಂಬಿಸದೆ ಧಾತ್ರಿಯ । ಕಂಬನಿಯ ತೊಡಿಸಿದೆನು ಸುಮಿತ್ರ ತ್ರಿ । ಯಂಬಕನ ಹಿತಕಾಗಿ ತ್ರಿಪುರದ ವಧುಗಳನು ಕೆಡಿಸೀ ॥ ಇಂಬುಗೊಡದೇ ಕಲಿ ಸುಧರ್ಮಕ । ದಂಬಗಳ ತುಂಬಿಸಿದೆ ಎನಗೆಣೆ । ಎಂಬ ದೇವನದಾರು ಇನ್ನೀರೇಳು ಲೋಕದಲೀ ॥ ೮ ॥ ಎನ್ನ ಪಾದೋದಕವು ಶಿವ ಪಾ । ವನ್ನವೆನುತಾದರದಿ ಧರಿಸಿದ । ನೆನ್ನ ಕರುಣದ ಬಲದಿ ವಿಧಿ ತಾ ವೇದನೋದಿದನೂ ॥ ಎನ್ನರಸಿ ರಮೆ ಸಕಲಗುಣದ ಸಂ । ಪನ್ನೆ ಸುರಮುನಿಮಾನ್ಯೆ ಶ್ರುತಿಶತ । ವರ್ಣ್ಯನೆನುತಲಿ ಮನದಿ ಮನ್ನಿಸಿ ಮುನ್ನ ವರಿಸಿದಳೂ ॥ ೯ ॥ ಎನ್ನ ವೈಕುಂಠಾದಿ ಲೋಕವೆ । ಜನ್ನಂಗೆ ಭವಬಂಧ ಮೋಚನ । ಎನ್ನ ನಾಮ ಸ್ಮರಣೆ ಪಾಪಾಟವಿಗೆ ಕಾಳ್ಗಿಚ್ಚು ॥ ಇನ್ನು ಅನ್ಯರ ತೊರೆದು ಮನವನು । ಎನ್ನ ಚರಣದೊಳಿಟ್ಟು ಸಂತತ । ಎನ್ನ ಭಕುತಿಯ ಮಾಡು ನೀ ಕೊಂಡಾಡು ಕುಣಿದಾಡೂ ॥ ೧೦ ॥ ಸ್ನಾನಮೌನಧ್ಯಾನಗಳ ಅನು । ಮಾನವಿಲ್ಲದೆ ಮಾಡುವುದರಿಂ । ದೇನು ಹಾನಿಯು ನಿನಗೆ ಬಾರದು ಎನ್ನ ಕರುಣದಲೀ ॥ ದೀನತನುವನು ಪೊರೆಯದಿರು ಬಲು । ಹೀನಜನರೊಡನಾಡದಿರು ಸು । ಜ್ಞಾನಿಗಳಿಗನುಸರಿಸಿ ಎನ್ನ ಚರಿತ್ರೆಗಳ ಕೇಳೂ ॥ ೧೧ ॥ ನೋಡು ಪುಣ್ಯ

ಕ್ಷೇತ್ರಗಳ ನೆಲೆ । ಯಾಡು ಕೀರ್ತಿಯು ಪಾಡು ಭಕ್ತಿಯು । ಕೂಡು ಕಾಡುವ ದುಾತಗಳ ನೀಡಾಡು ಅನುದಿನದೀ ॥ ಮಾಡು ಎನ್ನಂಘ್ರಿಗಳ ಸೇವೆಯು । ಬೇಡು ಮೇಲಣ ಮುಃಕ್ತಿಪದಗಳ । ನೀಡು ಸಂತತ ಎನ್ನ ಸುಕಥಾಮೃತವು ಸುಜನರಲೀ ॥ ೧೨ ॥ ಗಾನರಸದಿಂ ಕೂಡಿ ಎನ್ನ ಮ । ಹಾನುಭಾವರು ಸ್ತುತಿಸುವರು ಭವ । ಕಾನನಕ್ಕೆ ಕೃಶಾನು ದುಂತ ತಿಮಿಶ್ರಕಿದೆ ಭಾನೂ ॥ ನಾನು ನನ್ನದಿದೆಂಬ ಮನದಭಿ । ಮಾನವನು ಬಿಡು ಕಂಡಕಂಡರ । ನೀನು ಯಾಚಿಸಿ ದುಃಖಸಾಗರದೊಳಗೆ ಮುಳು ಗದಿರೂ ॥ ೧೩ ॥ ದೇವರೆಲ್ಲರು ಎನ್ನ ದಾಸರು । ಶ್ರೀರಮಣಿ ಎನ್ನರಸಿ ಜಗ ದಾ । ಜೀವರಾಶಿಯು ನಾನೆ ಪುಟ್ಟಿಸಿ ಮಗುಳೆ ರಕ್ಷಿಪೆನೂ ॥ ಲಾವಕರ ಕೊಲಿಸುವೆನು ನರಕವ । ನೀವೆ ಸ್ವರ್ಗವನಿತ್ತು ಸುಜನರ । ಕಾವೆನಿದು ವೇದಾಂತ ಸಿದ್ಧಾಂತದ ರಹಸ್ಯ ಕಣಾ ॥ ೧೪ ॥ ಈಶ ಸರ್ವೇಶ್ವರನು ಎನ್ನದೆ । ದೋಷಮಾಂಡೂಕೋಪನಿಶತು ಮ । ತ್ರೇಷ ಭೂತಾಧಿಪತಿ ಎನ್ನದೆ ಕಾಣ್ವರುಪನಿಷತೂ ॥ ಈಶ ಸರ್ವೇಶಾನು ಎಂಬ ವಿ ; ಲಾಸದಿಂ ಋಗ್ವೇದ ಮೊದಲೆ ರ । ಮೇಶ ತನ್ನಯ ಪೂರ್ವಋಷಿಗಳಿಗೀಡ್ಯನೆನುತಿದಕೋ ॥ ೧೫ ॥ ಅಗ್ನಿದೇವರೊಳಧಮ ಮಿಕ್ಕ ಸು । ರರ್ಗಳೆಲ್ಲರು ಮಧ್ಯಮರು ಸ । ರ್ವಜ್ಞ ವಿಷ್ಣುವೆ ಪರಮಪೂರುಷನೆಂಬ ಋಗ್ವೇದಾ ॥ ಬಗ್ಗಿಸಿತು ಕುಜ ನರ ಶಿರಂಗಳು । ಸುಗ್ಗಿಯೆನಿಸಿತು ಜ್ಞಾನಸರೆಗಪ । ವರ್ಗವೀವೆನು ನಾನು ನನಗೆಣೆಯಾರು ತ್ರಿಜಗದೊಳೂ ॥ ೧೬ ॥ ದ್ವಾಸುಪರ್ಣಾ ಎಂಬ ಶ್ರುತಿ ಸಕ । ಲೇಶ ತಾನೆಂಬೊಂದು ಖಗ ತಾ । ಕ್ಲೇಶಗಳನನುಭವಿಪ ನೊಂದೇ ಜೀವನೆಂಬ ಖಗಾ ॥ ದೇಶದೇಶದೊಳುಣುತಿಹುದು ಮ । ತ್ತಾಶ ರೀರದೊಳಿದ್ದಡೆಯು ಜಗ । ದೀಶನೆಂಬೊಂದೊಂದು ಖಗ ತಾ ಲೇಸನುಣು ತಿಹುದೂ ॥ ೧೭ ॥ ಇಂತು ಸ್ಮೃತಿಗಳು ಕೆಲವು ಲಕ್ಷ್ಮೀ । ಕಾಂತ ಚಿಂತಾ ರಹಿತ ಬೇರೆ ನಿ । ಶ್ಚಿಂತೆಯಲಿ ಮನಗುಂದಿ ಬಳಲುವ ಜೀವಗಣ ಬೇರೇ ॥ ಇಂತು ತಿಳಿಯಲು ಬೇಕು ನೋಡಿರೊ । ಕಂತುಪಿತ ಖಳರಟ್ಟಿ ಭಜಕರ । ಸಂತವಿಸುವ ಸ್ವಾಮಿ ಎನುತಿದೆ ಕೆಲವು ವೇದಗಳೂ ॥ ೧೮ ॥ ಹಿಂದೆ ನಾನೇ ಪ್ರಾಣನೆಂದವ । ರೀಂದ್ರ ನಾಶವವಡದ ತತ್ವ । ಸಮ್ಮಂಧ ಬಾಹುಳ್ಯದಲಿ ನಾನೇ ಪ್ರಾಣನೆಂದೈಸೇ ॥ ಎಂದು ತೋರುವ ಬಲ್ಲ ಬುಧರದ । ರಿಂದ ನಾನೇ ಬ್ರಹ್ಮನೆಂಬ ಮು । ನೀಂದ್ರವೃತ್ತಿಯು ಬ್ರಹ್ಮಸಮ್ಮಂಧದಲಿ ಎನ

ಬೇಕೂ ॥ ೧೯ ॥ ಇವನು ತಾನೆಂದೊರೆವುದೀರ್ತೈ । ರವದ ನುಡಿ ಇದನೆಲ್ಲ
ತಾ ಬ । ಲ್ಲವರು ಗ್ರಾಮದಿ ಜನರ ಕೂಟದಿ ಕುರುಡರೆಂದೆನರ್ತೈ ॥ ದಿವಿಜ
ದನುಜರು ಕೂಡಿ ತಮ್ಮೊಳ । ಗಮರ ಸಿಂಧುವ ಕಡೆಯಲೆಂದಂ । ದವರ
ಮಾತನು ಕೇಳಿ ಮಿಗೆ ಮರುಳಹರೆ ಕೋವಿದರೂ ॥ ೨೦ ॥ ಬೊಮ್ಮ ಹೆಮ್ಮಗ
ರುದ್ರ ಮೊಮ್ಮಗ । ಸುಮ್ಮನಸರಿಗೆ ಸುಧೆಯನುಣಿಸಿದೆ । ನೊಮ್ಮೆ ಸುರ
ಮಯ ಕಾಲಚಕ್ರವ ನಾನೆ ನಡೆಸುವೆನೂ ॥ ಅಂಬರೀಷಗೆ ಭಾಗ್ಯವಿತ್ತಾ ।
ಹೆಮ್ಮರನ ಕಿತ್ತಿರಲು ದಿವಿಜರ । ಹೆಮ್ಮೆಯನು ನಾನೋರ್ವನೇ ಬಿಡಿಸಿ
ದೆನು ಕೇಳ್ಮನುಜಾ ॥ ೨೧ ॥ ನೋಡು ರಾಮನ ಸೇವೆಗಮರರು । ಕೋಡ
ಗರ ತನುವಾಂತು ಗಿರಿಗಳ । ಕೋಡೆಕಲ್ಗಳ ಕಿತ್ತು ತಲೆಯಲಿ ಪೊತ್ತು
ಮನವಿತ್ತೂ ॥ ನಾಡರಿಯೆ ಜಲಧಿಯಲಿ ಸೇತುವ । ಮಾಡಿ ತದ್ಭಟರೆನಿಸಿ
ಕೊಳ್ಳರೆ । ಮೂಢನಾಗಿರಬೇಡ ನಾನೇ ಸಕಲ ಸುರರೊಡೆಯಾ ॥ ೨೨ ॥
ದನುಜ ಮತ್ರೀನಾದ ತಾನೇ । ದನುಜರಿಪು ಸಜ್ಜನರ ಪಾಲಿಪೆ । ನೆನುತ
ವಸುದೇವನಲಿ ಅವತರಿಸಿದೆನು ಭೂತಳದೀ ॥ ಜನಿಸಿದವರೆನಗಗ್ರಪೂಜೆಯ ।
ಮುನಿಗಳನುಮತದಿಂದ ಮಾಡಿದ । ರೆನೆ ಜನಾರ್ದನ ದುರಿತಮರ್ದನ
ನಾನೆ ಸುರರೊಡೆಯಾ ॥ ೨೩ ॥ ನಾನೆ ದುಃಖವಿಹೀನನಾಗಿಹೆ । ದೀನ
ಜೀವನು ದುಃಖಭರಿತನು । ನೀನೆ ನೋಡುತನಾದಿಹಾನಿಗಳಿಂದ ಜೀವ
ರನೂ ॥ ಏನನೆಂಬೆನು ರೋಗರುಜೆಗಳು । ಮಾನವಂಗೇ ಬರುತಿರುವದನು ।
ಸ್ವಾನುಭವಿಸುವದಿದ ನುಡಿವರೇ ಕಿರಿದುಬಲ್ಲವರೂ ॥ ೨೪ ॥ ನಾನು ನನ್ನಯ
ಶಕ್ತಿಯಿಂದಲಿ । ದಾನವರ ಮರ್ದಿಸುವೆ ಜೀವರಿ । ಗಾನೆ ಶಕ್ತಿಯು ಕೊಟ್ಟ
ರುಳಿಟಲ್ಲದಡೆ ಜಡಕೆ ಸಮಾ ॥ ಕಾಣು ಕುಂಟರ ಕಾಣು ಕುರುಡರ । ಕಾಣು
ಕಿವುಡರ ಕಾಣುಮೂಗರ । ಕಾಣೆ ತನಗೆಯು ಶಕ್ತಿಯುಳ್ಳಡೆದೇಕೆ ಬಿಡಿಸಿ
ಕೊಳಾ ॥ ೨೫ ॥ ನಾನು ಸದ್ಗುಣ ಪೂರ್ಣವಂದ್ಯನು । ಹೀನಗುಣದಲಿ
ಜೀವನಿಂದ್ಯನು । ನಾನೆ ಲಕ್ಷ್ಮೀರಮಣ ಜೀವನು ಶತದಾರಿದ್ರನಲ್ತೈ ॥ ನಾನೆ
ಸುರಮುನಿಸೇವ್ಯ ಚರಣನು । ಕಾಣು ಜೀವಖಳಾಂಘ್ರಿಶರಣನು । ನಾನು
ಸಾವಿಲ್ಲದವ ಜೀವರ ಮೃತ್ಯು ಕೊಲುತಿದೆಲ್ತೈ ॥ ೨೬ ॥ ನಾನು ಸುಜ್ಞನು
ಜೀವನಜ್ಞನು । ನಾನು ಮುಕ್ತನು ಜೀವ ಬದ್ಧನು । ನಾನು ಪಾತಕರಹಿತ
ಜೀವನು ಪಾಪಭರಿತನಲ್ತೈ ॥ ನಾನು ಜನ್ಮವಿದೂರ ನಾನಾ । ಯೋನಿಯಲಿ
ಜನಿಸುವನು ಜೀವನು । ನಾನೆ ನಾರಾಯಣನು ಜನಕನ ಹೆಸರು ನೀ

ಹೇಳಾ || ೨೭ || ದೇವಕಿಯ ಬಸುರಿಂದ ನಾನೇ । ದೇವಕಾರ್ಯಕೆ ಬಂದ ಬಗೆಯನು । ಭಾವಕೋವಿದರೆಲ್ಲ ನೋಡಿದ ಮೂಲರೂಪವನು || ಜೀವರಿಗೆ ತೋರಿಸಿದೆ ಭುಜಕರ । ಭಾವ ವೈಕುಂಠದ ಶರೀರವ । ತೋರಿ ಶ್ರೀವತ್ಸಲನ ನೋಡುವೇಕ್ಷೆಯ ಬಿಟ್ಟು ಪೊರೆವಲಿಯಾ || ೨೮ || ಹಿಂದೆ ಜಗವವು ನನ್ನ ಬಸುರಲಿ । ನಂದಗೋಪನ ರಾಣಿ ಕಾಣಳೆ । ಅಂದು ಎನ್ನಯ ವಿಶ್ವ ರೂಪವ ಪಾರ್ಥ ಕಂಡನಲ್ಲೆ || ಮುಂದಮುತಿಯೆ ನಿಧಾನಿಸುತ್ತಿರ । ಅಂದು ಎನ್ನಯ ದೇಹವಳಿದರೆ । ಬಂದುದೆಲ್ಲ ಚರಾಚರಂಗಳಿಗಂದೆ ನಿರ್ಬಂಧಾ || || ೨೯ || ಮುಂದಮತಿಯೇ ಶ್ರೀನೃಸಿಂಹಗೆ । ತಂದೆಯಾವನು ತಾಯಿಯಾವಳು । ಮಂದರವು ಧರಿಸಿರ್ದ ಕೂರ್ಮನ ಪಿತನು ತಾನ್ಯಾರು || ಹಿಂದೆ ಬೊಮ್ಮನ ಪ್ರಳಯಜಲಧಿಯೊ । ಳೊಂದೆ ವಟಪತ್ರದಲಿ ಮಲಗಿದೆ । ಚಂದದಿ ಶ್ರೀರಮಣ ನಾ ನಿತ್ಯರೊಳು ನಿತ್ಯನಲ್ಲೆ || ೩೦ || ಇಂತು ಸಂತತ ವಿವಿಧ ಧರ್ಮದ । ತಿಂಥಿಣಿಯನುತ್ತಮಂಗೆಂತು । ಸಂತತೀಪ್ರಿಯ ಭ್ರಾಂತಜೀವ ಪ್ರಕಾಶ ತಮವಹುದೇ || ಸಂತರಿಂದ ನಿರಂತರದಿ ವೇ । ದಾಂತಶ್ರವಣವ ಮಾಡು ದುರ್ಮತ । ಭ್ರಾಂತಿಯನು ಬಿಟ್ಟೆನ್ನ ಗುಣವನು ನೆನವುತಿಹುದೆಂದಾ || ೩೧ || ಕುಂಭದಗ್ರೋಪಾಧಿಯಿಂದರ್ದರು । ಡಂಭಿಸುತ್ತಳಿವಹುದೆ ದೇಹದ । ಡಿಂಬ ಪಡೆದರು ವ್ಯಾಪ್ತಿ ಚಿತ್ತಕೆ ಯಾಕೆ ಸಲ್ಲದಲ್ಲೆ || ಅಂಬರಾಗ್ರದಿ ಸ್ವರ್ಗವೇರಿ ನೀ । ನುಂಬೆ ಸುಖಗಳನೆಂತು ಮಾನವ । ಕುಂಭಿಪಾಕಕ್ಕಿಳಿದು ಯಾತನೆ ಎಂತು ಕೈಕೊಂಬೇ || ೩೨ || ಎಲ್ಲಿ ಪೋಪುದು ದೇಹದಲ್ಲಿಯ । ದೆಲ್ಲಿ ನೆಲಸಿಹ ಜೀವನೆಂಬುವ । ದೆಲ್ಲ ವಲ್ಲ ಕ್ಷಣಕ್ಷಣಕೆ ಬಲು ವ್ಯತ್ಯಯವಹುದಾಗೀ || ಇಲ್ಲ ಜಡದೇಹಕ್ಕೆ ಒಡೆಯುತೆ ತ । ನ್ನಲ್ಲಿ ತುಂಬಿದ ಚಿತ್ತ ನಡೆಯದೆ । ಸಲ್ಲದೇನ್ನೈ ಧರ್ಮದಂಗಳೆ ಶಕ್ತಿ ಎಂಬ ಗುಣಾ || ೩೩ || ಮಾಯೆ ಶಕ್ತಿಯಿಂದಾಯಿತೆಂಬುದ । ಮಾಯೆ ತಾ ಜಡನಾದ ಕಾರಣ । ಹೋಯಿತಾನಿನ್ನೇನುಪಾಯದಿ ಮತವ ನಿಲಿಸುವನೀ || ತಾಯಿಹೊಟ್ಟೆಯ ಹೊಕ್ಕಡೆಯು ನುಡಿ । ದಾಯತವನಂತವರು ಬಿಡುವರೆ । ವಾಯುಮತವೇ ಮತವು ತ್ರೈಜಗದೊಳಗೆ ನಿಜವೆಂದಾ || ೩೪ || ಒಂದು ಚಿಂತೆಯು ಬಂದುದೈಸೆ ಮ । ತ್ತೊಂದು ಚಿಂತೆಯು ಸ್ನಾನವಿಲ್ಲದೆ । ಬಂದು ಭೋಜನ ಜಪತಪ ಧ್ಯಾನಗಳ ಮಾಡಿತಲ್ಲೆ || ನಿಂದ್ಯದೇಹೋಪಾಧಿಯಿಂ ಸಂ । ಬಂಧಿಸಲು ಬೇರೆ ಬೇರೆಂದು । ಮಂದಾಕೃತ ಪೃಥಾ ಪೋಯಿತಳಕೃತ ಬಂದುದಲ್ಲೆ || ೩೫ ||

ಒಂದು ದೇಹದಲೊಂದು ಚಿತ್ತ । ವ್ಯಂಥವಿಲ್ಲದೆ ದೇಶದೇಶವ । ಹೊಂದಿ ಕೊಂಡಿಹ ಚಿತ್ತನಿಂದಲೆ ಜೀವವೆಂಬುವದೇ ॥ ಮುಂದಮರಣದ ವಾಯು ಎಂಬುದು । ಬಂದು ಹೋಯಿತು ಈ ವಿಯೋಗವಿ । ದೆಂದು ದೇಹಕೆ ಬಹುದು ಚಿತ್ತವ್ಯಾಪ್ತನೆಂಬವಗೇ ॥ ೩೬ ॥ ಜೀವಭೇದವನಾದಿ ಎಂಬುದ । ನಾವ ಬಗೆಯಲಿ ಬೊಮ್ಮ ತಾನೈ । ಜೀವಭಾವವನೈದಿತೆಂಬೀ ನಿನ್ನ ಮಾಯುವಲ್ಲೈ ॥ ತೀವಿಗಡಸಿದ ಬೊಮ್ಮದಂಗಳೆ । ನೋವು ನೋಡುವ ಇಂದ್ರಿಯಂಗಳ । ಜೀವರಾಶಿಯು ತೆಗೆವದೆಂತ್ಯೆ ನಿರ್ವಿಕಾರನಲ್ಲೈ ॥ ೩೭ ॥ ಇಂತು ದುರ್ವರ್ತ ಜೀರ್ಣಕಂತೆಯುವಿ । ತಂತುವ್ಯಾತು ಮಹಂತರಿದಿರಿಲಿ। ನಿಂತ ಹೆಜ್ಜೆಯು ನಿಲಿಸದಂತೆ ಭ್ರಾಂತುಗೊಳಿಸಿತಲ್ಲೈ ॥ ಪಂತನಿವನೆಂತಾ ಹನಾವೇ । ದಾಂತವನೆ ಪುಸಿಯೆಂದು ನಿನಾ । ಪಂಥಗಳನು ಮಹಾಂತ ರಿದಿರಿಲಿ ಎಂತು ನಿಲಿಸುವೆನ್ನೆ ॥ ೩೮ ॥ ಮುಕ್ತಿ ಎಂಬುದು ಮರ್ತ್ಯರಿಗೆ ಎ । ಸ್ನರ್ಥಿಯು ಸ್ಥಾನಗಳು ಭಕ್ತಿಯು । ಶಕ್ತಿಯಿಂದಲೆ ಹತ್ತಿ ಮೃತ್ಯುವನೊತ್ತಿ ನಿಜಪದವಾ ॥ ಹತ್ತಿರೇ ಸುಖಿಸುವದು ಭೃತ್ಯರಿ । ಗಿತ್ತಭೇದವ ನಿತ್ಯಮರ್ತ್ಯ ನು । ವ್ಯರ್ಥ ಪೊಗಳಿಸುವರೆ ಮನುಜ ಪ್ರಮತ್ತನಲ್ಲವಲ್ಲೈ ॥ ೩೯ ॥ ಮರ್ತ್ಯ ಮೃತ್ಯುವ್ಯಾಳಭೀತನೆಂ । ಬುಕ್ತಿಯರ್ಥವ ನೋಡು ಮತ್ಪದ । ಪ್ರಾಪ್ತಿಯೇ ಕೈವಲ್ಯ ಗಡ ಮೃತ್ಯುವಿಗೆ ಶತ್ರು ಗಡಾ ॥ ಮತ್ತೆ ಮರುಳಾಗದಿರು ನಾ ಸ । ರ್ವೋತ್ತಮನು ಭೃಗು ಮೆಟ್ಟದರೆ ಎ । ನ್ನುತ್ತಮತ್ಪದ ರಕ್ಷೆಗಾಗಿಯೆ ತಾಳಿಕೊಂಡೆನೆಲ್ಲೈ ॥ ೪೦ ॥ ಎಲ್ಲ ಇಲ್ಲೆಂಬುವ ನುಡಿವುದ । ಕ್ಕಿಲ್ಲ ನಾಲಿಗೆ ಕೇಳ್ವ ಕರ್ಣಗ । ಳಿಲ್ಲ ಪೇಳ್ವಾಚಾರವಿಲ್ಲ ವಿವೇಕ ಮುನ್ನಿಲ್ಲಾ ॥ ಕಲ್ಲ ಕಂಭವ ಪೋಲ್ವ ನಿನ್ನನು । ಬಲ್ಲಿದರು ಬಲ್ಲವರೊಳಪ್ರತಿ । ಮಲ್ಲರೆನ್ನಾಳು ಗಳು ಸೋಲಿಸಿ ಜಳ್ಪ ಮಾಡುವರೈ ॥ ೪೧ ॥ ಈಗಲುಂಟನ್ನೊಂದು ಕಾಲದಿ । ಪೋಗುವದು ಜಗವೆಂದರದು ನೀ । ನಾಗದಲ್ಲೈ ಕಾಲಕಪ್ರತಿ ಎಂತು ಸಲ್ಲುವದೈ ॥ ಸ್ವಾಗಮುವನರಿಯದವನೆಂದು । ಬೀಗವನು ಬ್ಯಾಗಿಕ್ಕಿ ನಿನ್ನನು । ಪೋಗೆನುತ ಪೊರಿಗಟ್ಟುವರಲ್ಲೈ ಎನ್ನ ಕಿಂಕರರೂ ॥ ೪೨ ॥ ಇಷ್ಟದೈವವೆನುತ್ತ ನೀ ಮನ । ಮುಟ್ಟ ಎನ್ನನು ಭಜಿಸು ದಿವಿಜರ । ಶ್ರೇಷ್ಠ ಜನರಿಗೆ ಗುರುಗಳೆಂದವರಂಘ್ರಿಗಭಿನಮಿಸೂ ॥ ನಷ್ಟಬಾರದ ತೆರದೆ ನಿನ್ನನು । ಘಟ್ಟಿಯಾಗಿಯೆ ರಕ್ಷಿಸುವೆ ನಾ । ದೃಷ್ಟಿಗೋಚರನಹೆನು ಮುಕ್ತಿಯ ಕೊಟ್ಟು ಸಲಹುವೆನೂ ॥ ೪೩ ॥ ಎನ್ನ ಗುಣಗಣಗಳನು

ಪೊಗಳುವ । ಪೂರ್ಣಪ್ರಜ್ಞರ ಮತವೆ ಸುಮತ ಪ್ರ । ಪನ್ನ ಕರ್ಣಾಮೃತ ಸಮಾನ ವಿಮುಕ್ತಿಪಥವಹುದೂ ॥ ಅನ್ಯಮತಗಳ ಜರದು ನೀನೀ । ಪುಣ್ಯ ಮರುತನ ಮತವ ಮನದಲಿ । ಮನ್ನಿಸುತ ಮನನವನು ಮಾಡಲು ನಿನ್ನ ಸಲಹುವೆನೂ ॥ ೪೪ ॥ ಇಂತು ಸ್ವಪ್ನಾವಸ್ಥೆಯಲಿ ಮಾ । ಕಾಂತ ಕರುಣಾವಂತ ನಿಜಗುಣ । ಶಾಂತನತಿಬಲವಂತ ಶ್ರೀಹಯವದನ ಕೃಪೆಯಿಂತೋ ॥ ಸಂತಸದಿ ಚಿಂತಿಸುತ ತನಗೆ ಮಾ । ರಾಂತ ಖಳರೆದೆಗೊಂತ ಶುಭಗುಣ । ವಂತ ವಾದಿರಾಜೇಂದ್ರ ಯೋಗಿಗೆ ಪೇಳ್ದ ಪದಗಳಿವು ॥ ೪೫ ॥ ವಾದಿರಾಜಗೆ ದೇವ ಕಲಿಸಿದ । ಮಾಧವನ ಗುಣಮಾಲೆಯನು ಬರ । ದೋದಿ ಪಠಿಸುವ ಮಾನವರ್ಗೆ ವಿಮುಕ್ತಿ ಪಥವಹುದೂ ॥ ವಾದಶಕ್ತಿಯು ಕೊಟ್ಟು ತನ್ನಯ । ಪಾದಪದ್ಮವ ನೆನೆವವರ ಮ । ಹಾದಯಾಂಬುಧಿ ಹಯವದನ ಕೃಪೆಯಿಂದ ಸಲಹುವನೂ ॥ ೪೬ ॥ ಶ್ರೀ ॥

॥ ೨ ॥ ರಾಗ, ಶಂಕರಾಭರಣ [ಧಾಟಿ:- ನಾರಾಯಣಾ । ಹರಿ] ತ್ರಿಪುಟೆತಾಳ

ದೇವರಾ ದೇವನೇ ಬಾರೋ । ದೇವಕೀ ನಂದನ ಬಾರೋ । ದೇವೇಂದ್ರನಾ ಸಲಹಿದಾ । ದೇವ ಬಾರೋ ಹರಿಯೇ ॥ ನಾರಾಯಣಾ । ಹರಿನಮೋ ನಾರಾಯೇಣಂ॥ ೧ ॥ ಮತ್ಸನಾಗಿ ಶ್ರುತಿಯ ತಂ । ದಿತ್ತ ಭಕ್ತವತ್ಸಲನ । ಭೃತ್ಯ ಸತ್ಯವ್ರತ ನಮ್ಮ: ಸಖ್ಯ ಬಾರೋ ಹರಿಯೇ ॥ ಹರಿ ನಾರಾಯಣಾ ॥ ೨ ॥ ಸಾಂದ ಸುರರಿಗಾಗೀ । ನೀರೊಳಗೆ ಮುಳುಗಿದ । ಗಿರಿಯನ್ನುದ್ಧರಿಸಿದ । ಕೂರ್ಮ ಬಾರೋ ಹರಿಯೇ ॥ ಹರಿ ನಾರಾಯಣ ॥ ॥ ೩ ॥ ಧರೆಯಾನುದ್ಧರಿಸಲು । ವರಹಾನಾಗಿದೆ ದೇವಾ । ಹಿರಣ್ಯಾಕ್ಷನನು ಕೊಲ್ದ । ಧೀರ ಬಾರೋ ಹರಿಯೇ ॥ ಹರಿ ನಾರಾಯಣ ॥ ೪ ॥ ನಂಬಿದ ಭಕ್ತರ ಕಾವಾ । ನೆಂಬ ಕರುಣದೀ ಕಲ್ಲಾ । ಖಂಭದಿಂದುದಿಸೀದ । ಡಿಂಬ ಬಾರೋ ಹರಿಯೇ ॥ ಹರಿನಾರಾಯಣ ॥ ೫ ॥ ವಾಮನಾ ತಾ ವೇಷನಾಗಿ । ಭೂಮಿಯನಳದುಕೊಂಡ । ದಾನವರ ಸೋಲಿಸೀದ । ಜಾಣ ಬಾರೋ ಹರಿಯೇ ॥ ಹರಿ ನಾರಾಯಣ ॥ ೬ ॥ ಝಡಿದು ದುಷ್ಟನೃಪರ । ಗಡಣವಾ ಬಡದಂದು । ಪಿಡಿದುಗ್ರ ಕೊಡಲೀಯ । ಪ್ರವುಢ ಬಾರೋ ಹರಿಯೇ ॥ ಹರಿ ನಾರಾಯಣ ॥ ೭ ॥ ವೃಂದಾರಕ ವಂದ್ಯ ಸೇತು । ಬಂಧನ ಹರಿದಶ । ಕಂಧರನ ಕೊಂದಾ ರಾಮ । ಚಂದ್ರ ಬಾರೋ ಹರಿಯೇ ॥ ಹರಿನಾರಾ

ಯಣ ॥ ೮ ॥ ಮಲ್ಲರಾನೆಲ್ಲರಾ ಕೀಳೀ । ಬಲ್ಲಿದ ಮಾವನ ಕೊಂದ । ಗೊಲ್ಲರ ವಲ್ಲಭ ನಮ್ಮ । ನಲ್ಲ ಬಾರೋ ಹರಿಯೇ ॥ ಹರಿ ನಾರಾಯಣಾ ॥ ॥ ೯ ॥ ಬುದ್ಧನಾಗಿ ದೈತ್ಯರಿಗೆ । ಬದ್ಧಪದವಿಯ ತೋರಿ । ರುದ್ರನನ್ನು ಗೆಲಿದ । ಸುಭದ್ರ ಬಾರೋ ಹರಿಯೇ ॥ ಹರಿನಾರಾಯಣ ॥ ೧೦ ॥ ಕಲ್ಕ್ಯ ನಾಗೀ ಖಳರಿಗೆ । ಕಲ್ಕ್ಯರೂಪನಾಗುತ । ರಕ್ಷಿಸುವ ಸುಜನರಾ । ಪಕ್ಷ ಬಾರೋ ಹರಿಯೇ ॥ ಹರಿ ನಾರಾಯಣ ॥ ೧೧ ॥ ವಿಜಯ ಹಯವದನನ । ಭಜಕರ ಭಾಗ್ಯವೇ । ಸುಜನಾಬ್ಧಿ ವಾದಿರಾಜಾ । ತೇಜಿ ಬಾರೋ ಹರಿ ಯೇ ॥ ಹರಿ ನಾರಾಯಣ ಹರಿ ನಮೋ । ನಾರಾಯೇಣಂ ॥ ೧೨ ॥

॥ ೩ ॥ ರಾಗ, ರೇಗುಪ್ತಿ [ಧಾಟಿ:- ಎಷ್ಟು ದೀನಾ ಈ ವೈಕುಂಠ] ಏಕತಾಳ

ಯಾವ ರೀತಿಯಿಂದ ಎನ್ನನು ಪಾಲಿಪೆ । ಶ್ರೀ ವಿಭು ಹಯವದನಾ ॥ ಈ ವಿಧ ಭವದಿಂದ ಬಳಲಿ ಬಹಳನೊಂದೆ । ತಾವರೆದಳನಯನಾ ಹಯ ವದನಾ ॥ ಯಾವ ರೀತಿಯಿಂದ ॥ ೧ ॥ ಅಂಗನೆ ಎರಡನೆಯಧಿಕ ಮೋಹ ದಿಂದ । ಶೃಂಗಾರಂಗಳನೆ ಮಾಡಿ ॥ ಮಂಗಳಾತ್ಮನೆ ನಿನ್ನ ಮಹಿಮೆಯ ಪೊಗಳದೆ । ಮಾನಭಂಗಕ್ಕೆ ಒಳಗಾದೆನೂ ॥ ಹಯವದನ ॥ ಯಾವ ರೀತಿ ಯಿಂದ ॥ ೨ ॥ ಹೀನದೋಷವೆಲ್ಲ ಹಯಮುಖದೇವನೆ । ಮಾನಿಸುವಂತೆ ಮಾಡೂ ॥ ಜ್ಞಾನಿಗಳೊಡೆಯನೆ ಹಯವಿಕ್ರಮಗೆ ನಿನ್ನ । ಧ್ಯಾನಿಸುವಂತೆ ಮಾಡೋ ॥ ಹಯವದನಾ ॥ ಯಾವ ರೀತಿಯಿಂದ ಎನ್ನನು ಪಾಲಿಪೇ ॥ ೩ ॥

॥ ೪ ॥ ರಾಗ ಖಮಾಚ ಅಥವಾ ರೇಗುಪ್ತಿ, ಏಕತಾಳ

ತೋರೇ ಬೇಗನೇ ತೋಯಜನಯನೆ । ಮದವಾರಣಗಮನೇ ॥ ತೋರೇ ಬೇಗನೇ ॥ ಪಲ್ಲ ॥ ಮಾರನ ತಾಪವ ಸೈರಿಸಲಾರೆ । ನೀರೆಮಣಿಯ ಮಣಿಹಾರವ ಕೊಡುವೆ ನಾ ॥ ತೋರೇ ಬೇಗನೆ ॥ ಅನುಪಲ್ಲ ॥ ಕತ್ತಲೆ ಯೊಡನೆ ಕಾದಿದ ಧೀರಾ । ಕೆಡಹಿದ ಪರಿವಾರಾ । ಕಿತ್ತು ಮಣ್ಣಾಗಿದು ಮೆದ್ದನೆ ಬೇರಾ । ದಾನವಸಂಹಾರಾ । ವತ್ತಿದರ್ ಬಲಿಯ ಕ್ಷ್ಯಾದನೆ ಶೂರಾ। ಕುಜನಕುಠಾರಾ ॥ ಹತ್ತು ಶಿರವ ಕತ್ತರಿಸಿ ಗೋಕುಲದೊಳು । ಬತ್ತಲೆ ರಾಹುತನಾಗಿ ಮೆರೆದನನು ॥ ತೋರೆ ಬೇಗನೆ ॥ ೧ ॥ ನೀರೊಳು ಮುಳು ಮುಳುಗಾಡುತ ಬಂದೂ । ಮಥಿಸಿದೆ ದಯಾಸಿಂಧೂ । ಧಾರುಣೀ ಭಿಮ್ಮ ಮೇಲಕೆ ತಂದೂ । ದನುಜನಾ ಕೊಂದೂ । ಮೂರುಪದ ಭೂಮಿಯ

ಬೇಡಿದನಂದೂ । ಮುನಿಕುಲದಲಿ ಬಂದೂ ॥ ನಾರಿಯು ಬಿಡದೆ ಪರನಾರಿಯರೊಳು ಕೂಡಿ । ನೀರೆಮಣಿಯ ಹಯವೇರಿ ನಡದನನು ॥ ತೋರೆ ಬೇಗನೇ ॥ ೨ ॥ ನಿಗಮ ಕದ್ದವನ ಮಡುಹಿದ ಧಿಟ್ಟಾ । ನೆಗಹಿದ ಘನಬೆಟ್ಟಾ । ಚಿಗಿದೊಮ್ಮೆ ಸೂಸ್ಥಳದಲ್ಲಿಟಾ । ಘುಡಿಘುಡಿಸುವ ಶಿಟ್ಟಾ । ಜಗವೆಲ್ಲವು ನೋಡಿ ಎರಡಡಿ ಇಟ್ಟಾ । ಕೊಡಲಿಯ ಪಟ್ಟಾ ॥ ಮೃಗವ ಕೆಡಹಿ ಕುಂತಿ ಮಗಗೆ ಸಾರಥಿಯಾಗಿ । ಜಗವ ಮೋಹಿಪ ಹಯವದನ ಶ್ರೀಕೃಷ್ಣನ ॥ । ತೋರೇ ಬೇಗನೇ ತೋಯಜನಯನೇ ॥ ೩ ॥

॥ ೫ ॥ ರಾಗ, ಆನಂದಭೈರವಿ [ಧಾಟಿ:- ಒಂದೆ ಭವತ್ಪದಯುಗಾರ] ರೂಪಕತಾಳ

ಬಾಲನೇನೇ ನಿನ್ನ ಮಗನೂ । ಗೋಪಾಲಕೃಷ್ಣ । ಬಾಲನೇನೇ ॥ ॥ ಪ ॥ ಬಾಲನೇನೇ ನಿನ್ನ ಮಗನು । ಬಾಲಕಿಯರಾಲಯವ ಪೊಕ್ಕು । ಶೀಲಗೆಡಿಸಿ ಸಾಲದೆ । ಗೋಕುಲವನೆಲ್ಲ ಮಾಲೆ ಹಾಕಿದ॥ಬಾಲನೇನೆ ॥ಅನು॥ ಕಾಲು ಇಲ್ಲದೆ ನಡವನೀತ । ಮೇಲುಗಿರಿಯ ಬೆನ್ನೊಳಾಂತ । ಮೂಲ ಬೇರ ಮೆಲ್ಲುವಾತ । ಜ್ವಾಲರೂಪ ಸ್ಥೂಲಕಾಯ ॥ ಬಾಲನಾಗಿ ಭೂಮಿ ಬೇಡಿದಾ । ತಾ ಪಾಲು ಕುಡಿದ ತಾಯತಲೆಯ ಎರಡು ಮಾಡಿದಾ । ಕಲಿಕಾಲನ್ನಾದು ಅಡವಿಯಾಲಯವ ತಿರುಗಿದಾ ॥ ನೀಲವರ್ಣ ನಿಗಮ ಗೋಚರ । ಮೇಲುಪುರದ ಸೋಲಸುಡಿಯ । ಬಾಲೆಯರನು ಸೋಲಿಸಿ ಕಲಿಕಾಲದಲ್ಲಿ ಕಲ್ಕ್ಯನಾದ ॥ ಬಾಲನೇನೆ ॥ ೧ ॥ ಮಡುವಿಯಲ್ಲಿ ಅಡಗಿಯಿರುವ । ಕಡಲೊಳಿರ್ದಿಯನೆತ್ತಿ ಪೊರೆವ । ಅಡವಿಯಲ್ಲಿ ಆಡುತ್ತಿರುವ । ಒಡೆಯ ಕ್ರೂರರೂಪನಿವನು ॥ ಹುಡುಗನಾಗಿ ಪೊಡವಿ ಕೇಳ್ದನೇ । ಕೊಡಲಿಯನು ಪಿಡಿದು ಕ್ಷತ್ರಿಯರ ಕುಲವನ್ನು ತಂದನೇ । ಖಳ ರಾವಣಾದಿ ಘಡೆಯನೆಲ್ಲ ಸಂಹರಿಸಿದನೇ॥ಮಡುಕುಮಾಡಿ ಗಡಿಗೆ ಪಾಲುಕುಡಿದು ಕಟಹದಲ್ಲಿ ಅಡಗಿ । ಬಿಡದೆ ತ್ರಿಪುರವ್ರತವ ಕೆಡಹಿ । ಹಿಡಿದು ತೇಜಿ ನಡಸುತ್ತಿಹನು ॥ । ಬಾಲನೇನೆ ॥ ೨ ॥ ನೀರ ಪೊಕ್ಕು ವೇದ ತಂದು । ಭಾರಗಿರಿಯ ಬೆನ್ನೊಳಾಂತು । ಕೋರೆಹಲ್ಲು ತೋರುತ್ತಿರುವ । ಪಾರಮಹಿಮ ಕ್ರೂರವದನ ಮೂರು ಪಾದ ಭೂಮಿ ಬೇಡಿದಾ । ವಿಪ್ರರನು ಕರೆಸಿ ಧರಣಿಯನ್ನು ದಾನ ಮಾಡಿದಾ । ಪರ್ವತವ ತಂದು ಶರಧಿಯನ್ನು ಸ್ವಾಂಗಟ್ಟಿದಾ ॥ ಚಾರ ಚೋರ ಮಾರನಯ್ಯ । ನಾರಿಯರನು ಮರುಳುಗೊಳಿಸಿ । ವಾಂಛಾಕ್ಷ ಹಯವದನ । ಏರಿ ಕುದುರೆ ಸ್ವಾಂಗ್ಯೈವ ॥ ಬಾಲನೇನೇ ॥ ೩ ॥ ಶ್ರೀ ॥ ।

॥ ೬ ॥ ರಾಗ, ಆಸಾವೇರಿ [ಧಾಟಿ:- ತೋರುವದಿಲ್ಲ] ರೂಪಕತಾಳ

ಎಣಿಸಲಳವೆ ನಿನ್ನಾ । ಗುಣದಾ ಮಹಿಮೆಗಳಾ । ಗುಣಗಣಸುತ ನಾಮಾ । ಕೋದಂಡರಾಮಾ ॥ ಎಣಿಸಲಳವೆ ॥ ಪಲ್ಲ ॥ ಜಲದೀ ಸಂಚರಿಸಿದೆ । ಬಲು ಗಿರಿಯ ಧರಿಸಿದೆ । ಲಲನೆ ಧಾರಿತ್ರಿಯ ಹರದೇ ॥ ಛಲದ ಹಿರಣ್ಯಕಶ್ಯಪನ ಸಂಹರಿಸಿದೆ । ಇಳೆಯಾಪೇಕ್ಷಿಸಿದೆ । ನೀ ಬಲಿಯ ಭಂಗಿಸಿದೇ ॥ ಎಣಿಸಲಳವೆ ॥ ೧ ॥ ದುರುಳರ ಎರತಂದೆ । ಹರನ ಬಿಲ್ಲನು ಮುರಿದೆ। ನರಗೆ ಸಾರಥಿಯಾಗಿ ಮೆರದೇ ॥ ತರುಣಿಯುರಾ ವ್ರತವ ಗೆಡಿದೆ । ತುರಗವನ್ನೇರುತಲಿ ಮೆರದೇ । ಶರಣಾಗತರೆಲ್ಲರನು । ಪೊರೆವುದು ನಿನ್ನ ಬಿರುದೇ ॥ ಎಣಿಸಲಳವೆ ॥ ೨ ॥ ಕರುಣಾಸಾಗರ ನಿನ್ನ । ಚರಣಸೇವೆಗೆ ಎನ್ನಾ । ಕರುಣಿಸೊ ಸುಗುಣಸಂಪನ್ನಾ ॥ ಸ್ಮರನ ಜನಕ ಚನ್ನಾ । ಧರೆ ವಿಜಯ ಮೋಹನ್ನಾ । ಸ್ಥಿರವಾದಾ ಲಕ್ಷ್ಮಿವಿಲಾಶಾ । ಕರುಣಿಸೊ ಹಯವದನಾ ॥ ಎಣಿಸಲಳವೆ ನಿನ್ನ । ಗುಣದಾ ಮಹಿಮೆಗಳಾ ॥ ೩ ॥ ಶ್ರೀಃ ॥

॥ ೭ ॥ ರಾಗ, ಪೂರ್ವಿ [ಧಾಟಿ:- ಸಾಕು ಸಾಕು ಮನುಜಸೇವೆಂಬೂ] ಮಟ್ಟಿತಾಳ

ಎನ್ನನುದ್ಧರಿಸಲಾಗದೇ । ಚನ್ನರಾಯ । ಎನ್ನನುದ್ಧರಿಸಲಾಗದೇ ॥ ॥ ಪಲ್ಲ ॥ ಎನ್ನನುದ್ಧರಿಸಲಾಗದೆ । ಚನ್ನರಾಯ ಬಿನ್ನೈಸುವೆ ॥ ಇನ್ನು ಬೇರೆ ಗತಿಯು ಕಾಣೆ । ನಿನ್ನ ಚರಣ ಕಮಲದಾಣೆ ॥ ಅನುಪಲ್ಲ ॥ ಶರಣ ಜನರ ಪಾಲ ಕಲ್ಪ । ತರು ದಯಾಸ್ವರೂಪನೆಂದು । ಧರೆಯೊಳಖಿಳ ನಿಗಮ ಉಸುರು । ತಿರಲು ನಿನ್ನ ಚರಣವನ್ನು ॥ ಶಿರದೊಳಾಂತು ಎನ್ನ ಮೇಲಣಾ । ಕರುಣವಿಲ್ಲ । ದಿರಲು ನಿನಗಿದೇನು ಕಾರಣಾ ॥ ಸಲಹಬೇಕು । ಸುರರ ಮಸ್ತಕದ ಸುಭೂಷಣಾ ॥ ಚನ್ನರಾಯಾ ॥ ೧ ॥ ಹಿಂದೆ ನಾನನಾಥನಾಗಿ। ಒಂದೆರಡಲ್ಲ ಹಲವು ಜನ್ಮ । ಬಂದು ನರಕಯಾತನೆಯಿಂ । ನೊಂದು ಬಳಲಿ ಬಾಯ ಬಿಡುತ ॥ ಒಂದೇ ನಿನ್ನ ಹೆಸರುಗೊಂಡೆನೇ । ಸನಾಥನಾಗಿ । ಮುಂದೆ ನಾಮಸುಧೆಯನುಂಡೆನೇ ॥ ನೀನೇ ಕೃಪಾಳು। ಎಂದುನುಡಿವರನ್ನು ಕಂಡೆನೇ ॥ ಚನ್ನರಾಯಾ ॥ ೨ ॥ ಹಲವು ಮಾತನಾಡಲೇಕೆ । ಒಲಿವದಿನ್ನು ಹರಿಯೆ ನಿನ್ನ । ಸಲಿಗೆಯೊಳೀ ಬಿನ್ನಪವನು । ಸಲಿಸುತಿಹೆನು ಮುಂದಕಿನ್ನು॥ ಜನುಮ ಬಾರದಂತೆ ವರವನೂ । ಇತ್ತು ಎನ್ನ । ಸಲಹೊ ಧೊರೆಯೆ ನಿನಗೆ ಕರೆವೆನೂ॥ ಮುಂದೆ ಮುಕುತಿ । ಲಲನೆಯೊಡನೆ ಸುಖದಲಿರುವೆನೂ॥

॥ ಚನ್ನರಾಯಾ ॥ ೩ ॥ ಲೇಶವರಿಯೆ ನಾನು ನಿನ್ನ । ದಾಸನೆಂದು ಡಂಗುರವನು । ಹೊಯ್ಸಿ ತಿರುಗುತಿರಲು ಮೋಹ । ಪಾಶವೆನ್ನ ಸುತ್ತಿಕೊಂಡು ॥ ಘಾಸಿ ಮಾಡುತಿರಲು ಬಿಡಿಸದೇ । ಇರಲಿ ಪಂಥ । ವಾಸಿ ಯೆನ್ನ ಮಾತ ಆಲಿಸದೇ ॥ ಸಲಹು ಸ । ರ್ವೇಶ ನಂಬಿದವರ ಕೆಡಿಸದೇ ॥ ಚನ್ನರಾಯಾ ॥ ॥ ೪ ॥ ಎನ್ನ ದುರ್ಗುಣಗಳನೆ ಮರೆದು । ನಿನ್ನ ಸದ್ಗುಣಗಳನೆ ಪೊರೆದು । ಮನ್ನಿಸಿದರೆ ಲೋಕದೊಳಗೆ । ಧನ್ಯವಹೆನು ಜನುಮವೆತ್ತಿ ॥ ಉನ್ನತಾಹುದು ನಿನ್ನ ಕೀರುತಿ । ನಾಶವಹುದು । ಎನ್ನ ಬಹಳ ಭವದ ಧಾವತೀ ॥ ಇನ್ನು ಸಲಹೋ।ಚನ್ನ ಶ್ರೀಹಯುವದನಮೂರುತೀ । ಚನ್ನರಾಯಾ ॥ ೫ ॥ಶ್ರೀ

॥ ೮ ॥ ರಾಗ, ಮಾಂಜ [ಧಾಟಿ:- ಪೋಗದಿರೆಲೊ ರಂಗ । ಭಾಗವತರು] ಅಟತಾಳ

ಎನ್ನಪ್ಪ ಕಂದನೇ ಚಿಣ್ಣ ಗೋಪ್ಯರು ಬಂದು । ನಿನ್ನನು ದೂರುವರೋ । ಕಿಟ್ಟಯ್ಯಾ ॥ ಕನ್ನೆರು ಕೊಬ್ಬಿಂದ ಅನ್ಯಾಯ ನುಡಿತಾರೆ । ಇನ್ನೇನು ಮಾಡಲ್ಯಮ್ಮಾ । ಗೋಪ್ಯಮ್ಮಾ ॥ ಪ ॥ ಗೋಪ್ಯಾರ ಮನೆಗಳ ಪೊಕ್ಕು ಬಹುಪಾ । ಲೂಟಮಾಡುವರೇ ಕಂದಾ । ಗೋವಿಂದ ॥ ಕಾಪಟ್ಯ ಸತಿಯರ ಮಾತು ನೀ ಲಾಲಿಸಿ । ಕೋಪಿಸಬೇಡವಮ್ಮಾ । ಗೋಪ್ಯಮ್ಮಾ ॥ ॥ ೧ ॥ ದಧಿದುಗ್ಧ ಭಾಂಡವೊಡೆದು ಗೋಪಿಯರನ್ನ । ದುರಟಮಾಡುವರೇ ಕಂದಾ । ಗೋವಿಂದಾ ॥ ಉದಯದಿ ಗುಡ್ಡಾಡಿ ಮಾರ್ಜಾಲಂಗಳು ಬೀಳೆ ದಧಿಭಾಂಡ ಒಡೆದವಮ್ಮ । ಗೋಪ್ಯಮ್ಮ ॥ ೨ ॥ ಅಣ್ಣಯ್ಯ ಬಲರಾಮ ನಿನ್ನ ಬಿನ್ನಣ ಸುದ್ಧಿ । ಚೆನ್ನಾಗಿ ಪೇಳಿದನೋ । ಗೋವಿಂದ ॥ ಉನ್ನತ ದಾಯಾದಿ ಮಾತುಗಳನು ನೀನು । ಮನ್ನಿಸಬೇಡವಮ್ಮಾ । ಗೋಪ್ಯಮ್ಮಾ ॥ ೩ ॥ ಬಸವನ ಆಟದಿ ಪಶುಶಿಶುಗಳ ಕೂಡಿ । ಮಸಿಮಣ್ಣು ಮುಯ್ಯಾದವೋ । ಗೋವಿಂದ ॥ ಬಿಸಜಾಕ್ಷಿಯರು ತಮ್ಮ ಮನೆಕೆಲಸದ ಕೈಯ್ಯ । ಮಸಿಮಣ್ಣ ವರಸಿದರೆ । ಗೋಪ್ಯಮ್ಮಾ ॥ ೪ ॥ ಒರಗಿದ್ದ ಹಸುಗಳೆಬ್ಬಿಸಿ ಕರುಗಳ ಬಿಟ್ಟು । ದುರುಳತನವ ಮಾಡೋರೆ । ಗೋವಿಂದ ॥ ನೆರೆದಿದ್ದ ಶಿಶುಗಳಾಡುವ ಗುಲ್ಲು ತಾವ್ ಕೇಳಿ । ಕರುಶಿಶು ಬೆದರಿತಮ್ಮಾ । ಗೋಪ್ಯಮ್ಮಾ ॥ ॥ ೫ ॥ ಬಾ ಯೆನ್ನ ಚಿನ್ನವೆ ಬಾ ಯೆನ್ನ ರನ್ನವೆ । ಬಾರೋ ಮೋಹದ ಗಿಣಿಯೇ । ಗೋವಿಂದ ॥ ಬಾ ಯೆಂದು ಯಶೋದೆ ಬಿಗಿದಪ್ಪಿ ಮುದ್ದಾಡ್ದ । ಬಾರೊ ಶ್ರೀಹಯವದನಾ । ಕೃಷ್ಣಯ್ಯಾ ॥ ೬ ॥ ಶ್ರೀ ॥

|| ೯ || ರಾಗ ಮುಖಾರಿ, ಅಟತಾಳ.

ಬಂದಾನಲ್ಲೆ ಭಾಗ್ಯನಿಧಿ । ಬಂದಾನಲ್ಲೆ ಕೃಪಾಸಿಂಧು ॥ ಪಲ್ಲ ॥ ಬಂದಾನಲ್ಲೆ ರಮಣಿ ನಿನ್ನಾ ಅರಮನೆಗೇ || ಅನುಪಲ್ಲ || ನಂದಗೋಕುಲದ ಪುಟ್ಟ । ವೃಂದಾವನದೊಳಗಾಡಿ । ಇಂದಿರೆಯು ರಮಣಾ । ಬಂದ ನಂದ ರೋದ್ಧಾರ || ಇಂದ್ರಾದಿ ಸುರರಿಗಾ । ನಂದಸುಖವನಿತ್ತು । ಬಂದಾ ಹಯು ವದನನಾ । ಎದುರುಗೊಳ್ಳಿರೇ || ೧ || ಮುತ್ತು ಮಾಣಿಕ್ಯ ನವ । ರತ್ನಕಿರೀಟ ದಿಂದಾ । ಸಪ್ತ ಸೂರ್ಯರ್ಮಂಡಲದಿಂ । ದೊಪ್ಪುವನ್ಯಾರೆ || ಕತ್ತಲೆ ನಿವಾ ರಿಸುವ । ಕಸ್ತೂರಿತಿಲಕವನಿಟ್ಟ । ಕೌಸ್ತುಭ ಹಯುವದನ । ದೇವ ಕಾಣಮ್ಮ || ೨ || ನೀಲಾದುಡಿಗೆಯುನುಟ್ಟು । ಕಾಲಲಂದುಗೆ ಕಡಗ । ನೀಲವರ್ಣ ಶರೀರ । ಬಂದಾನ್ಯಾರೆ || ಸಾಲು ಸಾಲು ಸಾಲು ಯೆಂಬಾ । ಯತಿಗಳಾ ಸಂದಾಣಿಯಿಂದಾ । ಮೇಲಾಗಿ ಒಲಿದ ಹಯು । ವದನ ಕಾಣಮ್ಮಾ || ೩ || ಚಿನ್ನ ತುರಗ ಮಿಂಚುತ । ರನ್ನ ತೊಡೆ ಹೊಳೆವುತಾ । ಉನ್ನತ ಗಾಂಭೀ ರ್ಯದಿ । ಬಾಹೊನ್ಯಾರಮ್ಮ || ಕನ್ನೆ ಮುಖಾಲಕುಮಿಯು । ಮನ್ನ ಸೂರೆ ಗೊಂಡಿಹ । ಚನ್ನಿಗ ಹಯುವದನ । ದೇವ ಕಾಣಮ್ಮಾ || ೪ || ಉರದಲ್ಲಿ ಶ್ರೀವತ್ಸ । ಕೊರಳಾ ಕೌಸ್ತುಭ ಹಾರಾ । ಸರಿ ಹೆಜ್ಜೆಯುನಿಡುತಾ । ಬಾಹೋ ನ್ಯಾರಮ್ಮಾ || ಗುರು ವಾದಿರಾಜರಿಗೆ । ಒಲಿದು ಸೋದೆಗೆ ಬಂದು । ಸ್ಥಿರ ವಾಗಿ ನಿಂತ ಹಯು । ವದನ ಕಾಣಮ್ಮಾ || ೫ || ಶ್ರೀ ||

|| ೧೦ || ರಾಗ ಕಲ್ಯಾಣ, ತ್ರಿಪುಟತಾಳ.

ಬಿಡೆನೊ ಬಿಡೆನೊ ನಿನ್ನ ಚರಣಕಮಲನಾ । ಎನ್ನ । ಹೃದಯುಮಧ್ಯ ದೊಳಿಟ್ಟು ಭಜಿಸುವೆ ಅನುದಿನಾ ॥ ಪಲ್ಲ ॥ ಬಲಿಯು ದಾನವ ಬೇಡಿ ಇಳೆಯು ಬ್ರಹ್ಮಾಂಡವ । ಪದುಮನಾಭ ನಿನ್ನ ಪಾದ ತೊಳೆವೆ ॥ ಉಗುರು ಕೊನೆಯಿಂದಾ ಉದಿಸಿದಳಾ ಗಂಗೆ । ಹಂಪಾದ ತೀರ್ಥವೆಂದು ಹರ ಧರಿಸಿದನಾಗ ॥ ೧ ॥ ಆ ಸತಿ ಶಾಪದಿ ಅಹಲ್ಯೆ ಸಾವಿರಯುಗ । ಪಾಷಾ ಣವಾಗಿ ಪಥದೊಳಿರಲು ॥ ಲೇಸ ನಿನ್ನ ಪಾದ ಸೋಂಕಲದಾಗಲೆ । ಆ ಸತಿ ಪಡದಳು ದಿವ್ಯ ದೇಹವನೂ ॥ ೨ ॥ ವಜ್ರಾಂಕುಶಧ್ವಜ ಪದುಮ ರೇಖೆಗಳಿಂದ । ಒಪ್ಪುವ ಸಿರಿ ಪದಪದುಮವನೂ ॥ ಭಕ್ತಿಯಿಂ ಭಜಿಸಲು ಸಿರಿಹಯುವದನನೆ । ಪ್ರತ್ಯಕ್ಷವಾಗಿ ಸಲಹುವ ನಮ್ಮನೂ ॥ ೩ ॥ ಶ್ರೀ ॥

॥ ೧೧ ॥ ರಾಗ ಪಂತುವರಾಳಿ, ಏಕತಾಳ.

ಭಕುತರಪರಾಧವ ಬಗೆಯನೀ ದೇವಾ । ಭಕುತರು ತಪ್ಪಿದರೆ ಬಲು ಭಯವೀವಾ ॥ ಪಲ್ಲ ॥ ಇಟ್ಟಣಿಸಿದ ಬಲಿಕಟ್ಟದಲು ಯಶೋದೆಗೆ । ಇಷ್ಟಾರ್ಥಗಳನಂದು ಕೊಟ್ಟು ಕಾಯನೆ ॥ ದುಷ್ಟತನದಿ ಧೃತರಾಷ್ಟ್ರ ತನಯ ತನ್ನ । ಕಟ್ಟಲು ಹವಣಿಸೆ ಕಷ್ಟವನುಣಿಸನೆ ॥ ೧ ॥ ಕಾಲಿಲಿ ತನ್ನ ಅಂಗವನೊದ್ದ ಮುನಿಪನ । ಮೂಲೋಕವರಿಯೆ ಮುದ್ದಿಸಿ ಮೆರೆಯನೆ ॥ ತಾಳದೆ ನೃಪತಿಯ ತಾನೆಂದು ತಿಳಿಯಲು । ಕಾಲಯವನ ಬಂದು ಕಾಳು ಮಾಡಿಸನೆ ॥ ೨ ॥ ಪರವಶಚಿತ್ತನಾಗಿ ಫಲ್ಗುಣ ಜರೆಯಲು । ಹಂ ದೂರಾಗದೆ ಹರಣವ ಕಾಯನೆ ॥ ಅರಸೆಂಬ ಗರ್ವದಿಂದ ಅಂಭಟ ಪೌಂಡ್ರಕನ । ಧುರಕೆ ಗಿರಿಯ ಮಾಡಿ- ಧುರದಿ ಕೊಲಿಸನೆ ॥ ॥ ೩ ॥ ಶರಕೆ ಗುರಿಯ ಮಾಡಿ ಸಮುದ್ರದೊಳೊಡ್ಡಿದ । ಸುರವ್ರತಗಂದು ಶುಭ ವನೀಯ್ಯನೆ ॥ ಹರನ ಮೆಚ್ಚಿಸಿ ತನ್ನ ಗೆಲುವ ಬಲ್ಲಿ ಬೇಡಿದ । ಶಾರೀರ ಸಂಬಂಧಿಯ ಕೊಲ್ಲಿಸನೆ ॥ ೪ ॥ ಮುಕುಟವ ಕದ್ದೊಯ್ಯಲು ಮಹಾಬಲಿಯ ಬಾಗಿಲ । ಅಕಳಂಕನಂದು ಕಾವುದ ಬಿಟ್ಟನೆ ॥ ಈ ಕೃಷ್ಣ ಹಯವದನ ನಿಂದಿಸಿಡುಪಿದ ಜನಕೆ । ಶೋಕಪಿತ್ತ ಕಲ್ಪನಿಗೆ ಶೂಲಗತಿನೀಯ್ಯನೇ ॥ ೫ ॥

॥ ೧೨ ॥ ರಾಗ ಆನಂದಭೈರವಿ, ಅಟತಾಳ.

ವೇಣುನಾದ ಪ್ರಿಯಾ । ಗೋಪಾಲಕೃಷ್ಣ । ವೇಣುನಾದ ಪ್ರಿಯಾ ॥ ॥ ಪಲ್ಲ ॥ ವೇಣುನಾದವಿನೋದ ಮುಕುಂದ । ಗಾನವಿನೋದ ಶೃಂಗಾರ ಗೋಪಾಲಾ ॥ ಅನುಪಲ್ಲ ॥ ವಂದಿತಚರಣಾ ವಸುಧೇಯಾಭರಣಾ । ಇಂದಿರಾರಮಣಾ ಇನಕೋಟಿತೇಜಾ ॥ ಮಂದರಧರ ಗೋವಿಂದ ಮುಕುಂದ । ಸಿಂಧುಶಯನ ಹರಿ ಕಂದರ್ಪಜನಕಾ ॥ ೧ ॥ ನವನೀತಚೋರಾ ನಂದಕುಮಾರಾ । ಭುವನೈಕವೀರಾ ಬುದ್ಧಿವಿಸ್ತಾರಾ ॥ ರವಿಕೋಟಿತೇಜಾ ರಘುವಂಶರಾಜಾ । ದಿವಿಜವಂದಿತ ದನುಜಾರಿ ಗೋಪಾಲಾ ॥ ೨ ॥ ಪರಮದಯಾಳೂ ಪಾವನಮೂರ್ತೀ । ಕ್ಷಿತಿಕೀರ್ತಿಹಾರಾ ಶೃಂಗಾರ ಲೋಲಾ ॥ ಉರಗೇಂದ್ರಶಯನಾ ವರಹಯವದನಾ । ಶರಣರಕ್ಷಕ ಪಾಹಿ ಕೋದಂಡರಾಮಾ ॥ ೩ ॥ ಶ್ರೀಃ ॥

॥ ೧೩ ॥ ರಾಗ ಭೈರವಿ, ಅಟತಾಳ.

ಮನ್ನಿಸೆನ್ನ ಮಧುಸೂದನ ॥ ಪಲ್ಲ ॥ ಮದನನಯ್ಯ । ಮೋಹನ ಕಾಯ । ಉನ್ನತಗುಣನಿಲಯ । ಉಡುಪಿನ ಕೃಷ್ಣರಾಯ ॥ ಅನುಪಲ್ಲ ॥ ಶ್ರುತಿಗಳ ತಂದು ಮುನ್ನ। ಸುರಮುನಿಗಳ ಮನ । ಕೃತಿಹರುಷವ ಕೊಟ್ಟ ಅಗಣಿತಗುಣರಪ್ಪ । ಯತಿಗಳ ಪಾಲಿಸಿದೆ । ಮುಂದುವರಿದ । ದಿತಿಜರ ಸೋಲಿಸಿದೆ । ಈ ಮಹಿಯೊಳು । ಮತಿವಂತರಾ ಪೊರೆದೆ। ಮಹಿಮೆಯಿಂದ ಮೆರೆದೆ ॥ ೧ ॥ ಅಚ್ಚ ಹಾರಶೋಭಿಕಂಠ । ಆಶ್ರಿತರಿಗೆ ನೀ ನಂಟ । ಮೆಚ್ಚಿದ ಪಾರ್ಥನ ಮಿತ್ರ। ನೆನಿಸುವ ಸುಚರಿತ್ರ । ಮೆಚ್ಚಿದ ನಿನ್ನಯ ಭಗತ। ವೈಕುಂಠದ । ಮುಚ್ಚಲತೆಗಿಸಲು ಶಕ್ತ । ಅಚ್ಯುತ ನಿನ್ನ । ಅರ್ಚಿಸಿದನೆ ಕೃತಾರ್ಥ । ಅವನೆ ಸರ್ವಸಮರ್ಥ ॥ ೨ ॥ ಎಂದೆಂದು ನಿನ್ನವರೊಳು । ಯೆನ್ನ ಕೂಡಿಸೊ ಕೃಪಾಳು । ವಂದ್ಯ ಗರುಡನ ಸ್ಕಂಧ । ವೇರಿ ಬಾರೊ ಗೋವಿಂದ । ತಂದೆ ನೀನೆ ತಾಯಿ ನೀನೆ । ಹಯವದನ । ಬಂಧು ನೀನೆ ಬಳಗ ನೀನೆ । ಮತ್ತದರಿಂದ । ಕುಂದ ನೋಡದೆ ಅಘ ಬಿಡು । ಕಂಡು ಕರುಣವ ಮಾಡೊ ॥ ೩ ॥ ಶ್ರೀ ॥

॥ ೧೪ ॥ ರಾಗ ಶಂಕರಾಭರಣ, ಆದಿತಾಳ.

ಕೊಂಡಾಡಲಳವೆ ನಿನ್ನಯ ಕೀರ್ತಿ । ಭೂ । ಮಂಡಲದೊಳು ಹಯಗ್ರೀವಮೂರ್ತಿ ॥ ಪಲ್ಲ ॥ ವೇದಂಗಳಾ ಜಲದಿಂದ ತಂದೇ । ಧೋ। ಪೋದ ಗಿರಿಯ ಬೆನ್ನೊಳಾಂತು ನಿಂದೇ ॥ ಮೇದಿನಿಯಾ ಕದ್ದೊಯ್ದವನ ಕೊಂದೇ । । ಸಂ । ವಾದದಿಂದಲಿ ಕಂಬದಿಂದ ಬಂದೇ ॥ ೧ ॥ ಚರಣಾಗ್ರದಲಿ ನದಿಯನು ಪೆತ್ತೆ । ತೀಕ್ಷ್ಣ । ಪರಶು ಪಿಡಿದು ಬಾಹುಜರ ಕಿತ್ತೆ ॥ ನೆರೆ ನಂಬಿದಗೆ ಸ್ಥಿರಪಟ್ಟವಿತ್ತೆ । ದೊಡ್ಡ । ದುರುಳ ಕಾಳಿಂಗನ ಶಿರದಿ ನಿಂತೆ ॥ ॥ ೨ ॥ ಪತಿವ್ರತೆಯರ ಮಾನಗಳ ಭೇದನ । ಬಹು । ಚತುರ ತುರಗವೇರಿ ನಲಿವನ್ನ ॥ ಕ್ಷಿತಿಯೊಳುತ್ತಮ ವಾದಿರಾಜರನ್ನ । ಸ್ವಾಮಿ । ಸತತ ಹಯವದನ ರಕ್ಷಿಪನಾ ॥ ೩ ॥ ಶ್ರೀ ॥

॥ ೧೫ ॥ ರಾಗ ಕಾಂಬೋಧಿ, ಝಂಪೆತಾಳ.

ಕಂಜಾಕ್ಷ ಕಾಯಯ್ಯ ಕರುಣಾನಿಧಿಯೇ । ಬಲ । ಭಂಜನನನುಜಾ ನೋಡೆನ್ನ ॥ ಪಲ್ಲ ॥ ಅಂಜದೆ ನಾ ನಿನ್ನ ಅಡಿಗಡಿಗೆ ಬೇಡುವೆನು । ಕುಂಜರ ವರದಾ ಕೂಡೆನ್ನ ॥ ಅನುಪಲ್ಲ । ನೀನೊಲಿದಾಗಲೆ ನಿಖಿಲ

ಸಂಪತ್ತಿನ್ನ । ತಾನೇ ಬಾಹದು ತಡವಿಲ್ಲಾ ॥ ಆ ನಳಿನಭವಾದ್ಯಮರಂದಕೆ ಸಾಕ್ಷಿ । ಬಾನುಸನ್ನಿಭ ಬಾರೊ ನಲ್ಲಾ ॥ ೧ ॥ ಪುಂಡರೀಕಾಕ್ಷನ್ನ ಪೂಜಿಪ ಭಕ್ತರ । ಮಂಡೆಯು ಪೂ ಬಾಡದೆಂದು ॥ ಕಂಡೆನಾ ರಣದಲ್ಲಿ ಕಲಿ ಪಾರ್ಥನಿಗೊಲಿದು । ಭಂಡಿಯು ಬೋವನಾದಂದು ॥ ೨ ॥ ವೃಂದಾರಕೇಂದ್ರ ಶ್ರೀಹಯವದನ ಮುಕುಂದ । ಮಂದರೋದ್ಧಾರ ಮತ್ಸ್ಯಾಂದಯೋ ॥ ಇಂದಿರೆಯುರಸ ಬಾ ಇಂದುವದನ ದೀನ । ಬಂಧುವೆ ಭಕ್ತರ ಸಿಂಧುವೆ ಮುಕುಂದನೆ ॥ ೩ ॥ ಶ್ರೀ ॥

॥ ೧೬ ॥ ರಾಗ ರೇಗುಪ್ತಿ, ಆದಿತಾಳ.

ಗಾಡಿಗಾರ ಕೃಷ್ಣರನ್ನ ಬಿಡದಿರೊ ಯೆನ್ನ ॥ ಪಲ ॥ ಬಡವರ ರಕ್ಷಿಪನ್ನ । ಅಡಿಗೆರಗುವೆ ನಿನ್ನ । ಗಾಡಿಗಾರ ॥ ಅನುಪಲ್ಲ ॥ ಕಡಲಮಗಳ ಗಂಡ । ಒಡಲೊಳು ತೋರ್ದಜಾಂಡ ॥ ಪಿಡಿದ ಪಾಶದಂಡ ಕಾಂಡ । ಬೇಡಿದಿಷ್ಟದಾನಶೌಂಡ ॥ ೧ ॥ ವಾರಿಧಿಮಧ್ಯದಿ ಪುರ । ವರ ನಿರ್ಮಿಸಿದ ಧೀರ ॥ ಈರೇಳು ಭುವನೋದ್ಧಾರ । ನೀರದಶ್ಯಾಮಳಾಕಾರ ॥ ೨ ॥ ಮಂದಸ್ಮಿತಮುಖದಿಂದ । ಇಂದುಡುಪಿನಲ್ಲಿ ನಿಂದ ॥ ನಂದಗೋಪಜನಕಂದ । ವೃಂದಾರಕೇಶ ಮುಕುಂದ ॥ ೩ ॥ ಭಾವಗೊಲಿದಜೋದ್ಭವ । ಭವಸಂಜಾತರ ಕಾವ ॥ ಭವಾಬ್ಧಿತಾರಕ ದೇವ । ಭಪಿಸುವ ಭಕ್ತೋಜ್ಜೀವ ॥ ೪ ॥ ಮಧ್ವಮುನಿಪರೊಡೆಯ । ಶುದ್ಧ ಯತಿಗಣಪ್ರಿಯ ॥ ಶುದ್ಧವಾದಾಗಮಗೇಯ । ಮುದ್ದು ಹಯವದನರಾಯ ॥ ೫ ॥ ಶ್ರೀ ॥

॥ ೧೭ ॥ ರಾಗ ರೇಗುಪ್ತಿ, ಝಂಪೆತಾಳ.

ನಂದಗೋಪನ ಕಂದ ನಾನು । ವೃಂದಾರಕೇಂದ್ರ ಖಳಕುಲ ಮರ್ದನ ॥ ನಂದಗೋಪನ ಕಂದ ನಾನು ॥ ಪಲ್ಲ ॥ ಎಂದೆಂದು ನನ್ನ ನಂಬಿದ ಭಕ್ತಜನರ ಸು । ತ್ತಿಂದ ಬಂದ ಕ್ಲೇಶಗಳ ಖಂಡಿಸಿ ॥ ತಂದೆ ಮಕ್ಕಳನು ಪೊರೆದಂತೆ ಪಾಲಿಸುತಿಹೆನು । ಕಂದರ್ಪನಾಣೆ ಇದು ಯೆನಗೆ ಬಿರಿದು ॥ ೧ ॥ ಅಂದಂದು ಅವರು ಬೇಡಿದ ಇಷ್ಟಗಳನಿತ್ತೆ । ಸಂದೇಹವಿಲ್ಲ ಸಂತರ ಸಲಹಿದೆ ॥ ಮಂದಜನರೊಡನಾಡಿ ಮರುಳಾಗದಿರು ಮನುಜ । ಚಂದದಿಂದೆನ್ನ ಪೂಜೆಯನೆ ಮಾಡು ॥ ೨ ॥ ಇಂದ್ರ ಗರ್ವಿಸಲು ಅವನಿಗೆ ತಂದು ಸುರತರುವ । ನಂದನ ವನವ ಪೊಕ್ಕು ಕಿತ್ತು ತರಲು ॥ ಒಂದಾಗಿ

ರಣಕೆ ಬಂದು ನಿಂದವುರರನು ಕರುಣ । ದಿಂದ ನಾ ಪಾಲಿಸಿದೆ ಹಯ ವದನನೆಂದು ॥ ೩ ॥ ಶ್ರೀ ॥

॥ ೧೮ ॥ ರಾಗ ದೇಶಿ, ಏಕತಾಳ.

ಕೇಳಬಲ್ಲನೆ ಯೆನ್ನ ಮಾತನು । ಕಾ । ಳಿಂಗಮರ್ದನ ಕೃಷ್ಣ । ಹೇಳಿ ಗೋಪ್ಯಮ್ಮ ಬುದ್ಧಿ ॥ ಕೇಳಬಲ್ಲನೆ ಯೆನ್ನ ಮಾತನು ॥ ಪ ॥ ಬಿಟ್ಟ ಕಣ್ಣನೆ ಮುಚ್ಚಲೊಲ್ಲನೆ।ದೊಡ್ಡ। ಬೆಟ್ಟಕ್ಕೆ ಬೆನ್ನತ್ತಿ ನಿಂತನೆ ।ಬಹು। ಸಿಟ್ಟಲಿ ಕೋರೆ ಹಲ್ಲ ಕಿರಿವನೆ । ಗಟ್ಟ । ಉಕ್ಕಿನ ಕಂಬಪೊಡೆದು ಬಂದನೆ । ರಂಗ ॥ ೧ ॥ ಮೂರಡಿಭೂಮಿಯು ಬೇಡಿ ಬಂದನ । ತಾಯ । ತಲೆಯ ಕಡಿಯಲಿಕೆ ಕೊಡಲಿ ತಂದನೆ ॥ ನಾರಶೀರೆಯನುಟ್ಟುಕೊಂಡನೆ । ಬಹು । ಚೋರತನ ದಿಂದ ಹರವಿ ಹಾಲ ಕುಡಿದನೆ ಕೃಷ್ಣ ॥ ೨ ॥ ಬತ್ತಲೆನಾರಿಯರ ಅಪ್ಪಿದ । ಕೃಷ್ಣ। ಉತ್ತಮ ಅಶ್ವವನೇರಿದ ।ರಂಗ । ಹತ್ತವತಾರವ ತೋರಿದ । ಧಿಟ್ಟ । ಮೂರ್ತಿ ನಮ್ಮ ಚೆಲುವ ಶ್ರೀಹಯವದನ ॥ ೩ ॥ ಶ್ರೀ ॥

॥ ೧೯ ॥ ರಾಗ, ಭೈರವಿ [ಧಾಟಿ:- ಜಯಮಂಗಳಂ ನಿತ್ಯ ಶುಭಮಂಗಳಂ] ಝಾಪುತಾಳ

ಜಯಮಂಗಳಂ ನಿತ್ಯ ಶುಭಮಂಗಳಂ ॥ ಪ ॥ ವಸುದೇವತನಯ ನಿಗೆ ವೈಕುಂಠನಿಲಯನಿಗೆ । ಕುಸುಮನಾಭನಿಗೆ ಕೋಮಲರೂಪಗೇ ॥ ಯಶೋದೆಯ ನಂದನಗೆ ಇಂದಿರಾರಮಣನಿಗೆ । ನಸುನಗೆಯೊಳೆಪ್ಪುವಾ ನರಸಿಂಹಗೇ ॥ ೧ ॥ ಕನಕಕಿರೀಟನಿಗೆ ಕಸ್ತೂರಿತಿಲಕನಿಗೆ । ಕನಕಕುಂಡ ಲಗೆ ಕೌಸ್ತುಭಹಾರಗೆ ॥ ಕನಕಾಂಬರಧರಗೆ ಘನಮಹಿಮೆಯುಳ್ಳವಗೆ । ಸನಕಾದಿವಂದ್ಯ ನರಸಿಂಹಗೇ ॥ ೨ ॥ ಪಂಕಜನಾಭನಿಗೆ ಪಾಂಚಾಲಿರಕ್ಷ ಕಗೆ । ಲಂಕೆಯನು ವಿಭೀಷಣನಿಗಿತ್ತವನಿಗೆ ॥ ಕುಂಕುಮಾಂಕಿತನಿಗ ಕುವಲಯನೇತ್ರನಿಗೆ । ಬಿಂಕದಲಿ ಮೆರೆವ ಮುದ್ದು ನರಸಿಂಹಗೇ ॥ ೩ ॥ ಪಕ್ಷಿವಾಹನನಿಗೆ ಪರಮಪಾವನನಿಗೆ । ಕುಕ್ಷಿಯೊಳು ಜಗವನಿಂಬಿಟ್ಟವ ನಿಗೆ ॥ ಲಕ್ಷ್ಮೀಕಾಂತನಿಗೆ ರಾಜೇಂದ್ರವಂದಿತಗೆ । ಲಕ್ಷಣದೊಳೊಪ್ಪುವ ನರಸಿಂಹಗೇ ॥ ೪ ॥ ಭಕ್ತವತ್ಸಲನಿಗೆ ಸಕಲವನು ರಕ್ಷಿಪಗೆ । ಮುಕ್ತಿದಾ ಯಕಗೆ ಚಿನ್ಮಯರೂಪಗೆ ॥ ಮಿತ್ರೆರುಗ್ಮಿಣಿಸತ್ಯಭಾಮೆರರಸನಿಗೆ । ನಿತ್ಯ ಕಲ್ಯಾಣ ಶ್ರೀಹಯವದನಗೇ ॥ ೫ ॥ ಶ್ರೀ ॥

ಶ್ರೀಗುರುವಾದಿರಾಜಕೃತ ಪದಗಳು ಸಂಪೂರ್ಣಂ

ಶ್ರೀವೆಂಕಣ್ಣಕವಿಕೃತ ಪದಗಳು.

॥ ೨೦ ॥ ರಾಗ ನಾಟಿ, ಝಂಪೆತಾಳ

ಶ್ರೀಗಣಪ ಶರಣೂ ॥ ಶಿವಕರಾಚ್ಯುತ ನಿತ್ಯ । ಶಿವಪೂರ್ಣ ಸರ್ವೇಶ । ಶಿವಜಾತಸಂಭೂತ । ಶಿವಮುಖ್ಯಸೇವ್ಯಾ ॥ ಶಿವಯಾನಪಿತಯುಮಳ । ಶಿವಭಂಜನಾನಂದ । ಶಿವಮರ್ದನ ಗೋವಿಂದ । ಶಿವಕರ ಮುಕುಂದಾ ॥ ಶ್ರೀಗಣಪ ॥ ೧ ॥ ನಾಗಪತ್ರಣದರಸ । ನಾಗರುವಿಕೆಯ ಮುಂದ । ನಾಗರುಹದಳನೇತ್ರ । ನಾಗಪತಿಶಯನಾ ॥ ನಾಗೇಂದ್ರವರದ ಶಿತನಾಗವಾಹನ ರಕ್ಷ । ನಾಗಚಕ್ರಾಂಕಿತನೆ । ನಾಗಾಂಗವನಾ ॥ ಶ್ರೀಗಣಪ ॥ ೨ ॥ ಗುರುಪೂಜ್ಯನೆಂದೊಲಿದು । ಗುರುದಕ್ಷಿಣೆಗೆ ಮಡಿದ । ಗುರುಸುತನ ತಂದಿತ್ತ । ಗುರುವಿಗೊಂದಿಸುತಾ ॥ ಗುರುವಿಂಗೆ ಗುರು ಜಗದ್ಗುರು ಸಾರ್ವಭೌಮ । ಚಿದ್ಗುರು ಮೂಲಿಕನಿವಾಸ । ಗುರು ವೆಂಕಟೇಶಾ ॥ ಶ್ರೀಗಣಪ ಶರಣೂ ॥ ೩ ॥ ಶ್ರೀಃ ॥

॥ ೨೧ ॥ ರಾಗ, ಕಲ್ಯಾಣಿ [ಧಾಟಿ:- ಸತ್ಯಕಲ್ಯಾಣಿ] ಏಕತಾಳ

ನೋಡು । ಮನದಿ ಕೊಂಡಾಡು । ಭಕುತಿಯ ಬೇಡೂ । ನೀ ಪಾಡೂ ॥ ಕಾಡೂ ವಿಷಯದ । ಗಾಡಿಕೆಯೊಳು ಮನ । ಗೂಡಿ ಹೃದಯದೊಳಾಡುವ ಹರಿಯನು ॥ ನೋಡು ॥ ಪಲ್ಲ ॥ ಹಾದಿಯಾ । ತತ್ವಾರ್ಥದ ಬಲು ಸಂಪಾದಿಯಾ । ಸುಂಗತ ಪರಮಾಂಬೋಧಯಾ । ಸುಂ ಪಡದೂ । ಭೇದಪಂಚಕವಂದೂ । ವಿಷಯದ ಹಾದಿಯನ್ನ ಗೆಲಿದೂ ॥ ಮಾಧವ ಚರಣಾ । ರಾಧನೆಯೊಳು ಮನ । ತೇದುತ ಧ್ಯಾನವಿ । ನೋದದಿ ಹರಿಯನು ॥ ನೋಡು ಮನದಿ ॥ ೧ ॥ ಹೊಂದಿಸೀ । ಅಹಂಕಾರದ ಬಳಗವ ಬಂಧಿಸೀ । ಇಂದ್ರಿಯಂಗಳ ಬಲವನು ಕುಂದಿಸೀ । ಏಕೋದೃಢದೀ । ಮಂದಮತಿಯ ಬಿಟ್ಟೂ । ಮನ ಗೋವಿಂದನಂಘ್ರಿಯೊಳಿಟ್ಟೂ ॥ ಚಂದದಿ ದಶವಾಯೊಂದು ಗೂಡಿ ಹೃ । ನ್ಮಂದಿರದೊಳಗಾ । ನಂದದಿ ಹರಿಯನು ॥ ನೋಡು ॥ ೨ ॥ ಅಳುಕದೇ । ಇತರೇಚ್ಛೆಯೊಳು ಮನ ಮುಳುಕದೇ । ಪರಧನ ಪರಸತಿ ಮನ ನಿಲುಕದೇ । ಏಕಾಗ್ರದಿ । ಒಳಗ್ಹೊರಗೊಂದಾಗೀ । ಮನದೊಳು ಒಳವಂತವನಾಗೀ ॥ ಸುಲಲಿತಾತ್ಮ ಗುರುವೆಂಕಟೇಶ ಮಂ । ಜುಳರೂಪದಿ ಥಳ । ಥಳಿಸುವ ಹರಿಯನು ॥ ನೋಡೂ ॥ ೩ ॥ ಶ್ರೀಃ ॥

|| ೨೨ || ರಾಗ, ಅರಬಿ [ಧಾಟಿ:- ಕಾಂತೇ, ಶ್ರೀಮಂತೆ ।] ಆದಿತಾಳ

ಕಲಯೇ ತ್ವಂ ವೇದನಾಯಕಿ । ಕಾಮಿತ ಫಲದಾಯಕಿ || ಕಲಯೇ ತ್ವಂ || ಕಲಿತ ಮೌಕ್ತಿಕಲಾಪೆ । ಕೈಲಾಸಾಚಲವಿಹಾರಿ || ಕಲಯೇ ತ್ವಂ ||ಪಲ್ಲ|| ಬಾಲೇ । ಅಲಂಕಾರಾಲಂಕೃತ ಪಾಲೇ । ಸನ್ನುತ ಮಾನಿತಹಾಜಾಲೇ । ಸಂತತ ಮನಲೋಲಿ । ಕರುಣಾವಾಲಿ || ಕಲಯೇ ತ್ವಂ|| ೧ || ಧನ್ಯೇ । ಪವಿತ್ರಭಕ್ತಾಧನ್ಯೆ । ಪರ್ವತರಾಜಕಾಕನ್ಯೇ । ಸರ್ವಥಾ ಸುಪ್ರಸನ್ನೇ । ಸಜ್ಜನ ಮಾನ್ಯೇ ॥ ಕಲಯೇ ತ್ವಂ || ೨ || ರಾಮೇ । ಕೋಮಲ ಮೇಘಶ್ಯಾಮೇ । ಜ್ಯೋತಿರ್ಮಹೇಶಾ ಭಾಮೇ । ಗುರು ವೇಂಕಟರಮಣಭಿರಾಮೇ । ಚಂದ್ರಲಲಾಮೇ || ಕಲಯೇ ತ್ವಂ ವೇದನಾಯಕೀ || ೩ || ಶ್ರೀಃ ||

|| ೨೩ || ರಾಗ, ಅರಬಿ [ಧಾಟಿ:- ಕಾಂತೇ, ಶ್ರೀಮಂತೇ] ಆದಿತಾಳ

ಕಲಯೇ ಶ್ರೀವೇಂಕಟೇಶಂ । ದೇವಾದಿದೇವಂ । ಕಲಯೇ|| ಜಲಜಸಂಭವಾಧ್ಯಮರಾರ್ಚಿತ ನಿಷ್ಕಲುಶ ನಿತ್ಯನಿರ್ಮಲ ಗುಣಧಾಮಂ || ಕಲಯೇ || || ಪಲ್ಲ || ಬಾಲಂ । ದೇವಕದೇವೀ ನತಪಾಲಂ । ನರನಾಟಕ ಸವಕೃತ ಲೀಲಂ । ಮೋಹಿತ ಗೋಪೀಜನಜಾಲಂ । ಯಶೋದ ಪುಣ್ಯವಿಶಾಲಂ । ಪೂತನಿಕಾಲಂ । ಗೋಪವಿಲೋಲಂ । ಚಾರುಚಂತ್ರಸುಶೀಲಂ || ಕಲಯೇ ಕೇಶವಂ || ೧ || ಸಾರಂ । ಸಕಲಾಗಮ ಶಕಟಪ್ರಹಾರಂ । ನವನೀತಕ್ಷೀರ ದಧಿಚೋರಂ । ಮುರಲೀರವಗೀತಸಂಪೂರಂ । ಬೃಂದಾವನಸಂಚಾರಂ । ವೃಷಧೇನುಕವತ್ಸವಿದಾರಂ । ಯುವತೀಜನವಸನಪಹಾರಂ || ಕಲಯೇ ಶ್ರೀಕೇಶವಂ || ೨ || ಈಷಂ । ಈಪ್ಸಿತಪ್ರದಕೋಮಲವೇಷಂ । ಕೌಸ್ತುಭ ಮಣಿಮೌಕ್ತಿಕಭೂಷಂ । ಕರುಣಾಕರ ಭಕ್ತಸುಪೋಷಂ । ವರವಟವೇಣು ಪುರನಿವಾಸಂ । ಶ್ಯಾಮಲವೇಷಂ । ಸುಂದರಕೇಶಂ। ಶ್ರೀಗುರುವೆಂಕಟೇಶಂ || ಕಲಯೇ ಶ್ರೀಕೇಶವಂ || ೩ || ಶ್ರೀಃ ||

|| ೨೪ || ರಾಗ ಬಿಲಹರಿ, ಏಕತಾಳ

ಕುಣಿದಾಡೊ ಕೃಷ್ಣ ಕುಣಿದಾಡೋ । ಮತ್ತೊಮ್ಮೆ ಕುಣಿದಾಡೋ || ॥ ಪಲ್ಲ ॥ ಮುದ್ದು ಮೊಗದೊಲಪ । ಮುಗುಳ್ನಗೆದೋರಿ । ತಧಿಮಿಕೆಂದು ಮುಂದೀ|| ಕುಣಿದಾಡೋ ಕೃಷ್ಣ ಕುಣಿದಾಡೋ || ೧ || ಹಸ್ತಾಂಗುಲಿ ಅಭಿನವಗಳವಟ್ಟು । ನ್ಯಸ್ತದಿ ಹೆಜ್ಜೆಗಳನ್ನಿಟ್ಟು || ಕುಣಿದಾಡೊ ಕೃಷ್ಣ ಕುಣಿ

ದಾಡೊ ॥ ೨ ॥ ಗೆಜ್ಜೆನೂಪುರ ಘಲ್ಗಲ್ ಘಲರವದಿಂದಾ । ತದ್ಧಣುಕೆಂದು ಮುಕುಂದಾ ॥ ಕುಣಿದಾಡೋ ಕೃಷ್ಣ ಕುಣಿದಾಡೋ ॥ ೩ ॥ ಸ್ಥಾಯಿ ಮೃದಂಗತಾಳದಿ ಶ್ರುತಿಗೂಡೀ ಮಾ । ಗಾಯಿ ಕುಂಡಲಗಳೋಲಾಡೀ ॥ ಕುಣಿದಾಡೋ ಕೃಷ್ಣ ಕುಣಿದಾಡೋ ॥ ೪ ॥ ಸರಸ ಸಾಹಿತ್ಯ ಸಂಗೀತ ಸುಪ್ರೇಮಾ । ಗುರುವೇಂಕಟ ಗುಣಧಾಮಾ ॥ ಕುಣಿದಾಡೊ ಕೃಷ್ಣ ಕುಣಿದಾಡೋ ॥ ೫ ॥ ಶ್ರೀ೬೪ ॥

॥ ೨೫ ॥ ರಾಗ, ಬೇಗಡೆ [ಪ್ರಾ: ಶ್ರೀನರಹರಿ ಶರಣಾಗತರಕ್ಷಕ] ಆದಿತಾಳ

ಧಾಂಧಾಂ ಧಾಂ ಧಾಂ ಧಿಮಿಕೆಂದಾಡಿದ । ಗೋವಿಂದಾ ನಂದನ ಕಂದಾ ॥ಪ॥ ಚಂದದ ಕಣ್ ಕಾಲಂದುಗೆಗೆಜ್ಜೆ ಘಲ್ ಘಲ್ ಕೆಂದುಲಿಯಲು । ಕಾಳಿಂಗನ ಪೆಡೆಯುಲಿ । ನಿಂದು ನರ್ತನ ಪ್ರಬಂಧಗತಿಗಳಿಂ ॥ ಧಾಂ ಧಾಂ ಧಾಂ ಧಾಂ ಧಿಮಿಕೆಂದಾಡಿದ ॥ ಅನುಪಲ್ಲ ॥ ಗರುಡನ ಬಲಿಯುಂಡೂ । ಕಾಳಿಂಗನು । ಅರಿಯದಂತಿರೆ ಕಂಡೂ ॥ ಉರಗರಾಜನು ಮುನಿದೂ । ಪಾತಾಳದಿಂ । ಪೊರಡಿಸಲದನಂದೂ ॥ ಮೆರೆವ ಕಾಳಿಂದಿಯ ಮಡುವಿಲಿ ತನ್ನಯ । ತರುಣಿಯರಣುಗಾದ್ಯರು ಸಹಿತರುತಿರೆ । ಗರಳಜ್ವಾಲೆಯಿಂದುರಿಯೆ ತಡಿಯೊಳಿಹ । ತರುಲತೆಗಳು ಒಣಗೇ ॥ ಚರಿಸುವ ಮೃಗಪಕ್ಷಿಗಳಿಂಗುದಕದ । ಧರೆ ಸೋಂಕಲು ಬಸವಳಿಯಲು ಬಳಿಕಾ । ಹರಿಯೊಂದಿನದಿ ಗೌಗಳ ಗೋವಳರನು । ಬೆರಸಿ ಬಂದನು ಪಂಪಾಯಿಂದಾಡುತ ॥ ಧಾಂ ಧಾಂ ಧಾಂ ಧಾಂ ಧಿಮಿಕೆಂದಾಡಿದ ॥ ೧ ॥ ತಡೆಯದೆ ಗೋವಳರೂ । ಗೌಗಳುನೀ । ಗುರ್ಜಿಡಿದು ವರಗುತಿರಲೂ ॥ ಮೃಡಸಖನದನಂತೂ । ಉರಗನ । ಪೊರಡಿಪೆನೆಂದೊರೆದೂ ಕಡಬದ ವೃಕ್ಷವನಡರುತಿರಲು ಸಂ । ಗಡಿಗರೊಡನೆ ಬಿಡದಾ ಕಾಳಿಂದಿಯ । ಮಡುಹಿಲಿ ಧುಮುಕಿ ಕಾ । ಲಿಡುತುದಕದಿ ಗಡ । ಬಡಿಸುತಿರಲು ಕೇಳ್ದು ॥ ಕಡುಸ್ಫುಲಿಡುತ್ತೈತಂದಾ ಸರ್ಪನು । ನಿಡುಪಾಶದಿ ಹರಿಯೊಡಲ ಬಿಗಿಯುತಿರೆ । ಬಿಡಿಸಿಕೊಂಡು ಬೆನ್ನಡಂಬಾಲ । ಪಿಡಿದ್ದೆಡೆಗಳ ತುಳಿದಡಿಗಡಿಗೊತ್ತಿ ಮೆಟ್ಟುತ ॥ ಧಾಂ ಧಾಂ ಧಾಂ ಧಾಂ ॥ ೨ ॥ ಶಿರದ ಮುಕುಟ ಬೆಳಗೇ । ಬಾಲಳಿ । ಗುರುಳ್ಗಳತ್ತಿತ್ತ ಅಲುಗೇ ॥ ಕಿರುಬೆರಳಿವೆ ಚಳಕಾ । ತಿಲಕ ಕ । ಸ್ತುರಿಯ ನಿಟಿಲ ಫಲಕಾ ॥ ಮೆರೆವ ಭ್ರೂಲತೆ ಸರಸಿರುಹದಳಾಕ್ಷಗ । ಳರುಣಾಧರ ನಾಸಾಪುಟಚುಬುಕ । ಮಕರಕುಂಡಲ ನುಣ್ಗಲ್ಲರದನ ಇರು । ಳಿರೆಯುವದನದೊಳಪು ॥ ಕೌಸ್ತುಭವನಮಾಲೆಯು

ಪೇರುರದಲಿ । ಬೆಳಗಲಜಾನುಬಾಹು ಭಾಪುರಿ ಕರ ; ವಲಯು ಪೀತಾಂ
ಬರೋಡ್ಯಾಣ ಶೃಂಗರ । ಕರಚರಣಗಳಿಂದುರಗನ ಮೆಟ್ಟಿದ ॥ ಧಾಂ
ಧಾಂ ಧಾಂ ॥ ೩ ॥ ಕಂಗಳಡಾಳಗಳೂ । ಭುಜದ ಹ ; ಸ್ತಂಗಳ ಭಾವಗಳೂ ॥
ಮಂಗಳಕ್ಕೊಡಲಳವಾ । ಅಭಿನವ ಸ । ರ್ವಾಂಗ ಸೊಬಗ ಚೆಲುವಾ ॥ ರಂಗ
ಮೋಹಿಸುವ ನಾಟ್ಯಂಗಳ ತೋಱಿ ಮೃ । ದಂಗವ ಬೊಮ್ಮನು ಹಿಂಗದೆ
ನುಡಿಸಲು । ಗಂಗಾಧರನು ತಾಳಂಗಳ ಪಿಡಿದು ತ । ಳಾಂಗು ಥೈಯ್ಯ
ಎನುತಾ ॥ ಸಂಗೀತವ ಪಾಡಲು ಹನುಮನು ಜಲ ; ಪ್ರುಂಗವ ಶ್ರುತಿಯೂ
ದಲು ನಾರದನು ಗು । ಣಂಗಳ ಕೀರ್ತಿಸುತಿರೆ ಶ್ರೀಕೃಷ್ಣ ಕಾ । ಳಿಂಗನ
ಪೆಡೆಗಳ ಹಿಂಗದೆ ತುಳಿವುತ ॥ ಧಾಂ ಧಾಂ ಧಾಂ ॥ ೪ ॥ ಜಲಜವದನ
ಪೊಳೆಯೆ । ಮಕರಕುಂ । ಡಲಗಳತ್ತಿತ್ತಲುಲಿಯೇ ॥ ಗಳದ ಪದಕಹಾರಾ ।
ಕೌಸ್ತುಭ ಎಡ । ಬಲದೊಲಿವ ವೈಯಾರಾ ॥ ಬಲು ರತ್ನದ ಪ್ರಭೆ ಥಳ್
ಥಳ್ ಥಳ ಥಳ । ಬಳಿ ಸರಪಣಿರವ । ಕಣ್ ಕಣ್ ಕಣ ಕಣ । ಪೊಳೆಯೆ
ಪೀತಾಂಬರ ಝುಗ್ ಝುಗ್ ಝುಗ ಝುಗ । ಪಳಿಸರ ಘಂಟೆಗಳೂ ॥
ಉಲಿಯೇ ಸ್ವರ ಕಿಣ್ ಕಿಣ್ ಕಿಣ್ ಕಿಣ ಕಿಣ । ಚೆಲುವ ಹೆಜ್ಜೆ ಝುಲ್
ಝುಲ್ ಝುಲ್ ಝುಲ ಝುಲ । ನಲಿವ ಗೆಜ್ಜೆ ಘುಲ್ ಘುಲ್ ಘುಲ್ ಘುಲ್ಲನೆ ।
ತುಳಿದಹಿಪನ ಪೆಡೆಗಳಲಿ ನಲಿಯುತಲಿ ॥ ಧಾಂ ಧಾಂ ಧಾಂ ॥ ೫ ॥ ಚಿತ್ತಜ
ಪಿತನಿಂತೂ । ನೃತ್ಯವಾಡುವ । ಅರ್ಥಿಯನದನೆಂತೂ ॥ ವಿಸ್ತರಿಸುವ
ರಳವೇ । ಪರಾತ್ಪರ । ವಸ್ತು ಲೀಲೆಯು ಮೆರೆಯೇ ॥ ಕೃತ್ತಿವಾಸನು ಭಲ
ಭಲರೆನುತಿರೆ ಸುರ । ಪೋತ್ತಮರೆಲ್ಲರು ಧಿರುರೆ ಧಿರುರೆಯೆನೆ । ಉತ್ತಮ
ವಾಮಕರಾಗ್ರದಿ ಫಣಿಪನ । ಎತ್ತಿಬಾಲವ ಪಿಡಿದೂ ॥ ಒತ್ತುತ ನಡುಬೆನ್ನಲಿ
ಶಿರವ ನಿಗು । ಸುತ್ತ ಪೆಡೆಗಳನು ತುಳಿದು ಕಾಳಿಂಗನ । ಸತ್ವವಡಗದು
ಶೌರ್ಯತ್ವವಳಿದು ತಲೆ । ಯೆತ್ತುತ ಮೂರ್ಛೆಯೊಳ್ ವೆತ್ತಿರಲಗಲದೆ ॥
ಧಾಂ ಧಾಂ ಧಾಂ ॥ ೬ ॥ ಬಲುನಾಟ್ಯದ ಗತಿಗೇ । ವಿಷವ ಬ್ಯಾ । ಗಳಲುಗು
ಳುತಲಿಳೆಗೇ ॥ ಕಲಿತನವೆಲ್ಲಡಗೇ । ಉರಗ ಬಸ । ವಳಿದು ಬಿದ್ದನು
ಸೊರಗೇ ॥ ಅಳಲುತವನ ಸ್ತ್ರೀಯರು ವಂದಿಸಿ ಬೇಡಿ । ಕೊಳಲು ಕರುಣ
ದಿಂದುಳುಹಿ ಕಾಳಿಂಗನ । ಜಲದಿಂದಟ್ಟಿಸಿ ಜಲನಿಧಿಯನು ನಿ । ರ್ಮಲ
ಗೃದಡಿ ಸಲೆ ದಯದಿಂದೀಕ್ಷಿಸಿ ॥ ಗೋಗೋಪಸಂಕುಲವೆಬ್ಬಿಸಿ ವಡನಾ
ಡುತ । ನಂದಗೋಕುಲವ ಪೊಕ್ಕನು ಗುಣನಿಧಿ । ಗುರುವೆಂಕಟಾಚಲಪತಿ

ಉಡುಪಿನ ಚಲುವ ಶ್ರೀಕೃಷ್ಣನು ॥ ಧಾಂ ಧಾಂ ಧಾಂ ಧಾಂ ಧಿಮಿಕೆಂದಾಡಿದ । ಗೋವಿಂದಾ ನಂದನ ಕಂದಾ ॥ ೭ ॥ ಶ್ರೀಕೃ ॥

॥ ೨೬ ॥ ರಾಗ ಬೃಂದಾವನ ಸಾರಂಗ ಅಥವಾ ಮಧ್ಯಮಾವತಿ, ತ್ರಿವುಡೆತಾಳ.

ನುತಿಸಲೆನ್ನಳವೆ ನಿನ್ನಾ । ಕೀರ್ತಿಸಂಪನ್ನಾ । ನುತಿಸಲೆನ್ನಳವೇ ನಿನ್ನ ॥ ಅತಿಶಯದ ಮಹಿಮೆಯನು ಮೆರೆಸುತ । ಪೃಥುವಿಯೊಳು ಪೆಸರೊಡೆದು ಸುಜನ । ಪ್ರತತಿಯನು ಪಾಲಿಸುವ ಕರುಣಾ । ವೃತ ಶರಧಿ ಶ್ರೀಮಂಜುನಾಥನೆ ॥ ನುತಿಸ ॥ ಪ್ಲ ॥ ಜಲಜಸಂಭೂತಾಂಡವೂ । ಪಂಚಶತಕ್ಕೋಟಿ । ಇಳೆಯು ತೋರ್ಪ ಯೋಜನವೂ । ಸಪ್ತದ್ವೀಪಗ । ಳೊಳಗೆ ಜಂಬುದ್ವೀಪವೂ ॥ ದ್ವೀಪಮಧ್ಯದಿ । ಹೊಳೆವ ಕನಕಾಚಲದ ತೆಂಕಣ । ಪೊಳಲು ಐವತ್ತಾರು ದೇಶಗ । ಳೊಳಗೆ ತೌಳವದೇಶಮಧ್ಯದಿ । ಚಲುವ ನೇತ್ರಾವತಿನದಿಯ ನಿ । ರ್ಮಲದ ದಕ್ಷಿಣತಟದ ಕ್ಷೇತ್ರ ಒಂದಳತೆಯೊಳು ರಾಜಿಸುವ ಧರ್ಮ । ಸ್ಥಳಕೆ ಸ್ವರ್ಣಕದಳಿಯಿಂದೈತಂದು । ನೆಲಸಿರುತಿಹ ನಿಶ್ಚಲ ಮಹೇಶನೆ ॥ ನುತಿಸಲೆನ್ನಳವೆ ನಿನ್ನ ॥ ೧ ॥ ಮುನ್ನಿರಾಮಘನದಲೀ । ಶಿವನಂಘ್ರಿಯು । ತ್ಪನ್ನನೆಂದೆನಿಸುತಲೀ । ಕಾಳರಾಹುವೆಂ । ಬುನ್ನತಭಿಧಾನದಲೀ ॥ ಮೆರೆವುತಾ ಸಂ । ಪನ್ನ ಕಾಳಕಾರ್ಗಂಬೆ ಸಹಿತ ಪ್ರ । ಸನ್ನರೂಪದಿ ಪೊರಟು ಬರುತು । ತ್ಪನ್ನ ಕೊಳ್ಳಿಕುಮಾರ ಸದ್ಗುಣ । ರನ್ನ ಕನ್ನಿಕುಮಾರಿ ಸಹಿತಲೆ । ಪುಣ್ಯಕರಸ್ಥಳವೆಂದು ನೆಲಸುತ । ಅನ್ನದಾನ ಧರ್ಮಗಳನಡಸಿ ಭು । ವನ್ನದೊಳಗಿಹ ಜನರ ಪಾಲಿಸ । ಚನ್ನಗಜವಾಹನ್ನದೇವನೆ ॥ ನುತಿಸಲೆನ್ನಳವೆ ನಿನ್ನಾ ॥ ೨ ॥ ರಕ್ಕಸರುರುಜೆಗಾಗೀ । ನೆರವುತ್ತ । ಮರ್ಕಳೆಲ್ಲರೊಂದಾಗಿ । ಪ್ರಾರ್ಥಿಸಲು ಮ । ಹಾಕ್ರೂರರೂಪಿಯಾಗಿ ॥ ಪ್ರಜ್ವಲಿಸಿ ರಣದಲಿ । ಸೊಕ್ಕಿದಸುರರ ಕುಕ್ಕಿ ಯಮನ ಪು । ರಕ್ಕೆ ಕಳುಹಿ ಜನಕ್ಕೆ ಅಭಯವಾ । ಅಕ್ಕರಿಂದಲಿ ಕೊಟ್ಟು ತ್ರೈಭುವ । ನಕ್ಕೆ ಪತಿಯಹ ಕಾಳರಾಹುವಿ । ನಕ್ಕರುಳ್ಳಧರ್ಮಗಿ ಎನಿಸಿ ಜ । ಗಕ್ಕೆ ಮಹಿಮೆಯ ತೋರಿ ಭಕ್ತರ । ಚೊಕ್ಕಟದಿ ಪಾಲಿಸುವ ಶ್ರೀಶಾ । ಳಾರ್ಕದೇವೀ ಕರುಣಸಾಗರೆ ॥ ನುತಿಸಲೆನ್ನಳವೆ ನಿನ್ನ ॥ ೩ ॥ ಲಟಕಟಸುತ ಕಾಮನೂ । ಪೂಶರವ ಧೂ । ರ್ಜಟಿಯು ಕಾಣುತ್ತೆಸೆದನೂ । ರೋಷಿಸುತ್ತಾಗ । ನಿಖಿಲಾಕ್ಷಿಯ ತೆರೆದನು ॥ ಧಗಧಗಿಸಲು । ಛಟಛಟ ಛಾಲಿನುತ ಪೊರಡುವ । ಉರಿಯೊಳು । ತ್ಕಟರು ಹಿಂದವತಾರಿಸಿ ಜಗದಲಿ ಪ್ರ । ಕಟಕೊಳ್ಳಿಕುಮಾರನೆಂಬೀ । ಚಟುಳ ನಾಮದಿ ಮೆರೆದು

ಜನರ ಸಂ । ಕಟಿಪ ತೆಂವುತ ಸಲಹಿ ಕೀರ್ತಿ ದಿ । ಗ್ತಟಕೆ ಮೆರಸುತ । ತುರಗ ಯಾನಸಂ । ಘಟಿತ ಕನ್ನೆಕುಮಾರಿಯೋಲ್ಲಭ । ಧಿಟದಿ ಸಲಹೊ ದಯಾ ಸಮುದ್ರನೇ ॥ ನುತಿಸಲೆನ್ನಳವೆ ನಿನ್ನ ॥ ೪ ॥ ಧಾರುಣೀಯುಮರ ನಲೀ । ದಯುದಿ ದಿವ್ಯಾ । ಕಾರ ಸ್ವರೂಪಿನಲೀ । ಲಾವಣ್ಯಾಬ್ಧೀ । ಸಾರೆ ಎಂದೆ ನಿಸುತಲೀ ॥ ಅವತಂಸಿ ರಂಜಿಸಿ । ಶೂರಸಾಹಸವೀರ ಕೊಳ್ಳಿಕು । ಮಾರ ನರ್ಥಶರೀರೆಯೆನಿಪ ಶ್ರಂ । ಗಾರೆ ಮೋಹನಕಾರೆ ಶರಧಿಗಂ । ಭೀರೆ ನೀತಿ ವಿಚಾರೆ ಕರುಣಾ । ಸಾರೆ ಸಲೆಶ್ರಂಗಾರೆ ಕವಿಜನೋ । ದ್ಧಾರೆ ನಿನ್ನನು ಸೇರಿದೆನು ದಯು । ದೋರಿ ಸಲಹೇ ಧೀರೆ ಕನ್ಯಕುಮಾರಿ ದೇವಿಯೇ ॥ ನುತಿ ಸಲೆನ್ನಳವೆ ನಿನ್ನ ॥ ೫ ॥ ಮೆರೆವ ಶ್ರೀಪಡೆಯುರನೂ । ಕಾಣಿಸಿಕೊಳ್ಳಲಂತ ಧಿಕಾರವನೂ । ಕೊಡಲು ಅಂಗೀ । ಕರಿಸಿ ಮಂತ್ರಿತ್ವವನೂ ॥ ಮಾನಿಸಿ ನೀನೂ । ಚರರ ಮೇಳದಿ ದೇಶದೇಶದ । ಳಿರುವ ಜನರೆಡಂಪತ್ತುಗಳ । ಪಂಹಂಸಿ ಪರಧೊರೆತನಗಳಿಂ । ಹಂಕೆ ಕಾಣಿಕೆಕಪ್ಪಗಳನನ । ವರತ ತಂಸಿ ಭಂಡರವ ತುಂಬಿಸಿ । ನಿರತ ಧರ್ಮವ ನಡಸಿ ಕೀರ್ತಿಯು । ಮೆರೆವ ವಿಭ ವೈಶ್ವರ್ಯ ಪೇರ್ಚಿಪ । ವರ ಅಣ್ಣಪ್ಪ ಪ್ರಧಾನ ಶೇಖರ ॥ ನುತಿಸಲೆನ್ನಳವೆ ನಿನ್ನ ॥ ೬ ॥ ಪೊಡವೀಗಧಿಕವೆನಿಸೀ । ರಾಜಿಸುತಿಹ । ಕುಡುಮ ಪುರದಿ ನೆಲಸೀ । ದಾನಧರ್ಮವ । ಬಿಡದನುದಿನ ನಡೆಸೀ ॥ ಕೀರ್ತಿಯಾ ಮೆರೆಸಿ । ಕಡುನಿಪುಣನಾಗಿಹ ಕುಮಾರಹೆ । ಗ್ಗಡೆ ನರೇಂದ್ರರ ರಕ್ಷಿಸುತ ಪೆಸ । ರೊಡದು ನಂಬಿದ ಭಕ್ತಂಷ್ಟವ । ಕೊಡುವ ಕರುಣಾರ್ಣವ ಸದಾಶಿವ । ವೃಷಧ ಸಖ ಗುರುವೇಂಕಟನೆ ನಿ । ನ್ನಡಿ ಕಮಲಗಳ ಸೇರಿದೆನು ಕೈ । ಪಿಡಿದು ಕರುಣದಿ ಕಾಮಿತಾರ್ಥವ । ಕೊಡುತ್ತುಳುಹು ಶ್ರೀ ಮಂಜು ನಾಥನೆ ॥ ನುತಿಸಲೆನ್ನಳವೆ ನಿನ್ನಾ ॥ ೭ ॥ ಶ್ರೀ೬೪ ॥

॥ ೨೨ ॥ ರಾಗ ಬೃಂದಾವನಸಾರಂಗ [ಧಾಟಿ:— ನುತಿಸಲೆನ್ನಳವೆ ನಿನ್ನ] ತ್ರಿವುಡೆತಾಳ

ಪೊಗಳಲೆನ್ನಳವೇ ನಿನ್ನಾ । ಕೀರ್ತಿಸಂಪನ್ನಾ । ಪೊಗಳಲೆನ್ನಳವೆ ನಿನ್ನಾ ॥ ಜಗದೊಳಗೆ ಪೆಸರ್ವೊಡೆದು ಭಕುತಾ । ಗಗಣಿತದ ಸಂಪದವ ಪಾಲಿಪ । ಸುಗುಣನಿಧಿ ನರಸಿಂಹ ಕರುಣಾ । ಳುಗಳರಸ ಶ್ರೀವೆಂಕಟೇಶನೆ ॥ ಪೊಗಳಲೆನ್ನಳವೆ ನಿನ್ನಾ ॥ ಪಲ್ಲ ॥ ಸರಸೀರುಹಭವಾಂಡವೂ । ಪಂಚಶತ ಕ್ಕೋಟಿ । ಧರಣೀಯು ವಿಸ್ತಾರವೂ । ಮಧ್ಯದಿ ಶೋಭಿ । ಸಿರುವ ಜಂಬೂ ದ್ವೀಪವೂ । ಇಳಾವ್ರತದೀ । ಸ್ಫುರಿಸುವ ಮಹಮ್ಮೇರುವೂ । ಗಿರಿಯು

ದಕ್ಷಿಣದಿ ॥ ಭರತಖಂಡ ಛಪ್ಪನ್ನದೇಶಗ । ಳಿರಲು ತೌಳವರಾಷ್ಟ್ರ ಪಶ್ಚಿಮ್ಮ । ಶರಧಿ ತಟದಲಿ ತೋರ್ಕುತಿರುತಿಹ । ಪರಮ ವಳಲಂಕಾಪುರಿಯು ಭೂ । ವರನಿಗೊಲಿವುತಲಿರುವ ದೇವನೆ । ನಿರತ ಕೊಂಕಣದೇಶ ವಿಪ್ರರ । ಕರದಿ ಪೂಜೆಯುಗೊಂಡು ಸುಜನರ । ಕರುಣದಿಂದುದ್ಧರಿಸಿ ನೆಲಸಿಹ । ಕರುಣ ನಿಧಿ ಶ್ರೀ ವಿಠಲ ದೇವನೇ ॥ ಪೊಗಳಲಿನ್ನಳವೇ ನಿನ್ನ ॥ ೧ ॥ ವೇದ ಭರಿತ ನಾಗಿ । ಬಹುಲೀಲಾ ವಿ । ನೋದ ವಿಭವಕ್ಕಾಗಿ । ಕಾರ್ಯಗಳದಿಂದ । ಸಾಧಿಸುತ್ತಲೇ ಸಾಗಿ । ಬರುತಲಿ ಲೋ । ಕಾಧಾರಸ್ಥಿತನಾಗೀ ॥ ಸೇವಿಸುತಿಹ ।ವೇದ ಶಾಸ್ತ್ರಪ್ರವುಥರಾಗಿಹ । ಭೂದಿವಿಜ ಜನಕೊಲಿದು ಭೋಗದ । ಮೋದನೀ ಸ್ಥಳವೆಂದು ಸುಜನಾ । ಹ್ಲಾದದಿಂದಲಿ ದಯದಿ ನೆಲಸುತ । ಚೋದ್ಯದತಿ ಮಹಿಮೆಯನು ಮೆರಸುತ । ಸಾಧು ಭಕತರ ಸತತ ಸಲಹುತ । ಶ್ರೀಧರಾಚ್ಯುತ ಸುರವರಾರ್ಚಿತ । ಆದಿ ಮೂರ್ತಿ ಶ್ರೀ ವೆಂಕಟೇಶನೆ ॥ ಪೊಗಳಲಿನ್ನಳವೇ ನಿನ್ನ ॥ ೨ ॥ ಮುನಿಕುಲಾಂಬುಧಿ ಚಂದ್ರಾ । ವಿದ್ಯಾನಿಧಿ । ಮುನಿಯ ಕರಾಬ್ಜದಿಂದಾ । ಪೂಜೆಯ ಗೊಳು । ತ್ತನುಸರಿಸುತಾನಂದಾ । ತೆರಳಿಬಂದು, ಮನದತಿ ಹರುಷದಿಂದಾ ॥ ಕರುಣಿಸುತ । ಘನತರದ ಸುಮುಹೂರ್ತದಲಿ ಬುಧ।ಜನರ ಶ್ರುತಿಮಂತ್ರಂಗಳಲಿ ಸ । ಜ್ಜನರ ಜಯನಿನದದಲಿ ಯತಿಕರ । ವನಜದಿಂದ ಪ್ರತಿಷ್ಠೆಗೊಂಡರ್ಚನೆಯ ಕೈಕೊಳ್ಳುತಲೆ ನೆಲಸೀ । ದಿನದಿನಕೆ ಮಹಿಮೆಯ ಪೇರ್ಚಿಸುತ ಬಹು । ಜನರ ದುರಿತವ ತರಿದು ಸಲಹುವ । ಚಿನುಮಯಾತ್ಮ ಶ್ರೀನಾರಸಿಂಹನೆ ॥ ಪೊಗಳಲಿನ್ನಳವೆ ನಿನ್ನಾ ॥ ೩ ॥ ತ್ರಿತಯ ನಾಮವ ಧರಿಸೀ । ದಯದಿ ಮೂರ್ತಿ । ತ್ರಿತಯ ರೂಪದಿ ನೆಲಸೀ । ಭಕ್ತರ ಸೌರ । ಕ್ಷಿತದ್ವಯನೆಂದೆನಿಸೀ । ಬಹುಜನಕು । ನ್ನತದಭೀಷ್ಟವ ಪಾಲಿಸೀ ॥ ಪೊರೆವ ದೇವ । ಪ್ರತಿದಿನದಿ ಪೂಜಿಸುವ ಬುಧಸಂ । ತತಿಯ ಪೇರ್ಚಿಸಿ ವಿಪ್ರಜನರಿಂ । ಗತಿಶಯದ ಸೌಭಾಗ್ಯ ಸಿರಿಸಂ । ಪತುಗಳ ಪಾಲಿಸುತ ಕರುಣದಿಂ। ದತಿಮಹಿಮೆಯನು ತೋರಿ ವಿಭವೋ । ನ್ನತಿಗಳನು ನಡಸುತ್ತ ಲೋಕದಿ। ಪ್ರತಿರಹಿತನಪ್ರತಿಮನೆನಿಪ ಶ್ರೀ । ಪತಿಯೆ ನಿನ್ನಯ ವಿತತ ಮಹಿಮೆಯ॥ ಪೊಗಳಲಿನ್ನಳವೆ ನಿನ್ನ ॥೪॥ ನಿರತ ಸೇವೆಯನು ಗೈವಾ । ಕಾಲಭೈರವ। ಗೊರದು ಸರ್ವಾಧಿಕಾರವಾ ।ಕೊಡಲದರತಾನಂತನಾಥರ ವಿಘ್ನವಾ। ವಿಚ್ಛಾಗಿಸಿ । ಒರೆದು ಪೇಳ್ವ ವಿವರವಾ ॥ ವಾರ್ತೆಯ ಕೇಳಿ । ನೆರೆದು ಸ್ತ್ರೀ ಪುರುಷರು ಬರುತ ಪದ। ಕೆರಗಿ ಬಿನ್ನಹಗೈಯ್ಯಲಿಡರನು । ಪರಿಹರಿಸಿ ಸಿರಿ

ಸಂಪತ್ತುಗಳ । ಕರುಣಿಸುತಲೀ ದೇಶದೇಶದ । ಹರಕೆಗಳ ತರಿಸುತ್ತ ಭಕ್ತರ । ಪೊರೆದು ಕೀರ್ತಿಯ ಮೆರೆದು ಸದ್ಗುಣ । ಭರಿತ ಪೂರ್ಣಾನಂದ ಮೂಲಿಕ । ಪುರದ ಶ್ರೀಗುರುವೆಂಕಟೇಶನ ॥ ಪೊಗಳಲೆನ್ನಳವೆ ನಿನ್ನ ॥೫॥ ಶ್ರೀ

॥ ೨೮ ॥ ರಾಗ ಹುಸೇನಿ [ಧಾಟಿ - ತಪ್ಪುಗಳೆಲ್ಲವ ಒಪ್ಪಿಕೊಳ್ಳಯ್ಯ ಶ್ರೀ] ತ್ರಿಪುಡೆತಾಳ

ಶ್ರೀಲೋಲ ವೆಂಕಟೇಶನ ಸನ್ನಿಧಿಯೊಳಿಹ । ಕಾಲಭೈರವಾ ನಿಮಗೆ ನಮೋ ॥ ಪೇಳಲೆನ್ನಳವಲ್ಲ ನಿನ್ನ ಮಹಿಮೆಯ ವಿ । ಶಾಲಕೀರ್ತಿಯು ಜಗದಿ ಬೆಳಗುತ । ಮೇಲೆನಿಸಿ ಪಸರಿಸಿತು ವಿಭವದಿ ॥ ಶ್ರೀಲೋಲ ವೆಂಕಟೇಶನ ॥ ಪ ॥ ಧರೆಗೆ ವೈಕುಂಠವೆನಿಪ ತಿರುಪತಿಯಿಂದ । ತೆರಳಿಲ್ಲಿ ನೆಲಸಿ ಸಾಹಸದೀ ॥ ಮೆರೆವುತ ಸರ್ವಾಧಿಕಾರವ ನಡೆಯಿಸಿ । ವಿವರದಿ ವಿಚಾರಿಸಿ ಮುದದೀ ॥ ಮರೆಹೊಕ್ಕ ಜನರ ಕುಟುಂಬ ಬಳಗವನು । ದ್ಧರಿಸುತ ಸಲಹಿ ಸದ್ವಿಧದೀ ॥ ವರದು ಶುಭಾಶುಭಫಲವನು ಜನಗಳ । ದುರಿತದುರ್ವಿಘ್ನಗಳನೆಲ್ಲವ । ಪರಿಹರಿಸುತಲಿ ದೇಶದೇಶದ । ಹರಕೆಗಳ ತರಿಸುತ್ತೊಡೆಯನ ಭಂ । ಡರವ ತುಂಬುವ ನಿರತ ಶೌರ್ಯನೆ ॥ ಶ್ರೀಲೋಲ ॥ ೧ ॥ ಭೂತಬೇತಾಳ ಪೈಶಾಚ ಬ್ರಹ್ಮಜಟ್ಟಿಗ । ರೋತು ಪೀಡಿಸುತಿರೆ ಮುಂಕೊಂಡು ॥ ಭೂತಳದಖಿಳ ದೇವತೆಗಳ ಮರೆಯೊಗ । ಲೇತರ ಗುಣವಿಲ್ಲದಿರೆ ಕಂಡೂ ॥ ಖ್ಯಾತವಾಗಿಹ ತವ ಮಹಿಮೆಯ ಕೇಳುತ್ತ । ಲೇತವಕದಿ ಜನರೈತಂದೂ ॥ ಪ್ರಾರ್ಥನೆಗೈದು ಅರಿಕೆಯ ಗೈಯ್ಯಲಾಕ್ಷಣ ॥ ತೀರ್ಥವನು ಪ್ರೋಕ್ಷಿಸಲು ಗ್ರಹಗಳು । ಭೀತರಾಗುತ ಬಿಟ್ಟು ತೊಲಗುತ । ಪ್ರೀತಿಯಲಿ ನೀ ತೋರ್ದ ಸ್ಥಳದಲಿ । ಸೋತು ನೆಲಸುತ ಸೇವೆಗೈವರು ॥ ಶ್ರೀಲೋಲ ॥ ೨ ॥ ಮೆರೆವಾಂಜನಕೆ ಜೋಯಿ । ಸರ ನೋಟಗಳಿಗೆ ಗೋ । ಚರಿಸದಾ ತೊಡರು ವಿಘ್ನಂಗಳನೂ ॥ ಸುರುಚಿರ ಸ್ವರ್ಣದುಂಗುರಕೆ ಮಾಣಿಕ್ಯದಾ । ಹರಳು ಕೆತ್ತಿಸಿದಂತೊರೆದು ನೀನೂ ॥ ಹರಿಯ ತೀರ್ಥಪ್ರಸಾದ ಕೊಡುತೆಲ್ಲರ ಹರುಷ । ಗೊಳಿಸಿ ಸ್ತ್ರೀಪುರುಷರನ್ನು ॥ ಪೊರೆದು ಸಂತಾನಾಭಿವೃದ್ಧಿಯ ಕೊಡಿಸುತ । ಥರಥರದ ವಿಭವೋತ್ಸವಗಳನವರತ ॥ ನಡಸುತಲಿ ಶ್ರೀವರನ । ಚರಣಕಮಲವ ಮೆಚ್ಚಿಸುತ ನಿ । ರ್ಧರದ ಸೇವೆಯ ಪರಿಯ ಸೊಬಗಿನ ॥ ಶ್ರೀಲೋಲ ವೆಂಕಟೇಶನ ॥ ೩ ॥ ಜನವೆಲ್ಲ ನೋಡಿ ಜನ್ಮವ ಸಾರ್ಥಕವ ಗೈಯ್ಯಲೆನುತ ರಥೋತ್ಸವಾದಿಗಳನೂ ॥ ಅನುಗೊಳಿಸುತಲೊಡೆಯನಾಲಯದ ಸುತ್ತ । ಜನರಿಂದ ಬಡಿಸಿ ಬೀದಿಗಳನೂ ॥ ಮನ

ಮುಟ್ಟಿಡಿಸಿ ತದ್ವಾರುವಂಡಲಿ । ಎಣೆಯಲ್ಲೆನಲು ಮಹಾ ರಥವನ್ನು ॥ ಸುರಗಣ ಪೊಗಳುವ ರಚನೆಯುಗೈಸುತ್ತ ॥ ಸನುಮತಿಸಿ ಸನ್ನಹವ ಸೇವಕ ಜನರು ಅನುಕಂಪಿದರು ಭಕುತಿಲಿ ॥ ಶ್ರೀಲೋಲ ॥ ೪ ॥ ಎಂಬ ಶಾಲಿವಾಹನಶಕ ಸಾವಿರದ ನೂರ ತೊಂಭತ್ತೊಂಭತ್ತನೆಯಾವರ್ತನಾ ॥ ಇಂಬಾಗಿರುವ ಹೇಮಲಂಬಿ ಲಬ್ಧವು ಚೈತ್ರ । ವೆಂಬ ಮಾಸ ಶುದ್ಧ ನವಮೀದಿನಾ ॥ ಸಂಭ್ರಮದಲಿ ರಥೋತ್ಸಹವ ನಡೆಸಿ ಜಯ । ವೆಂಬರು ನೆರೆದು ನೋಡೂ ಮಾಜನಾ ॥ ಕುಂಭಿನಿಯೊಳು ಕೀರ್ತಿ ಪಸರಿಸಿತನುದಿನ ॥ ನಂಬಿದೆನು ಮೂಲಿಕಪುರದ ಕರುಣಾಂಬುನಿಧಿ ಗುರು ವೆಂಕಟೇಶ ಪ । ದಾಂಬುಜದ ಸೇವಕ ಸುಜನಕುಟುಂಬನೆನಿಸಿದ ಕಾಲಭೈರವ ॥ ಶ್ರೀಲೋಲ ವೆಂಕಟೇಶನ ಸನ್ನಿಧಿಯೊಳಹ ॥ ೫ ॥ ಶ್ರೀ ॥

॥ ೨೯ ॥ ರಾಗ, ಸುರುಟ [ಧಾಟಿ:- ಬಿಂದುಮಾಧವಾ ನಮೊ] ರೂಪಕತಾಳ

ನಮೋ ಭೈರವಾ । ನಮೊ ಕಾಲಭೈರವಾ ॥ ನಮೊ ಭೈರವಾ ಎನಲು ಅಮರಿದಪಮೃತ್ಯು ಪರಿಹರವು ॥ ನಮೊ ಭೈರವಾ। ನಮೊ ಕಾಲಭೈರವಾ ॥ ॥ ಪಲ್ಲ ॥ ಧರೆಗೆ ಪುಣ್ಯಕ್ಷೇತ್ರವಾಗಿ । ಮೆರೆವ ಕಾಶಿವಾಸಿ ಎನಿಸಿ । ಮರೆಯು ಹೊಕ್ಕ ಸದ್ಭಕ್ತರನು । ಧ್ಧರಿಸಿ ದುರಿತ ಪರಿವ ದೇವ ॥ ನಮೋ ಭೈರವಾ ॥ ॥ ೧ ॥ ಉರಗನಿಭ ಪ್ರಜ್ವಲಿಪ ಜಟಾ । ಧರ ತ್ರಿನೇತ್ರ ಸರ್ಪಕುಂಡಲ । ಭರಿತಭಾಗ್ಯದಾತ ಭಯುಸಂ । ಹರಣ ದೀನೋದ್ಧರಣ ದೇವ ॥ ನಮೋ ಭೈರವಾ ॥ ೨ ॥ ಸ್ಥೂಲಕಾಯ ವಿಜಿತಮಹಾ ಕ। ರಾಳ ರೂಪನಂಜನಾಂಗ। ವ್ಯಾಳಭೂಷನಮಿತ ಬಲ ತ್ರಿ । ಶೂಲ ವೇದಧರಸುವೀರ ॥ ನಮೋ ಭೈರವಾ ॥ ೩ ॥ ಕರಯುಗಳಕೆ ವೀರಕಂಕಣ । ಸ್ಫುರಿತ ಶೋಣಾಂಬರದುಡಿಗೆಯು । ಮೆರೆವ ಕಟಿಗೆ ಘಂಟೆಮಾಲೆ । ಧರಿಸಿ ರಂಜಿಸಿರುವ ದೇವ ॥ ನಮೋ ಭೈರವಾ ॥ ೪ ॥ ಚರಣಯುಗಕೆ ಗೆಜ್ಜೆ ನೂಪುರ । ಮೆರೆವ ಪೆಂಡೆಯುಗಳ ನಾನಾ । ಬಿರಿದಿನಾಲಂಕಾರ ಶೋಭಿ । ಸಿರುವ ವೀರಪಾರದೇವ ॥ ನಮೋ ಭೈರವಾ ॥ ೫ ॥ ಹರನ ಬೆಸನದಿಂದ ರಾಮೇ । ಶ್ವರಕೆ ತೆರಳಿ ರಾಮಕೃತು ವಿ । ಸ್ತರದ ಸೇತುಸ್ನಾನಗಳನು । ವಿರಚಿಸಿದ ಮಹಾನುಭಾವ ॥ ನಮೋ ಭೈರವಾ ॥ ೬ ॥ ವರ್ತಿಸುವ ಶೇಷಾಚಲಕ್ಕೆ । ಅರ್ಥಿಯಿಂದ ಬಂದು ನೆಲಸಿ । ಭಕ್ತಿಯುತ ಸೇವೆಯನುಗೈದು । ಕೀರ್ತಿಯನ್ನು ಪಡೆದ ದೇವ॥ ನಮೋ ಭೈರವಾ ॥ ೭ ॥ ಮೆರೆವ ನಾಲ್ಕು ದಿಗ್ಪೀಶಗಳ । ಲ್ಲಿರುವ ಭಕ್ತ

ಜನರ ಬರಿಸಿ । ವರದು ಕಪ್ಪಕಾಣಿಕೆಯ ಭಂ। ಡರವ ತುಂಬಿಸಿರುವ ದೇವ ॥ ನಮೋ ಭೈರವಾ ॥ ೮ ॥ ಎಲ್ಲಿ ತಿರುಮಲೇಶ ಸ್ಥಳಗ । ಳಲ್ಲಿಗಲ್ಲಿಗೈದು ದೃಢದಿ । ಬಲ್ಲವಿಕೆ ಮಂತ್ರಿತ್ವವನ್ನು । ನಿಲ್ಲದೇ ಕೈಕೊಂಡ ಧೀರ ॥ ನಮೋ ಭೈರವಾ ॥ ೯ ॥ ಬಿಡದೆ ಜನರಾಪತ್ತು ಸಂ । ಕಟಗಳ ನಿನಗಂಕೆಗೈಯೆ ಶ್ರೀ । ಪ್ರೊಡೆಯನೋಳ್ತಿಳಿದು ವಿಷ್ನು । ಒಡನೆ ವಿವಂಸಿ ಪೇಳ್ವ ದೇವ ॥ ನಮೋ ಭೈರವಾ ॥ ೧೦ ॥ ಹಿಡಿದು ಬಿಡದೆ ಪೀಡೆಗೊಡುವ । ಕೆಡುಕಗ್ರಹಪಿಶಾಚಿ ಗಳನು । ಝಡಿದು ಹರಿತೀರ್ಥವ ಪ್ರೋಕ್ಷಿಸುತ । ಬಿಡಿಸಿ ಬಾಧಕವ ನಿಲಿ ಸುವ ॥ ನಮೋ ಭೈರವಾ ॥ ೧೧ ॥ ಹರಕೆ ಕಪ್ಪಕಾಣಿಕೆಗಳ । ಮೆರೆವ ಭಕ್ತರಿಂದ ಬರಿಸಿ । ಹರಿಭಂಡರವ ತುಂಬಿಸುತ್ತ । ನಿರತಸೇವೆಯೋಳಿರುವ ದೇವಾ ॥ ನಮೋ ಭೈರವಾ ॥ ೧೨ ॥ ಧರೆಯೊಳತ್ಯಧಿಕ ಮೂಲಿಕೆಯ । ಪುರದ ಶ್ರೀಗುರುವೆಂಕಟೇಶನ । ಚರಣಸೇವ್ಯನಾಗಿ ಭಕ್ತರ । ಪೊರೆಯು ತಿಹ ಶ್ರೀಕಾಲಭೈರವಾ ॥ ನಮೋ ಭೈರವಾ ॥ ೧೩ ॥ ಶ್ರೀಃ ॥

॥ ೩೦ ॥ ರಾಗ, ಸುರುಟ [ಧಾಟಿ:– ನಮೋ ಭೈರವಾ ನಮೋ ಕಾಲ] ರೂಪಕತಾಳ

ಬಿಂಧು ಮಾಧವಾ । ನಮೋ । ಬಿಂಧುಮಾಧವಾ ॥ ಬಿಂಧುಮಾ ಧವಾ ನಮೊ । ಎಂದು ಸ್ಮರಣೆಗೈಯ್ಯೆ ಸರ್ವ । ಬಂಧುಬಳಗದೊಡನೆ ತನ್ನ । ಮಂದಿರದಲಿ ಸುಖದಿ ಬಾಳ್ವ ॥ ಬಿಂಧುಮಾಧವಾ ॥ ಪ ॥ ವೇದಘೋಷ ವೆಸೆಯೆ । ನಾನಾ । ವಾದ್ಯನರ್ತನದ ವಿಭವವಿ । ನೋದದಿಂದಣವನೇರಿ । ಬೀದಿಗಾಗಿ ಪೊರಟುಬರುವ ॥ ಬಿಂಧುಮಾಧವಾ ॥ ೧ ॥ ಸಾಲುಸಾಲೆಸೆವು ತಿಹ ಬೊಂ । ಬಾಳದೀವಟಿಗೆಳತಿ ಥ । ಡಾಳಿಸುತಿರೆ ಬೆಳಕುಗಳ ಸಂ । ಮೇಳದಿಂದ ತೆರಳಿಬರುವ ॥ ಬಿಂಧುಮಾಧವಾ ॥ ೨ ॥ ಚಿತ್ರಥರದ ಟಕ್ಕೆಪಕ್ಕೆ । ಛತ್ರಚಾಮರ ವ್ಯಜನ ರೌಪ್ಯ । ಬೆತ್ತಗಳನು ಪಿಡಿದು ಪಾಠಕ । ರೊತ್ತ ಮರ ಕೈವಾರವೆಸೆಯೆ ॥ ಬಿಂಧುಮಾಧವಾ ॥ ೩ ॥ ಮುಂಗಡೆಯಲಿ ನುಡಿ ಸುತಿಹ ಮೃ । ದಂಗತಾಳವೀಣಾವೇಣು । ಸಂಗೀತದ ಸಗಾಲವೆಸೆವ । ರಾಗಸ್ಥಳದಿ ಮೆರೆದು ಬರುವಾ ॥ ಬಿಂಧುಮಾಧವಾ ॥ ೪ ॥ ಶೇಷಗರುಡ ಹನುಮಹಂಸ । ಭಾಸಿಸುವ ಲಾಲಕಿವಿಮಾನ । ದಾಸನಗಳನಡರಿ ಬಹು ವಿ । ಲಾಸವಿಭವದಿಂದ ಬರುವ ॥ ಬಿಂಧುಮಾಧವಾ ॥ ೫ ॥ ನಿಸ್ಸದಖಿಳ ಭಕ್ತಜನ । ರಲ್ಲಿ ಪೂಜೆಗೊಡುವಪಾರ । ಪಲ್ಲವಾರ್ಚನೆಗಳಗೊಳುತ । ಲ್ಲಲ್ಲಿ ಕಾಮಿತಗಳ ಕೊಡುವ ॥ ಬಿಂಧುಮಾಧವಾ ॥ ೬ ॥ ಕೇರಿಕೇರಿ ಮನೆಯ

ಜನರು । ಆರತೀನಿವಾಳಿಗಳನು । ತೋರಿ ಮೆಚ್ಚಿಸಲ್ಕೆ ದುರಿತ । ಹಾರಿ ಸುತ್ತ ಹರುಷಗೊಳುವ ॥ ಬಂಧುಮಾಧವಾ ॥ ೭ ॥ ಸುತ್ತಮುತ್ತ ನೆರೆದ ಸರ್ವ । ಭಕ್ತಜನಸಮೂಹಗೂಡಿ । ಅರ್ಥಿಯಿಂದ ಸ್ವಾಂಗೈದು । ಉತ್ತಮಾ ಲಯುವ ಪೊಗುವ ॥ ಬಿಂಧುಮಾಧವಾ ॥ ೮ ॥ ಹಲವು ನಾಮರೂಪನೆನಿಸಿ। ನೆಲೆಗೆ ಏಕೋದೇವನಾಗಿ । ಬಲಿದು ಮೂಲಿಕೆಯೊಳು ನಿಂದ । ಚಲುವ ಶ್ರೀಗುರುವೆಂಕಟೇಶ ॥ ಬಂಧುಮಾಧವಾ ॥ ೯ ॥ ಶ್ರೀಃ ॥

॥ ೩೧ ॥ ರಾಗ, ಧನ್ಯಾಸಿ [ಧಾಟಿ:- ಕೋಲುಕೋಲೆನ್ನಿರೊ] ಏಕತಾಳ

ರಾಮರಾಮೆನ್ನಿರೊ । ಸೀತಾಪತೆ । ರಾಮರಾಮೆನ್ನಿರೊ ॥ ರಾಮಾ ಎನ್ನಿ ಸಹಸ್ರ । ನಾಮಕ್ಕೆ ಸಮವಾದ । ಭೂಮಿಜೆಪತಿ ರಘು । ರಾಮನ ದಿವ್ಯ ನಾಮ ॥ ರಾಮರಾಮೆನ್ನಿರೊ ॥ ೧ ॥ ಕ್ರೂರ ರಾವಣಭೀತಿ । ಗಾರುತ ಸುರ ರೆಲ್ಲ । ದೂರೆ ದಶರಥಕು । ಮಾರ ತಾನೆನಿಸಿದ ॥ ರಾಮರಾಮೆನ್ನಿರೊ ॥ ೨ ॥ ಆ ಮುದ್ದು ಕೌಸಲ್ಯೆಗೆ । ರಾಮ ಕೈಕೆಗೆ ಭರತ । ಸೌಮಿತ್ರಿ ಲಕ್ಷ್ಮಣ ಶತ್ರುಘ್ನರೊಡಗೂಡಿ ॥ ರಾಮರಾಮೆನ್ನಿರೊ ॥ ೩ ॥ ಇರಲು ರಾಮಲಕ್ಷ್ಮಣ ರ । ಕರದೊಯ್ಯೆ ಕೌಸಿಕ । ದುರುಳೆ ತಾಟಕಿಯ ಸಂ । ಹರಿಸಿ ಮಖವ ಕ್ಯಾದಾ ॥ ರಾಮರಾಮೆನ್ನಿರೊ ॥ ೪ ॥ ಮಾರೀಚನ ಬಾಣದಿ । ತೂರಿ ಸುಬಾಹುವ ಸಂ । ಹಾರಿಸಿ ಅಹಲ್ಯೆಯು । ದ್ಧಾರವಗೈದ ರಘು ॥ ರಾಮ ರಾಮೆನ್ನಿರೊ ॥ ೫ ॥ ಮಿತುಳೆಗೆ ಪೋಗಿ ಗೌರಿ । ಪತಿಯ ಬಿಲ್ಲನೆ ಮುರಿದು। ಪೃಥಿವಿಜೆಯನೊಲಿಸಿದ । ಅತಿ ಪರಾಕ್ರಮಿ ರಘು ॥ ರಾಮರಾಮೆನ್ನಿರೋ ॥ ೬ ॥ ಅನುಜರು ದಶರಥ । ನನು ಕೂಡಿಬರೆ ಭಾರ್ಗ । ವನ ಧನುವ ಕೊಂಡಯೋಧ್ಯ । ಕ್ಕನುಕರಿಸಿ ತೆರಳಿಬಂದ ॥ ರಾಮರಾಮೆನ್ನಿರೋ ॥ ೭ ॥ ಜನಕನುಕ್ತಿಗೆ ಸೀತಾ। ವನಿತೆ ಲಕ್ಷ್ಮಣ ಸಹಿತ । ವನಕೆ ಬರಲು ಭರ। ತನಿಗೆ ಪಾದುಕೆಯಿತ್ತಾ ॥ ರಾಮರಾಮೆನ್ನಿರೋ ॥ ೮ ॥ ವಾಸ ಪಂಚವಟಿಯೊ । ಳಾಶೂರ್ಪನಖಿ ಕರ್ನ । ನಾಸಿಕ ತರಿದು ಖರ । ದೂಷಣರನು ಕೊಂದ ॥ ರಾಮರಾಮೆನ್ನಿರೋ ॥ ೯ ॥ ಮಿಸುನಿಯ ಮೃಗವ ಕಳುಹಿ । ದಶಕಂಠ ತಿರುಕನಾಗಿ। ವಸುಧಾತ್ಮಜೆಯ ಬಳಿಯೊ। ಳೊಸದು ಬರಲು ತಿಳಿದ ॥ ರಾಮ ರಾಮೆನ್ನಿರೊ ॥ ೧೦ ॥ ಇರುಳು ಸೀತೆಯ ಕದ್ದು । ದುರುಳ ರಾವಣನೈದ। ಪರಿಯ ಪೇಳ್ದ ಜಟಾಯು । ಗಿರದೆ ಮುಕ್ತಿಯನಿತ್ತಾ ॥ ರಾಮರಾಮೆ ನ್ನಿರೋ ॥ ೧೧ ॥ ಕಬಂಧನ ಕಂಡು ಮುಂದೆ । ಶಬರಿಯ ಸಲಹಿ ಮರುತ ।

ಕುವರಗೊಲಿದರ್ಕಜ । ಗಭಯಸೌಖ್ಯವನಿತ್ತ ॥ ರಾಮರಾಮೆನ್ನಿರೋ ॥ ॥ ೧೨ ॥ ಕೊಂದೂ ವಾಲಿಯನು ಕಿ । ಷ್ಕಿಂಧ ಇನಜಗಿತ್ತ । ನಂದದಿ ಕಪಿಗಳ । ವೃಂದವ ನೆರಹಿದ ॥ ರಾಮರಾಮೆನ್ನಿರೋ ॥ ೧೩ ॥ ಅರಸಿಯ ಪುಡುಕಲು । ವುರುತಜನೊಳು ಸೀತಾ । ಗುರುತವರುಹಿ ಬರಲು । ಚರರ ಕಳುಹಿಸಿದ ॥ ರಾಮರಾಮೆನ್ನಿರೋ ॥ ೧೪ ॥ ವನಧಿಯ ದಾಟ ಲಂಕಾ । ವನಿಯೊಳಗಿಹಶೋಕಾ । ವನದಿ ಸೀತೆಯ ಕಂಡ । ಹನುಮರೊಡನೆ ರಘು॥ ರಾಮ ರಾಮೆನ್ನಿರೋ ॥ ೧೫ ॥ ಉಂಗುರವಿತ್ತು ವನವಾ । ಭಂಗಿಸಿ ಪುರವನನ । ಲಂಗೊಪ್ಪಿಸಿದ ಪವನ।ಜಂಗೊಲಿದ ಶ್ರೀರಾಮ ॥ ರಾಮರಾಮೆನ್ನಿರೋ ॥ ೧೬ ॥ ಮಣಿದು ಸೀತೆಗೆ ಪುನಹ । ವನಧಿಯ ದಾಂಟ ಚೂಡಾ । ಮಣಿಯನಿತ್ತರಗಲು । ಮನದಿ ಸಂತಸಗೊಂಡ ॥ ರಾಮರಾಮೆನ್ನಿರೋ ॥ ॥ ೧೭ ॥ ಗಣನೆಯಿಲ್ಲದ ಕಪಿ । ಗಣನೊಡನೈದಿ ಗಿಂಗ । ಳನು ತಂಸುತ್ತಂಬುಧಿ । ಯನು ಬಂಧಿಸಿದ ರಘು ॥ ರಾಮರಾಮೆನ್ನಿರೋ ॥ ೧೮ ॥ ಸೇತುವ ದಾಟ ಲಂಕಾ । ನಾಥನ ಪುರವ ಮುತ್ತಿ । ಯಾತೂ ದಾನವರೆಲ್ಲರ । ಘಾತಿಸಿದನು ರಣದಿ ॥ ರಾಮರಾಮೆನ್ನಿರೋ ॥ ೧೯ ॥ ಸುರಪತಿಜಿತು ಕುಂಭ । ಕರಣ ದಶಶಿರನ । ತರಿದು ಲಂಕೆಯ ನಿಜ । ಶರಣಗೊಲಿದ ರಘು ॥ ರಾಮ ರಾಮೆನ್ನಿರೊ ॥ ೨೦ ॥ ಧರಣಿಯಾತ್ಮಜೆಯನಂಗೀ । ಕರಿಸಿ ಪುಷ್ಪಕವೇರಿ । ಪರಿವಾರ ಸಹಿತಯೋಧ್ಯಾ । ಪುರಕೆ ತೆರಳಿಬಂದಾ ॥ ರಾಮರಾಮೆನ್ನಿರೋ ॥ ॥ ೨೧ ॥ ಮೆರೆವ ಸಿಂಹವಿಷ್ಟರವ । ನೇರಿ ತೋಷದಿ ರಾಜ್ಯ । ಪರಿಪಾಲಿಸಿದ ನಮ್ಮ । ಗುರು ವೆಂಕಟೇಶನ ॥ ರಾಮರಾಮೆನ್ನಿರೋ ॥ ೨೨ ॥ ಶ್ರೀ ॥

॥ ೩೨ ॥ [ಧಾಟಿ:- ರಾಮರಾಮೆನ್ನಿರೋ । ಸೀತಾಪತಿ]

ಕೋಲುಕೋಲೆನ್ನಿರೋ । ಸಜ್ಜನರೆಲ್ಲ । ಕೋಲುಕೋಲೆನ್ನಿರೋ ॥ ॥ ಪಲ್ಲ ॥ ಪ್ರಳಯೋದಕದಿ ಮಹ । ಜಲನಿಧಿಯೊಳು ವಟ । ದೆಲೆಯ ಮೇಲೊರಗಿದ । ಚಲುವ ಬಾಲಮುಕುಂದ ॥ ಕೋಲುಕೋಲೆನ್ನಿರೋ ॥ ೧ ॥ ಸೃಷ್ಟಿರಚನೆಯನ್ನು । ಕೊಟ್ಟನು ನಾಭಿಯಿಂದ । ಪುಟ್ಟದಜಗೆ ಸುರ । ಶ್ರೇಷ್ಠನೆನಿಸಿದನಾ ॥ ಕೋಲುಕೋಲೆನ್ನಿರೋ ॥ ೨ ॥ ಆದಿವರಹನಾಗಿ । ಮೇದಿನಿಯನು ತಂದ । ಕಾದಿ ಮಧುಕೈಟಭ । ಸೂದನನೆನಿಸಿದ ॥ ಕೋಲುಕೋಲೆನ್ನಿರೋ ॥ ೩ ॥ ಹಲವವತಾರದಿಂದ । ಕೊಲಿಸಿ ದುಷ್ಟರನೆಲ್ಲ । ವಲಿದು ಸಾಧುಭಕ್ತ ಸು । ಕುಲವನು ಸಲಹಿದ ॥ ಕೋಲುಕೋಲೆನ್ನಿರೋ ॥ ೪ ॥

ನಿಸಿ ಪೆಸರವನ ಮ । ರ್ಧಿಸುತ ವೇದಗಳನ್ನು । ಬಿಸಜಸಂಭವನಿಗೊ ।
ಪ್ಪಿಸಿದ ಮತ್ಸ್ಯರೂಪಗೆ ॥ ಕೋಲುಕೋಲೆನ್ನಿರೋ ॥ ೫ ॥ ಬೆನ್ನೊಳು
ಮಂದರಾದ್ರಿ । ಯನ್ನು ಧರಿಸಿದಮೃತ । ವನ್ನು ಸುರರಿಗಿತ್ತ । ಚನ್ನಕೂರ್ಮ
ರೂಪಗೆ ॥ ಕೋಲುಕೋಲೆನ್ನಿರೋ ॥ ೬ ॥ ಭೂತಳವನು ಕದ್ದ । ಖ್ಯಾತ
ಹಿರಣ್ಯಾಕ್ಷನ । ಘಾತಿಸಿ ಧರೆಯ ತಂದ । ಶ್ವೇತವರಾಹನಿಗೆ ॥ ಕೋಲು
ಕೋಲೆನ್ನಿರೊ ॥ ೭ ॥ ವಿಗಡ ದೈತ್ಯನ ಬಸುರ । ಬಗಿದು ಕರುಳ ಕೊರ
ಳೊಳ್ । ನಿಗುಚಿ ಧರಿಸಿದ ನಮ್ಮ । ಸುಗುಣ ನಾರಸಿಂಹಗೆ ॥ ಕೋಲುಕೋ
ಲೆನ್ನಿರೋ ॥ ೮ ॥ ಭೂಮಿಯನ್ನು ಯಾಚಿಸಿ । ಆ ಮಹಾಬಲಿಯ ಮನೆಯ ।
ಹೇಮದ್ವಾರವ ಕಾಯ್ದಾ । ವಾಮನರೂಪನಿಗೆ ॥ ಕೋಲುಕೋಲೆನ್ನಿರೋ ॥
॥ ೯ ॥ ಕಾಮಧೇನುವಿಗಾಗಿ । ತಾಮಸಕ್ಷತ್ರಿಕುಲ ನಿ । ರ್ನಾಮಗೈದ
ಭಾರ್ಗವ । ರಾಮಾವತಾರನಿಗೆ ॥ ಕೋಲುಕೋಲೆನ್ನಿರೋ ॥ ೧೦ ॥ ಸೇತುವ
ಗಟ್ಟಿ ದೈತ್ಯ । ನಾಥ ಕುಂಭಕರ್ಣರ । ಘಾತಿಸಿ ಪುರಕ್ಕೈದ । ಸೀತಾಪತಿ
ರಾಮಗೆ ॥ ಕೋಲುಕೋಲೆನ್ನಿರೊ ॥ ೧೧ ॥ ಗೊಲ್ಲರ ಪಳ್ಳಿಯೊಳ । ಗೆಲ್ಲೆಲ್ಲಿ
ಪೊಕ್ಕು ಬೆಣ್ಣೆ । ಕಳ್ಳನೆನಿಸಿವ ಸ । ಮ್ಮಪ್ರಭ ಕೃಷ್ಣನಿಗೆ ॥ ಕೋಲುಕೋ
॥ ೧೨ ॥ ನಾರಕೋಟರೂಪದಿ । ಘೋರ ತ್ರಿಪುರ ಸ್ತ್ರೀಯರ । ಚಾರುವ್ರತವ
ನಪ । ಹಾರಿಸಿದ ಬೌದ್ಧಗೆ ॥ ಕೋಲುಕೋಲೆನ್ನಿರೊ ॥ ೧೩ ॥ ತುಳ್ಕೀ
ತೇಜಿಯನೇರಿ । ಅಕ್ಕದ ಮ್ಲೇಂಛರನ್ನು । ಶಿಕ್ಷಿಸಿ ಸವರಿದ । ಕಲ್ಕ್ಯವ
ತಾರನಿಗೆ ॥ ಕೋಲುಕೋಲೆನ್ನಿರೋ ॥ ೧೪ ॥ ಪ್ರಾರ್ಥಿಸಿದವರಿಗಿ । ಷ್ಟಾರ್ಥ
ಗಳನೆ ಕೊಡುವ । ಪಾರ್ಥಸಾರಥಿಯ ಸು । ಕೀರ್ತನಪ್ರಿಯನಿಗೆ ॥ ಕೋಲು
ಕೋಲೆನ್ನಿರೊ ॥ ೧೫ ॥ ಅರಿದು ಮರದು ಸಾಪ । ಸ್ಮರಣೆ ಗೈದವಂಗೆ ।
ಕರೆದು ಮುಕ್ತಿಯನೀವ । ಕರುಣಾಸಾಗರನಿಗೆ ॥ ಕೋಲುಕೋಲೆನ್ನಿರೋ ॥
॥ ೧೬ ॥ ಮಂದರಧರ ಮುಚು । ಕುಂದವರದ ಮುನಿ । ವೃಂದಸೇವಿತ ಶ್ರೀ
ಗೋ । ವಿಂದ ಮುಕುಂದನಿಗೆ ॥ ಕೋಲುಕೋಲೆನ್ನಿರೋ ॥ ೧೭ ॥ ಶೇಷ
ಶಯನ ಗರು । ಡಾಸನ ದುರಿತ ವಿ । ನಾಶನ ಮುನಿಜನ । ಪೋಷ ಲಕ್ಷ್ಮೀಶ
ನಿಗೆ ॥ ಕೋಲುಕೋಲೆನ್ನಿರೋ ॥ ೧೮ ॥ ಕಾಮಜನಕ ಗುಣ । ಧಾಮ
ಸಾಸಿರ ನಾಮ । ಆ ಮಹಾದೇವ ಸಾರ್ವ । ಭೌಮ ನಿಸ್ಸೀಮನಿಗೆ ॥
ಕೋಲುಕೋಲೆನ್ನಿರೋ ॥ ೧೯ ॥ ತಾಪರಹಿತ ಸರ್ವ । ಗೋಪಗೋಪಶಾಸ್ತ್ರ
ಕ । ಲಾಪ ನಿರ್ಲೇಪ ದಿವ್ಯ । ರೂಪನಾಗಿರುವಗೆ ॥ ಕೋಲುಕೋಲೆನ್ನಿರೊ

|| ೨೦ || ಧರೆಗುತ್ತುಮಾಲಿಕಾ । ಪುರದ ಶ್ರೀನಾರಸಿಂಹ। ಗುರುವೇಂಕಟಾ ರಮಣ ॥ ಭಂತಭಾಗ್ಯದಾತಗೆ ॥ ಕೋಲುಕೋಲೆನ್ನಿರೋ || ೨೧ || ಶ್ರೀ || ॥

॥ ೩೩ ॥ ರಾಗ, ಆನಂದಭೈರವಿ [ಧಾಟಿ:- ಜಯ ಹರಿಭಕುತರಿಗಹುದೂ] ಏಕತಾಳ

ಒಬ್ಬನೆ ದೇವ ಕಣಾ । ನರಹರಿ । ಒಬ್ಬನೆ ದೇವ ಕಣಾ || ಒಬ್ಬನ ಸಮ ನಿ । ನ್ನೊಬ್ಬನೆನುತನೆಂ । ದಬ್ಬಿಸಿತದ್ವೈತದಿ ಬೆರದಾಡುತ । ಕೊಬ್ಬಿದ ಮದದಿಂ । ದುಬ್ಬುವ ದೈತ್ಯರ । ಜಬ್ಬುತ ನರಕಕೆ । ಮಬ್ಬೊಳಿಗೊಳಿಸುವ|| ಒಬ್ಬನೆ ದೇವ ಕಣಾ || ಪ|| || ನಿನ್ನವೊ ನರಹರಿ । ಎನ್ನುತಲನುದಿನ । ವರ್ಣಿಪ ಬಾಲನ । ಬನ್ನಬಡಿಸಿ ಸ್ತಂಭ । ವನ್ನೊಡದುದಿಸಿ ಹಿ । ರಣ್ಯಾಕ್ಷನ ಕರು । ಳನ್ನು ಬಗಿದು ಭಕ । ತನ್ನ ಕಾಯ್ದವನಿವ ॥ ಒಬ್ಬನೆ ದೇವ ಕಣಾ ॥ ನರಹರಿ || ೧ || ನಕ್ರನ ಬಾಧೆಗೆ । ಸಿಕ್ಕಿ ಬಳಲಿ ಪೆಸ । ರಿಕ್ಕದೆ ಪರತ । ತ್ವಕ್ಕೊಂದಿಸಿ ಮರೆ । ಯೊಕ್ಕುತ ಧ್ಯಾನಿಸ । ಲಕ್ಕರಿಂ ದ್ವಿರದನ । ದುಃಖವ ಬಿಡಿಸಿದ । ಚಕ್ರಾಂಕಿತನಿವ ॥ ಒಬ್ಬನೆ ದೇವ ಕಣಾ || ೨ || ಈಕ್ಷಿಸಿ ವಿಧಿ ನಿಟ । ಲಾಕ್ಷನ ಪರಿಯನ । ಪೇಕ್ಷೆಯಗೊಂಡಾ । ಪೇಕ್ಷೆಯೊಳ್ ಭೃಗು ರಘ । ವಕ್ಷವನೊದೆಯ । ಲ್ಲಕ್ಷಣ ಮುನಿಯ ಸ । ಮಕ್ಷದಿ ಪೂಜಿಸಿ । ದಕ್ಷಯಾತ್ಮಕನಿವ ॥ ಒಬ್ಬನೆ ದೇವ ಕಣಾ ॥ ೩ ॥ ಕಿಡುಹಸ್ತವ ಪಿಡಿ । ದೊಡನೆ ಕರವ ಶಿರ । ಕ್ಕಿಡಲ್ಕೆತರೆ ಪಥ । ಪಿಡಿದೋಡಲು ಬೆ । ನ್ನಿಡಿದ್ಯೆತಹ ಖಳ । ನೊಡನೆ ನುಡಿದವನ । ಮಡುಹಿಸಿ ಕರುಣದಿ । ಮೃಢನ ಕಾಯ್ದವ ನಿವ ॥ ಒಬ್ಬನೆ ದೇವ ಕಣಾ ॥ ೪ ॥ ಖಂಡಪರಶುವಿನು । ದ್ದಂಡ ಭಕತ ನಪ್ರ । ಚಂಡ ಬಾಣನ ಭುಜ । ತಂಡ ಸಾಸಿರಗಳ । ಖಂಡಿಸಿ ಸುಜನರ । ತಂಡ ಉಳುಹಿದವಿ । ಳಾಂಡಕೋಟಿಬ್ರ । ಹ್ಮಾಂಡನಾಯಕನಿವ ॥ ಒಬ್ಬನೆ ದೇವ ಕಣಾ ॥ ೫ ॥ ಧರೆಯೊಳು ಪೂಜ್ಯನೆಂ । ದೊರೆದು ಭೃಗುಶಾಪವ । ಪರಿಹರಿಸೆನ್ನನ । ವರತ ಧ್ಯಾನಿಸಲು ಸ । ಚ್ಚರಿತ ಸೇತುವಿನ ಮೇ । ಲಿರಿಸಿ ದವನ ಶುಭ । ಕರನ ಮಾಡಿದ ಶ್ರೀ । ಕರ ರಘುವರನಿವ ॥ ಒಬ್ಬನೆ ದೇವ ಕಣಾ ॥ ೬ ॥ ಪಂಕಜಭವ ಮಗ । ಶಂಕರ ಮೊಮ್ಮಗ । ಲೇಂಕರ ಸುರ ವರ । ಸಂಕುಲ ಹಾಯೆಯು । ಕಿಂಕರ ಸುಜನರ । ಸಂಕಟಹರನಕ । ಳಂಕ ಮಹಿಮ ಗುರು । ವೇಂಕಟನಾಯಕ ॥ ಒಬ್ಬನೆ ದೇವ ಕಣಾ । ನರಹರಿ । ಒಬ್ಬನೆ ದೇವ ಕಣಾ ॥ ೭ ॥ ಶ್ರೀ ॥

॥ ೩೪ ॥ ರಾಗ, ಸಾವೇರಿ [ಧಾಟಿ:- ಸೀತೋ ಕರುಣಯಾ ಪುನಿಹೀ ಮಾಂ] ಏಕತಾಳ

ಬಾರೋ ದೇವಾ । ಸುಜನೋದ್ಧಾರಾ । ತ್ರೈಭುವನಾಧಾರಾ॥ ಪಾರಾವಾರ ಗಂ । ಭೀರ ಸರ್ವಶಾಸ್ತ್ರವಿ । ಚಾರ ಮೆರೆವ ಶೃಂ । ಗಾರ ಶೋಭಿತ ಶ್ರೀ। ಕಾರ ದಿವ್ಯರಥವ। ನೇರಿ ವಿಭವದಿಂದ ॥ ಬಾರೋ ॥ ಪಲ್ಲ ॥ ಭೇರಿಕೊಂಬು ಕಹಳೀನ । ಸೇರಿ ಢಮರುಗ ತಿ । ತ್ತಿರಿಡಿಂಡಿಮ ಢಕ್ಕೆ । ಮೌರಿ ಮುರಜ ಪಟಹ । ಭೇರಿವಾದ್ಯವಿತತಿ । ಘೋರಿಡುತಿರೆ ಮುದ । ವೇರಿ ಸರ್ವಜ್ಞರು। ಸಾರಿ ನೆರೆದಿರಲು ॥ ಛಾರಿ ಛತ್ರಚಾಮರ । ಚಾರುತರ ಮಕರ । ತೋರಣ ಪಿಡಿದ ಮ।ಯ್ಯಾರದಿ ಸಿಂದಸಿಗುರಿ । ವಾರಿಜಭವ ಮುಖ್ಯ । ಸೇರಿ ವಿಮಾನದೊ । ಳೋರಣಿಸುತ ವಿ । ಸ್ತಾರ ನೋಳ್ಪರು ॥ ಬಾರೊ ॥ ೧ ॥ ಎತ್ತ ನೋಡಿದಡತ್ತ।ಲೆತ್ತಿಪಿಡಿದಿಹ ವಿ।ಚಿತ್ರದ ಟೆಕ್ಕೆಪಕ್ಕೆಗಳು । ಸುತ್ತಮುತ್ತಲು ಜನ । ಮೊತ್ತಸಂದಣಿಸಿ ರೌಪ್ಯ । ಬೆತ್ತಕಂಚುಕಿ ತಾಳ । ವೃತ್ತಗಿಂಡಿಕಾಳಂಚಿ। ಹಸ್ತದಿ ಪಿಡಿದಿರೆ । ಕೀರ್ತಿಪ ಭಾಗವ। ತೋತ್ತಮರುರೆ ಪೊಗ। ಳುತ್ತಿಹ ಪಾಠಕ। ರತ್ತಂಡದಿ ತಕ । ತಥೈಯುನ್ಮತ್ತ । ಮತ್ತಕಾಸಿನಿಯರು । ನರ್ತನವಾಡುತ।ಲರ್ಥಿಯ ವಿಭವದಿ । ಬಾರೊ॥ ೨ ॥ ಪಿಂಗದ ದ್ವಿಜರ ವೇ।ದಂಗಳ ಘೋಷಣೆ । ಕಂಗೆಡುತಲಿ ದುರಿ । ತಂಗಳೋಡುತಲಿರೆ । ಮಂಗಳರವದ ಮೃ । ದಂಗವೇಣುವೀಣಾದಿ । ಸಂಗೀತಗಾನಸ್ವ ।ರಂಗಳು ಮೋಹಿಸಲೂ । ಸಂಗಡ ಧವಳಶಂ। ಖಂಗಳ ನಿನದ ಬೆ। ಳ್ದಿಂಗಳ ತುಂಗಬೊಂಬಾಳದೀ। ಪಂಗಳ ಸಾಲ್ಗಳು ।ಸಂಗಡಿಸೆ ಮಹಾಸ। ಭಾಂಗಣಕ್ಕೆಭುಜಪ್ರ।ದಂಗಳವೀವುತ ॥ ಬಾರೋ ॥ ೩ ॥ ಭುವನಪಾವನ ರಘೋ । ತ್ತಮವನೀಕ್ಷಿಸಿ ದುರಿ । ತವನೀಡಾಡುತ ಇಷ್ಟಾ।ರ್ಥವ ಪಡೆದ ಜನ । ನಿವಹವು ಬಹುದೇಶದಿಂ। ದವಸರದಿ ಪೊರಟು । ತವಕದಿ ಬಂದು ಹರುಷ ತಾಳಿ ನೋಡುವರು । ಅವನಿಯು ಮಧ್ಯಲಂಕಾ । ವಿವಿಧ ಶ್ರೀಕರ ವೈ। ಭವದುನ್ನತಿಯು ಕಂಡೆವು । ಜನ್ಮಸಫಲ್ಯವದಾಯಿತು ಸುಖ। ಸವನಿಸೆನುತ ಸ್ತವ। ನವಗೈವರು ಮಾ। ಧವನೇ ಮನವಲಿದೂ ॥ ಬಾರೋ ॥ ೩ ॥ ಅಂಕುಶ ಧ್ವಜವ । ಜ್ರಾಂಕಿತ ಪದಯುಗ । ಪಂಕಜಗಳ ಭಕ್ತಿ । ಯುರಿ ಕೊಡೆನ್ನುತವ। ಕಿಂಕರ ಸುಜನರ । ಕಿಂಕರನೆನಿಸಯ್ಯ । ಶಂಖಚಕ್ರಧಾರಣ । ಶಂಕರಪ್ರಿಯನೆ ವಿಶ। ನಾಂಕಜನಕ ಶ್ರೀವ । ತ್ಸಾಂಕಭಕ್ತ ತ್ರಿಜಗದ । ಸಂಕಟಹರ ಮುನಿ। ಸಂಕುಲಸೇವಿತ । ನೀರಿ ಕರ್ರಣಿಸು ಮಳ । ಲಂಕೆ ಮೂಲಿಕೆಯ ನಿ । ಶ್ಯಂಕ ನೃಹರಿ ಗುರು । ವೇಂಕಟ

ನಾಯಕ ॥ ಬಾರೋ ದೇವಾ ॥ ೫ ॥ ಶ್ರೀ ॥

॥ ೩೫ ॥ ರಾಗ, ಸಾರಂಗ [ಧಾಟಿ:- ನಿನ್ನ ಕೃಪೆಯು ಎನ್ನ ಮ್ಯಾಲಿರಲೀ] ಅಷ್ಟತಾಳ

ಏನನೆಂಬೆನು ಕೃಷ್ಣನ ಲೂಟಿಯಾ । ಇ । ನ್ನೇನನೆಂಬೆನು ರಂಗನ ಬಾಧೆಯಾ । ಗೋಪಿ । ನೀನ್ಯಾಕೆ ಪೇಳದಿರೆಲೊಬುದ್ಧಿಯಾ॥ ಏನನೆಂಬೆನು ॥ ॥ ಪಲ್ಲ ॥ ಕಡಗಕಾಲಂದುಗೆಗಳ ಧ್ವನಿಯಾ । ಮಿಡುಕದೆ ಮೆಲ್ಲನೈತರು ತೆನ್ನಯಾ॥ ಕಡವ ಮೊಸರ ಕರಗಳಪಿಡಿದಾ । ಕೃಷ್ಣಾ । ಕಡಗೋಲ ಸಡ ಲಿಸಿಕೊಂಡೋಡಿದಾ ॥ ಏನನೆಂಬೆನು ॥ ೧ ॥ ತನುಬಗ್ಗಿ ಮನೆಗೆಲಸವಗೈ ವಾಗಾ । ಘ । ಕ್ಕನೆ ಬಂದು ಬೆನ್ನ ಪತ್ತಿ ಚನ್ನಿಗಾ ॥ ಕೊನೆಯುಗುರ್ಗಳ ಕುಚಕೊತ್ತುವನೆ । ಗಜ । ವನು ನಡಸುವಡಂಕುಶವೆಂದನೇ ॥ ಏನನೆಂಬೆನೇ॥ ॥ ೨ ॥ ರಮಣನೊಂಗೆ ಪೋಗುವ ಭರದೀ । ನಮುಕದಿಂದೂಟವಿಕ್ಕುವ ವೇಳ್ಯದೀ ॥ ಹಿಮದುಪಟಳ ಘನವೆನುತೆಂದನೂ । ಬಂದ । ಪ್ಯಮರಿಕೊಂಡಪ್ಪಿ ಸಡಲಿಸಲೀಸನೂ॥ ಏನನೆಂಬೆನು । ೩॥ ವಸಗೆಯು ದಿನದಿ ಪತಿಯುಕೋಣೆಯಾ। ಕುಸದಿಂದೊಳ ಪೊಕ್ಕು ಕಿಪ ಸತಿಯಾ ॥ ಮುಸುಕಿಕ್ಕಿ ಕತ್ತಲಿಯೊಳು ತಡ ದಾ । ರಂಗ । ಪೊಸಭೋಗವ ಕೊಟ್ಟು ತಲೆ ಸಡದಾ॥ ಏನನೆಂಬೆನು ॥ ೪ ॥ ಮಂಡಲದೊಳಗೆ ಕೃಷ್ಣನ ಪೋಲುವಾ । ಇಂಥಾ । ಪುಂಡರ ಕಾಣಲಿಲ್ಲವೆ ನಿಜವಾ ॥ ಕಂಡರೆ ಗುರು ವೆಂಕಟೇಶ್ವರನೂ । ತಾ । ನ್ಹಿಂಡುದೈವದ ದೈವ ನಾಗಿಹನೂ ॥ ಏನನೆಂಬೆನು ಕೃಷ್ಣನ ಲೂಟಿಯಾ ॥ ೫ ॥ ಶ್ರೀ ॥

॥ ೩೬ ॥ ರಾಗ, ಆನಂದಭೈರವಿ [ಧಾಟಿ:- ಜಯ ಹರಿಭಕತರಿಗಹುದೂ] ಏಕತಾಳ

ಅಲ್ಲಲ್ಲಲ್ಲಲ್ಲಾ । ಸುಖವಿನ್ನಿಲ್ಲಿಲ್ಲಿಲ್ಲಿಲ್ಲಾ ॥ ಸುಳ್ಳು ಸಂಸಾರ ಮಾಯಾ ಭ್ರಾಂತಿಯು ವ-ಸ । ಪೊಳ್ಳು ಇದೆಂದೂ ಬಲ್ಲವರಿಗೆ ನಿಜ । ವಲ್ಲಲ್ಲಲ್ಲಾ ॥ ಸುಖ ವಿನ್ನಿಲ್ಲಿಲ್ಲಲ್ಲಾ ॥ ಪಲ್ಲ ॥ ರೊಕ್ಕವು ತೀರಿದ ಕಾಲಕೆ ತನ್ನನು । ಮಕ್ಕಳು ಮಂಗಳು ಛೀ ಬೆಳ್ಕಕೆ ತರುವವ । ರಲ್ಲಲ್ಲಲ್ಲಲ್ಲಾ ॥ ಸುಖವಿನ್ನಿಲ್ಲಿಲ್ಲಿಲ್ಲಿಲ್ಲಾ ॥ ೧ ॥ ಅಂಗನೆ ಮಕ್ಕಳು ಆಪ್ತರು ಬಂಧುಜನಂಗಳು ಒಬ್ಬರು ಸಂಗಡಬರುವವ । ರಲ್ಲಲ್ಲಲ್ಲಲ್ಲಾ ॥ ಸುಖವಿನ್ನಿಲ್ಲಿಲ್ಲಿಲ್ಲಲ್ಲಾ ॥ ೨ ॥ ವಲ್ಲಭ ಶ್ರೀಗುರು ಲಕ್ಷ್ಮೀವೆಂ ಕಟ । ಸಲ್ಲದೆ ಬ್ಯಾರೊಬ್ಬರು ಬಂಧುಗಳ್ಯಾ । ರಲ್ಲಲ್ಲಲ್ಲಲ್ಲಾ ॥ ಸುಖವಿನ್ನಿಲ್ಲಿ ಲ್ಲಾ ॥ ೩ ॥ ಶ್ರೀ ॥

॥ ೩೭ ॥ ಶ್ರೀಕೃಷ್ಣನಿಗೂ ಸತ್ಯಭಾಮೆಗೂ ಆದ ಸಂವಾದ.

೧ನೆಯ ಸಂಧಿ.

ಅಂಗುಲ್ಯಾ ಕಃ ಕವಾಟಂ ಪ್ರಹರತಿ ಕುಟಿಲೇ ಮಾಧವಃ ಕಿಂ ವಸಂತೋ
ನೋ ಚಕ್ರೀ ಕಿಂ ಕುಲಾಲೋ ನ ಹಿ ಧರಣಿಧರಃ ಕಿಂ ದ್ವಿಜಿಹ್ವಃ ಫಣೀಂದ್ರಃ ॥
ನಾಹಂ ಘೋರಾಹಿಮರ್ದೀ ಕಿಮಸಿ ಖಗಪತಿರ್ನೋ ಹರಿಃ ಕಿಂ ಕಪೀಂದ್ರೋ ।
ಇತ್ಯೇವಂ ಸತ್ಯಭಾಮಾಪ್ರತಿವಚನಜಡಃ ಪಾತು ನಃ ಪದ್ಮನಾಭಃ ॥ ೧ ॥

ಭಾಮಿನಿಷಟ್ಪದಿ.

ಶ್ರೀರಮಣ ಷೋಡಶಸಹಸ್ರದ । ನಾರಿಯರ ಮಂದಿರವ ತಿರುಗುತ । ಬೇರೆಬೇರವರವರ ಮನದಿಷ್ಟಾರ್ಥಗಳನಿತ್ತು ॥ ನಾರಿ ಮದನಕಠಾರಿ ಮೋಹನ । ಶಾರಿ ಬಹುಶೃಂಗಾರಿ ಸಲೆವ । ಯ್ಯಾರಿ ಭಾಮೆಯ ಸಾರಿದನು ಕಂಸಾರಿ ಕಡುದಯದೀ ॥ ೧ ॥

ಕಂದಪದ್ಯ.

ಪೂಸಿದ ಗಂಧದ ಪರಿಮಳ । ಸೂಸುವ ಪೂಮಾಲೆ ಕಸ್ತೂರಿತಿಲಕದ ನೊಸಲಂ ॥ ಭಾಸಿಪ ಕಾಂತಿಯ ಮೋಹನ । ರಾಸಿಯು ಮೆಲ್ಲಡಿಯನಿಡುತ್ತೈತಂ ಮುದದಿಂ ॥ ೨ ॥ ಮಂಗಳಮಹಿಮ ಕವಾಟದಿ । ನಂಗುಲಿಯಿಂ ಪ್ರಹರಗೈಯಲ್ ಸರಿರಾತ್ರಿಯೊಳಾ ॥ ತಂಗಪಯೋಧರೆ ಸತ್ಯಭಾ । ಮಾಂಗನೆಯು ಮಾತಾಡಿಸಿದಳ್ ಕಟಕಿಗಳಿಂ ॥ ೩ ॥

ರಾಗ ಪಹಾಡಿ, ಆದಿತಾಳ (ಕಟಕಿಯ ನುಡಿ.)

ಕಾಟಕನಂತೆ ಕ।ವಾಟಪ್ರಹರಗೈವ । ಬೂಟಕಪುರುಷ ನೀನ್ಯಾರೇ ॥ ಮೋಟನ ಪೆಸರನು । ಆಟಲಿಕಾನೀಗ । ಲೂಟಿಯ ಮಾಡದೆಪೇಳೂ ॥ ೪ ॥

ರಾಗ ಶಂಕರಾಭರಣ, ಅಷ್ಟತಾಳ. (ಕೃಷ್ಣನ ನುಡಿ)

ಮೋದವನೀವ ಬಿಂ।ಬಾಧರೆ ಕುಂಭಪ।ಯೋಧರಯುಗಳೆ ಕೇಳೂ ॥ ಈ ಧರೆಯೊಳಗೆನ್ನ । ಮಾಧವನೆಂದೆಲ್ಲ । ಸಾಧುಗಳ್ ಕರೆವರ್ಕಾಣೇ ॥ ೫ ॥

॥ ಕಟಕಿ ॥ ಪೊಸತಿದು ನಿನ್ನಯ। ಪೆಸರು ಮಾಧವನೆಂದು । ರಸಿಕರು ಕರೆವದುಂಟಾಗೀ ॥ ಬಿಸಿಯೊಳು ಚೈತ್ರದಿ। ವಸ ವಿರಾಜಿಪ ವನ। ವಸವಂತ ನೀನಹುದೇನ್ನೆ ॥ ೬ ॥

॥ ಕೃಷ್ಣ ॥ ಬಿಸಜಗಂಧಿನಿ ಸಾರಸಲೋಚನೆ ಕೇಳು । ವಸವಂತ ನಾನಲ್ಲವೇ ॥ ದೆಶೆಗೆಡಿಸುವ ರ । ಕ್ಕಸರ ಮರ್ದಿಪ ಚಕ್ರಿ । ಪೆಸರೆನಗಿಹುದು ಕಾಣೇ ॥ ೭ ॥

॥ ಕಟಕಿ ॥ ಕುಂಭಿನಿಯುಲಿ ಚಕ್ರಿ । ಎಂಬರಾದರೆ ಕೇಳು । ಡಂಭದಿ ಭಾಂಡವಾ ರಚಿಸೇ ॥ ಇಂಬಾದ ಸಂತೆಯಾ । ಡೊಂಬೀಲಿ ಮಾರುವ । ಕುಂಭಗಾರ ನೀನಹುದೇನೈ ॥ ೮ ॥

॥ ಕೃಷ್ಣ ॥ ಸುರುಚಿರ ವಸನಾಲಂ । ಕರಿ ಶುಭಕರೆ ಮನೋ । ಹರೆ ಮುಕ್ತಾಭರಣೆ ಕೇಳೂ ॥ ಮೆರೆವ ಕುಲಾಲ ನಾನಲ್ಲವೆ ಧರಣೀ । ಧರರೆಂಬರೆನ್ನ ಕಾಣೇ ॥ ೯ ॥

॥ ಕಟಕಿ ॥ ದಣಿಯುದನುದಿನ ಧ । ರಣಿಯನು ಪೊತ್ತಿಪ । ಗುಣನಾನು ನಿನಗುಂಟಾಗೀ ॥ ಎಣೆಗೊಂಡ ನಾಲಿಗೆ । ಕೊನೆ ಎರಡಾಗಿಹ । ಫಣಿರಾಜ ನೀನಹುದೇನೈ ॥ ೧೦ ॥

॥ ಕೃಷ್ಣ ॥ ಭೃಂಗಕುಂತಳೆ ಸಾರಂಗಲೋಚನೆ ಮಾ । ತಂಗಗಮನೆ ನೀ ಕೇಳೂ ॥ ಶಿಂಗಿದುಂಬಿರುವ ಭುಜಂಗನಲ್ಲವೆ ಕಾ । ಳಿಂಗಮರ್ದನನು ಕಾಣೇ ॥ ೧೧ ॥

॥ ಕಟಕಿ ॥ ಸೋಜಿಗವೇನಿದು । ಮಾಜಲ್ಯಾತಕೊ ಫಣಿ । ರಾಜನ ಮರ್ದಿಪನಾಗೇ ॥ ಓಜ ಅಂಬರಚರ । ನೈಜನೆನಿಪ ಖಗ । ರಾಜನು ನೀನಹುದೇನೈ ॥ ೧೨ ॥

॥ ಕೃಷ್ಣ ॥ ಮೃಗಮದಗಂಧಿನಿ । ಮೃಗಲೋಚನೆ ಕೇಳು । ಮೃಗರಾಜ ನಾನಲ್ಲವೇ ॥ ಜಗದ ಸಜ್ಜನರೆ । ಅಗಲದ ಹರಿಯೆಂಬ । ಸೊಗಸಿನ ಪೆಸರೆನಗೇ ॥ ೧೩ ॥

॥ ಕಟಕಿ ॥ ನಾಡೊಳು ನಿನ್ನವ । ರಾಡಲು ಹರಿಯೆಂಬಾ । ಪಾಡಿನ ಪೆಸರುಂಟಾಗೀ ॥ ಕಾಡಿನ ಮರಗಳೊ । ಳಾಡುತಾಡುತ್ತಿರುವ । ಕೋಡಗ ನೀನಹುದೇನೈ ॥ ೧೪ ॥

॥ ಕೃಷ್ಣ ॥ ವಾನರನೆಂದೆನ್ನ । ಹೀನೈಸಬೇಡವೆ । ರಾಣಿ ಕೇಳೆಲೆ ನಾನಿನ್ನಾ ॥ ಪ್ರಾಣದೊಲ್ಲಭ ಕೃಷ್ಣ । ಕಾಣೆ ಎನ್ನೊಡನುದಾ । ಸೀನವ ಮಾಡುವರೇನೇ ॥ ೧೫ ॥

॥ ಸತ್ಯಭಾಮೆ ॥ ಹರಣದೊಲ್ಲಭನೆಂಬ । ಪರಿಯ ಕೇಳುತಲತಿ । ಭರದಿಂದ ಬಾಗಿಲತೆರೆದೂ॥ ಕರಪಿಡಿದಂತಃಪುರಕ್ಕೊಯ್ದಳು ಶ್ರೀ। ಗುರುವೆಂಕಟಾಚಲಪತಿಯಾ ॥ ೧೬ ॥

೨ನೆಯ ಸಂಧಿ.

ಯಾತಸ್ತ್ವಂ ಕುತ ಏವ ಕೃಷ್ಣ ಮೃಗಯಾಸಕ್ತೋ ವನಾಂತಂ ಗತಃ ।
ಗಂಧೋ ಯೋ ವನಪುಷ್ಪಜಃ ಶ್ರಮಜಲಂ ಘರ್ಮಃ ಕ್ಷತಂ ಕಂಟಕೈಃ ॥
ಅಸ್ತ್ಯೇವಂ ಮೃಗಯಾಂ ಗತಸ್ಯ ಭವತೋ ದಷ್ಟೋಽಧರೋ ದೃಶ್ಯತೇ ।
ಶಂಕಾಪೂರ್ಣಮಿವಾತ್ರ ಕಾರಣಮಿದಂ ಕುರ್ಯಾತ್ಪ್ರಮಾಣಾನಿ ತೇ ॥ ೧ ॥

ಕುಸುಮಷಟ್ಪದಿ

॥ ಸತ್ಯಭಾಮೆ ॥ ಚಿತ್ರಕರವಾಗಿರ್ದ । ಮುತ್ತಿನಮಾಣಿಕಗಳಿಂ । ಕೆತ್ತಿರ್ದ ಮಂಚದಲಿ ಕುಳ್ಳಿರಿಸುತಂ ॥ ಮತ್ತಕಾಶಿನಿ ಹರಿಯ । ಉತ್ತಮಾಂಗವನೀಕ್ಷಿ । ಸುತ್ತಾಗ ಬೆದರಿ ನೋಡಿದಳು ಕುರುಪಂ । ೧ ॥

॥ ಪದ್ಯ ॥

ಕನ್ನೆಯುರಸು ಅನ್ಯೋನ್ಯದಿ ನೆರಹಿಸಿ। ಚಿಹ್ನೆಗಳವಯುವದಲಿ ಕಂಡೂ॥
ಮನ್ನದಿ ಮತ್ಸರವನು ತಾಳುತ ಹರಿ। ಯುನ್ನುಡಿಸಿದಳಾ ಕಟಕಿಯಿಂ ॥ ೨॥

ರಾಗ ಶಂಕರಾಭರಣ, ಆದಿತಾಳ.

॥ ಸತ್ಯಭಾಮೆ ॥ ಶ್ರೀಕರದಿ ಮೆರೆಯುತ್ತ । ನೇಕ ಸತಿಯರ ರಮಿಸಿ । ಸಾಕಾಯಿತೆ ಇತ್ತ ಬಂದು । ದೇಕೆಲೊ ರಂಗಾ ॥ ೩ ॥

॥ ಕೃಷ್ಣ ॥ ಕೋಕಿಲಗಾನೆ ಪ್ರವೀಣೆ । ಲೋಕದ ಬಾಲೆಯರ್ ನಿನ್ನ। ನೇಕ ದೇಶ ಪೋಲ್ವರೇ ಸಖಿ । ಕಾಂತೇ ॥ ೪ ॥

॥ ಭಾಮೆ ॥ ಠಕ್ಕಿನ ಮಾತುಗಳ್ಯಾಕೆ । ಸೊಕ್ಕು ಜವ್ವನೆಯರ ತೋಳ್। ರೆಕ್ಕೆಯೊಳರ್ಧರಾತ್ರಿ । ಸಿಕ್ಕಿತೇ ಕಾಂತಾ ॥ ೫ ॥

॥ ಕೃಷ್ಣ ॥ ರಕ್ಕಸರಾ ವಂಶವನು । ತಿಕ್ಕುವ ಕಾರಣ ರಾತ್ರಿ । ಸಿಕ್ಕಿತಪ್ಪಿದನ್ಯಸ್ತ್ರೀಯರ್ಗೆ । ಸಿಕ್ಕಲಾಪೆನೇ । ಕಾಂತೇ ॥ ೬ ॥

॥ ಭಾಮೆ ॥ ಬಲ್ಲೆ ನಿನ್ನ ಬಗೆಯೊಳನ್ಯ । ನಲ್ಲೆಯ ನೆರದಿರಲು । ಗಲ್ಲದ ಮೇಲಿದೆಗೋ ಕ್ಷತ । ದೆಲ್ಲಿದ್ಯೋ ರಮಣಾ ॥ ೭ ॥

॥ ಕೃಷ್ಣ ॥ ನಲ್ಲಳೇ ಕೇಳಿತ್ತ ಯುದ್ಧ । ದಲ್ಲಿ ಶರಗಳೆಸೆಯೆ ಗಂಗ । ಳೆಲ್ಲ ಸೋಂಕೀ ಕ್ಷತವು ಗಲ್ಲ । ದಲ್ಲಿ ತೋರಿದವೆ ॥ ೮ ॥

॥ ಭಾಮೆ ॥ ಸುಳ್ಳುಗಾರರೊಡೆಯ ಭುಜಗ । ಳಲ್ಲಿ ಕೂರುಗುರ ಘಾಯ । ವೆಲ್ಲಾಯಿತು ಏನೆಂದೂ ಪುಸಿ । ಸೊಲ್ಲಿಪೆ ಕಾಂತಾ ॥ ೯ ॥

॥ ಕೃಷ್ಣ ॥ ಮುಳ್ಳುಶಾವಂತಿಗೆಯ ವನ । ದಲ್ಲಿ ಸಂಚರಿಸುತಿರೆ । ಬಳ್ಳಿ ಸೋಂಕೀ ಕ್ಷತವು ಭುಜಗ । ಳಲ್ಲಿ ತೋರ್ದವೆ । ಕಾಂತೆ ॥ ೧೦ ॥

॥ ಭಾಮೆ ॥ ಏಸು ಪುಸಿಯ ನುಡಿವೆ ಮೈಗೆ । ಪೂಸಿದ ದಿವ್ಯ ಗಂಧವು । ಸೂಸುತಿದೆ ಯಾವ ಸತಿ ಲೇಪಗೈದಳೊ ॥ ೧೧ ॥

॥ ಕೃಷ್ಣ ॥ ಮೋಸವಲ್ಲ ಕೇಳೆ ಮಂದ । ಹಾಸೆ ಮಲಯಜಬನದಿ । ಲೇಸಾಗಿ ತಿರುಗಲು ಗಂಧ । ಸೂಸಿತು ಕಾಣೆ । ಸಖೀ ॥ ೧೨ ॥

॥ ಭಾಮೆ ॥ ಮಂಗಲಾಂಗ ಅನ್ಯಸತಿಯ । ಸಂಘ ನಿನಗಾಗದಿರಲು । ಕಂಗಳು ಕೆಂಪಡರಿದ । ಇಂಗಿತವೇನೋ । ಪ್ರಿಯ ॥ ೧೩ ॥

॥ ಕೃಷ್ಣ ॥ ಭೃಂಗಳೆ ನೀನಾಲಿಸು ಯು । ದ್ಧಾಂಗಣ ರೋಶಾವೇಷ । ವಂಗಲಿಸೆ ಅರುಣ ನಯ । ನಂಗಳಾಗಿವೆ । ಕಾಂತೆ ॥ ೧೪ ॥

॥ ಭಾಮೆ ॥ ಕಾಂತ ನಿನ್ನನ್ಯಾತರದ । ದಂತಕ್ಷತಗಳಿದ್ಯಾವ । ಕಾಂತೆ ಚುಂಬಿಸಿದಳೊ ಇದ । ಕೆಂತು ಪುಸಿಯೊ । ಕಾಂತಾ ॥ ೧೫ ॥

॥ ಕೃಷ್ಣ ॥ ಪಾಥದಿ ಪಾಂಚಜನ್ಯವ । ನಾಂತು ಊದಲು ಅರ್ಧಚಂದ್ರ । ನಂಥ ರೇಖೆಯು ತೋರಲ್ಯಾತೆ । ಕಾಂತೆ ಕೇಳು ॥ ೧೬ ॥

॥ ಭಾಮೆ ॥ ಸೋತ ಸತಿಯೊಡನೆ ಚೌರ । ಪೇತಿಬಂಧವೆಸಗದಿರಲು । ನಾಥ ಮೈ ಬೆವರಿಡುವ । ರೀತಿ ಇದೇನೊ । ಕಾಂತಾ ॥ ೧೭ ॥

॥ ಕೃಷ್ಣ ॥ ಪ್ರೀತೆ ನಿನ್ನ ನೋಳ್ಪ ಭರದಿ । ಸೋತು ನಡೆಯೆ ತನುವು ಬಳಲಿ । ಧಾತುಗುಂದಿ ಶ್ರಮಜಲವು । ತಾ ತೋರಲ್ಯಾತೆ । ಕಾಂತೆ ॥ ೧೮ ॥

॥ ಭಾಮೆ ॥ ಪಂಕಜಾಕ್ಷ ಎನ್ನ ಮನದ । ಶಂಕೆಯನ್ನು ಬಿಡಿಸು ಶ್ರೀ ಗುರು । ವೆಂಕಟೇಶ ನಂಬುಗೆಯ । ನೀಂ ಕರುಣಿಸು । ಪ್ರಿಯ ॥ ೧೯ ॥

೩ನೆಯ ಸಂಧಿ.

ಅಂಭಾಂಸಿ ಪ್ರವಿಶಾಮಿ ಕುಂಭನಿಹಿತಂ ಕರ್ಷಾಮಿ ಕುಂಭೀನಸಂ ।
ಜ್ವಾಲಾಮಾಲಕರಾಳಿನಂ ಹುತವಹಂ ನಿಶ್ಶಂಕಮಧ್ಯಾವಿಶೇ ॥
ಯದ್ವಾ ಮಾನಿನಿ ದೇವತಾಮಭಿಮತಾಮುಲ್ಲಂಘಯಾಮಿ ಧ್ರುವಂ ।
ವಿಶ್ವಾಸಸ್ತ್ವವ ನಾಸ್ತಿ ಚೇದಪಿ ತುಲಾಮಾರೋಪಯಾಮಿ ಧ್ರುವಂ ॥ ೧ ॥

ಅಂಭಸ್ಥೇ ಶಯನೀಯಮೇತದುದಧೌ ಲೀಲಾತಯಾನ ಫಣೀ ।
ತ್ವತ್ತೇಜಃ ಪರಮಾಣುಶೇಷ ದಹನೋ ಭೃತ್ಯಾಃ ಸಮಸ್ತಾಃ ಸುರಾಃ ॥
ಕುಕ್ಷಿನ್ಯಸ್ತಜಗತ್ರಯಸ್ಯ ಭವತೋ ಕಿಂ ಸ್ಯಾತ್ತುಲಾರೋಪಣಂ ।
ಇತ್ಥಂ ವಾಚಮುದೀರಿತೋ ವಿನತಯಾ ಸ್ಮೇರೋ ಹರಿಃ ಪಾತು ನಃ ॥ ೨ ॥

ರಾಗ ಸಾರಂಗಿ ಅಥವಾ ಸಾರಂಗ, ಅಷ್ಟತಾಳ

॥ ಕೃಷ್ಣ ॥ ಏಣಾಕ್ಷಿ ಬಂದೆನ್ನ ।ಜಾಣೆಯ ಬಿಟ್ಟು ಪಿಕ।ಗಾನೆ ಮುನಿಯಬೇಡವೇ ॥ ಜಾಣೆ ಅನ್ಯಸ್ತ್ರೀಯ ಕೇಣಿ ಇಲ್ಲೆಂದು ಪ್ರ। ಮಾಣವ ಮಾಡುವೆನೂ ॥ ೧ ॥ ಭಾಮೆ ॥ ಕಾಣೆ ನಿನಗಣೆ । ಗಾಣೆ ನಂಬಿದ ಮನ । ಗಾಣಿಸುವಂದದಲೀ ॥ ಜಾಣ ನೀ ಪೇಳ್ವ ಪ್ರ । ಮಾಣವದೇನೆಂದು । ಪ್ರಾಣದೋಲ್ಲಭನೆ ಪೇಳೂ ॥ ೨ ॥ ಕೃಷ್ಣ ॥ ಜಡನಿಧಿ ಎನಿಸುವ। ಮಡುವಿಗೆ ದುಮುಕಿಕ್ಕಿ । ತಡಿಗಡರಲು ಕಂಡೂ ॥ ದೃಢವೆಂದು ನಂಬಿ ನಿ । ನ್ನೊಡಲಸಂಶಯನುಳಿ। ದೊಡಗೂಡೆಲೆ ಬಾಲೇ॥ ೩ ॥ ಭಾಮೆ ॥ ಕಡಲಶಯನ ನಿ।ನ್ನಡಿಯಿಂದೊಗೆದು ಪೆಸ।ರೊಡೆದಳು ಸುರಗಂಗೆಯೂ॥ ಮಡುವಿನ ಜಲ ನಿನ್ನ ।ತಡೆಯಲಾಪುದೆ ಪ್ರಾಣ। ದೊಡೆಯ ವಿಸಜ್ಜರಿಯೋ ॥ ೪ ॥ ಕೃಷ್ಣ ॥ ಅಂಬುಜಾಂಬಕಿ ಪರ। ರಂಬೆಯ ಭೋಗವು ।ಲಂಬನವಿಲ್ಲೆನುತಾ ॥ ಕುಂಭಿನಿಹಿತ ಫಣಿ ।ಚುಂಬಿಸಿಕೊಂಡಿಹ ।ಜಂಬೀರವ ತೆಗೆವೇ ॥ ೫ ॥ ಭಾಮೆ ॥ ತುಂಬಿಹ ವಿಷಧರ।ನೆಂಬ ಶೇಷನ ಬೆನ್ನೊ । ಳಿಂಬಾಗಿ ಪವಡಿಸಿದಾ ॥ ಅಂಬರಚರಯಾನ।ನೆಂಬರು ವಿಷ ನಿನ್ನ। ಡಂಬರ ಮುಟ್ಟುವದೇ ॥ ೬ ॥ ಕೃಷ್ಣ ॥ ಕುಟಿಲಕುಂತಳೆ ಅನ್ಯ । ಕುಟಿಲೆಯರುಗಳ ಸಂ। ಕಟವೆನಗಿಲ್ಲೆನುತಾ ॥ ಛಿಟಛಿಟಛಿಟಲೆಂಬ । ನಟಿಸುವಗ್ನಿಯ ಪೊಕ್ಕು । ಸುಡದಲೆತ್ತೈತಹೆನೇ॥ ೭ ॥ ಭಾಮೆ ॥ ಧಿಟ ತವ ಮುಖದಿ ಪ್ರ। ಕಟಿಸುವಗ್ನಿಯು ನಿನ್ನ । ಲಟಕಟಿಸಲುಬಲ್ಲುದೇ ॥ ಪಟುತರವಲ್ಲವು । ಸಟೆಯು ಪ್ರಮಾಣದಿಂ । ಘಟಿಸುವದೇನುಂಟೊ ॥ ೮ ॥ ಕೃಷ್ಣ ॥ ಅಂಗನೆ ಕೇಳ್ ಪರ। ರಂಗನೆಯರ ಆ। ಲಿಂಗನವಿಲ್ಲೆನುತಾ ॥ ಹಿಂಗದೆ ಕ್ರೂರದೇ। ವಾಂಗಣದ್ವಾರವು। ಲ್ಲಂಘಿಸುವೆನು ಕಾಣೇ ॥೯॥ ಭಾಮೆ ॥ ಅಂಗಜಪಿತ ನಿನ್ನ ।ಅಂಗದಿರಮರಗಣಂಗಳು ಉದುಭವಿಸೀ ॥ ಹಂಗಿಗರಹರವ।ರಂಗಳದಾಲಹು । ನುಂಗದಿದ್ದರೆ ಸಾಕೂ ॥ ೧೦ ॥ ಕೃಷ್ಣ ॥ ದಂತಿಗಮನೆ ಪರಸೀ।ಮಂತಿನಿಯರೊಳ್ ರತಿ । ಅಂತ್ಯಸ್ತೆನಗಿಲ್ಲೆನುತಾ॥ ಕಿಂತಾಲದಿ ತೂಗೆ। ಗುಂಜಿಗೆ ಸಮವಿರೆ ದೃ। ಷ್ಟಾಂತಕದುವೆ ಸಾಕೂ ॥೧೧॥ ಭಾಮೆ ॥ ಕಂತುಜನಕನಾ । ಪಿಂತೆ ಮುನಿಗೆ

ದಾನವೇ । ಕಾಂತದಿ ಕೊಂಡಲು ನೀನೇ ॥ ನಿಂತು ತೂಗಿದ ಪರಿ । ಯೆಂತು ಮರೆವೆ ಈ ಕು । ತಂತ್ರವಿದಾರೊಡನೇ ॥ ೧೨ ॥ ಕೃಷ್ಣ ॥ ಲಲನೆ ಇದೆಲ್ಲವ । ಸುಲಭವಾದರೆ ಕೇಳು । ಚಲುವೆ ನಿನ್ನವಯುವದೀ ॥ ಕಲನೆಲೆ ಕಲಕಿ ನಿ । ಶ್ಚಲದ ಪ್ರಮಾಣದಿಂ । ದೊಲಿಸುವೆ ಈಗ ನಿನ್ನಾ ॥ ೧೩ ॥ ಜಲಜಕುಟ್ಮಳ ದಂಥ । ನೆಳೆವೊಲಿಗಳಿಂದೆಂಬ ನಿರ್ಮಲ ಶಿವಲಿಂಗಗಳಾ ॥ ತಲೆಯು ಮೇಲೆ ಕರ । ತಳಗಟ್ಟೀರ್ದ ಚಂದ್ರನ । ನೆಲೆಗೊಳಿಪೆ ಕಾಣೇ ॥ ೧೪ ॥ ಮಡದಿ ನಿನ್ನ ನಿಡು । ಜಡೆ ಎಂಬ ಸರ್ಪನ । ಪಿಡಿದು ಕರಕೆ ಸುತ್ತೀ ॥ ಉಡುಪತಿ ಮುಖವಡಿ । ಗಡಿಗೆ ಚುಂಬಿಸುತಲಾ । ರಡಿಗಳ ಕೆದರುವೆನೇ ॥ ೧೫ ॥ ಬಿಡದದರ ಸವಿ । ಗೊಡನನ್ನೃತವ ರುಚಿ । ಗೊಡುತಲಿ ಗಡರವದೀ ॥ ಸಡಗರದ ರಥವ । ನಡು ಸಿಂಹನ ಏರಿ । ನಡಲಿಸುವೆನೆ ಕಾಣೇ ॥ ೧೬ ॥ ಹರಿಯಿಂತೆನುತಿರೆ । ಸ್ಮರಪಿತನವು ಮುಂ । ಬಂದು ತವಕವೇರೀ ॥ ಬರೆ ಸೆಳೆದಪ್ಪುತ । ಗುರುಕುಚಗಳ ಪ । ಯುರಕೊತ್ತುತ ಬಿಗಿದೂ ॥ ೧೭ ॥ ಹರುಷವುಕ್ಕಿ ಚ । ಪ್ಪರಿದು ಚುಂಬಿಸಿ ರುಚಿ । ಗರಿವುತ ಗಳಗವದೀ ॥ ಪರಿ ಪರಿ ಬಂಧದಿ । ಗುರು ವೆಂಕಟೇಶನ । ನೆರದೊಲಿಸಿದಳಾಗಾ ॥ ೧೮ ॥ ಶ್ರೀ ॥

ಮಹಾಭಾರತದೊಳಗಣ ದ್ರೌಪದೀವಸ್ತ್ರಾಪಹರಣ.

॥ ೩೮ ॥ ಪ್ರಥಮಾಂಕ.

ಪತಿವ್ರತೇ । ದ್ರುಪದಸುತೇ । ಪುಣ್ಯಭರಿತೇ ॥ ಪತಿವ್ರತೇ ದ್ರುಪದಸುತೆ । ॥ಅನು॥ ಪತಿವ್ರತೇ । ದ್ರುಪದಸುತೇ । ಪೊಡವಿಯೊಳಗೆ ಸದ್ಗುಣಕೃತಯುತೇ । ಸುಜನಸಂತತಿ ಸುತೇ ॥ ಅತಿ ದುರುಳ ಕೌರವನು ಮಾನ । ಚ್ಯುತಿಯುಗೈಯಲು ಕೃಷ್ಣ ನೀನೇ । ಗತಿಯೆನುತ ಸಭೆಯೊಳಗೆ ನುತಿಸಲು । ಚ್ಯುತನಕ್ಷಯವಸ್ತ್ರವನಿತ್ತುಳುಹಿದ ॥ ಪತಿವ್ರತೇ । ದ್ರುಪದಸುತೇ ॥ ಪಲ್ಲ ॥ ಕುರುಡನಿಂದ ಪಾಂಡವರಾ । ಕರಸುತಾ ದುಶ್ಶಂತ ಕೌರವಭೂವರಾ ॥ ವಿರಚಿಸುತ ಕೃತ್ರಿಮದ ಲತ್ತುವ । ದುರುಳ ಶಕುನಿಯು ಮತದಿಂದಾಡಲು । ಇಂಸಿದಾ । ಪಣಗಳೆಲ್ಲವ ಹಂಸಿದಾ ॥ ಮೆರೆವ ಸಿರಿ ಸಾಮ್ರಾಜ್ಯ ತನ್ನನು । ಜರು ಸಹಿತ ತಾ ಸೋತು ಕಡೆಯಲಿ । ಅರಸಿಯನು ಸೋಲಲ್ಕೆ ಕುರುಪತಿ । ಹರುಷದಿಂದೊಲದೊಲಿದ ಗರ್ವದಿ ॥ ಪತಿವ್ರತೇ । ದ್ರುಪದಸುತೇ ॥ ೧ ॥ ಮದವು ಪೇರ್ಚಿ ಮೂರ್ಖತ್ವದೀ । ಮಾತನಾಡುತ್ತ । ನಧಿಕತರ ವಿನೋದದೀ ॥ ವಿದುರ ಬಾ ಪಾಂಚಾಲೆಯನು ತಂ । ದುದಿತ ದಾಸಿಯರೊಳಗೆ ಬೆರಸೆನೆ । ಕುದಿವುತಾ ।

ನುಡಿದನು ಕೆದರುತಾ। ಹದನಗೆಟ್ಟೆಯೊ ಪಾಂಡುತನುಜರ। ಸುದತಿ ನಿನ್ನಯು ಶೊತ್ತೆಯುಕಟಾ ।ವಿಷಮುಡುವಿಲಿಕ್ಕಿದೆಯೊ ಕುಲವ ನೀ। ಬದುಕುಪಾಯು ವ ಕಾಣೆನೆಂದನು॥ ಪತಿವ್ರತೇ। ದ್ರುಪದಸುತೇ ॥ ೨ ॥ ಕೆಲಸಾರೆಂದು ವಿದು ರನ । ಸಟ್ಟಸುತಾಗ । ಕಳುಹೀದ ಪ್ರಾಪ್ತಿಕನಾ ॥ ಕಳುಹಲವನೈರುತ್ತ ದೇವಿಯು ಬಳಿಗೆ ಬಂದೆರಗುತ್ತ ನುಡಿದನು । ಜಳುಕುತಾ ।ತನುವನು ಬಳು ಕುತಾ ॥ ಇಳೆಯುಧಿಪ ತಾ ಸೋತು ಕಡೆಯುಲಿ । ಬಳಿಕ ನಿಮ್ಮೊಡ್ಡಿತ್ತ ಸೋಲಲು । ಕಲಿಸುಯೋಧನ ನಿಮ್ಮ ತಮುದಂ । ದೊಲವಿನಿಂದಲಿಂದೆನ್ನ ನಟ್ಟಿದ ॥ ಪತಿವ್ರತೇ।ದ್ರುಪದಸುತೇ ॥ ೩ ಸಿಡಿಲೆರಗಿದ ಬಾಳೆಯು॥ ಬಾಡಿ ಬೀಳ್ವಂತೆ । ನುಡಿಯು ಕೇಳುತ ದೇವಿಯುೂ ॥ ನಡುಗಿ ಮೂರ್ಛಿಸುತೆದ್ದು ನುಡಿದಳು । ವಡೆಯು ಸೋತ ಮೇಲಿನ್ನನೊಡ್ಡುವ । ಸಡತೆಯೇ । ಶಾಸ್ತ್ರದ ದೃಢತೆಯೇ ॥ ಒಡನೆ ಬಹದೇ ಪುಷ್ಪವತಿಯುಹೆ । ನಡೆಯೆನಲ್ಕೈತಂದು ಪೇಳಲು । ಕಿಡಿಯುಗುಳುತನುಜನನು ಕಳುಹಿಪ । ಬಿಡದೆಳೆದು ತಹು ದೆಂದು ಖತಿಯುಲಿ ॥ ಪತಿವ್ರತೇ । ದ್ರುಪದಸುತೇ ॥ ೪ ಮರುಳ ದುಶ್ಶಾಸನ ನು। ದೇವಿಯು ಬಳಿಗೆ। ಬರುತ ಝೇಂಕರಿಸಿದನೂ॥ ಶಿರಮುಡಿಗೆ ಕೈಯಿಕ್ಕಿ ತೆಳೆಯುಲು । ಪರಿಚರದ ದಾಸಿಯುರು ಹಾಯೆಂ।ದೊರಲುತಾ। ಬರುತಿರೆ। ಮರುಗುತಾ॥ ಭರದಿ ತಂದೊಡ್ಡೋಲಗದಿ ನಿಂ । ದಿರಿಸಿ ವಸ್ತ್ರಾಭರಣ ತೆಗೆ ಸೆನೆ। ದುರುಳ ಶರಗನು ಪಿಡಿಯುಲಾ । ತರುಣಿ ಗುರು ವೆಂಕಟನ ನೆನ ದಳು ॥ ಪತಿವ್ರತೇ । ದ್ರುಪದಸುತೇ ॥ ೫ ॥

ದ್ವಿತಿಯಾಂಕ.

ರಾಗ, ಆನಂದಭೈರವಿ [ಧಾಟಿ:- ಪಾಹಿ ಸಮಾಂ ಶ್ರೀವೇಣುಗೋಪಾಲಾ] ಆದಿತಾಳ

ಅಂಗುಸುರವೆ। ಇಂದೆನ್ನಭಿಮಾನವಾ ।ಆರು ಕ್ಕಾವವರಿಲ್ಲವೈ॥ ಚಾರು ಸದ್ಧರ್ಮ ವಿ । ಚಾರವ ತಿಳಿದಿಹ। ಧೀರರಿಗಿ ಪರಿ ವಿಹಿತೆ ಮೌನವು ॥ಪ॥ ಕ್ರೂರಖಳನು ಪರ। ನಾರಿಯು ಶರಗವ । ಪಿಡಿದು ಸೆಳೆಯೆ ಬೇಗಾ । ತೋರ ದಂಡದಲಿ ತೋ। ಳ್ಗಳಲಿ ಬಲ್ಮೆಗಳ । ವಾರೆ ಮುಚ್ಚಿದಳಾಗಾ ॥ ಘೋರ ಸಭೆಯು ನೋಡಲು ತಲೆಗುತ್ತಿ। ಜಾರುಮಾರಿ ಕಳವಳಿಸುತಾ । ನೀರಪರಾಧಿ ಯು ಮಾನಗೊಂಬುದು ಶ್ರುತಿ । ಸಾರವೆ ಎಂದಳಲುತಾ ॥ ಚಾರುವಿವೇಕಿಗ ಳ್ಯಾರು ಇಲ್ಲವೆ ವಿ ।ಚಾರಹೀನರಿಗಾರು ಪೇಳುವರಿನ್ನು॥ ಅಂಗುಸುರವೆ ॥ ॥ ೧ ॥ ಚಿತ್ತದಲ್ಲಿ ಕೃಪೆಯಿಲ್ಲದಾಯಿತೆ ಎನ್ನ ಮುತ್ತಾತ ಗಾಂಗೇಯಾ ।

ಶಾಸ್ತ್ರಪೌರಾಣ ವೇದವನರುಹಿರುವ ದ್ವಿಜೋತ್ತಮ ಕೃಪಾಚಾರ್ಯರ॥ ಅಸ್ತ್ರ ಶಸ್ತ್ರವಿದ್ಯಾಭ್ಯಾಸ ಗೈಸಿರುವ ಭೂ।ಕೃತ್ತಿವಾಸ ಗುರುವೇ । ಸತ್ವಾಧಿಕನಶ್ವತ್ಥಾಮ ನೀ ಸುಮ್ಮನಿಹು। ದುತ್ತಮಂಗೆ ಥರವೇ ॥ ಧೂರ್ತರೋಲಗದಿ ಮೂ।ರ್ಖತ್ವದಿ ನಿಪುಣರ್ ಸಭ್ಯಸ್ಥರೆನ್ನುವ ಗಾದೆ । ವಿಸ್ತರಿಸಿದುದಿಲ್ಲಿ ॥ ಆಂಗುಸುರುವೆ ॥ ೨ ॥ ದೃಷ್ಟಿ ಪೋದರೆ ಜ್ಞಾನ । ದೃಷ್ಟಿ ಶೂನ್ಯವೆ ಮಾವಾ । ದುಷ್ಟಸುತಗುಸುರಬಾರದೆ । ಹುಟ್ಟಿದರ್ನಿಮ್ಮಲ್ಲಿ ಗಾಂಧಾರಿಯುತ್ಯಮ್ಮಾ । ಧೃಷ್ಟನ ಕೈಬಿಡಲಾಗದೆ ॥ ಪಟ್ಟದರಸಿ ಭಾನುಮತಿ ನೀ ತಂಗಿಯಲ್ಲವೆ । ನಿಷ್ಠುರವಿದು ಸಂಯೋ । ಥಟ್ಟನೆ ಪೇಳೆ ನಿಮ್ಮಣ್ಣಗೆ ದುಸ್ಸಳೆ ಕಷ್ಟ ಬಿಡಿಸು ಸಖಿಯೆ ॥ ಎಷ್ಟನಳಲಿ ಮೊರೆಯಿಟ್ಟರು ಬಿಡಿಸುವ।ಶ್ರೇಷ್ಠರಿಲ್ಲದಾಯಿತು । ಕೆಟ್ಟಿತು ನೀತಿಯು ॥ ಆಂಗುಸುರುವೆ ॥ ೩ ॥ ಎಲೆ ಧರ್ಮಜ ನಿನ್ನ ಸಾಧು ಸಜ್ಜನತ್ವದ । ಬಲೆಯೊಳಿಕ್ಕಿದೆ ತಮ್ಮಂದ್ಯರನೂ । ಕಲಿ ಭೀಮನೆ ಕೇಳು ಕಡುಹನುಳಿದು ಹಗೆ । ಗಳಿಗೊಪ್ಪಿಸಿದೆ ಲಲನೆಯನೂ ॥ ಫಲುಗುಣ ನಿನ್ನ ಪಂಥ ಪರಾಕ್ರಮವೆಲ್ಲಿ । ಮುಳುಗಿ ಪೋದುದು ಪೇಳೈ । ಉಳಿದರಿಬ್ಬರಿಗೆಣೆ ಇಲ್ಲೆಂಬ ನಕುಲ । ಸಹದೇವ ನೀವಲ್ಲೈ ॥ ಬಳಕೆಯು ಕೌರವ ಸುಲಿವನು ಪ್ರಾಣವ । ಕಳೆವನು ಮಾನವ ಕಳಚುವ ಮುನ್ನವೆ ॥ ॥ ಆಂಗುಸುರುವೆ ॥ ೪ ॥ ಪ್ರಾಣತ್ಯಾಗದ ದುಃಖ ಒಂದೇ ಕ್ಷಣ । ಮಾನಹಾನಿ ದುಃಖವು ದಿನದಿನದೀ । ಈ ನಿರೋಧವ ಬಿಡಿಸುವರಿಲ್ಲ ಹಾ । ಕೃಷ್ಣ ನೀನೊಲಿವುದು ದಯದೀ ॥ ನಾನಾ ದೈನ್ಯತೆಯ ಬಟ್ಟರೂ ಸಕಲರು । ಜೀವಹಾನಿಯುಂತಾದರಲ್ಲಾ ॥ ದೀನಜನಾರ್ಥದಾಯಕನೆಂಬ ಬಿರುದುಳ್ಳ । ಶ್ರೀನಾಥ ನೀನಲ್ಲದಿಲ್ಲಾ ॥ ಕೌಣಪಕ್ಷೀಕ್ಷಕ । ಅನಾಥರಕ್ಷಕ । ಶ್ರೀನರಹಂಗುರುವೇಂಕಟನಾಯಕ ॥ ಆಂಗುಸುರುವೆ ॥ ೫ ॥ ಶ್ರೀಃ ॥

ತೃತೀಯಾಂಕ.

ರಾಗ, ಬೃಂದಾವನಸಾರಂಗ [ಧಾಟಿ:- ಪತಿವ್ರತೇ । ದ್ರುಪದಸುತೇ] ತ್ರಿವುಡೆತಾಳ

ಕಾಯೋ ಶ್ರೀಕರ ಕೇಶವಾ । ಎನ್ನಭಿಮಾನವ । ಕಾಯೊ ಶ್ರೀಕರ ಮಾಧವಾ ॥ ಪಲ್ಲ ॥ ಕಾಯೊ ಕಂಜಜ। ಧ್ಯೇಯ ಮುನಿಜನ। ಪ್ರಿಯ ದೀನ ಸಹಾಯ ಕರುಣದಿ । ಕಾಯೊ ಶ್ರೀಕರ ಕೇಶವಾ ॥ ಅನು ॥ ಖೂಳ ಕೌರವ ರಾಯನೂ। ಲತ್ತವಾಡುತ। ಸೋಲಿಸಿದ ಐವರನೂ ॥ ಖೂಳ ದುಶ್ಶಾಸನ ಬರುತೆನ್ನ ಮುಡಿವಿಡಿದೆಳೆನುತ್ತೆಳೆದನೂ ॥ ಕೊಂಡ್ಯೊಯ್ದುತೊಡ್ಡೋಲಗದಿ

ನಿಲಿಸಿದನೂ । ನಿಷ್ಠೂರನು ॥ ಮೇಲುದನು ಸೆಳೆವುತ್ತಿರಲ್ಕೆ ಸ । ಭಾಲಯದಿ
ಪ್ರಾರ್ಥಿಸಲು ಯಾರೂ । ಪೇಳಿ ಬಿಡಿಸುವರಿಲ್ಲದ್ಯಾತು ಕೃ । ಪಾಳು ನಿನ್ನಯ
ಮರೆಯ ಹೊಕ್ಕೆನು ॥ ಕಾಯೊ ಶ್ರೀಕರ ಕೇಶವಾ ॥ ೧ ॥ ಶರಗ ಬಿಡಿಸುವ
ರಿಲ್ಲ । ಎನ್ನಭಿಮಾನವು। ಬರಿದೆ ಹೋಗುವದ್ಯಾತಲ್ಲ ॥ ಶರಣಾಗತರ ಕ್ಕಾವ।
ಬಿಂದು ನಿನ್ನದು ದೇವ । ಕರುಣದಿಂದೀಕ್ಷಿಪುದು । ಎನ್ನಭಿಮಾನವ । ಮರೆ
ಯದೆ ರಕ್ಷಿಪುದು । ನೀ ಕರುಣಿಸುವದು ॥ ಹರಿ ಮುರಾರಿ ಮುಕುಂದ
ಕೇಶವ। ಶರಧಿಶಯನ ಸುರೇಶ ಸರ್ವೇ।ಶ್ವರ ದುರಿತಸಂಹರಣ ಭವಭಯ।
ಹರಣ ದೀನೋದ್ಧರಣ ದೇವನೆ ॥ ಕಾಯೋ ಶ್ರೀಕರ ಕೇಶವಾ ॥ ೨ ॥ ಪತಿ
ಗಳೊಪ್ಪಿಸಿ ಕೊಟ್ಟರು । ಪಾಡುಪಂಥಪ। ಖತಿಯನೆಕ್ಕವ ಬಿಟ್ಟರೂ॥ ಗತಿಯ
ಗಾಣೆ ನಾನಿನ್ನು । ಗತಿಹೀನಂಗೆ ನೀನೆ । ಗತಿ ಎಂದು ಶ್ರುತಿ ಪೇಳ್ವುದೂ ।
ನಿನ್ನ ಶರಣಾ । ಗತಂಗೆ ಭಯವಿಲ್ಲೆಂದು । ನಿಶ್ಚಯವಿದೂ ॥ ಪ್ರತಿರಹಿತ
ಸುಲಲಿತಚರಿತನ । ಚ್ಯುತ ಸೂನೃತನತುಲಿತಮಹಿಮ ಖಳ । ಮಥನ ಪುಣ್ಯ
ಸತ್ಕಥನ ಮುನಿಜನ। ನುತ ಸುರಾರ್ಚಿತ ರತಿಪತಿಯ ಪಿತ ॥ ಕಾಯೊ ಶ್ರೀಕರ
ಕೇಶವಾ॥ ೩॥ ತರಳ ಧೃವನಿಗೊಲಿದೆ । ಪ್ರಹಲ್ಲಾದನ । ಕರುಣದಿಂದುಳುಹಿ
ಸಿದೆ ॥ ಬರಲು ವಿಭೀಷಣಗೆ ಸ್ಥಿರಪಟ್ಟವಗಟ್ಟಿದೆ । ಕರಿರಾಜನನು ಸಲಹಿದೆ ।
ಅಂಬರೀಷನ ।ಭರದಿ ಚಕ್ರದಿಂದ ಕ್ಕಾದೆ । ಕೃಪೆಯ ಗೈದೆ ॥ ಕರದು ನಾರಗ
ನೆಂದಜಾಮಿಳ । ಗಿರದೆ ಮುಕ್ತಿಯನಿತ್ತ ಸುವ್ರತ । ಭರಿತ ರುಕ್ಮಾಂಗದ
ಗೊಲಿದ ಶ್ರೀ। ಯರಸ ಸದ್ಭಕತರ ಕ್ಕಾವಂದದಿ॥ ಕಾಯೋ ಶ್ರೀಕರ ಕೇಶವಾ॥
॥೪॥ ಸತಿಯರೊಳಗನುಸೂಯೆ। ರೇಣುಕೆ ಅರುಂಧತಿ ಬೃಹಸ್ಪತಿಜಾಯೆ॥
ಮತಿಯುತೆ ವೃಂದೆ ಮಂಡೋದರಿ ಸಾವಿತ್ರಿ । ಅತಿರೂಪಿನಹಲ್ಲೆ ಪ್ರೌಢೇ ।
ಅವರಂದದೀ।ಪತಿವ್ರತೇ ತಾನುಳ್ಳಡೆ । ಉಪೇಕ್ಷೆಮಾಡೆ ॥ ಮತಿವಿಹೀನನು
ಪಿಡಿದ ಶರಗ ಪ್ರಾ ಹೃತವೆನಿಸುತಭಿಮಾನ ಉಳುಹಿಸು । ಗತಿನೀನಲ್ಲದಿನ್ನಿಲ್ಲ
ಲಕ್ಷ್ಮೀ।ಪತಿ ಮುಕುಂದ ಗೋವಿಂದ ಕೃಷ್ಣನೆ ॥ ಕಾಯೊ ಶ್ರೀಕರ ಕೇಶವಾ ॥
॥ ೫ ॥ ರಕ್ಷಿಸೊ ರಕ್ಷಿಸೆನ್ನಾ । ಕಾರುಣ್ಯಕ। ಟಾಕ್ಷದಿಂದೀಕ್ಷಿಸೆನ್ನಾ ॥ ಅಕ್ಷ
ಯಾತ್ಮಕನೆ ನೀ। ರಕ್ಷಿಸದಿರೆ ಬೇರೆ । ರಕ್ಷಿಪರಿಲ್ಲ ದೇವಾ । ಆಹಾ ಭಕ್ತ। ರಕ್ಷಕ
ನೆ ಸಂಜೀವಾ। ಶ್ರೀಕೇಶವಾ। ಪಕ್ಷಿಗಮನನೆ ಹಾಹಾ ಹಾ ಸ । ದ್ಧಕ್ಷ ಹಾಹಾ
ಹಾ ಸುರೌಘ। ವೃಕ್ಷ ಹಾಹಾ ಸಲಹುದೀಗ ಸಾ । ರಕ್ಷಬಿಂದುಳ್ಳೀಕದೇವನೆ॥
ಕಾಯೊ ಶ್ರೀಕರ ಕೇಶವಾ ॥ ೬ ॥ ಈ ತೆರದಿ ಪಾಂಚಾಲೆಯು । ನುತಿಸಲು
ಶ್ರೀ।ನಾಥ ಕೇಳಿದ ಮೊರೆಯೂ॥ ಆತತಕ್ಷಣಕ್ಷಯ । ಶೀತುವಾಗಲೆಂದು

ಕೃ । ಪಾತಿಶಯದಿ ಪೇಳ್ದನೂ । ಖಳನ ಕೈಗಳಿಂದ್ರೆತು ಹಿಮ್ಮೆಟ್ಟಿದನೂ । ಬಳಲಿದನೂ ॥ ಕೌತುಕದ ಥರಥರದ ವಸ್ತ್ರ । ವ್ರಾತಂಗಳಿಗೆಸದುದೇನೆನೆ । ಭೂತಳದಿ ಗುರು ವೇಂಕಟೇಶನ । ಪ್ರೀತಭಕತರಿಂಗಿಲ್ಲ ಭೀತಿಯೂ ॥ ಕಾಯೊ ಶ್ರೀವರ ಕೇಶವಾ ॥ ೭ ॥ ಶ್ರೀ೪ ॥

ಚತುರ್ಥಾರಂಕ.

ರಾಗ ಆರಬಿ, [ಧಾಟಿ:- ಶ್ರೀಮನೋಹರ ಕೃಷ್ಣನಿಗೆ ಜಯ ಮಂಗಲಂ] ಏಕತಾಳ.

ಶ್ರೀನಿವಾಸನ ಸಾರಿದವರಿಗೆ ಏನೂ ಭಯವಿಲ್ಲಾ। ಮಾನುನಿಯ ಅಭಿಮಾನ ಉಳುಹಿದ । ದಾನವಾಂತಕ ದೀನರಕ್ಷಕ ॥ ಶ್ರೀನಿವಾಸನ ಸಾರಿದವರಿಗೆ ॥ ಪ ॥ ಸೆಳೆವುತಿರ್ದನು ಖೂಳ । ವಸ್ತ್ರವೂ ಹಲವೂ । ಬೆಳೆವುತಿರ್ದವೂ । ಬಳಲುತಿರೆ ಬೆಂಡಾದ ಬಾಹಿರನೂ । ಛಲನೂ । ತೆಗೆದೂ ನಿಂದನೂ ಚಲುವ ಬಹು ವಿಧವರ್ಣದ ವಸನಗಳೂ । ಮುಗಿಲೂ । ಗಗನವ ನಿಲುಕಲೂ ॥ ಕಳಿತ ಸಭೆಗತಿ ಕೌತುಕಂಗಳು । ತುಳುಕುತಿರೆ ಬೆರಗಾದರೆಲ್ಲರು । ಘಳಿಸಿದೆಯೊ ಅಪಕೀರ್ತಿಯನು ಬಿಟ್ಟು । ಕಳುಹು ಕಾಂತೆಯನೆಂದ ವಿದುರನು ॥ ಶ್ರೀನಿವಾಸನ ಸಾರಿದವರಿಗೆ ಏನು ಭಯವಿಲ್ಲ ॥ ೧॥ ನೀತಿಬಲ್ಲತಿಹುಚ್ಚ ವಿದುರನು । ಇವನ । ಮಾತಿಲಿ ಫಲವೇನು । ಈ ತಳೋದರಿ ತೊತ್ತೆಯಾಗೆಲಸದಲೀ । ಇರಲೀ । ಬೆರಸಿ ಬಳಸಲೀ ॥ ಘಾತೆ ಇವಳು ದೃಷ್ಟಿಬಂಧಗಳೂ । ಹಗಲೂ । ಇರುಳಂತೆಸಗಿದಳೂ ॥ ಭೀತಲಜ್ಜಾಜಾತಿಯುಳಿದುದು । ಪ್ರೀತೆಯೈವರಿಗೊಬ್ಬಳೀ ಬಹು । ಪಾತಿವ್ರತೆ ಕರ್ಣನೆ ಬೆಳದೊಸನವ । ಈ ತತ್ಕ್ಷಣದಲಿ ಪೊರಸೆಂದನು ॥ ಶ್ರೀನಿವಾಸನ ಸಾರಿದವರಿಗಿನ್ನೇನೂ ಭಯವಿಲ್ಲಾ॥ ೨ ॥ ರಾಯ ಸೋತಮೇಲೆನ್ನ ಸೋಲಲೂ । ಗೆಲಲೂ । ಇವರೊಡವೆಯೊ ಕೇಳೂ । ಗಾಂಗೇಯ ಶಾಸ್ತ್ರೋಕ್ತಿಗಳ ಸಮ್ಮತವೇ । ಹಿತವೇ । ಮತವೇ ಎಂದೆನಲೂ । ಕೌಂತೇಯನುಸುರಲಿ ಸತ್ಯವಾಕ್ಯವನೂ । ಧಿಟನೂ । ಬಿಡುವನೆಂದನು॥ ಜೀಯ ನಿಮ್ಮ ಪಸಾಯತೆಯರೊಳ। ಗೀ ಯುವತಿಯಳನು ಬೆರಸು ತೊತ್ತಿರ । ಲಾಯ ಬೇರುಪಕೃತಿಯೇನೆಂದು ರಾಧೇಯ ಕುರುಪತಿಗೊರೆದಿಸುತೆಂದನು॥ ಶ್ರೀನಿವಾಸನ ॥ ೩ ॥ ಎಲೆಗೆ ಭಜಿಸಾ ಕೌರವೇಂದ್ರನನೂ । ನೀನೂ । ಮರೆವುದೈವರನೂ । ವಲಿಸು ಗುಣದಲಿ ಮಾತಾ ನೀ ಕೇಳು । ಬಾಳೂ । ತಾಳೂ ಎನಲೆಂದಳೂ ॥ ಕೊಲುವನೀತನ ರಣದಲಿ ಭೀಮನೂ । ಬಿಡನೂ । ವಲಿಸುವನು

ಎಂದಾ । ಲಲನೆಯೋಕ್ತಿಯ ಕೇಳಿ ಘರ್ಜಿಸಿ । ಎಳೆದ್ಯೊವುತ ನಮ್ಮಯ ದಾಸೀಜನ। ರೊಳಗೆ ಬೆಂಸಲಿ ತಮ್ಮನೆನಲಾ । ದೆಳದೆಳದುದ್ಯತಾದ ಭರದಲಿ॥ ಶ್ರೀನಿವಾಸನ ॥ ೪ ॥ ಬಂದು ನೃಪದಾತ್ಮಜೆಯ ತುಡುಕಿದನೂ । ಖಳನೂ। ದುಶ್ಶಾಸನನೂ । ಇಂದುಮುಖಿ ಹೆಣಗಿದಳೂ । ಕೂಗಿದಳೂ । ಪ್ರಳಾಪಿಸಿದಳೂ ॥ ಇಂದ್ರನಿಲಯುಮುಮುಖ್ಯ ಸುಮನಸ । ವೃಂದಯುಮರರ್ಯೆ ಬಿಡಿಸಿರೆಲ್ಲರು । ಇಂದಿರೇಶ ಮುಕುಂದ ಮರ್ಜನ । ವೃಂದಶೀಕ್ಷರವಿಂದಲೋಚನ । ಹೊಂದಿದೆನು ಗುರು ವೆಂಕಟನ ಕೃಪೆ। ಯಿಂದ ರಕ್ಷಿಸು ಎಂದಳಬಲೆಯು ॥ ಶ್ರೀನಿವಾಸನ ಪಾಂದವರಿಗಿನ್ನೇನು ಭಯುವಿಲ್ಲಾ ॥ ೫ ॥ ಶ್ರೀ ॥

ಪಂಚಮಾಂಕ.

ರಾಗ ನಾಟಿ. ಏಕತಾಳ.

ಶ್ರೀಕೃಷ್ಣನ ಕೃಪೆಯೂ ॥ ಶ್ರೀಕೃಷ್ಣನ ಕೃಪೆಯುಳ್ಳ ಭಕತಂಗೆ ಪ್ರಾಕೃತಜನರುಪಹತಿ ಬಾಧಿಪುದೇ ॥ ಶ್ರೀಕೃಷ್ಣನ ಕೃಪೆಯೂ ॥ ಪ ॥ ಕಡುಮೂರ್ಖನು ಕೌರವನುಕ್ತಿಯ ಕೇಳೆಡಿಯಿಡುತ್ತೈತಂದಾಗ ಪಾಂಚಾಲಿಯು । ತುಡುಕುತೆಳೆಯೆ ಹೆಣಗಿದಳು ಪ್ರಳಾಪಿಸು। ತ್ತಡಿಗಡಿಗೊರಲುತಿರೇ॥ ಸಡಗರಿಸುತ ದುರ್ಯೋಧನ ತನ್ನಯ । ತೊಡೆಗಳ ತೋರಲು ಭೀಮನ ಗಧೆ ತವ । ತೊಡೆಗಳ ಕಡಿಯಲಿ ದೃಢವಿದು ತಪ್ಪದು।ನುಡಿಯುಸುತ್ತೈವರ ಮಡದಿ ಶಪಿಸಿದಳೂ ॥ ಶ್ರೀಕೃಷ್ಣನ ಕೃಪೆಯೂ ॥ ೧ ॥ ಕಡಲ ಧರೆಗಳೋಳಗುಬ್ಬಿ ತುಡುಕುತಿಹ। ವಡಭಾನಲನಂದದಿ ಮೇಘಂಗಳು । ತುಡುಕಿ ಹ್ಯಾಕುವ ರವಿಯಂತಿರೆ ಸಭೆಯೊಳ।ಗಡ ಹ್ಯಾವುತ ಭೀಮಾ ॥ ಕುಡಿ ಕುಡಿ ಕೌಟಾರನ ರಕ್ತವ ತಲೆ। ಗಡಿದು ದುರ್ಯೋಧನ ನೂರುಗಳನು ಹಿ।ಮ್ಮಡಿಸಿ ಮುನಿಯುಲಿ ಧರ್ಮಜನೆನುತೆದ್ದನು । ಘುಡುಘುಡಿಸುತ ಸಭೆ ನಡುಗಿದುದಾಗಲೆ ॥ ಶ್ರೀಕೃಷ್ಣನ ಕೃಪೆಯೂ ॥ ೨ ॥ ಹೆದರಿಕೆ ಹೊಕ್ಕಿದು ಸಭೆಗಾ ಕೌರವ । ನೆದೆ ಬಿರಿದುದು ಭಗ್ನನೆ ಸ್ಥಾನಾಂಬುಧಿ । ಕದಡುತಲುಕ್ಕಿತು ಹೆದರಿಕೆಗರಹೊಡದು ಭೂಪಾಲಂಗೆ ॥ ಹದನಹುದೋ ಹಾ! ಹಾ! ಯೆನುತಿರ್ದರು। ವಿದುರ ಭೀಷ್ಮ ಕೃಪ ದ್ರೋಣಾದಿಗಳು । ಕೆದರುಗಂಗಳ ಕಾಂತಿಯುಪುದಿದವು ಹರು । ಪದ ಪುಳಕದಿ ಪವನಜನನು ನೋಡುತ ॥ ಶ್ರೀಕೃಷ್ಣನ ಕೃಪೆಯೂ ॥ ೩ ॥ ಶಿಂಗನಾರ್ಭಟೆಯನು ಕಾಣುತ್ತೋಡುವ ಮಾ।ತಂಗನಂದದಿ ದೇವಿಯ ತುಡುಕಿದ ಖಳರ್ । ಹಿಂಗುತ ಬಿಟ್ಟಗಲಿದರು

ಮಾರುತಿ ಇದಿರಂಗವಿಸಲು ನಡುಗೀ || ಅಂಗನೆ ನುಡಿ ನುಡಿ ಬೆದರದಿಂವರ
ಖಂ। ಡಂಗಳ ತರಿದು ಉಣಲಿಕ್ಕುವೆ ಭೂ। ತಂಗಳ ಶನತ್ತ್ರಡಿಗೆವಲಯುವ
ನುಲ್ಲಂಘಿಸುವೆನು ಕೇಳೆಂದನಾ ಭೀಮನು || ಶ್ರೀಕೃಷ್ಣನ ಕೃಪೆಯೂ|| ೪ ||
ಕೇಳುತಲರ್ಜುನ ನಡೆತಂದನಿಲಜಗೆ। ಪೇಳಿದ ರಿಪುಗಳವಿಡಿವ ಹೊತ್ತಲ್ಲಿದು
ನೃಪಾಲನ ಭಾಷೆಯು ಕೆಡಿಸುವದನುಚಿತವೆಂದುಸುರಲು ಕೇಳೀ|| ತಾಳಿದ
ಕೌರವ ನೂರ್ವರ ತರಿವೆನು। ಖೂಳ ದುಶ್ಶಾಸನ ರಕುತವ ಕುಡಿವೆನು।
ಬೀಳುಗಡಿವೆ ಕುರುಪತಿಯು ತೊಡೆಗಳ ಜಂ। ಡಾಡಿಪೆ ಗಧೆಯಿಂದೆಂದನಾ
ಭೀಮನು || ಶ್ರೀಕೃಷ್ಣನ ಕೃಪೆಯೂ || ೫ || ಇನತನುಜನ ಶಿರಭಾಂಡದಿ
ದುಶ್ಶಾಸನನ ರಕುತವನು ತುಂಬುತ ದುರ್ಯೋ। ಧನನೆಡಬಲದ ಖಂಡಂ
ಗಳನಿಟ್ಟು ಶ।ಕುನಿಯುಕಲಿಜವನೂ || ಎಣೆಗೊಳಿಸುತ ಕೌರವರ ತಲೆಗಳಿಂ
ದೊಲೆಯನು ಪೂಡುತ ಕ್ರೋಧಾಗ್ನಿಯಿಂ ಕಾದಿ। ದುಣಲಿಕ್ಕುವೆ ಶಾಕಿನಿ
ಢಾಕಿನಿಯರ। ಗಣಕಿದು ನಿಶ್ಚಯ ವನಿತೆ ಕೇಳೆಂದನೂ || ಶ್ರೀಕೃಷ್ಣನ
ಕೃಪೆಯೂ || ೬ || ಧರಣಿಜಲಾನಲನನಿಲಮುಖ್ಯಸುರ। ವರರೆಲ್ಲರು ನೀವು
ಬಂದುಕೊಳ್ಳಿರೆನೆ। ಶಿರವ ಕಡಿವೆನೆನೆ ತರಿವೆ ಕರ್ಣನಿಗೆಂದನು। ವರ ಶಕು
ನಿಗೆ ಸಹದೇವಾ ಬಂಸಿದರೀಪರಿ ಭಾಷೆಯನಾಗಳೆ। ಕುರುಕುಲಜರು ಕಳ
ವಳಿಸುತಲಿರ್ದರು। ಧರೆಯೊಳು ಶ್ರೀಗುರು ವೆಂಕಟರಮಣನ। ಶರಣ
ಹೊಕ್ಕಂಗೆ ಇತರಭಯವಿಲ್ಲವು || ಶ್ರೀಕೃಷ್ಣನ ಕೃಪೆಯೂ || ೭ ||

ಷಷ್ಠಾಂಕ.

ರಾಗ. ಘಂಟಾರವ [ಧಾಟಿ:- ಒಬ್ಬನೆ ದೇವ ಕಣಾ] ಏಕತಾಳ.

ಜಯ ಹರಿಭಕುತರಿಗಹುದೂ। ಅಪಜಯ ಹರಿವಿಮುಖರಿಗಹುದೂ ||
ಲಯವರ್ಜಿತಲಕ್ಷ್ಮೀರಮಣನ ಪದದ್ವಯದಾಶ್ರಿತಜನರಿಗೆ ಭಯವುಂಟೇ ||
ಜಯಹರಿಭಕತರಿಗಹುದೂ || ಪಲ್ಲ || ಭಾಷೆಯ ಭೀಮಾರ್ಜುನರೂ।
ಸ್ವರ್ಗವಾಸಿಗಳಿಗೆ ಬರಸಿದರೂ। ಶೋಷಣೆಭಯಭಾರಿಸಿತೂ। ಕಂಡಾ
ಸಭೆಯಲ್ಲ ನಡುಗಿತೂ || ಸೂಸಿತುತ್ಪಾತದ ರಾಶಿಗಳಾಪುರವಾಸಿಗಳೆಲ್ಲರು
ಲೇಸಲ್ಲೆಂದರು || ಜಯ ಹರಿಭಕತರಿಗಹುದೂ || ೧ || ಪ್ರಳಯೋತ್ಪಾತ
ತೋರಿದವೂ। ಖಳಕುಲಸಂಹಾರ ಸಮಯವೂ || ಘಳಿಲನೆ ದ್ರುಪದಾ
ತ್ಮಜೆಯಾ। ಬೇಡಿಕೊಳುತ್ತ್ತಳುಹಿಸು ಸಂತತಿಯಾ || ಕಳುಹದಿರೆಂದು

ಗಂಗಾಸುತ ಮುಖ್ಯರು । ತಿಳುಹಿಸಲಂಥ ನೃಪಾಲನೈತಂದನು ॥ ಜಯು ಹರಿ ಭಕತರಿಗಹುದೂ ॥ ೨ ॥ ಮಗಳೆ ನೀ ಮರೆ ಬಳಲಿಕೆಯಾ । ಎನ್ನ ಮಗನೆಸಗಿದ ಉಪಹತಿಯಾ ॥ ಜಗದಿ ಸಜ್ಜನರು ನಿನ್ನವರೂ । ಮೂರ್ಖರಿಗೆ ಮೊದಲಿಗರು ಎನ್ನವರೂ॥ ಅಗಣಿತ ಅಪರಾಧಗಳ ಕ್ಷಮಿಸು ಮನ । ಸಿಗೆ ಬಂದುದ ಕೇಳ್ ಪ್ರಕಟದಿ ಕೊಡುವೆನು ॥ ಜಯುಹರಿಭಕತರಿಗಹುದೂ ॥ ೩ ॥ ಜರದುದೆಲ್ಲವನು ಮರತೆವೂ । ಮಾವ । ಹಿರಿಯರು ನಮಗೆಲ್ಲ ನೀವೂ ॥ ಅರಸರ ಸೆರೆಯು ಬಿಡುವದೂ । ನಮ್ಮ । ಧರಣಿ ಬಲ ಸಹ ಕೊಡುವದೂ॥ ಅರಿಕೆ ಇವೇನೆನೆ ಸೈನಿಕ ಸಹಿತಲೆ । ತೆರಳಿ ರಾಜ್ಯಕೆ ಸುಸ್ಥಿರದಿಂದಲೆಂದನು ॥ ಜಯು ಹರಿಭಕುತರಿಗಹುದೂ ॥ ೪ ॥ ಎನುತಾಭರಣ ವಸನವಾ । ನಿತ್ತನಿಬರಿಗಿತ್ತು ಬೆಸನವಾ ॥ ವಿನಯುದಿ ಬೀಳ್ಕೊಂಡಿವರೂ । ಸರ್ವರ । ರನುಕೂಲದಿ ಪೊರಟರೂ ॥ ಮನದಿ ಹಿಗ್ಗುತ ಶ್ರೀಗುರು ವೆಂಕಟರಮಣನ । ನೆನವುತ ಸಂಭ್ರಮದಿ ತೆರಳಿದರು ॥ ಜಯು ಹರಿಭಕುತರಿಗಹುದು । ಅಪಜಯು ಹರಿವಿಮುಖರಿಗಹುದೂ ॥ ೫ ॥ ಶ್ರೀ ॥

ಸಪ್ತಮಾಂಕ. ಮಂಗಲಪದ.

ರಾಗ ರೇಗುಪ್ತಿ, ಮಟ್ಟಿತಾಳ.

ಮಂಗಳ ಜಯು ಮಂಗಳಜಯು ಮಂಗಳ ರಂಗನಿಗೆ॥ ಗಂಗೆಯುನುಂಗುಟದಿಂ ಪಡೆ । ದಂಗಜಜನಕನಿಗೆ ॥ ಮಂಗಳ ॥ ಪ ॥ ವಸುದೇವನ ಸುತನೆನಿಸಿದ । ಬಿಸಜನಾಭನಿಗೆ । ಅಸುರೆಯು ಮೊಲೆ ವಿಷವನು ಪೇರ್ವರಸು ಸಹಗೊಂಡವಗೆ ॥ ಶಶಿರವಿತೇಜಗೆ ಕೌಂಸದ್ವಿಷಚಿದ್ರೂಪಗೆ । ಪಶುಪಾಲಗೆ ಋಷಿನುತ ಸಾರಸಭವಪೂಜಿತಗೇ ॥ ಮಂಗಳಜಯು ಮಂಗಳಂ ॥ ೧ ॥ ಚ್ಯುತರಹಿತಚ್ಯುತನಿಗೆ ಮುನಿ । ನುತ ಗುಣಗಣಯುತಗೆ ॥ ಪ್ರತಿರಹಿತಪ್ರತಿಮಗೆ ಕ್ಷಿತಿ । ಹತಸೂಂಧೃತಗೇ ॥ ಶ್ರುತಿಸ್ಮೃತಿಸಂಯುತಚರಿತಗೆ । ರತಿಪತಿತಾತನಿಗೆ । ಪೃಥೆಸುತಸಾರಥಿಯಾದಾ । ಶ್ರಿತಜನವಾಂಛಿತಗೇ ॥ ಮಂಗಳ ॥ ೨ ॥ ಅಂಕುಶಧ್ವಜ ಪಂಕಜರೇ । ಖಾಂಕಿತ ಚರಣನಿಗೆ ॥ ಶಂಕರಮುಖ್ಯಾಮರಮುನಿ । ಸಂಕುಲಸೇವಿತಗೇ॥ ಕುಂಕುಮಚಂದನಚರ್ಚಿತ ಶ್ರೀವತ್ಸಾಂಕಿತ ಮಾಧವಗೆ । ಬಿಂಕದ ವಳಲಂಕೆಯು ಗುರು । ವೇಂಕಟರಮಣನಿಗೆ ॥ ಮಂಗಳ ಜಯು ಮಂಗಳ ಜಯು ಮಂಗಳ ರಂಗನಿಗೆ॥ ೩ ॥ ಶ್ರೀ ॥

ಭಾಗವತದೊಳಗಣ ಪ್ರಹ್ಲಾದಚರಿತ್ರೆ.

॥ ೩೯ ॥ ರಾಗ, ಬೇಗಡೆ [ಧಾಟಿ:- ಧಾಂ ಧಾಂ ಧಾಂ ಧಾಂ] ಏಕತಾಳ

ಶ್ರೀನರಹರಿ ಶರಣಾಗತರಕ್ಷಕ । ದೀನಜನೋದ್ಧಾರೀ ॥ ಭಾನು ಶತಕೋಟಿ ಸಮಾನತೇಜ ಮಹ ! ದಾನವ ವಂಶಾರಣ್ಯ ದಹಿಪ ಕೃ।ಶಾನು ಸುಜನಸುರಧೇನು ಸರ್ವೋತ್ತಮ ॥ ಶ್ರೀನರಹರಿ ॥ ಪಲ್ಲ ॥ ಶರಣ ಪ್ರಹಲ್ಲಾದ ನಂದೂ। ಶ್ರೀಶನ। ಚರಣವೆ ಗತಿಯೆಂದೂ ॥ ಮರೆಯದಚ್ಯುತನ ಪದವಾ । ಮನದಿ ಮಮ।ಕರಿಸಿ ಸ್ಮರಿಸುತ್ತಿರುವಾ॥ ಪರಿಯ ಹಿರಣ್ಯಕಶ್ಯಪು ಕಾಣುತ ತನ।ಗರಿಯಹ ನಾರಾಯಣನ ನಾಮಂಗಳ।ಸ್ಮರಿಸುವ ಶಿಶುವಿನ ಬಾಲಭಾಷಿತಗಳ। ಮರೆಯಿಸಬೇಕೆನುತಾ॥ ಕರಸುತ ಅಣ್ಣಂಗಳಿಗೆಂದನು ಈ ತರಳನ ದುರ್ಭಾಷಿತವ ಬಿಡಿಸಿ ಕುಲ । ಬಿರಿದಿನ ವಿದ್ಯವ ಕಲಿಸುತ ಬರಹವ । ಬರಿಸಿರೆನಲು ಭಕತನ ಬಿಡದುಳುಹಿದ ॥ ಶ್ರೀನರಹರಿ॥ ೧ ॥ ಅಣ್ಣಗಳತಿಮುದದಿ । ಅಕ್ಷರಾಭ್ಯಾಸ । ವನ್ನು ಗೈಯ್ಯುತ ವಿಧದೀ ॥ ಓನ್ನಮೊ ಶಿವಾ ಎಂದು ತಾ ಬರೆ ಬಲುಚಿಣ್ಣನೆ ಎನಲೆಂದೂ ॥ ಎನ್ನೊಡೆಯನು ಶ್ರೀನಾರಾಯಣ ಗತಿ । ಎನ್ನುತ ಬರೆವುತ್ತಿರೆ ಕಾಣುತ ಕರ। ವನ್ನು ಪಿಡಿದು ಬರೆಸಿದರದು ವಿಷ್ಣು ಪ್ರ।ಸನ್ನವೆಂದಾಯ್ತು॥ ಮನ್ನದಿ ವಿಸ್ಮಯಬಡುತಲೆ ಪ್ರತಿದಿನ।ದಿನ್ನದಿ ಪಾಠವ ಪೇಳಲು ಮುರಹರ । ಪನ್ನಗಶಯನ ಪರಾತ್ಪರವಸ್ತು ನೀ । ನೆನ್ನನು ಸಲಹೆಂದನು ಪ್ರಹಲ್ಲಾದನು ॥ ಶ್ರೀನರಹರಿ ॥ ೨ ॥ ದಣಿದರಣ್ಣಗಳೆಲ್ಲರೂ । ಪ್ರಹ್ಲಾದನ । ದನುಜಗೊಪ್ಪಿಸುತೆಂದರೂ ॥ ತನಯನ ತಿದ್ದುವರೇ । ತಮ್ಮಿಂದನು । ಸರಿಸದು ಪೇಳುವರೇ ॥ ಎನಲುರಿ ಮುಸಗಿ ಕೋಪ । ಪಾನಲನಾಗಿ ಘ । ರ್ಜನೆ ಗೈಯುತ ಸುತನಂ ಕಾಣುತ ಪೇ । ಳ್ದನು ಕೇಳೆಲವೊ ನೀ ವಿಷ್ಣುವನೊಂದೇ । ಕ್ಷಣ ಮರೆಯದೆ ನೆನವೆ ॥ ನಿನಗೇನಹನವ ಪೇಳೆನೆ ಪೇಳ್ದನು ಕೇಳ್ । ಜನಕನು ನೀನೀ ಜನ್ಮಕ್ಕೆ ನಿಜವಹ । ಜನಕನು ಶ್ರೀ ಲಕ್ಷ್ಮೀಪತಿ ಬಲು ಬಲು । ಜನುಮದಿ ಜಾಗ್ರತೆ ಇತ್ತು ಪೊರೆವುತಿಹ ॥ ಶ್ರೀನರಹರಿ ॥ ೩ ॥ ಮೆರೆವಾ ತ್ಯಾತಂದೆಗಳೂ । ಶ್ರೀಹರಿಯೆಂದು । ವರಲುವ ನಿವನೀಗಲೂ ॥ ಹರಿ ಇವನನು ಕಾಯ್ವವಾ । ಆ ಪರಿಗಳ । ಪರಿಕಿಸುತ್ತೀಕ್ಷಿಸುವಾ॥ ತರಳನು ಇವ ನಮಗಲ್ಲವೆನುತ ಮಹ । ಗರಳವು ಕುಡಿಸಲ್ಕಮೃತವಾದುದು ಬಲು । ಉರಿಯಂ ಪೊದಿಸಲು ಸೀತಳವಾದುದು । ಹವಗ್ರ್ಯಾಗ್ರಗಳಿಂದಾ ॥ ಉರುಳಿಸಲವನಿಯು ತಲ್ಪವಾದುದು ಪದ । ಕರಗಳ ಕಟ್ಟ

ಗಾಢೋದಕದಲಿ ಶಿಲೆ । ಬಿಗಿಸುತ ಮುಳುಗಿಸಲಿದ್ದು ಬಂದನು ಜಗ । ದೊಡೆಯ ಜನಾರ್ದನ ನಮೊ ಜಯವೆಂದನೂ ॥ ಶ್ರೀನರಹರಿ ॥ ೪ ॥ ಎಣಿಸಲಪರಿಮಿತದಾ । ಕೊಲೆಗಳ । ತನಯಗಾಗ ಕೊಲಿಸಿದಾ ॥ ಇನಿತಲೆಗಳು ಸೋಂಕದೇ । ಪ್ರಹಲ್ಲಾದನು । ಸುಖಿಪಿರೆ ಬಲು ಕೋಂಕದೇ ॥ ಮನದೊಳಗದ್ಭುತಪಡುತೆಂದನು ನೀ । ನೆನಹುತ್ತಿಹ ನಿನ್ನೊಡೆಯನದೆಲ್ಲಿಹ । ನೆನಲು ಕೇಳೆನ್ನಯ ಸ್ವಾಮಿಯು ಸಚ್ಚಿ । ತ್ತನು ಜೀವರುಗಳಿಗೆ ॥ ಅಣುರೇಣು ತೃಣಕಾಷ್ಠದಿ ಪರಿಪೂ । ರ್ಣನು ಪರಬೊಮ್ಮ ಪರಾತ್ಪರವಸ್ತುವು । ಮನದಿ ಮರೆವನಂತೆನ್ನಯ ನಾರಾ । ಯಣನ ಪದಂಗಳನೆನಲಿಂತೆಂದನೂ ॥ ಶ್ರೀನರಹರಿ ॥ ೫ ॥ ನಿಲ್ಲೆಲೊ ಎಲೆ ಖಳಾ । ನಿನ್ನೊಡೆಯನ । ದೆಲ್ಲಿ ತೋರುವೆ ಪೇಳಾ ॥ ಅಲ್ಲದಿದ್ದರೆ ನಿನ್ನಾ । ಕೈಯ್ಯಾರೇ । ಕೊಲ್ಲದಿರೆನು ಮುನ್ನಾ ॥ ಸೊಲ್ಲಿಸೆನಲು ತವಕಿಸದಿರು ಕೇಳ್ ನಿ । ನ್ನಲ್ಲಿ ಎನ್ನಲ್ಲಿಳೆಯಲ್ಲಿ ಹೊರಗೊಳಗ । ದೆಲ್ಲೆಲ್ಲಿಯು ಹರಿ ಇಲ್ಲದನ್ಯತ್ರವು ನಿಜ । ವೆಲ್ಲವು ಶ್ರುತಿಮತವೂ ॥ ಎಲ್ಲೆಲ್ಲೆಂಬುದಿಲ್ಲೆನ್ನೊಡೆಯನು ಕರು । ದಲ್ಲಿಗೆ ಬಹ ಕರುಣಾಂಭೋನಿಧಿ ಬಹು । ಸುಲ್ಲಭ ಸುಜನಜನರ್ಗೆ ದುಷ್ಟರಿಗೆ । ಭಲ್ಲೆಯನಾಗಿಹ ಭಾಗೀರಥೀಪಿತ ॥ ಶ್ರೀನರಹರಿ ॥ ೬ ॥ ಹೋರಾಡದೆ ಈಗ । ಈ ಸ್ತಂಭದೀ । ತೋರದಿದ್ದರೆ ಬೇಗಾ ॥ ತೋರದಿರಲು ಕಡಿದೂ । ನಿನ್ನನು ಕೈ । ಯ್ಯಾರೆ ಚಲ್ಲುವೆ ಒಡಿದೂ ॥ ತೋರೆನುತ್ತಲೆ ಖಳ ಖಡ್ಗವ ಕಂಠ । ಕ್ಕೇರಿಸಿ ಝಳಪಿಸಿ ಝಡಿದು ಪಿಡಿವುತಿರೆ । ಬಾರೋ ನರಹರಿ ಭಕ್ತೋದ್ಧಾರಕ । ಬಾರೋ ಬಾರೆಂದೂ ॥ ಚೀರೆ ಪ್ರಹಲ್ಲಾದನು ಕಳವಳಿಸುತ ಬಾ । ಯಾರ ಕರೆಯಲಾಕ್ಷಣದಲಿ ಸ್ತಂಭದಿ । ತೋರಿ ಪುಟ್ಟಿತು ಹೂಂಕೃತಿ ಕಟ್ ಕಟ್ ಶೇರಿ । ಕಾರ ಬ್ರಹ್ಮಾಂಡ ಹೊಡೆದುದೆಂಬಂದದಿ ॥ ಶ್ರೀನರಹರಿ ॥ ೭ ॥ ಘುಡುಘುಡುಸುತ್ತೀರ್ದುದೂ । ಆ ಸ್ತಂಭದೊಳ್ । ಸಿಡಿದುದು ರವ ಮಿಗಿಲೂ ॥ ಕಟ್ ಖಟ್ ಖಟಲ್ ಛಿಟಲೂ । ಛಿಟ್ ಛಿಟಲೆಂದು । ನಡುವೆ ಸೀಳಿದುದಾಗಲೂ ॥ ಛಟ್ ಫಠಾಲ್ ಫಠಲೆಂ । ದೊಡೆದು ಮೂಡಿದ ನರಸಿಂಹ ಕೋಪಾನಲ । ಕಿಡಿಗಳ ಸೂಸುತ ಹ್ರುಂ ಹ್ರುಂ ಹ್ರುಂ ಎಂ । ದಡಿಗಡಿಗೆ ಘುಂಕರಿಸೀ ॥ ಬಿಡದುಚ್ಛಳಿಸಲ್ ಧಡ್ ಧಡ್ ಧಡ್ ಧಡರೆಂದು । ನಡುಗಿದುದಾ ಮಂದಿರಹರ್ಮ್ಯಂಗಳು । ಸಡಲುತಲಿರೆ ಪ್ರಹಲ್ಲಾದನ ಮುಂದಲೆ । ಬಿಡುತಲಸುರನಿದೇನೆಂದೀಕ್ಷಿಸಿದನೂ ॥ ಶ್ರೀನರಹರಿ ॥ ೮ ॥ ತರಣಿಕೋಟಪ್ರಕಾಶದಾ । ಮಹಾದ್ವಾರ ।

ಭರದಿಂದ ತೆರದಂದದಾ ॥ ಮೆರೆವ ತೇಜೋರಾಶೀ । ರಂಜಿಸುತಿರೆ । ಸುಮನಸೋದ್ಭವಸಹಸೀ ॥ ಸ್ಫುರಿಸುವ ಮಣಿಮುಕುಟದ ಮಸ್ತಕದ ಬ್ಯಾ। ದೆರದ ಮೃಗೇಂದ್ರವದನದ ಭಯಂಕರ । ದುರುಬೆಯು ತೀವ್ರವದನಪಂಕ್ತಿಯು ಕಿಡಿಗೆರವ ದ್ವಿನಯನಗಳಾ ॥ ಅರಳಿದ ನಾಸಾಪುಟಧೂಂಕೃತಿಗಳ । ಮೆರೆವ ಮಕರಕುಂಡಲಗಳ ಕರ್ನಗಳೊಳು । ಉರುತರ ರೋಶಾವೇಶದಿ ರಾಜಿಪ । ಪುರುಷವಯುವದ ಶ್ರೀಕರ ನರಸಿಂಹನು ॥ ಶ್ರೀನರಹರಿ ॥ ೯ ॥ ಹಿರಣ್ಯಕಶ್ಯಪು ಕಂಡೂ । ಘರ್ಜಿಪ ಪೊಸ । ಪರಿಯ ಮೃಗವಿದೆಂದೂ ॥ ಧುರಕಳುಕದೆ ವದಗೀ । ಕಾದುತ್ತ । ಲಿರಲು ಕಾಣುತ ಖಡುಗೀ ॥ ಅರೆ ಸಂಜೆಯೊಳಾರ್ಭಟಿಸಿ ರಕ್ಕಸನನು । ಭರದಿಂ ಪಿಡಿದಪ್ಪಳಿಸಿ ಹೊಸ್ತಿಲಲಿಕು । ಳ್ಳಿರುತತಿ ರೋಶಾವೇಷದಿ ತೊಡೆಗಳೊ । ಳಿರಿಸಿ ಮಲಗಿಸುತಲಿ ॥ ಎರಡು ಕರಗಳಿಂದೊತ್ತಿ ಪಿಡಿದು ಮ । ತ್ತೆರಡು ಕರಗಳಿಂದುದರನುಗುರ್ಗಳಿಂ । ದಿರಿದು ಬಗದು ಸರ್ರನೆ ಸೀಳ್ದು ಭಯಂ । ಕರದ ವಿಧದ ನರಸಿಂಹನೆನಿಸಿರುವ ॥ ಶ್ರೀನರಹರಿ ॥ ೧೦ ॥ ಎಳೆ ಕರುಳ್ಗಳ ತೆಗೆದೂ । ಕೊರಳಿಗೆ ವನ। ಮಾಲೆ ಇಕ್ಕಿದನುಗಿದೂ ॥ ತಿಳಿರಕುತವ ಸುರಿದಾ । ದ್ವಯ ಕುಡುತೆಗಳಲಿ ಮೊಗದೊ ಮೊಗದಾ॥ ಖಳನ ಮರ್ದಿಸಿ ಕರಾಳನೆನಿಸಲು। ಜ್ವಲಿಸುವ ಕೋಪಗಳುರುಬೆಗೆ ಭೂ। ವಳಯವು ಬೆಂಡಾಗುತ ಬೇಯುಲು ಬಲು । ಜಲನಿಧಿಗಳು ಕುದಿಯೇ ॥ ಉಳಿಯಲಜಾಂಡಘಟವು ಕಾದುದು ಶ್ರೀ । ನಿಳಯನ ರೌದ್ರವು ಪೇರ್ಚಿತಿದುವೆ ಜಗ । ವಳಿವಿನ ದಿನವ್ರೋ ಎನುತಜಮುಖ್ಯರು । ಘಳಿಲನೆ ಪೊರಮಡುತಲಿ ಸ್ತುತಿಗೈದರು ॥ ಶ್ರೀನರಹರಿ ॥ ॥ ೧೧ ॥ ಜಯಜಯ ಜಗದೀಶಾ । ರಕ್ಷಿಸು । ಜಯ ನರಮೃಗ ವೇಷಾ ॥ ಜಯತು ಜಗದ್ಭರಿತಾ । ಸುಲಲಿತ । ಜಯಜಯತು ಸುಚ್ಚರಿತಾ ॥ ಜಯ ಮಂಗಲದಾಯಕ ಜಯ ಜಯಜಯ । ಭಯಭಂಜನ ಭಕ್ತೋದ್ಧಾರಕ ಜಯ । ಜಯ ಕರುಣಾಕರ ಕಮನೀಯಾಂಗನೆ । ಜಯ ಜನ್ಮಾದಿವಿದೂರನೆ ಜಯಜಯ॥ ಲಯಗೈದೆಯೊ ದೇವನೆ ರಾಕ್ಷಸನನು। ಜಯವಾಯಿತು ಜನಗಳ ಭಯಹಿಂಗಿತು। ದಯಗೈದೆಮ್ಮನು ರಕ್ಷಿಸು ಭಕ್ತ। ಪ್ರಿಯ ಭವಹರ ಜಯಜಯ ಎನುತೀರ್ದರು ॥ ಶ್ರೀನರಹರಿ ॥ ೧೨ ॥ ಸುರರಿಂತು ಸ್ತುತಿಸುತ್ತಾ । ಮಲ್ಲಿಗೆ । ಎರಳ ಮಳೆಯಗರೆವುತಾ ॥ ಶರನಿಧಿ ಸುತೆಯ ತಂದೂ । ನೃಸಿಂಹನ । ಇದಿರು ನಿಲ್ಲಿಸುತಂದೂ ॥ ಶರಣ ಪ್ರಹ್ಲಾದನು ಸಹಿತೊಂದಿಸಿ ಶ್ರೀ । ವರನೆ ಕರುಣದಿಂದೆಮ್ಮನು ಸಲಹುದು । ದುರುಳನ ಸಂಹರಿಸಿದೆ ಲೇಸಾಯ್ತುದು ।

ಮೆರೆವ ಕೋಪಜ್ವಾಲೇ ॥ ಉರಿವೃತ್ತಿದೆ ಲೋಕಂಗಳ । ಭರವ ನಿಲಿಸಿ ಶಾಂತತ್ವದಿಂದೆಮ್ಮನೆ । ಲ್ಲರ ರಕ್ಷಿಸು ಎನುತೆರಗಲು ಲಕ್ಷ್ಮಿಯು । ಕರದು ತೊಡೆಯಲಿ ಕುಳ್ಳಿರಿಸುತ್ತಿಂತೆಂದನು ॥ ಶ್ರೀನರಹರಿ ॥ ೧೩ ॥ ಮಿಗುವ ಕೋಪವ ನಿಲಿಸೀ । ಬ್ರಹ್ಮಾ । ದಿಗಳೆಲ್ಲರನು ಮನ್ನಿಸೀ ॥ ಮಗುವೆ ನೀ ಬಾರೆನುತಾ । ಪ್ರಹಲ್ಲಾದನ । ಬಿಗಿದಪ್ಪಿದ ನಗುತಾ ॥ ಜಗದೊಳಗೆನ್ನಯ ಭಕ್ತರ ಬಾಧಿಪ । ರಿಗೆ ಭಯವನು ತೋರುತ ಭಂಜಿಸುವೆನು । ಅಗಲರಿಯದೆನ್ನಯ ಮರೆಹೊಕ್ಕರ । ಸುಗುಣರ ಲೋಕದಲೀ ॥ ನಿಗಮಸಿದ್ಧ ಸಹಜವು ಬೆದರದಿರೆಂ । ದೊಗುಮಿಗೆ ಹರುಷದಿಂದೆಲ್ಲರ ರಕ್ಷಿಸಿ । ಮಿಗೆ ಭಕ್ತಗೆ ವರಗಳ ಪಾಲಿಸುತಲಿ । ಜಗದೊಡೆಯನಂತರ್ಧಾನವಗೊಂಡನು ॥ ಶ್ರೀನರಹರಿ ॥ ೧೪ ॥ ಮಂಗಳ ಮಾಧವಗೇ । ಜಯತು ಜಯ । ಮಂಗಳ ಭೂಧವಗೇ ॥ ಮಂಗಳ ದಿವ್ಯಸಿಂಹಾ । ಜಯತು ಶುಭ । ಮಂಗಳ ಜಯರಂಹಾ ॥ ಮಂಗಳ ಶ್ರೀಕರುಣಾಕರ ಶುಭಕರ ಮಂಗಳ ಸುಖಸಂಪದ ವಾಂಛಿತಪ್ರದ । ಮಂಗಳ ಹಿರಣ್ಯಕಶ್ಯಪುಮರ್ದನ । ಸುತ್ತುಂಗ ಜನಾರ್ದನಗೇ ॥ ಮಂಗಳ ಕವಿಜನಪೋಷ ಸರ್ವೇಶಗೆ । ಮಂಗಳ ಮೂಲಿಕವಾಸಖಿಳೇಶಗ । ಮಂಗಳ ಶ್ರೀನರಸಿಂಹ ಸಲಹೊ ಜಯ । ಮಂಗಳ ಶ್ರೀಗುರುವೇಂಕಟನಾಯಕ ॥ ಶ್ರೀನರಹರಿ ಶರಣಾಗತರಕ್ಷಕ ದೀನಜನೋದ್ಧಾರೀ ॥ ೧೫ ॥ ಶ್ರೀ ॥

ಭಾಗವತದೊಳಗಣ ಭಕ್ತರತ್ನಮಾಲೆ.

॥ ೪೦ ॥ ರಾಗ ರೇಗುಪ್ತಿ, ಝಂಪೆತಾಳ. ಇದನ್ನು ಷಟ್ಪದಿಯಲ್ಲಿ ಹಾಡುವದು.

ಭಕ್ತಿಯಲಿ ಭಜಿಸು ಹರಿಯಾ । ಮನವೇ । ಭಕ್ತಿಯಲಿ ಭಜಿಸು ಹರಿಯಾ ॥ ಪಲ್ಲ ॥ ಭಕ್ತಿಯಲಿ ಭಜಿಸಿ ಸದ್ಭಕ್ತಜನರೆಲ್ಲರು ಅ। ನಿತ್ಯ ಸಂಸಾರದಿಂದುತ್ತರಿಸಿ ಸಕಲಸಂ । ಪತ್ತುಸಮೃದ್ಧಿ ಪರಮುಕ್ತಿಯಂ ಪಡೆದು ಹರಿಯೊತ್ತಿಲಿರುತಿಹರು ಕಂಡ್ಯಾ ॥ ಮನವೇ ಭಕ್ತಿಯಲಿ ಭಜಿಸು ಹರಿಯಾ ॥ ಅನುಪಲ್ಲ ॥ ಆಲದೆಲೆ ಮಂಚದಲಿ ಏಳು ಕೋಟಿ ಮಿತದ । ಬಾಲಕತ್ವದಿ ನಿದ್ರಾಲೋಲನಾಗುತ್ತ ಬಹು । ಗಾಢ ಪವಡಿಸಲಾಗ ಮೇಲಿ ನಾಭೀಕಮಲನಾಳದಿಂದಜನುದಿಸಲೂ ॥ ಮೇಲುನರಿದೆ ನುತಿಸೆ ಸಾಲೋಕದೊಳು ಜೀವ । ಜಾಲಸೃಷ್ಟಿಯಗೈವ ಮೂಲಾಧಿಕಾರವಂ । ಪಾಲಿಸಿದ ಪರಮಕೃಪಾಳು ಹರಿಯಂಘ್ರಿಗಳ

ಶೀಲದಿಂ ಭಜಿಸು ಕಂಡ್ಯಾ ॥ ಮನವೇ । ಭಕ್ತಿಯಲಿ ॥ ೧ ॥ ಉರುತರದ ತಪದಿಂದ ಹರನ ಮೆಚ್ಚಿಸಿ ದೈತ್ಯ । ಸುರಿಹಸ್ತವಂ ಪಡೆದು ಮರಳಿ ಕರವಂ ಶಿರದೊ । ಳಿರಿಸಲ್ಕೆತರೆ ಕಂಡು ಹರಣದಾಸೆಯೊಳೋಡಿ ಹರಿಗೆ ಮೊರೆ ಯಿಡಲು ಕೇಳೀ ॥ ಭರದಿ ಸ್ತ್ರೀರೂಪಾಗಿ ಕರವ ದುರುಳನ ಶಿರದೊ । ಳಿರಿಸುವಂದದಿ ಮನವ ಮರುಳುಗಾಣಿಸಿ ನಲಿದು । ಕರಿಗೊರಳನಂ ಕ್ಕಾದ ಕರುಣಾಂಬುನಿಧಿಯ ಪದಸರಸಿಜವ ಭಜಿಸು ಕಂಡ್ಯಾ ॥ ಮನವೇ । ಭಕ್ತಿಯಲಿ ॥ ೨ ॥ ಧಾರುಣೀಸುರರುಂಡು ಜಾರಿದ ಪ್ರಸಾದಮಂ । ಹಾರೈಸಿ ಮೆಲ್ಲುತಲಪಾರವೈರಾಗ್ಯ ಮನ । ದೋರಿ ಭಜಿಸಲು ಭವವಗಾರುಗೆಡಿಸುತ ವಿಧಿಯ ಸಾರಿ ಮಗ್ಗುಲೊಳು ಸೇರೀ ॥ ವಾರಿಜಾಸನನ ಸುಕುಮಾರ ನೆನಿಸಲು ದಯದಿ । ಸಾರವೀಣೆಯನಿತ್ತು ಚಾರುಕೀರ್ತನೆಗೊಲಿದು । ನಾರ ದಾಂಕನಿಗೊಲಿದ ನಾರಾಯಣನ ಪಾದ ವಾರಿಜವ ಭಜಿಸು ಕಂಡ್ಯಾ ॥ ಮನವೇ । ಭಕ್ತಿಯಲಿ ॥ ೩ ॥ ಮತಿಗೆ ಸಂತುಷ್ಟಿಯಂ ಜೊತೆಯಾಗ ದತಿಮನೋ । ವ್ಯಥೆಯಾಗೆ ನಾರದವ್ರತಿಪನೈತಂದು ಸನು।ಮತಿಸಿ ಉಪದೇಶ ಸಂಗತಿಯನರುಹುತ ಭೂತಹಿತನುಪ್ಪ ತೆರದಿ ಹರಿಯಾ ॥ ಮತಸಂಗ್ರ ಹದ ಭಾಗವತವ ರಚಿಸೆಂದು ಮುನಿ । ಪತಿ ಬೀಳುಗೊಡೆ ಧ್ಯಾನಸ್ಥಿತ ವ್ಯಾಸ ರೂಪದಿಂ । ದತಿದಯದಿ ಪೊರೆದ ಆಶ್ರಿತರಕ್ಷ ಹರಿಯ ಪದಶತದಳವ ಭಜಿಸು ಕಂಡ್ಯಾ ॥ ಮನವೇ । ಭಕ್ತಿಯಲಿ ॥ ೪ ॥ ಅವನಿಯಮರರ ಶಾಪನವಘುಡಿಸು ತಿರಲೇಳು । ದಿವಸದಲಿ ಸದ್ಗತಿಯನವುಕಬೇಕೆಂದಾಗ । ವಿವಿಧ ಪೌರಾಣ ಗಳ ನಿವಹಮೆನಿಸುವ ಭಾಗವತವನಂ ಶುಕನ ಮುಖದೀ ॥ ಭುವಿಪತಿ ಪರೀಕ್ಷಿತಂ ಕವಲುಮನವಲಿಯೆ ಅಶ । ನವ ತೊರೆದು ಲಾಲಿಸುತ ಶ್ರವಣ ಮಾತ್ರದಿ ಮುಕ್ತಿ। ಯುವತಿಯನ್ನಿತ್ತ ಮಾಧವನ ಪದಯುಗಳವಂ ಜವದಿಂದ ಭಜಿಸು ಕಂಡ್ಯಾ ॥ ಮನವೇ । ಭಕ್ತಿಯಲಿ ॥ ೫ ॥ ಧಿಂಕಿಟ್ಟು ಶರಧಿಯಂ ಭೋಂಕನೇ ದಾಂಟಿರುಳು । ಲಂಕಿಣಿಯ ಸಂಹರಿಸಿ ಪಂಕಜಾಂಬಕಿ ಸೀತೆ । ಗಂಕಿತದ ಮುದ್ರಿಕೆಯನುಂ ಕೊಟ್ಟು ಚೂಡಾಮಣಿಯಂ ಕೊಟ್ಟು ಕಡು ಮೋಹದೀ ॥ ಶಂಕಿಸದಶೋಕವನನಂ ಕಿತ್ತು ರಾವಣನ । ಲಂಕೆಯಂ ಸುಟ್ಟು ನಿಶ್ಶಂಕೆಯಿಂ ತಿರುಗಿ ಮಣಿ । ಯಂ ಕೊಡಲು ವಿಧಿಪಟ್ಟವಂ ಕೊಟ್ಟ ರಘುಜಪದಪಂಕಜವ ಭಜಿಸು ಕಂಡ್ಯಾ ॥ ಮನವೇ । ಭಕ್ತಿಯಲಿ ॥ ॥ ೬ ॥ ಪೆತ್ತ ಮಾತೆಯ ಸೆರೆಯನುತ್ತರಿಸಲೆನುತಾಗ । ಕಿತ್ತಮೃತಕಲಶವ

ಪೊತ್ತುತ್ತೈತರೆ ಸುರರ । ಮೊತ್ತದಧಿಪತಿಯು ಕಾಣುತ್ತ ಶಣಸಲು ಗಣಿಸ ದೆತ್ತಿ ನಡೆಯಲ್ಕಾಗಲೂ ॥ ಯುಕ್ತಿಯಿಂ ಬಲಿದು ಸುಡಿಯುತ್ತ ಭಾಷೆಗೆ ವಲಿಸಿ । ಉತ್ತಮಾಂಘ್ರಿಯ ವಾಹನತ್ವವಂ ಗರುಡಂಗೆ । ಚಿತ್ತವಿಸಿ ಕರುಣ ದಿಂದಿತ್ತ ಹರಿಯಂಘ್ರಿಗಳ ಚಿತ್ತದಲಿ ಭಜಿಸು ಕಂಡ್ಯಾ ॥ ಮನವೇ । ಭಕ್ತಿಯಲಿ ॥ ೭ ॥ ಉತ್ತಾನಪವನೃಪನ ಪುತ್ರ ರಾಜಾಸನವ ಪತ್ತಲೆಳವುತ್ತ ಕಾಣು ತ್ತಿರಲು ಮಲತಾಯಿ । ಧೂರ್ತವಚನನ ಪೇಳೆ ಚಿತ್ತದಲಿ ವೈರಾಗ್ಯವೆತ್ತಡವಿ ಗೈತರಲ್ಕೇ ॥ ಚಿತ್ರನಾರದ ಮುನಿಪನಿತ್ತ ಉಪದೇಶವಂ । ಪೊತ್ತರಣ್ಯದಲಿ ತಪವೆತ್ತಿರಲು ದಯದಿ ಉ । ನ್ನತ್ತ ಧ್ರುವಪದ ಪೃಥಮೊಳಿತ್ತ ಹರಿಯಂಘ್ರಿ ಗಳ ಚಿತ್ತದಲಿ ಭಜಿಸು ಕಂಡ್ಯಾ ॥ ಮನವೇ । ಭಕ್ತಿಯಲಿ ॥ ೮ ॥ ಮಗುತನ ದೊಳಾರಭ್ಯ ನಿಗಮಗೋಚರನ ಪದ । ಯುಗಳವಂ ನೆನವುತಿರೆ ವಿಗಡ ರಕ್ಕಸ ನಾನಾ । ಬಗೆಗಳಿಂ ಬಾಧಿಸಲು ಮಿಗೆ ವಜ್ರಸ್ತಂಭದಿಂದೊಗೆದು ನರ ಮೃಗನಾಗಲೂ ॥ ವಿಗಡ ದೈತ್ಯನ ಬಸುರ ಬಗೆಯುತಂ ಕರುಳ್ಗಳಂ । ತೆಗೆದು ವನಮಾಲಿ ಕೊರಳಿಗೆ ಧರಿಸಿ ಪ್ರಹ್ಲಾದ । ಗಗಣಿತದ ವರವಿತ್ತ ಸುಗುಣಾಂಬುನಿಧಿಯ ಪದಯುಗಳವಂ ಭಜಿಸು ಕಂಡ್ಯಾ ॥ ಮನವೇ । ಭಕ್ತಿಯಲಿ ॥ ೯ ॥ ಸುಧಾತ್ಮಜೆಯ ಬಿಡುವಡೆಸೆವ ನೀತಿಯ ಸುಡಿಯ । ದಶಶಿರಗೆ ಪೇಳೆ ಪೊರಡಿಸಲವನ ಸಂಸರ್ಗ । ಹಸನಲ್ಲವೆಂದು ತನ್ನೆಸವ ಲಂಕಾಪುರವನಸುರೇಂದ್ರ ಬಿಳುಗೊಂಡೂ ॥ ಅಸುರಾರಿ ರಾಮಪದಬಿಸಜ ದಾರಡಿಯಾಗ । ಲೆಸವ ಭಕ್ತಿಗೆ ಮೆಚ್ಚಿ ಶಶಿರವಿಗಳುಳ್ಳನಕ । ಶಾಶ್ವತ ಮೆನಿಸಿ ಲಂಕಾದಿ ದೆಶೆಯ ಪದವಿತ್ತವನ ಬಿಸಜವಂ ಭಜಿಸು ಕಂಡ್ಯಾ ॥ ಮನವೇ । ಭಕ್ತಿಯಲಿ ॥ ೧೦ ॥ ಜನಪನಿಂದ್ರದ್ಯುಮ್ನ ಮುನಿಯಗಸ್ತ್ಯನ ಶಾಪ । ವನು ತಾಳ್ದು ಗಜನಾಗಿ ವನದಿ ಕ್ರೀಡಿಸ ಚರಣ । ವನು ನೆಗಳ್ಪಿಡಿಯೆ ಬಹು ದಿನ ಕಾದಿ ದಣಿದು ಬಲು ತನುಗುಂದಿ ಮನದೊಳಾಗಾ ॥ ಅನುಪ ಮಿತ ಪರತತ್ವವನು ನೆನೆಯೆ ವಹಿಲದಿಂ । ವಿನತಾತ್ಮಜನನೇರಿ ಕ್ಷಣದೊಳೈ ತಂದು ನ । ಕ್ರನ ಬಾಯ ಸೀಳಿ ಕರಿಯನು ಕ್ಯಾದ ಹರಿಯ ಪದವನಜವಂ ಭಜಿಸು ಕಂಡ್ಯಾ ॥ ಮನವೇ । ಭಕ್ತಿಯಲಿ ॥ ೧೧ ॥ ಧಾರುಣೀಸುರ ವೇದ ಪಾರಕನಜಾಮಿಳನು । ಮಾರವಿರಹದಲಿ ಪೊಲೆಗಾರತಿಯ ಕೂಡಿ ನಾ । ಲ್ಕಾರು ಮಕ್ಕಳ ಪಡೆದಪಾರ ಪಾಪವ ಘಳಿಸಿ ಸಾರಿಬರೆ ಕಡೆಗಾಲವೂ ॥ ಘೋರಾಕೃತಿಯ ಯಮನ ಚಾರರಡಸಿರೆ ಭಯದಿ । ನಾರಾಯಣಾ ಎನಲು

ಹಾರಿಪೋದುದು ದುರಿತ । ಚಾರು ಮುಕುತಿಯನಿತ್ತ ಮಾರಜನಕನ ಪಾದ ವಾರಿಜವ ಭಜಿಸು ಕಂಡ್ಯಾ ॥ ಮನವೇ । ಭಕ್ತಿಯಲಿ ॥ ೧೨ ॥ ಶ್ರುತಿಮತ ದೆಕಾದಶೀ ವ್ರತವ ಪೃಥಿವಿಯೊಳು ನಿ । ಷ್ಷಿತದಿ ನಡೆಸಲು ದುರಿತ ಪಥ ವಳಿಯೆ ಜವನ ಸನು । ಮತದಿ ವಿಧಿಕೃತದ ಶತರತಿ ತೆರದ ಮೋಹಿನೀ ಸತಿ ಬಂದು ರುಕುಮಾಂಗದಾ ॥ ಪೃಥಿವಿಪನ ವಚನ ಸಂಗತಿಗೊಳಗು ಗೊಳಿಸಿ ಸು।ವ್ರತದ ಶಾಶ್ವತಕೆ ನಿಜಸುತನ ಶಿರವೀಯಲ್ ಸನು । ಮತಿಸುತ್ತ ಸುತನಿಂಗೆ ಹಿತಮುಕ್ತಿಯಿತ್ತ ರತೀಪತಿಪಿತನ ಭಜಿಸು ಕಂಡ್ಯಾ॥ ಮನವೇ । ಭಕ್ತಿಯಲಿ ॥ ೧೩ ॥ ಕುಂಭಿನಿಯೊಳ್ ದ್ವಾದಶಿಯು ಸಾಭ್ರಮದಿ ಸಾಧಿಸುತ। ಉಂಬ ಸಮಯದಿ ಶಿಷ್ಯರಂ ಬೆರಸಿ ದುರ್ವಾಸ । ನೆಂಬ ಋಷಿಯೈದಿ ತನ್ನಂ ಬಿಟ್ಟು ಭುಂಜಿಸಿದನೆಂಬ ನೆವನದಿ ಶಾಪಮುಂ ॥ ಮುಂಬರಿದು ಚಕ್ರವಂ ಬೆನ್ನಟ್ಟುತಿರ ಕಂಡು । ಕಂಬುಧರನೀರ್ವರನೊಡಂಬಡಿಸಿ ಶಾಪ ತನ । ಗಿಂಬು ಗೊಡಲೆಂದುಳುಹಿದಂಬರೀಷವರದನ ಪದಾಂಬುಜವ ಭಜಿಸು ಕಂಡ್ಯಾ॥ಮನ ವೇ । ಭಕ್ತಿಯಲಿ ॥ ೧೪ ॥ ಹಲವು ಯಜ್ಞವಗೈದು ಬಳಿಕ ಸುರಪನ ಪದವಿ । ಯೊಳಗೊಂಬಡತಿಧರ್ಮ ಬಲುಹಿನಿಂದೆಸಗುತಿರೆ । ತಿಳಿದು ವಾಮನನಾಗಿ ಖಳಖಳಿಪ ಕಾಂತಿಯಿಂ ತೊಳಗುತ್ತೈತರೆ ಕಾಣುತಾ ॥ ಬಲುಭಕ್ತಿಯಿಂದೆರಗ ಲಿಳೆಯು ಮೂರಡಿ ಬೇಡಿ । ಕೊಳುತ ಪದದ್ವಯದಿ ಭೂತಳವಳದು ಪಾತಾಳ । ಕ್ಕಿಳಿಸಿ ಬಲಿ ಮನೆಯ ಬಾಗಿಲ ಕ್ಕಾಯ್ದ ಹರಿಯ ಪದಜಲಜ ವಂ ಭಜಿಸು ಕಂಡ್ಯಾ ॥ ಮನವೇ । ಭಕ್ತಿಯಲಿ ॥ ೧೫ ॥ ಮಾನವಾಧಿಪ ಪಾಂಡುಸೂನುಗಳ ಸತಿಯಂ ಮ । ಹಾನುಸಭೆಯಲಿ ನಿಲಿಸಿ ಮಾನವಂ ಕಳೆಯುತಿರೆ । ಮಾನಿನೀಮಣಿ ಮನದಿ ಧ್ಯಾನಿಸಿದಳ್ ಪರಮಾತ್ಮ ನೀನೇ ಗತಿಯನಾಥೆಯಾ ॥ ಮಾನಾಭಿಮಾನವಾಧೀನ ನಿನ್ನದು ಎನಲು । ದಾನ ವಾಂತಕನಕ್ಷಯಾನುವಸ್ತ್ರವನಿತ್ತು । ಮಾನಿನಿಯ ಕ್ಕಾಯ್ದಿರ್ದ ಶ್ರೀನಿವಾಸನ ಪದಧ್ಯಾನವಂ ಭಜಿಸು ಕಂಡ್ಯಾ ॥ ಮನವೇ । ಭಕ್ತಿಯಲಿ ॥ ೧೬ ॥ ಮದ ಮುಖದ ಕೌರವನ ಸದನಕ್ಕೈದುತ ಸಂಧಿ । ಯೊದಗಿಸುವಡೈತರುತಲಧಿಕ ಭಕ್ತನ ಮನೆಗೆ । ಮುದದಿಂದಲೈದುತತಿ ಕ್ಷುಧೆಯಡಗಲೊಕ್ಕುಡುತೆ ಪದದ ಪಾಲನು ಕೊಳ್ಳುತಾ ॥ ಪದುಳದಿಂ ಸವಿದು ಮಿಕ್ಕುದ ನೆಲಕೆ ಬಿಸುಡಲತಿ । ಅದುಭುತದಿ ಬಹುಕ್ಷೀರದುದಧಿಯುಂದದಿ ಪರಿಯೆ । ವಿದುರನಂ ಕ್ಕಾಯ್ದ ಶ್ರೀ ಪದುಮನಾಭನ ಪಾದಪದುಮವಂ ಭಜಿಸು ಕಂಡ್ಯಾ ॥ ಮನವೇ । ಭಕ್ತಿ

ಯಲಿ ॥ ೧೭ ॥ ಕೊಳುಗುಳದೊಳುಭಯ ಬಲದೊಳಗೆಸೆವುತಿಹ ಬಂಧು ।
ಬಳಗವೀಕ್ಷಿಸಿ ದುರಿತಕಳುಕಿ ಧನುಶರವಿಕ್ಕೆಯೊ । ಳಿಳುಹೆ ನಿಜವಂ ತೋರಿ
ಕಳೆದು ಮನಭ್ರಮೆಯ ತಾ ತಿಳಿಸಿ ಗೀತೆಯನು ಬಳಿಕಾ ॥ ನಲಿದು ಸಾರಥಿ
ತನವನಳವಟ್ಟ ಕೌರವರ । ಕೊಲಿಸಿ ಭೂಮಿಯ ಭಾರವಿಳಿಸಿ ಸಖತನ
ಬಲಿದು । ಫಲುಗುಣನ ಕೃಪೆಗೈದ ನಳಿನಾಂಬಕನ ಪಾದನಳಿನವಂ ಭಜಿಸು
ಕಂಡ್ಯಾ ॥ ಮನವೇ । ಭಕ್ತಿಯಲಿ ॥ ೧೮ ॥ ಗಂಗೆಯಾತ್ಮಜನು ಸಮರಾಂಗಣ
ದೊಳಾಗ ಬಾ । ಣಂಗಳಂ ಫಣೆಗೆಸೆಯೆ ಮುಂಗೊಳಿಸಿ ಕೋಪದಿಂ ।
ಭಂಗಿಸುವೆನೆಂದು ಚಕ್ರಂ ಗಾಢದಿಂ ಕರದಿ ತಾಂ ನಲಿದಿರೆ ನಿಂದು ಬಳಿಕಾ ॥
ಮಂಗಳಾತ್ಮಕ ಭಕ್ತಸಂಗ ಶಾಂತತ್ವದ ಗುಂ । ಣಂಗಳುಳ್ಳವಳ ತೋರ್ಕಂಗ
ಳೊಡೆಯ ನೀನೆಂದು । ಮುಂಗುಡಿಸಿ ಸ್ತುತಿಸೆ ಭೀಷ್ಮಂಗಭಯವಿತ್ತನ
ಪದಂಗಳಂ ಭಜಿಸು ಕಂಡ್ಯಾ ॥ ಮನವೇ । ಭಕ್ತಿಯಲಿ ॥ ೧೯ ॥ ನಂದ
ನಂದನನೆನಿಸಿ ನಂದಗೋಕುಲದಿ ಖಳ । ವೃಂದಮಂ ಸವರೆ ಕೇಳ್ದಂದು
ಕಂಸಂ ಕರಸ । ಲೆಂದಷ್ಟಲಾಗ ಬರಲಂದು ಮಧುರಾಪ್ಪುರಿಗೊಳ್ಕೊಂದು ಬಹೆ
ನೆಂದು ಬಳಿಕಾ ॥ ನಂದಸುತ ಜಲಕೇಳಿಯಲಿ ವಿಬುಧಾವರ ಪೂರ್ಣ । ಮಂದಿರದ
ನಿಜರೂಪಮಂದವಂ ತೋರಿ ದಯ । ದಿಂದ ಅಕ್ರೂರಾಭಿವಂದನೆಗ ನಲಿದ
ಗೋವಿಂದನಂ ಭಜಿಸು ಕಂಡ್ಯಾ ॥ ಮನವೇ । ಭಕ್ತಿಯಲಿ ॥ ೨೦ ॥ ಸುರ
ವರರು ಕೂಡಿ ಹರಿಹರಬ್ರಹ್ಮರೊಳಗಾರು । ಪರತತ್ವವೆಂಬುದಂ ಪರಿಕಿ
ಸಲು ಬೇಕೆನುತ । ಪರಮಋಷಿ ಭೃಗುವು ವಿಧಿಶಂಕರರ ಪುರಕೈತರಲ್
ಜರೆಯೆ ಕೋಪದಿ ಶಾಪಿಸೀ । ಹರಿಯ ತಿಳುಹುತ ಹರಿಯ ಪುರಕೈದಿ
ವಕ್ಷಮಂ । ಭರದೊಳೊದೆಯಲು ಮುನಿಯ ಚರಣವಂ ಮುದ್ದಾಡಿ । ಪರಮ
ಶಾಂತಿಯ ತೋರ್ದ ಸರ್ವೋತ್ತಮನ ಪಾದಸರಸಿಜವ ಭಜಿಸು ಕಂಡ್ಯಾ ॥
ಮನವೇ । ಭಕ್ತಿಯಲಿ ॥ ೨೧ ॥ ಯದುಪನಂಗೆಯು ಶಾಪ ಬಾಧಿಸುವದಾಗೆ
ಮಧು । ಸೂದನಂ ಉದ್ಧವಗೆ ಬೋಧೆಯಂಗೊಟ್ಟು ಬಸು । ಆದಿ ತತ್ವಾರ್ಥ
ಸಂಪಾದವಂ ಅರುಹಿ ಭವಬಾಧೆಯಂ ಬಿಡಿಸಿ ಬಳಿಕಾ ॥ ಮೋದದಿಂ
ತಾನೊರದು ಸ್ವಾಧುಗಳ್ಗೆ ಸಂಸ್ಕೃತಿಯ । ಹಾದಿಯಿಲ್ಲೆಂದುದನು ಸಾಧಿಸಿದ್ಧವ
ಗೈದ । ಶ್ರೀಧರಾಚ್ಯುತ ಭಕ್ತರಾಧೀನ ಹರಿಯ ಶ್ರೀಪಾದವಂ ಭಜಿಸು ಕಂಡ್ಯಾ॥
ಮನವೇ । ಭಕ್ತಿಯಲಿ ॥ ೨೨ ॥ ಬಡತನಗಳಡಸಲತಿ ದೃಢದಿಂ ಸುಧಾಮನು
ನಿಜ । ಮಡದಿಯನುಮತದಿ ಹರಿಯೆಡೆಗೈಯ್ಯುತಿರೆ ದಯದಿ । ಪಿಡಿಯವಲ

ನುಂಡು ಶಿಂಗಡಣದೈಶ್ವರ್ಯಮಂ ಕಡುವೇಗದಿಂದಿತ್ತನಾ ॥ ಸಡಗರದ
ಗುರು ಕೇಳ್ದ ನುಡಿಯ ದಕ್ಷಿಣೆಗೆ ನೆಗ । ಳ್ದಿಡಿದು ಮಡಿದಿಹ ಸುತನ ತಡೆಯು
ದಾಕ್ಷಣದಿ ತಂ । ದೊಡನಿತ್ತ ಸಕಲ ಜಗದೊಡೆಯನಂಘ್ರಿಗಳೇಕ ದೃಢ
ವಿಡಿದು ಭಜಿಸು ಕಂಡ್ಯಾ ॥ ಮನವೇ । ಭಕ್ತಿಯಲಿ ॥ ೨೩ ॥ ಇನಿತು ಯುಗ
ಯುಗದಿ ಬಹುಜನ ಭಕ್ತಜನರೆಲ್ಲ । ರನುಪಮನ ಭಜಿಸುತ್ತ ಚಿಪ್ಪನಭೀಷ್ಟ
ಮುಕ್ತಿಯಂ । ನಸುವಿಂ ಪಡೆದರನಿತ ನೀನೆಂದು ವರ್ಣಿಸುವಡೆನಗಳವೆ ಶ್ರುತಿ
ಸಿದ್ಧದೀ ॥ ವನಜಾಸನಾದಿ ಮನುಮುನಿಸಿದ್ಧಸಾಧ್ಯರುಗ । ಳನಿಮಿಷಾಧಿಪ
ಮುಖ್ಯರನುಕರಿಸಿ ಭಕ್ತಿಯಿಂ । ವನಜಾಂಬಕನ ಭಜಿಸಿ ಮನದಿಷ್ಟ ಪಡೆದು
ಸುಖವನು ಭುಜಿಸುತಿಹರು ಕಂಡ್ಯಾ ॥ ಮನವೇ । ಭಕ್ತಿಯಲಿ ॥ ೨೪ ॥
ಅವನೀ ಭಾಗವತರತ್ನಮಾಲಿಯು ಪಠಿಸಿ । ಭಾವಶುದ್ಧದಿ ಹೇಳಿಕೇಳಿದತಿ
ಸಜ್ಜನರ । ಪಾಪಾಳಿಯ ಪರಿಹರಿಸಿ ಸಕಲ ಸಂಪದವಿತ್ತು ಕ್ಷ್ಮಾಪ ಕರುಣಾಬ್ಧಿ
ಬಿಡದೇ ॥ ಓವಿ ಮನವಿಡಿದೇಕ ನಿಶ್ಚಲದ ಭಕ್ತಿಯಿಂ । ದಾವಾಗಲುಂ
ನಾಮಸ್ಮರಣೆಗೈಯುತ್ತ ಮನದಿ । ಶ್ರೀವಸುಧೋರಮಣ ಗುರುವೆಂಕಟೇಶನ
ಪಾದರಾಜೀವವಂ ಭಜಿಸು ಕಂಡ್ಯಾ ॥ ಮನವೇ । ಭಕ್ತಿಯಲಿ ಭಜಿಸು
ಹರಿಯಾ ॥ ೨೫ ॥ ಶ್ರೀ ॥

ದೂರ್ವಾಸಭೋಜನ

॥ ೪೧ ॥ ರಾಗ, ರೇಗುಪ್ತಿ [ಧಾಟಿ:- ಆರು ಹಿತವರು ನಿನಗೆ ಮೂರು ಮಂದಿ] ಝಂಪೆತಾಳ

ಶ್ರೀಕೃಷ್ಣನೊಲಿದ ಭಕತರಿಗೆ ಭಯವಿಲ್ಲಾ ಅ । ಪ್ರಾಕೃತಾನಂದಸ್ವರೂ
ಪನಾಗಿರುವಾ ॥ ಶ್ರೀಕೃಷ್ಣನೊಲಿದ ॥ ಪಲ್ಲ ॥ ಕಪಟ ಜೂಜಿಂದ ಸೋಲಿ
ಸುತ ಸರ್ವಸ್ವಮಂ । ನಪಹರಿಸಿ ಕೌರವಂ ಕುಂತೀಕುಮಾರರಂ । ವಿಪಿನ
ಕಟ್ಟಲ್ಕೆಂಟು ವರುಷವಂ ಕಳೆದು ಯಮುನಾನದಿಯ ತಟದೊಳಿರಲು ॥
ದ್ವಿಪನಗರಕ್ಕೊಂದುದಿನ ದೂರ್ವಾಸನೈತರ । ಲ್ಕಪರಿಮಿತ ಸಂಭ್ರಮೋತ್ಸಾಹ
ದಿಂದಿದಿರ್ಗೊಂಡು । ತಪಸಿಯಂನೆಂಟುಸಾವಿರ ಶಿಷ್ಯಸಮುದಾಯಕೊಂದಿ
ಸುತ ಕರತಂದನೂ ॥ ಶ್ರೀಕೃಷ್ಣ ॥ ೧ ॥ ಸುರುಚಿರಾಸನದಿ ಕುಳ್ಳಿರಿಸಿ ಮಧು
ಪರ್ಕಮಂ । ವಿರಚಿಸುತ ಷಡ್ರಸಾದಿಗಳ ಭೋಜನವಿ ಸ । ತ್ಕರಿಸಿ ಸಂತುಷ್ಟಿ
ಯಂ ಬಡಿಸೆ ಮುನಿನಾಥ ಮೆಚ್ಚಿದೆ ವರವ ಬೇಡುಯೆನಲೂ ॥ ತೆರಳುವದು

ಪಾಂಡವರ ಬಳಿಗೆ ನೀವ್ ಭೋಜನಾಂ । ತರ ಸಮಯಕ್ಕೆಂದು ಬಿನ್ನೈಸಲೊ
ಪ್ಪುತಲಾಗ । ಮರುದಿವಸ ಶಿಷ್ಯರಂ ವೆರಸಿ ನಡೆತಂದ ಕುಂತಿಜರಿರುವರಣ್ಯ
ದೆಡೆಗೇ ॥ ಶ್ರೀಕೃಷ್ಣ ॥ ೨ ॥ ಸದಮಲದ ಭಕ್ತಿಯಿಂ ಸೋದರರ್ವೆರಸಿ ಮುನಿ ।
ಪದಕೆರಗಿ ದರ್ಭಾಸನದಿ ಕುಳ್ಳಿರಿಸುತರ್ಘ್ಯ । ಮಧುಪರ್ಕದಿಂದ ಸತ್ಕರಿಸಿ
ಮಜ್ಜನಕಖಿಳರಂ ಬೀಳುಗೊಟ್ಟು ಬಳಿಕಾ॥ ಸುದತಿಯಂ ಕರಸುತ್ತೈತಹ ಭಾವ
ವಂ ತಿಳಿದು । ಬೆದರಿದಂ ಮನದೊಳಗೆ ಬಂದ ದೂರ್ವಾಸಸಾವ್ಯ । ರುದರದ
ಕ್ಷುಧಾಗ್ನಿಯಂ ತಂಪಿಸದಿರಲ್ ಕೋಪಿಸುವನೆಂದು ಚಿಂತಿಸಿದನೂ ॥
॥ ಶ್ರೀಕೃಷ್ಣ ॥ ೩ ॥ ರುದ್ರನೀತಂ ಸುರಪನತುಳ ಸಂಪದವಂ ಸ । ಮುದ್ರ
ದೊಳಗದ್ದಿದಂ ಭೂಪಂಬರೀಷನಂ । ಮುಳುಗಿಸಲ್ ಚಕ್ರದಿಂದುಳಿದನಲ್ಲದೆ
ಇವನ ರೋಷದಿಂದುಳಿದರುಂಟೇ ॥ ಅಪ್ರಘರನೇ ಬಲ್ಲನೆನುತಾಗ ಕಳವಳಿಸ ।
ಲುಮ್ಮೃಕ್ತ ಸುರಭಿಯಂ ತರಹೆನೆಂದು ಭೀಮನೆನ । ಲದ್ರಜಿತ ಮಲ್ಲ ಶ್ರೀ
ಕೃಷ್ಣನಲ್ಲದೆ ಕ್ಯಾವರಿಲ್ಲೆಂದನಾ ಧೌಮ್ಯನೂ ॥ ಶ್ರೀಕೃಷ್ಣ ॥ ೪ ॥ ಎನಲರಸಿ
ಸುದಿದಳೆಮ್ಮವಸರಕ್ಕೊದಗುತಿಹ । ಜೂಣೆಗಾರ ಕೃಷ್ಣನಂ ಭಾವಿಸುವೆ
ನೀಗಳೆಂ । ದೆನುತರ್ಕಮಂಡಲವ ನಿರೀಕ್ಷಿಸುತ ನಿಮಿಲಿತೇಕ್ಷಣೆಯಾಗಿ ಕರ
ಪುಟವನೂ ॥ ಅನುಸರಿಸಿ ಮಸ್ತಕದೊಳಿಟ್ಟು ಚಿನ್ಮಯಮೂರ್ತಿ । ಹೃದಯ
ದೊಳು ಧಾರಣಂಗೈದೇಕದೃಢದಿ ಧಾ । ರುಣಿಯಮೇಲ್ವೂರಿ ಪದದುಂಗು
ಟದಮಲಚಿತ್ತದಿ ನೆನೆವೀಕ್ಷಿಸುತ್ತ ಹರಿಯಾ ॥ ಶ್ರೀಕೃಷ್ಣ ॥ ೫ ॥ ಕಾಮ
ಶತ್ಕೋಟಿ ಲಾವಣ್ಯನಂ ಪುಣ್ಯನಂ। ತಾಮರಸಸಂಭವನ ತಾತನಂ ಖ್ಯಾತನಂ।
ರಾಮಣೀಯಕ ಕೋಮಲಾಂಗನಂ ರಂಗನಂ ಮಂಗಲ ತರಂಗವೆನಿಪಾ ॥
ಶ್ರೀಮನೋಹರ ಸತ್ಕಲಾಪನಂ ಭೂಪನಂ । ಕಾಮಿತಪ್ರದ ಮೇಘಶ್ಯಾಮನಂ
ರಾಮನಂ । ಪ್ರೇಮಸದ್ಭಕ್ತ ಸಂತೃಷ್ಣನಂ ಕೃಷ್ಣನಂ ನೆನೆದಳಾ ಪಾಂಚಾಲಿ
ಯೂ ॥ ಶ್ರೀಕೃಷ್ಣ ॥ ೬ ॥ ಘೋರ ತಾಪತ್ರಯವಿದೂರ ದನುಜಾಠವಿ
ಕು । ಠಾರ ಸಕಲಾಗಮವಿಚಾರ ರಂಜಿತ ಜನೋ । ದ್ಧಾರ ಧರಣೀಧರ
ನಪಾರಲೀಲಾ ಗೋಪಿಜಾರ ಪಾವನಚರಿತನೇ ॥ ನಾರಪಿತ ಮೋಹನಾಕಾರ
ಭಯಕೃದ್ಭಯಸಂ । ಹಾರ ಮಹಶರಧಿಗಂಭೀರ ತ್ರೈಭುವನದಾ । ಧಾರ
ವರಕೀರ್ತಿವಿಸ್ತಾರ ಕರುಣಾಬ್ಧಿ ಶ್ರುತಿಸಾರ ವೈದೋರೆಂವಳೂ ॥ ಶ್ರೀಕೃಷ್ಣ
॥ ೭ ॥ ಶ್ರುತಿತತಿಗಳಿಗಗಮ್ಯ ಸನ್ನುತ ತಪೋನಿಷ್ಠತರ । ಮತಿಗಗೋಚರ
ನಪ್ರಾಕೃತರೂಪ ಭಕ್ತನಂ । ತತಿರಕ್ಷ ಸತತ ಸದ್ಗುಣಭರಿತ ದೇವ ದೇವಕೀ

ಸುತ ಸುರಾರ್ಚಿತ ಚರಣನೇ ॥ ಗತನಯನನಾತ್ಮಜನ ಕೃತಕದಿಂದೈತಂದ ।
ಯತಿಯಭ್ಯಾಗತನಂ ತೃಪ್ತಿ ಪಡಿಸದಿರಲ್ಕಪ । ಹತಿಯೆಸಗದಿರಸು ನೀ
ನತಿದಯದಿ ಶ್ರೀಲಕ್ಷ್ಮೀಪತಿಯೆ ಮೈದೋರೆಂದಳೂ ॥ ಶ್ರೀಕೃಷ್ಣ ॥ ೮ ॥
ತರಳ ಧ್ರುವ ಪ್ರಹ್ಲಾದ ಬಲಿ ವಿಭೀಷಣರನು । ಧರಿಸಿದಂದದಲಂಬರೀಷನಂ
ಕ್ಯಾದಂತೆ । ಮರೆಯದೀಕ್ಷಣದಿ ಮೈದೋರನಾಥರ ನಾಥನೆಂದು ದ್ರೌಪದಿ
ಧ್ಯಾನಿಸೇ ॥ ಅಂತನಾಗಲ್ ಜಗದ್ವಂತ ಶ್ರೀಕೃಷ್ಣ ತವ । ಕರುಣವಿನ್ನೆಂತೊ
ಭಕ್ತರ ಮೇಲೆ ತೀವ್ರದಿಂ । ಗರುಡವಾಹನನಾಗಿ ಬಂದನಾಗಲ್ ಸಕಲ ಸುರ
ವರರು ಶ್ರೇಯೆನ್ನಲೂ ॥ ಶ್ರೀಕೃಷ್ಣ ॥ ೯ ॥ ಅತ್ತಲರಸುವ ನಿಗಮಪಾಟಗಳ
ಕೋಟಿಗಳ। ಚಿತ್ತಕೊದಗುತ್ತಿಪ ಪರಮಾತ್ಮ ನಿತ್ಯಾತ್ಮ ಪರ। ವಸ್ತು ತಾನೆಂಬೀ
ಮಹಾತತ್ವಮುಂ ಜಗಕೆ ತಾನಾಗ ಬೆರಸಿ ಮೆರಸೀ ॥ ಇತ್ತಲೀ ಪಾಂಚಾಲೆ ನೆನ
ದಾಗ ಘನಬೇಗ। ಚಿತ್ತವಿಸುವೀ ಮನುಜನಾಟಕದ ಪಾಟಕದ। ಭಕ್ತಸುಲ್ಲಭ
ನೆನಿಪ ಮೂರ್ತಿಯುಂ ಅರ್ತಿಯಿಂ ಕಂಡರಾ ಪಾಂಡುಸುತರೂ ॥ ಶ್ರೀಕೃಷ್ಣ॥
॥ ೧೦ ॥ ಪದಕರಗಳನಿಬರಂ ತೆಗದಪ್ಪಿ ಸಂತೈಸು । ತ್ತಧಿಕತರ ಪ್ರೇಮದಿಂ
ದ್ರೌಪದಿಯು ಬಳಿಗೈದಿ। ಮುದದಿ ನುಡಿಸಿದನಿದಾ ತಂಗಿಯೇ ಯೆನ್ನ ಬರಿಸಿದ
ಕಾರಣವನುಸುರೆನೇ ॥ ಹೃದಯದೋಳ್ ಧ್ಯಾನಿಸುವ ಚಿನ್ಮಯಾತ್ಮಕನ ಬಾ।
ಹ್ಯದಿ ಕಂಡು ಕಣ್ದೆರೆದು ಕಮಲಾಕ್ಷಿ ಭಕ್ತಿಭಾ। ವದಿ ಚರಣಕೆರಗಿ ಜಯ
ಜಯ ನಮೋ ಜಯ ಭಕ್ತವತ್ಸಲ ನಮೋ ಎಂದಳೂ ॥ ಶ್ರೀಕೃಷ್ಣ ॥ ೧೧ ॥
ಕೃತಕದಿಂದೈತಪ್ಪ ಸಾಧಿಸಿ ಬಂದ ದೂರ್ವಾಸ । ನತುಲ ಕ್ಷುದ್ಬಾಧೆಯಂ
ತಂಬಿಸಲುಪಾಯವಂ । ಮತಿಗೆ ಗೋಚರಿಸಲಿಲ್ಲದರಿಂದ ತವ ಪದಾಬ್ಜಗಳ
ಮರೆಹೊಕ್ಕನೆನುತಾ ॥ ನುತಿಸುತಿಹ ಪಾಂಡವರ ರಾಣಿಯಾ ಶಿರವ ನೆಗ ।
ಹುತ ನುಡಿವನೆಲೆ ತಂಗಿ ನಿನಗೇನಹುದು ಬಂದೆನೀ ತೃ।ಪ್ತಿ ಪಡಿಸುವೆನೆಂದು
ಮೇಣುಂಟುಳ್ಳದಂ । ವಂಚಿಸದೆ ತನಗುಣಿಸಬೇಕೆನುತ ಹರಿ ನುಡಿದನೂ ॥
ಶ್ರೀಕೃಷ್ಣ ॥ ೧೨ ॥ ಚರವಚರಭರಿತನಾಗಿಹ ನಿತ್ಯತೃಪ್ತನಂ । ಪರಿತೋಷ
ಪಡಿಪೆನೆಂತೆನಲಿಹುದೆ ಸಾಕು ಕ್ಷುಧೆ। ಯುರವಣಿಸುತಿದೆ ನಿನ್ನ ಪಾತ್ರದೊಳ
ಗೇನುಳ್ಳವರ ವಂಚಿಸದೆಯುಣಿಸೆಂದನೂ ॥ ತರುಣಿ ತತ್ಪಾತ್ರದೊಳು ಕೈ
ಯಿಕ್ಕುತರಸಲ್ಕಳ । ವಿರುವ ಕಿಂಚಿತ್ಶೇಷ ಶಾಕಪತ್ರವನು ಶ್ರೀ । ವರನ
ಕರಕಮಲಹಸ್ತದೊಳಿಡಲ್ ಬ್ರಹ್ಮಾರ್ಪಣಯೆನುತ ಸವಿದುಂಡನೂ।ಶ್ರೀಕೃಷ್ಣ
॥ ೧೩ ॥ ಚರವಚರಭರಿತನಾಗಿಹ ನಿತ್ಯತೃಪ್ತನುಂ । ಪರಿತುಷ್ಟನಾಗಿ ಧರ್ಮನೆ

ತೇಗಲತ್ತ ಮುನಿ । ವರ ಕೃತ್ತಿವಾಸ ಮುಖ್ಯರ ಕ್ಷುಧೆಗಳಡಗುತ್ತೈಗಳುಬ್ಬು
ತುದರಂಗಳೂ ॥ ಭರಿತವಾಗಲ್ತೀಗಮು ಮುನಿಪ ದೂರ್ವಾಸನ್ನೈ । ತರುತಖಿಳ
ಶಿಷ್ಯಸಮುದಾಯದೊಡನೈತಂದು । ಅರರ ಗೋವಿಂದ ಬಂದನೆ ಎನುತಿರಲ್
ಕಾಣುತಿವರಿದ್ದನಾ ಕೃಷ್ಣನೂ ॥ ಶ್ರೀಕೃಷ್ಣ ॥ ೧೪ ॥ ಮುನಿವರನ ಚರಣ
ಕೆರಗಲ್ಕೈತರಲ್ಕಾಣುತ । ಮುನಿಪ ತೊಲಗುತೊಂದಿಸಲುರುಬೆ ಬಿಡದಾಲಿಂ ।
ಗನ ಗೈದು ಕುಳ್ಳಿರಿಸುತಿಂತೆಂದ ತರುಮೂಲದೆಡೆಗಳೆಲ್ಲವು ತಂಪಿಸೆ ॥
ಕೊನೆಗಳ್ಗೆ ಬೇರಿ ನೀರೆರೆಯಲುಂಟೇ ಸಕಲ । ಅಣುರೇಣುತೃಣಕಾಷ್ಟಭರಿತ
ಸಂತುಷ್ಟಿಸಲು । ವನಜೋದ್ಭವಾದ್ಯರ ತೃಪ್ತಿಸಬಹುದೆ ಕೃಷ್ಣ ತವ ಮಹಿಮೆಗೆ
ನಮೋ ಎಂದನೂ ॥ ಶ್ರೀಕೃಷ್ಣ ॥ ೧೫ ॥ ಕರುಣದಿಂ ಭೋಜನವ ಕೈಕೊಂಬು
ದೆನುತ ಪದ । ಕೆರಗಲರಸಂಗೆಂದನೆಲೆ ಭೂಪ ನಿಮ್ಮನುಂ । ಪರಿಪಾಲಿಸುವ
ಕೃಷ್ಣನಿರಲನ್ಯರಿಂದೇನಹುದು ಕುಹಕೋಪಾಯವಂ ॥ ಕುರುರಾಯನೆಸಗ
ಲೈತಂದೆ ಶ್ರೀವಿಷ್ಣುಪದ । ದರುಶನವದ್ಯಾತು ಸುಖವಹುದಿನ್ನು ನಿಮಗೆನುತ ।
ಹರಿಗೆ ನಮಿಸುತ್ತಖಿಳ ಶಿಷ್ಯರೊಡಗೂಡಿ ತೆರಳಿದನಾಗ ದೂರ್ವಾಸನೂ ॥
॥ ಶ್ರೀಕೃಷ್ಣ ॥ ೧೬ ॥ ಮಂಗಳವದ್ಯಾತು ಮುರಹರ ತನ್ನ ಮೈದುನರಾ ।
ಲಿಂಗಿಸುತ ದ್ರೌಪದಿಯ ಸಂತೈಸಿ ದಯದಿ ಯದು । ಪುಂಗವಂ ದ್ವಾರಕಿಗೆ
ತೆರಳ್ದನಿತ್ತಲು ಪಾಂಡುಸುತರೀರ್ದರತಿ ಮೋದದಿ ॥ ತುಂಗಬಲವಾಯು
ರಾರೋಗ್ಯಸುಖ ಸಕಲ ವಿ । ಷ್ಣುಂಗಳುಂ ಪರಿಹರಂ ಬರದೋದಿ ಕೇಳ್ದ
ಜನ । ರಿಂಗೆ ಸಂಪದವಿತ್ತು ಪೊರೆವ ಮೂಲಿಕೆಯ ಶ್ರೀಗುರು ವೆಂಕಟೇಶ
ಮುದದಿ ॥ ಶ್ರೀಕೃಷ್ಣನೊಲಿದ ಭಕತರಿಗೆ ಭಯವಿಲ್ಲಾ ॥ ೧೭ ॥ ಶ್ರೀ ॥

॥ ೪೨ ॥ [ಧಾಟಿ:- ವಾಸುದೇವಂ ಸದಾನಂದತೀರ್ಥಂ] ಲಘುವಾಯುಸ್ತುತಿಯಂತೆ.

ಅಚ್ಯುತಾನಂತ ಗೋವಿಂದ ನಾರಾಯಣಾ । ಅಚ್ಯುತಾನಂತ ಗೋ
ವಿಂದ ನಾರಾಯಣಾ ॥ ಪಲ್ಲ ॥ ನವವಿಧ ಭಕ್ತಿಯಿಂ ದಿವಸದಿ ದಿವಸದೀ ।
ಶ್ರೀಧರಂಗರ್ಪಿಸಿ ಮುಕ್ತಿಯುವತಿಯಾ ಸಾಧಿಸೀ ॥ ಅಚ್ಯುತಾನಂತ ॥ ೧ ॥
ಹರಿಕಥಾಶ್ರವಣದೀ ಮರದಯೇಳ್ದಿನದೊಳು । ಪರೀಕ್ಷಿತರಾಯನು ಪರಗತಿ
ಗೈದಿದ ॥ ಅಚ್ಯುತಾನಂತ ॥ ೨ ॥ ಅರ್ಥಿಸಿ ಶ್ರೀಹರಿ ಕೀರ್ತನೆಯಿಂದಲಿ ।
ಪ್ರವರ್ತಿಸಿ ನಾರದಾ ಸಾರ್ಥಕನಾದನೂ ॥ ಅಚ್ಯುತಾನಂತ ॥ ೩ ॥ ಹರಿ

ನಾಮಸ್ಮರಣೆಯ ಮರೆಯದೆ ಪ್ರಹ್ಲಾದ । ನಿರತ ಗೈಯುತಲೀ ಹರಿಯ ನೊಲಿಸಿದನೂ ॥ ಅಚ್ಯುತಾನಂತ ॥ ೪ ॥ ಶ್ರೀವಧೂವಗಲದೇ ದೇವನಾ ಚರಣದ । ಸೇವೆಯುಗೈಯುತ್ತ ಪಾವನೆಯಾದಳೂ ॥ ಅಚ್ಯುತಾನಂತ ॥ ೫ ॥ ಶ್ರೀಜನಾರ್ದನನಾ ಪೂಜಿಸೆ ಪೃಥುರಾಯನು । ಮೂಜಗದೊಳ್ಗಹು ಪೂಜಿತನಾದನು ॥ ಅಚ್ಯುತಾನಂತ ॥ ೬ ॥ ವಂದಿಸೀ ವಂದಿಸಿ ಬಂದನಕ್ರೂರನು । ಭಕ್ತಿಯಿಂ ಜಲದೊಳು ಮುಕುಂದನ ಕಂಡನೂ । ಅಚ್ಯುತಾನಂತ ॥ ೭ ॥ ರಾಮನ ದಾಸ್ಯತ್ವ ಪ್ರೇಮದಿ ರಚಿಸೀನಿ । ಸ್ಸ್ರೀಮ ಹನುಮಂತ ನಿಷ್ಕಾಮ ತಾನಾದನೂ ॥ ಅಚ್ಯುತಾನಂತ ॥ ೮ ॥ ತಕ್ಕಸಾರಯನು ರಥಕ್ಕೆ ಸಾರಥಿಯ ಗೈ । ವೃತ್ತ ಅರ್ಜುನನು ತಾನುತ್ತಮನೆನಿಸಿದ ॥ ಅಚ್ಯುತಾನಂತ ॥ ೯ ॥ ಭಾವದೀ ಬಲಿಯು ಆತ್ಮನಿವೇದನನಗೈದು । ಭೂವಳಯದಿ ಭಕ್ತಿಕೋವಿದನಾದನೂ ॥ ಅಚ್ಯುತಾನಂತ ॥ ೧೦ ॥ ಚ್ಯುತರಹಿತಚ್ಯುತ ಮಿತರಹಿತಾನಂತ । ಪ್ರತಿರಹಿತ ಗೋವಿಂದ ಹಿತಬಂಧೋ ಸದಾನಂದ ॥ ಅಚ್ಯುತಾನಂತ ॥ ೧೧ ॥ ನಾಮತ್ರಯವಿದ ನೇಮದಿ ಜಪಿಸಿದ । ರಾಮಹಾಪಾಪ ನಿರ್ಧೂನಮ ಪ್ರಾಯಶ್ಚಿತ್ತಾ ॥ ಅಚ್ಯುತಾನಂತ ॥ ೧೨ ॥ ಒಂದೊಂದು ವಿಧ ಭಕ್ತಿಯಿಂದ ಪೂಜಿಸುತಲಾ । ನಂದದಿ ಮುಕ್ತಿಗೆ ಸಂದರು ಭಕ್ತರೂ ॥ ಅಚ್ಯುತಾನಂತ ॥ ೧೩ ॥ ಒಂಭತ್ತು ಭಕ್ತಿಯಿಂ ಬಿಡದನುದಿನದಲಿ । ನಂಬಿ ಭಜಿಸಿದರೆ ಏನೆಂಬೆ ನವರ ಭಾಗ್ಯಾ ॥ ೧೪ ॥ ಧರೆಯೊಳು ಮೂಲಿಕಪುರದಿ ನೆಲಸಿದ । ಶರಣರ ರಕ್ಷಕ ಗುರು ವೆಂಕಟೇಶನೂ ॥ ಅಚ್ಯುತಾನಂತ ಗೋವಿಂದ ನಾರಾಯಣಾ । ಅಚ್ಯುತಾನಂತ ಗೋವಿಂದ ನಾರಾಯಣಾ । ೧೫ ॥ ಪ್ರ ॥

॥ ಆಚಮನಸ್ಯ ನಾರಾಯಣಪದ್ಯಗಳು ॥

॥ **೪೩** ॥ ರಾಗ, ಕಾಂಬೋಧಿ [ಧಾಟಿ:- ಹರಿನಾರಾಯಣ ಹರಿ ನಮೋ] ತ್ರಿಪುಟತಾಳ

ಶ್ರೀಶ ಕ್ಷೀರಾರ್ಣವನಿಲಯ ಮಹ । ಶೇಷಶಯ್ಯ ಸುರೇಶಪೋಷಯ । ಕ್ಲೇಶನಾಶನ ಕರುಣಾನಿಧಿ ಶ್ರೀ । ಕೇಶವಾಯ ನಮೋನ್ನಮೋ ॥ ಹರಿನಾರಾಯಣ ಹರಿ ನಾರಾಯಣ ಹರಿನಮೋ ನಾರಾಯಣಾ ॥ ೧ ॥ ಕಾಯಕ್ಲೇಶವಿದೂರ ಮುಕ್ತಿಪ್ರ । ದಾಯಕಾನತಪ್ರಿಯ ಸುರಮುನಿಗೇಯ ಗುಣಗಣನಿಲಯ ಶ್ರೀನಾ । ರಾಯಣಾಯ ನಮೋನ್ನಮೋ ॥ ಹರಿನಾರಾಯಣ ॥ ೨ ॥ ಮೋದಭರಿತಾನಂದ ಸುಖಮಯ । ಬೋಧಿತಾಮಲಚರಿತ ಕರುಣಾಂಭೋಧಿ ಕಾರಣ ವಿಶ್ವರೂಪ ಶ್ರೀ । ಮಾಧವಾಯ ನಮೋನ್ನಮೋ ॥ ಹರಿನಾರಾಯಣ ॥ ೩ ॥ ದೇವದೇವೋತ್ತಮ

ಸಕಲ ನಿಗ । ಮಾವಳೀಪ್ರತಿಪಾದ್ಯ ಸುಜನಸಂ । ಜೀವ ಸರ್ವಗ ಸರ್ವಗತ ಶ್ರೀ । ಗೋವಿಂದಾಯ ನಮೋನ್ನಮೊ ॥ ಹರಿ ನಾರಾಯಣ ॥ ೪ ॥ ಜಿಷ್ಣು ಮುಖ್ಯಾಮರಕುಲೇಷ್ಟ ಸು । ಪೂರ್ಣ ಪಂಕಜನೇತ್ರ ಸ । ರ್ವಪ್ರವಣೀ ಪದ ವೈಕುಂಠ ಶ್ರೀ । ವಿಷ್ಣುದೇವ ನಮೋನ್ನಮೊ ॥ ಹರಿ ನಾರಾಯಣ ॥ ೫ ॥ ಅಬ್ಧಿ ಮೂರುತಿ ಅಮೃತಬಿಂದು ಕ್ರ । ಮಾದ್ಯಕುಲ ಸಂಹರಣ ಸುಜನೋ । ಲ್ಹಾದ ನಿರುಪಮ ನಿತ್ಯ ಶ್ರೀಮಧು । ಸೂದನಾಯ ನಮೋನ್ನಮೋ ॥ ಹರಿ ನಾರಾಯಣ ॥ ೬ ॥ ಶಕ್ರಸ್ಥಾಪನಾಚಾರ್ಯ ಸುರಕುಲ । ಚಕ್ರವರ್ತಿ ಚರಾಚರಾ ಸ್ಥಿತ । ಶುಕ್ರನೇತ್ರವಿನಾಶ ಶ್ರೀತ್ರಿ । ವಿಕ್ರಮಾಯ ನಮೋನ್ನಮೊ ॥ ಹರಿ ನಾರಾಯಣ ॥ ೭ ॥ ಭೂಮಿಯಾಚಕ ಭುವನನಾಯಕ । ಕೋಮಲಾಂಗ ಸದ್ಭಕ್ತಜನ ಸು । ಪ್ರೇಮ ಪಾವನ ಪುಣ್ಯನಾಮ ಶ್ರೀ । ವಾಮನಾಯ ನಮೋನ್ನಮೊ ॥ ಹರಿ ನಾರಾಯಣ ॥ ೮ ॥ ಭೂಧರಣಧರ ಭವ್ಯಸುತ ಕಮ । ಲೋದರಾಶ್ರಿತಕಲ್ಪಭೂಜ । ಗೋಪಲೀಲಾ ಚಿತ್ರಚರಿತ । ಶ್ರೀಧರಾಯ ನಮೋನ್ನಮೊ ॥ ಹರಿ ನಾರಾಯಣ ॥ ೯ ॥ ಋಷಿ ಮುಖ್ಯಾದ್ಯವತಾರ ಮಹಿಕ । ಲ್ಮಷನಾಶನ ಕಥನ ಸತತ ಹ । ರುಷವರ್ಧನ ಲೋಕಪಾಲ ಶ್ರೀ । ಹೃಷಿಕೇಶಾಯ ನಮೋನ್ನಮೊ ॥ ಹರಿ ನಾರಾಯಣ ॥ ೧೦ ॥ ಪದ್ಮಸಖ ಶತಕೋಟಿ ಭಾಸುರ । ಪದ್ಮಸಂಭವಜನಕ ಸುಖಕರ । ಪದ್ಮಧರ ಪುರುಷಾರ್ಥದಾತ ಶ್ರೀ । ಪದ್ಮನಾಭ ನಮೋನ್ನಮೋ ॥ ಹರಿ ನಾರಾಯಣ ॥ ॥ ೧೧ ॥ ಕೋಪಕಲ್ಪಿತ ಸೂರಕುಲಜ ಯ । ಶೋದನಂದಕುಮಾರ ಗೋಕುಲ । ಮೋದಭರಿತಾನಂದ ಶ್ರೀದಾ । ಮೋದರಾಯ ನಮೋನ್ನಮೊ ॥ ಹರಿ ನಾರಾಯಣ ॥ ೧೨ ॥ ಅಂಕುಶಧ್ವಜ ವಜ್ರಮುಕರರೇ । ಖಾಂಕಿತಾಮಲ ಚರಿತ ಕಮಲಕ । ಲಂಕ ಸುರಗಂಗಾಜನಕ ಶ್ರೀ । ಸಂಕರುಷಣ ನಮೋನ್ನಮೊ ॥ ಹರಿ ನಾರಾಯಣ ॥ ೧೩ ॥ ವಾಸವಾದಿ ಸಮಸ್ತ ಸುರಕುಲ । ವಾಸಪ್ರದ ಮುನಿಜನ ಹೃತ್ಕಮಲನಿ । ವಾಸ ನಿತ್ಯಾನಂದಮಯ ಶ್ರೀ । ವಾಸುದೇವ ನಮೋನ್ನಮೋ ॥ ಹರಿ ನಾರಾಯಣ ॥ ೧೪ ॥ ಚೈದ್ಯಮರ್ದನ ನಂತ ವೇದಾ । ವೇದ್ಯನನುಪಮ ಭಕ್ತಜನಸಂ । ಪಾದ್ಯ ಸುಲಭ ಶ್ರೀಶಿವಕರ ಶ್ರೀ । ಪ್ರದ್ಯುಮ್ನಾಯ ನಮೋನ್ನಮೊ ॥ ಹರಿ ನಾರಾಯಣ ॥ ೧೫ ॥ ಮನ ವಚನ ಕಾಯೈಕ ತ್ರಿಕರಣಾ । ವರಣ ಭಕತಜನ ವಾಂಛಿತಪ್ರದ । ಸನಕ ನಾರದಮೌನಿನುತ ಶ್ರೀ । ಅನಿರುದ್ಧಾಯ ನಮೋನ್ನಮೊ ॥ ಹರಿ ನಾರಾಯಣ

॥ ೧೬ ॥ ಚಿತ್ತಜಾಪಿತ ಚೇತನಾತ್ಮಕ । ಕೀರ್ತನಪ್ರಿಯ ಕರುಣಸಾಗರ । ಪಾರ್ಥಸಾರಥಿ ಕೀರ್ತಿ ಶ್ರೀಪುರು । ಷೋತ್ತಮಾಯ ನಮೋನ್ನಮೋ ॥ ಹರಿ ನಾರಾಯಣ ॥ ೧೭ ॥ ಅಕ್ಷಯಾತ್ಮಕ ಅಖಿಳ ಲೋಕಾ । ಧ್ಯಕ್ಷ ಕುಜನಶಿಕ್ಷ ಸಜ್ಜನ । ರಕ್ಷ ಕರುಣಕಟಾಕ್ಷ ಶ್ರೀ ಅ । ಧೋಕ್ಷಜಾಯ ನಮೋನ್ನಮೋ ॥ ಹರಿ ನಾರಾಯಣ ॥ ೧೮ ॥ ಘೋರ ಕಶಿಪುಸಂಹಾರ ಜಗದಾ । ಧಾರ ಪಾರಾವಾರ ನಮುಗಂ । ಭೀರ ವರ ಪ್ರಹಲ್ಲಾದರಕ್ಷಕ । ನಾರಸಿಂಹ ನಮೋನ್ನಮೋ ॥ ಹರಿ ನಾರಾಯಣ ॥ ೧೯ ॥ ಕುತ್ಸಿತಾಸುರಜನ ವಿದಾರಣ । ನಿಶ್ಚಲಂತಃಕರಣ ರಕ್ಷಣ । ಸಚ್ಚರಿತ ಸುಮುನೋದ್ಧರಣ ಶ್ರೀ । ಅಚ್ಯುತಾಯ ನಮೋನ್ನಮೋ ॥ ಹರಿ ನಾರಾಯಣ ॥ ೨೦ ॥ ಮರ್ಧನೇಕೋದೇವ ದಾನವ । ಮರ್ದನಾನತ ಜನಸುರಕ್ಷ ಗೋ । ವರ್ಧನೋದ್ಧರಣಮಿತಖಿಲ ಜ । ನಾರ್ದನಾಯ ನಮೋನ್ನಮೋ ॥ ಹರಿ ನಾರಾಯಣ ॥ ೨೧ ॥ ದೇವದೇವಾಧೀಶ ಸುಜನಸಂ । ಜೀವ ಜೀವಾಧಾರ ತ್ರೈಭುವ । ನಾವಳೀಸಂಸ್ತುತ್ಯ ನಿತ್ಯ । ಶ್ರೀ ಉಪೇಂದ್ರಾಯ ನಮೋನ್ನಮೋ ॥ ಹರಿ ನಾರಾಯಣ ॥ ೨೨ ॥ ಬಾಹುಬಲ ತದ್ಭಕ್ತಜನ ಹೃ । ದ್ಗೇಹವಾಸ ವಿರಿಂಚಿವಂದಿತ । ಮೋಹನಾಂಗ ಸುಶರೀರ ಸುಲಲಿತ । ಶ್ರೀಹರಿಭ್ಯ ನಮೋನ್ನಮೋ ॥ ಹರಿ ನಾರಾಯಣ ॥ ೨೩ ॥ ವೃಷ್ಣಿಕುಲಸಂಭೂತ ಮಾನಿತ । ವೃಷ್ಣವಾಗ್ರಣಿ ವಿದುರಸಸ್ನುತ । ಜಿಷ್ಣುಸಖ್ಯ ಸನಾಥನಾ ಶ್ರೀ । ಕೃಷ್ಣದೇವ ನಮೋನ್ನಮೋ ॥ ಹರಿ ನಾರಾಯಣ ॥ ೨೪ ॥ ಶಂಖಚಕ್ರಾಂಕಿತ ಮಕರತಾ । ಟಂಕಧರ ಮೂಲಿಕನಿವಾಸ ನಿ । ಶ್ಯಂಕ ನಿರ್ಮಲ ನಿತ್ಯ ಶ್ರೀಗುರು । ವೆಂಕಟೇಶ ನಮೋನ್ನಮೋ ॥ ಹರಿ ನಾರಾಯಣ ಹರಿ ನಮೋ ನಾರಾಯಣೇಂ ॥ ೨೫ ॥ ಶ್ರೀಃ ॥

ಪ್ರಹ್ಲಾದಚರಿತ್ರೆ

॥ ೪೪ ॥ ರಾಗ, ಕಾಂಬೋಧಿ [ಧಾಟಿ:- ಶ್ರೀಶ ಕ್ಷೀರಾರ್ಣವನಿಲಯ] ತ್ರಿವುಡೆತಾಳ

ನಾರಸಿಂಹ ನಮೋನ್ನಮೋ ಜಯ । ನಾರಸಿಂಹ ನಮೋನ್ನಮೋ ಜಯ । ನಾರಸಿಂಹ ನಮೋನ್ನಮೋ ಜಯ । ನಾರಸಿಂಹ ನಮೋನ್ನಮೋ ॥ ॥ ಪಲ್ಲ ॥ ವೀರ ನರಹರಿ ನಮೊ ಎನಲು ಮಹ । ಘೋರ ಅಪಮೃತ್ಯುಗಳ ನೆಳ್ಳಿ ಸಂ । ಹಾರಗೈಯ್ಯುತ ಪೊರೆವ ಕರುಣಾ । ವಾರಿನಿಧಿ ವಾಂಛಿತಪ್ರದಾಯಕಾ ॥ ನಾರಸಿಂಹ ॥ ೧ ॥ ಹಿರಣ್ಯಕಶ್ಯಪುನುದರದಿಂದವ । ತರಿಸಿದುದೊ ಮೂಜಗದೊಳಗೆ ಶ್ರೀ । ಹರಿ ಸರ್ವೋತ್ತಮನೆಂಬ ಶ್ರುತಿನಿ । ರ್ಧರವೆನಲು ಪ್ರಹಲ್ಲಾದನುದಿಸಿದ ॥ ನಾರಸಿಂಹ ॥ ೨ ॥ ಹುಟ್ಟುತಲೆ ಹರಿಭಕ್ತಿಯಾ ವಡ ।

ನಿಟ್ಟು ಬಂದುದೊ ಎನಲು ಶ್ರೀಪರ । ಮೇಷ್ಠಿಪಿತಸಂಘಿ ಗಳ ಹೃದಯದೊ । ಳಿಟ್ಟು ನಾಮಸ್ಮರಣೆಗೈಯ್ಯುವ ॥ ನಾರಸಿಂಹ ॥ ೩ ॥ ತೊದಲನುಡಿಯಲಿ ಕೃಷ್ಣ ಕೇಶವ । ಮಧುವಿದಾರಣ ಮಾಧವಾಚ್ಯುತ । ಶ್ರೀವರಶಪತಿಸುತ ವಿಷ್ಣು ವಿಭುವೆಂ । ದಧಿಕ ಭಕ್ತಿಲಿ ಹರಿಯ ಸ್ಮರಿಸುವ ॥ ನಾರಸಿಂಹ ॥ ೪ ॥ ಬೆಳ ಬೆಳವುತಿರೆ ಹಗಲಿರುಳು ಶ್ರೀ । ನಳಿನನಾಭನ ದಿವ್ಯನಾಮಾ । ವಳಿಯ ಸ್ಮರಿಸುವ ಬಾಲಕನ ಕಂ । ಡಳುಕಿದನು ಖಳ ಚಂಚಲಿಸುತಲಿ ॥ ನಾರಸಿಂಹ ॥ ೫ ॥ ಬುದ್ಧಿಗೆಟ್ಟಿತು ಬಾಲಕಗೆ ನಿ । ರ್ಬುದ್ಧಿಯಾಯಿತು ನಮ್ಮ ವೈರಿಯ । ಹೊಟ್ಟೆ ಸೇರುತ್ತಿರುವನೀತನ । ಶಿಕ್ಷಿಸುವದು ಕುಂಟುವ್ಯಸನಿಂದನು ॥ ನಾರಸಿಂಹ ॥ ೬ ॥ ಕರಸಿ ಚಂಡಾಮರ್ಕರ ರೋಷದ । ಲಿಂತೆನಿಸರನವರತ ದಾನವ । ಹರಿಯ ವಿದ್ಯವ ಪೇಳುತಿರೆ ಶ್ರೀ । ಹರಿ ಸರ್ವೋತ್ತಮನೆಂದು ಬರೆದನು ॥ ನಾರಸಿಂಹ ॥ ೭ ॥ ಓನ್ನಮೋಸ್ತ್ವಿತಿ ಎನುತ ಕೈಬರ । ಳನ್ನು ತಾ ಪಿಡಿವುತ್ತ ಬರೆಸಲು । ಓನ್ನಮೋ ನಾರಾಯಣಾ ಹರಿ । ಎನ್ನುತ್ತಾ ತಾತ್ಪರ್ಯಬಿಟ್ಟರು ॥ ನಾರಸಿಂಹ ॥ ೮ ॥ ಇದು ವಿಚಿತ್ರ ಈ ಶಿಶುವ ಬುದ್ಧಿಯ । ಪದನ ನಮಗಾಸಾಧ್ಯವೆನ್ನುತ । ಪ್ರಪಿತಗೊಪ್ಪಿಸಲು ಪುತ್ರನ । ಮುದದಿ ಕರೆದೊಡಂಬಡಿಸಿ ನುಡಿದನು ॥ ನಾರಸಿಂಹ ॥ ೯ ॥ ಪೇಡ ಮಗನೇ ದನುಜ ವಂಶವ । ಭಾಡಕನ ಹೆಸರೇಕೆ ನಿನಗೆ ಈ । ಖೋಡಿಬುದ್ಧಿಯಿಂದ್ಯಾತು ನೀ ಕುಲ । ಗೇಡಿಯಾದೆಯೊ ಎನುತ ನುಡಿದನು ॥ ನಾರಸಿಂಹ ॥ ೧೦ ॥ ಬೊಪ್ಪ ನೀ ಕಡು ಮರುಳು ಮೂಜಗ । ದಪ್ಪ ನಾರಾಯಣನ ಬಿಟ್ಟರೆ । ನಿಷ್ಫಲವು ಈ ಜನ್ಮ ಸಾರ್ಥಕ । ವಪ್ಪುದಾತನ ಸ್ಮರಿಸಿ ಪ್ರಾರ್ಥಿಸು ॥ ನಾರಸಿಂಹ ॥ ೧೧ ॥ ಎನಗೆ ಬುದ್ಧಿಯ ಪೇಳ್ವೆ ನೀನೆಲೊ । ಮುನಿದೆನಾದರೆ ಕೊಲುವೆನೆನ್ನಲು । ಹನನಗೈಯ್ಯುವ ಪೊರೆವ ಸ್ವಾತಂತ್ರ್ಯವು ನಾರಾಯಣನೊಬ್ಬನೆಂದನು ॥ ॥ ನಾರಸಿಂಹ ॥ ೧೨ ॥ ನುಡಿಯ ಕೇಳುತ ಅಂತಕನ ಪೋಲು । ಘುಡುಘುಡಿಸಿ ಕೋಪಿಸುತ ಪುತ್ರನ । ಬಡಿಸಿದನು ಬಲು ಬಗೆಯ ಕೊಲೆಗಳ । ಧಡಿಗ ದಾನವ ರೋಷ ಧರಿಸುತ ॥ ನಾರಸಿಂಹ ॥ ೧೩ ॥ ಪ್ರಾಣವಗಲುವ ಫಲವು ಕೊಲೆಗಳ । ಮಾಣದೆಸಗಲು ಸಾಯದಿರೆ ಖಳ । ಕಾಣುತಲಿ ಕೌತುಕ ಬಡುತ ತನ್ನಯ । ಸೂನುವಿನ ಕರದಾಗ ನುಡಿದನು ॥ ನಾರಸಿಂಹ ॥ ೧೪ ॥ ನಿಲ್ಲೆಲವೊ ಎಲೆ ಖೂಳ ನಿನ್ನನು । ಕೊಲ್ಲಲೀಸದ ವಿಷ್ಣು ಎಂಬವ । ನೆಲ್ಲಿರುವ ತೋರೆನುತ ಖಡ್ಗವ । ಕೊಳ್ಳುತಲೆ ಝಳಪಿಸುತ ಹಿಡಿದನು ॥ ನಾರಸಿಂಹ ॥

॥ ೧೫ ॥ ನೀನು ನಾನು ಚರಾಚರವಿ ಅಣು । ರೇಣುತೃಣಕಾಷ್ಠದಲಿ ಚೇತನ । ಶ್ರೀನಿವಾಸನದಲ್ಲದುಂಟೆ ನೀ । ನೇನ ಮರುಳಾಗಿಹೆಯೊ ಎಂದನು ॥ ನಾರಸಿಂಹ ॥ ೧೬ ॥ ಎಂಬ ನುಡಿಗಾರ್ಭಟಿಸಿ ತೋರೀ । ಸ್ತಂಭದಲಿ ತೋರದಿರ ಪ್ರಾಣವ । ಗೊಂಬೆನೀಕ್ಷಣಕೆನುತ ಖಡ್ಗವ । ಡಿಂಬಕನ ಕೊರಳಿಂಗೆ ಚಾಚಿದ ॥ ನಾರಸಿಂಹ ॥ ೧೭ ॥ ತೋರೊ ಬೇಗದಿ ತೋರೆನುತ ಕಾ । ಹೇರಿ ಖಳನಾರ್ಭಟಿಸೆ ಕಾಣುತ । ಬಾರೊ ನರಹರಿ ಬಾರೆನುತ ಬಾ । ಯಾರಿ ಬಾಲಕ ಚೀರಿ ಕರೆದನು ॥ ನಾರಸಿಂಹ ॥ ೧೮ ॥ ಛಟಛಟೆನ್ನುತ ಕೋಟಿ ಶಿಡಿಲಾ । ರ್ಭಟೆಗಳೊಂದೇ ಬಾರಿ ಸ್ತಂಭವು । ಛಿಟಿಛಿಟಿಲು ಛಿಟಿಛಿಟಿಲೆನುತ ಉತ್ಕಟದಿ ಸೀಳಿತು ವಜ್ರಸ್ತಂಭವು । ನಾರಸಿಂಹ ॥ ೧೯ ॥ ವಿನಿಪಸ್ಫುಟತರಭಸವೆನ್ನುತ । ದಾನವನು ತಕ್ಷಣದಿ ನೋಡಿದ । ಭಾನುತೇಜೋಬಲದರಿಯುಜ್ಜ್ವಲ । ವಾನಿಸಿತು ಖಳನಿವಿರು ನೋಡುತ ॥ ನಾರಸಿಂಹ ॥ ೨೦ ॥ ತೆರದ ಬ್ಯಾದೆರೆ ಭೀಕರಾಕೃತಿ । ನೆರದ ನೋಡುವ ಕಿಡಿಗಳುಗ್ರದ । ಅರಳುಗಂಗಳ ನಾಸಿಕದ ಸ್ಮೃ । ಲುರಿಯ ಮೃಗರಾಜೇಂದ್ರವದನದ ॥ ನಾರಸಿಂಹ ॥ ೨೧ ॥ ಕಿಡಿಯಿಡುವ ದಾಡೆಗಳ ರ್ಝುಡಿತೆಯು । ಮಿಡುಕುವವದನದ ದಂತಪಂಕ್ತಿಯ । ತೊಡಕು ಕಿವಿಗಳ ಕುಣಿವ ಮುಚ್ಛನ । ಕಡೆಯು ಪೆರೆನೊಸಲಿನ ಸುತಿಲಕದ ॥ ॥ ನಾರಸಿಂಹ ॥ ೨೨ ॥ ಕೆಂಗ್ರೀವಸೇವನಾವಸನದುದಿಗೆ ಆ । ಜಾನು ಅಷ್ಟಭುಜಗಳು ಕುಲಿಶನ । ವ್ಯಾನ ಬೆರಳುಗುರುಗಳ ರುಚಿರ ನ । ಖೀನ ಭಾಸ್ಕರಕಿರಣಲಹರಿಯು ॥ ನಾರಸಿಂಹ ॥ ೨೩ ॥ ಘೋರ ಕೋಪಜ್ವಾಲೆ ಹೂಂಕೃತ । ವೀರ ಖಳನನು ಪಿಡಿದು ತೊಡೆಯ ಮೇ । ಲೇರಿಸುತ ಹೊಸ್ತಿಲಲಿ ಕುಳಿತು ವಿ । ದಾರಿಸುತ ಪಿಡಿದುರವ ಬಗೆದನು ॥ ನಾರಸಿಂಹ ॥ ೨೪ ॥ ಎರಡು ಕರದಿಂ ಪಿಡಿಯುತುದರವ । ಎರುಡು ಕರದಿಂ ಬಗಿದು ಕರುಳನು । ಎರಡು ಕರದಿಂ ಧರಿಸಿ ದನುಜನ । ಎರಡು ಕರದಿಂ ಸದೆದು ಬಿಸುಟನು ॥ ನಾರಸಿಂಹ ॥ ೨೫ ॥ ಕರುಳಮಾಲೆಯ ಸೆಳದು ಕೊರಳಿಗೆ । ಧರಿಸಿ ತಿಳಿರಕುತವನು ಮೊಗಮೊಗ । ದುರವನಿಪ ರೋಷಾಗ್ನಿ ತ್ರೈಜಗ । ಭರಿತವಾಗಲು ಸುರರು ನೆರದರು ॥ ನಾರಸಿಂಹ ॥ ೨೬ ॥ ಸಿರಿಯನಿದಿರಲಿ ನಿಲಿಸಿ ವಿಧಿಭವ । ರಿರದೆ ಸ್ತುತಿಸಿದರಾಗ ಜಯಜಯ । ನರಮೃಗೇಂದ್ರ ಸ್ವರೂಪ ನರಹರಿ । ಕರುಣನಿಧಿಯೈ ಕಾವುದೆಂದರು ॥ ನಾರಸಿಂಹ ॥ ೨೭ ॥ ಮರುಳ ದನುಜನ ಮರ್ದಿಸಿದೆ ಹಿತ । ಕರವದಾಯಿತು ದೇವ ನಿನ್ನೀ । ಉರಿವ ರೋಷಜ್ವಾಲೆಯಲಿ

ಜಗ । ಉರಿವುತಿದೆ ಸಲಹೆಂದ ಪ್ರಾರ್ಥಿಸಲು ॥ ನಾರಸಿಂಹ ॥ ೨೮ ॥ ಎಂದು ಸ್ತುತಿಸಿ ಪ್ರಹ್ಲಾದ ದೇವನ । ಹೊಂದಿರಲು ನರಹರಿಯ ಚರಣಕೆ । ವಂದಿಸುತ ಪ್ರಾರ್ಥಿಸುತ ಭಕ್ತನ । ಚಂದದಿಂ ಮನ್ನಿಸುತಲಿಂದನು ॥ ನಾರಸಿಂಹ ॥ ॥ ೨೯ ॥ ಇತ್ತ ಬಾರೆನ್ನಯ ಮಗನೆ ಕೇಳ್ । ಭಕ್ತರನು ಬಾಧಿಸಲು ಸೈರಿಸೆ । ಸುತ್ತಮನೆ ನಿನಗೋಸುಗದಿ ಪೈ । ತ್ರ್ಯೇತ್ರಮನ ಮಾರ್ಗಿಸಿದೆ ಸುಖದಿಮು ॥ ॥ ನಾರಸಿಂಹ ॥ ೩೦ ॥ ಎನಲು ವಂದಿಗೊಂಡಿಸುತಲಿಂದನಿ । ನೆನಗದೆಂದಿದು ರಕ್ಷಿಸಿದೆ ಈ । ವನಜಭವ ಮುಖ್ಯರಿಗಭಯವನಿ । ಕ್ಷ್ಮಾಪ ಪಾಲಿಪುದೆನು ತೆರಗಿದನು ॥ ನಾರಸಿಂಹ ॥ ೩೧ ॥ ತರವಾಯ ರಂಗನನು ಲಕ್ಷ್ಮಿಯ । ಕರದು ತೊಡೆಯಲಿ ಕುಳ್ಳಿರಿಸಿ ನಿಜ । ಶರಣಗಭಯವನಿತ್ತು ವರಗಳ । ಕರುಣಿಸುತ ಅಜಭವರ ನುಡಿಸಿದ ॥ ನಾರಸಿಂಹ ॥ ೩೨ ॥ ಅಂಜದಿರಿ ಸುರವರರು ದಾನವ । ಭಂಜಗೋಸುಗ ಕೋಪಿಸಿದೆ ಘನ । ಭಂಜಕನು ಭಕ್ತರಿಗೆ ಎನುತಲಿ । ಕಂಜಭವ ಮುಖ್ಯರನು ನಲಿಸಿದ ॥ ನಾರಸಿಂಹ ॥ ೩೩ ॥ ಸುರವರರಿಗಭಯವನು ಕೊಡುತಾ । ಧರಿಸಿ ಪ್ರಹಲ್ಲಾದನನ ಮನ್ನಿಸಿ । ಕರುಣಿ ಅಂತರ್ಧಾನಕ್ಕೈದಿದ । ಪರಮಪುರುಷನು ಪುಣ್ಯನಾಮನು ॥ ನಾರಸಿಂಹ ॥ ೩೪ ॥ ಮಂಗಳಂ ಪ್ರಹಲ್ಲಾದವರದಗೆ । ಮಂಗಳಂ ಶ್ರೀನಾರಸಿಂಹಗೆ । ಮಂಗಳಂ ಭಕ್ತರನು ಸಲಹುವ । ತುಂಗಭುಜಬಲ ಲಕ್ಷ್ಮೀನೃಹರಿಗೆ ॥ ನಾರಸಿಂಹ ॥ ೩೫ ॥ ಧರೆಯೊಳುತ್ತಮವೆನಿಪ ಮೂಲಿಕ । ಪುರದ ಶ್ರೀಗುರು ವೆಂಕಟೇಶನ । ಕರುಣನಿಧಿ ಶ್ರೀನಾರಸಿಂಹನ । ಮರೆಯದನುದಿನ ಸ್ಮರಿಸಿ ಸುಜನರು ॥ ನಾರಸಿಂಹ ನಮೋನ್ನಮೋ ಜಯ । ನಾರಸಿಂಹ ನಮೋನ್ನಮೋ ॥ ೩೬ ॥ ಶ್ರೀ ॥

॥ ೪೫ ॥ ರಾಗ ಬೃಂದಾವನ ಸಾರಂಗ, ಏಕತಾಳ.

ಗೋವಿಂದಾ ಹರಿ ಗೋವಿಂದಾ ಹರಿ ಗೋವಿಂದಾ ಹರಿ ಗೋವಿಂದಾ ॥

॥ ಪಲ್ಲ ॥ ಪ್ರಳಯೋದಕದಲಿ ಪವಿತ್ರ ವೇದ ಪಟ । ದೆಳೆಯ ಮೋಲೊರಗಿದ ಗೋವಿಂದಾ । ಜಲಧಿಕೆ ನಾಭಕಮಲದಿಂದುದಿಸಿದ । ಜಲಜಾಸನಪಿತ ಗೋವಿಂದಾ ॥ ಗೋವಿಂದಾ ಹರಿ ॥ ೧ ॥ ಸೃಷ್ಟಿರಚನೆ ಸುರಜ್ಯೇಷ್ಠನೆಂದೆಂಬ ನಾಮ । ನಿಟ್ಟು ಸಲಹಿದನು ಗೋವಿಂದಾ ॥ ಪುಷ್ಟದಿ ಜಗಗಳ ಸುಟ್ಟು ಕಳೆವ ಗುಣ । ಕೊಟ್ಟನು ರುದ್ರಗೆ ಗೋವಿಂದಾ ॥ ಹರಿ ಗೋವಿಂದಾ ॥ ೨ ॥ ಅಗಣಿತ ಅವತಾರಗಳಿಂ ಭಕ್ತರ । ನಗಲದೆ ಸಲಹಿದ ಗೋವಿಂದಾ ॥ ಸುಗುಣ

ಗುಣಗಳಿಂ । ಜಗದಧಿಪತಿ ನಮ್ಮ ರುಗುಮಿಣಿಧವ ಶ್ರೀಗೋವಿಂದಾ ॥ ಗೋವಿಂದಾ ಹರಿ ॥ ೩ ॥ ಸತ್ಯವ್ರತಿಪಗೆ ನೈಮಿತ್ಯ ಪ್ರಳಯದಲಿ । ಪ್ರತ್ಯಕ್ಷ ವಾದನು ಗೋವಿಂದಾ ॥ ಮತ್ತೆ ತಮನ ಮಡುಹುತ ವೇದಗಳಜ । ಗಿತ್ತು ಸಲಹಿದನು ಗೋವಿಂದಾ ॥ ಗೋವಿಂದಾ ಹರಿ ॥ ೪ ॥ ಬೃಂದಾರಕರಿಂಗಂ ದಮೃತ ಉಣಿಸ । ಲೆಂದು ಕರುಣದಿಂ ಗೋವಿಂದಾ ॥ ಮಂದರಗಿರಿಧರ ನೆಂದೆನಿಸಿದನಾ । ನಂದದಿ ಕೂರುಮ ಗೋವಿಂದಾ ॥ ಗೋವಿಂದಾ ಹರಿ ॥ ॥ ೫ ॥ ಯಾಗಮುಖದಿ ಹವಿರ್ಭಾಗವ ಸುರರಿಂ । ಗಾರೋಗಣೆಗೈಸಲು ಗೋವಿಂದಾ ॥ ಬೇಗದಿ ಕ್ರೋಢರೂಪಾಗಿ ಹಿರಣ್ಯನ । ನೀಗಿ ಧರೆಯ ತಂದ ಗೋವಿಂದಾ ॥ ಹರಿ ಗೋವಿಂದಾ ॥ ೬ ॥ ಶಿಶು ಪ್ರಹಲ್ಲಾದನ ಸಸಿನದಿ ಸಲ್ಹಲಿಂ । ದಸಮ ನೃಹರಿಯಾದೆ ಗೋವಿಂದಾ ॥ ಮಿಸುನಿಕಶ್ಯಪುವಿನ ಬಸುರ ಸೀಳಿ ಕರು । ಳ್ದೆಸಿ ಪೆಸರೊಡೆದನು ಗೋವಿಂದಾ ॥ ಗೋವಿಂದಾ ಹರಿ ॥ ೭ ॥ ಬಲಿಯ ಮನೆಯ ಬಾಗಿಲ ಕ್ಕ್ಯಾದಿನುದಿನ । ಸಲಹಲೋಸುಗ ವಾಗಿ ಗೋವಿಂದಾ ॥ ಚಲುವ ವಾಮನನಾಗಿ ಇಳೆಯ ಈರಡಿಗೈ । ದಳೆದ ತ್ರಿವಿಕ್ರಮ ಗೋವಿಂದಾ ॥ ಗೋವಿಂದಾ ಹರಿ ॥ ೮ ॥ ಭೂಮಿಯ ದ್ವಿಜರಿಗೆ ಪ್ರೇಮದಿ ಕೊಡಲು ನಿ । ಸ್ಸೀಮ ಪರಶುಧರ ಗೋವಿಂದಾ ॥ ತಾಮಸಕ್ಷತ್ರಿ ನಿರ್ನಾಮ ಗೈದ ಭೃಗು । ರಾಮಾವತಾರನು ಗೋವಿಂದಾ ॥ ಗೋವಿಂದಾ ಹರಿ ॥ ೯ ॥ ಮಗಕ್ಷ್ಮೂಕ್ಕ ತರಂಗೆ ಮೆರೆವ ಲಂಕಾಪುರ । ಸ್ಥಿರವಾಗೀಯಲು ಗೋವಿಂದಾ ॥ ಧುರದೊಳು ದಶಕಂಧರ ಘಟಕರ್ಣರ । ತರಿದ ಶ್ರೀರಘುವರ ಗೋವಿಂದಾ ॥ ಹರಿ ಗೋವಿಂದಾ ॥ ೧೦ ॥ ದುರುಳ ಕಂಸ ಕೌರವನ ತರಿದು ಪಾಂ । ಡವರ ಸಲಹಲೆಂದು ಗೋವಿಂದಾ ॥ ಮೆರೆವ ದೇವಕಿಯಾ ತರಳನೆನಿಸಿ ಭೂ । ಭರನಿಳುಹಿದ ಕೃಷ್ಣ ಗೋವಿಂದಾ ॥ ಗೋವಿಂದ ಹರಿ ॥ ೧೧ ॥ ಶುದ್ಧದಿ ದಿತಿಜರ ಗೆದ್ದು ಬಯಸಲೆಂದು । ಬದ್ಧಪತಿವ್ರತೆ ಗೋವಿಂದಾ ॥ ಮುದ್ದಿಸಿ ಸತಿಯರ ಮುದ್ದು ರೂಪದಿ ಗೆದ್ದ । ಬುದ್ಧವತಾರನು ಗೋವಿಂದಾ ॥ ಗೋವಿಂದಾ ಹರಿ ॥ ೧೨ ॥ ಕಲಿಮಲವೆಳ್ಳವ ತೊಳೆದು ಶ್ರುತಿ ಗಳನು । ನೆಲೆಗೊಳ್ಳಿಸಲೆಂದು ಗೋವಿಂದಾ ॥ ಛಲದಿಂ ಮ್ಲೇಂಛರ ಕುಲವ ಸಂಹರಿಸಿದ । ಕಲಿಕ್ಯವತಾರನು ಗೋವಿಂದಾ ॥ ಗೋವಿಂದಾ ಹರಿ ॥ ೧೩ ॥ ಪತ್ತವತಾರದಿ ದೈತ್ಯರ ಮರ್ದಿಸಿ । ಭಕ್ತರ ಸಲಹಿದ ಗೋವಿಂದಾ ॥ ಭಕ್ತಿ ಮುಕ್ತಿಗಳನಿತ್ತು ಸಲವ ನಮ್ಮ । ಕರ್ತೃ ಗೋಪಾಲ ಶ್ರೀಗೋವಿಂದಾ ॥

ಗೋವಿಂದಾ ಹರಿ ॥ ೧೪ ॥ ಏಕೋ ದೇವ ನ ದ್ವಿತೀಯನೆಂಬ ಶೃತಿ । ಲೋಕವಿ ಮೆರಸಿದ ಗೋವಿಂದಾ ॥ ಶ್ರೀಕರ ಮೂಲಿಕಪುರ ವೆಂಕಟ ಕರು । ಣಾಕರ ಶ್ರೀಹರಿ ಗೋವಿಂದಾ ॥ ಗೋವಿಂದಾ ಹರಿ ॥ ೧೫ ॥ ಶ್ರೀ ॥

॥ ೪೬ ॥ ರಾಗ, ಕಲ್ಯಾಣಿ [ಧಾಟಿ:- ಎಂದಿಗೆ ದೊರಕುವನು । ಶ್ರೀಗುರು] ಅಷ್ಟತಾಳ

ಮಾತೊಂದೊಲಿಸಬಾರದೆ । ನಾರಾಯಣ। ಪ್ರೀತಿಯೆನ್ನಲಿ ತೋರದೆ ॥ ಭೀತಿಮಾನಸನಾಗಿ ಭಯವಿ ಕಂಗೆಡುತಲಿ । ಕಾತುರದಿಂದಲಿ ಕರದು ಕೂಡಿದಡೆನ್ನ ॥ ಪಲ್ಲ ॥ ವಿಧವಿಧ ಕಂಟಕವೂ । ಬಾಧಿಸಲಿನ । ಗೊದಗಿತು ಸಂಕಟವೂ ॥ ಅದುಭುತಮಾಯೆಗೆ ಬೆದರಿ ಬೆಂಡಾಗೀಗ । ಹೃದಯತಾಪದಿ ನಿನ್ನ । ಕೊದಗಿ ಕೊಂದಳು ಎನ್ನ ॥ ೧ ॥ ದಾತರ‍್ಯಾರಿಲ್ಲವೆಂದು । ಯಾರಿಲ್ಲದ । ನಾಥನಾಗಿಹೆನಿಂತೆಂದೂ ॥ ಭೀತರಕ್ಷಕ ಭಕ್ತಭಯನಿವಾರಣ ಜಗ । ನ್ನಾಥನೆ ಗತಿಯೆಂದು । ಸೋತು ಕರದಡೆನ್ನ ॥ ೨ ॥ ಮೋಕ್ಷಾರ್ಥವನು ತೋರಿಸೂ । ನೀ ಬಂದೆನ್ನ । ಅಕ್ಷಿಗೆ ಗೋಚರಿಸೋ ॥ ಸಾಕ್ಷಾತ ಶ್ರೀಗುರು ಲಕ್ಷ್ಮೀ ವೆಂಕಟ ನೀನೆ । ರಕ್ಷಿಸಬೇಕೆಂದು ಲಕ್ಷ ಕರದಡೆನ್ನ ॥ ೩ ॥ ಶ್ರೀ ॥

॥ ೪೭ ॥ ರಾಗ, ಬೇಗಡೆ [ಧಾಟಿ:— ಬಂದೆನ್ನ ಕಾಯೊ ಶ್ರೀಹರಿಯೇ] ಅಷ್ಟತಾಳ

ಈರೇಳು ಜಗದೊಳು ನೀನೇ । ರಾಮ ನೀನೇ । ರಂಗ ನೀನೇ । ಕೃಷ್ಣ ನೀನೇ ॥ ಪಲ್ಲ ॥ ಜಗದೊಳು ನೀನೇ । ಕಲಿ । ಯುಗದೊಳೂ ನೀನೇ । ಶೇಷಾದ್ರಿವರ ಗಿರಿವಾಸ ನೀನೇ ॥ ರಂಗ ನೀನೇ ॥ ಈರೇಳು ಜಗದೊಳು ನೀನೇ ॥ ಅನುಪಲ್ಲ ॥ ಅಜನಲ್ಲಿ ನೀನೇ । ದ್ವಿಜನಲ್ಲಿ ನೀನೇ । ಸುಜನರಿಗೊಲಿವ ಭುಜಗಶಯನ ನೀನೇ ॥ ರಂಗ ನೀನೇ ॥ ಈರೇಳು ಜಗದೊಳು ನೀನೇ ॥ ೧ ॥ ಅಂತರ್ಬಹಿರ್ದೇಶೋ। ಭಯದಲ್ಲಿ ನೀನೇ। ಸಂತರು ಭಜಿಸುವ ಮುನಿವಂದ್ಯ ನೀನೇ ॥ ರಂಗ ನೀನೇ ॥ ಈರೇಳು ಜಗದೊಳು ॥ ೨ ॥ ವೃಕ್ಷದೊಳಿರುವ। ಪಕ್ಷಿಗೆ ಸಾಕ್ಷಿ ನೀನೇ। ಪಕ್ಷಿವಾಹನ ಮೋಕ್ಷಕೊಡುವವನು ನೀನೇ ॥ ರಾಮಾ ನೀನೇ ॥ ಈರೇಳು ಜಗದೊಳು ನೀನೇ ॥ ೩ ॥ ವಿದ್ಯೆಹೇಳುವ ನೀನೆ । ಬುದ್ಧಿಕಲಿಸುವ ನೀನೇ । ಉದ್ಧಾರಮಾಡುವ ಸದ್ಗುರು ನೀನೇ ॥ ರಾಮಾ ನೀನೇ ॥ ಈರೇಳು ಜಗದೊಳು ॥ ೪ ॥ ಉಣಿಸುವೆ ದಣಿಸುವೆ । ಎಣಿಸುವೆ ನೀನೇ । ಗುಣಪೂರ್ಣ ಗುಣರಹಿತಾನಂದನು ನೀನೇ ॥ ರಂಗ ನೀನೇ ॥ ಈರೇಳು ಜಗದೊಳು ನೀನೇ ॥ ೫ ॥ ಒಡವೆ ವಸ್ತುವು ನೀನೇ । ಕಡಗಕಂಕಣ

ನೀನೇ । ಎನ್ನೊಡಲ ತುಂಬುವ ಮಹಾತ್ಮನು ನೀನೇ ॥ ರಾಮ ನೀನೇ ॥ ಈರೇಳು ಜಗದೊಳು ನೀನೇ ॥ ೬ ॥ ಪಂಕಜನಯನ । ಪರಮಪುರುಷ ನೀನೇ। ಅಂಕಿತವುಳ್ಳ ವೆಂಕಟರಮಣ ನೀನೇ ॥ ರಾಮ ನೀನೇ ॥ ರಂಗ ನೀನೇ ॥ ಈರೇಳು ಜಗದೊಳು ನೀನೇ ॥ ೭ ॥

॥ ೪೮ ॥ ರಾಗ, ಕಲ್ಯಾಣಿ [ಧಾಟಿ:- ಏನನುಸುರುವೆನೂ । ಸದ್ಗುರು] ಅಷ್ಟತಾಳ

ಹರಿ ಕೃಷ್ಣ ಎನಬಾರದೇ । ಬಾಯೊಳು ಮುಳ್ಳು । ಮುರಿಸಿಕೊಳ್ಳಲು ತೀರದೇ ॥ ಪಲ್ಲ ॥ ಬರಿದೆ ದೊರಕುವುದೆ ಇಹಪರ ಸುಖಗಳು । ಮರುಳು ಗಳಿರ ಕಾಯ ಸ್ಥಿರವಲ್ಲ ಸಾರಿದೆ ॥ ಹರಿ ಕೃಷ್ಣ ಎನಬಾರದೇ ॥ ಅನು ॥ ತರಳ ಪ್ರಹ್ಲಾದ ತಾನೂ । ತಾತಗೆ ಅಂಜಿ । ಮರುಗಿ ಕರೆಯಲಾತನೂ ॥ ಭರದಿ ಕಂಬದಿ ಬಂದು ದುರುಳನ ಶೀಳಲು । ಭರಿತ ಭಂಡಾರವ ಹರಿಗೆ ಕೊಟ್ಟೀ ರ್ದನೆ ॥ ಹರಿ ಕೃಷ್ಣ ಎನಬಾರದೇ ॥ ೧ ॥ ತರಳ ಪ್ರಾಯದ ಧ್ರುವನೂ । ವನದಿ ಪುರ । ಹರನ ಧ್ಯಾನಿಸಲಾತನೂ ॥ ತ್ವರಿತದಿಂದಲಿ ಆತನಿರುವ ಠಾವಿಗೆ ಬರಲು । ಭರಿತ ಸಂಪದವಿಯು ಹರಿಗೆ ಕೊಟ್ಟೀರ್ದನೆ ॥ ಹರಿ ಕೃಷ್ಣ ಎನಬಾರದೇ ॥ ೨ ॥ ಶೀರೆಯ ಶೆಳೆಯಲಂದೂ । ದ್ರೌಪದಿ ಭಯ । ವೇರಿ ಸ್ತುತಿಸಲಂದೂ ॥ ನಾರಿಮಣಿಗೆ ಅಕ್ಷಯದ ಶಾಲೆಯಾಗಲು । ವಾರಿಜಾಂಬ ಕಗೆ ಮುಂಗಡವ ಕೊಟ್ಟೀರ್ದಳೆ ॥ ಹರಿ ಕೃಷ್ಣ ಎನಬಾರದೇ ॥ ೩ ॥ ಕಡು ದಾರಿದ್ರದೊಳಿರುವಾ । ಸುದಾಮಗೆ । ಕೊಡಲತಿ ಸಂಪದವಾ ॥ ಕಡಲೊಡೆ ಯನು ಆತನಲ್ಲಿ ಸಾಲವಗೊಂಡು । ಕೊಡುವೆನೆಂದೆನುತ ಪತ್ರವ ಬರ ಕೊಟ್ಟನೇ ॥ ಹರಿ ಕೃಷ್ಣ ಎನಬಾರದೇ ॥ ೪ ॥ ಬಂದ ದುರಿತವೆಲ್ಲವಾ । ಭಂಗಿಸಿ ಪಾಂಡು । ನಂದನರಿಗೆ ರಾಜ್ಯವಾ ॥ ಚಂದದಿಂದಲಿ ಕೊಟ್ಟು ನರ ನಷ್ಟ ಹೊಡಿವಾಗ । ಇಂದಿರಾಪತಿಗೆ ಸಂಬಳವ ಕೊಟ್ಟೀರ್ದರೆ ॥ ಹರಿ ಕೃಷ್ಣ ಎನಬಾರದೆ ॥ ೫ ॥ ಬಲಿ ಚಂದ್ರಹಾಸ ತಾನೂ । ರುಕ್ಮಾಂಗದ । ಚಲುವ ನಕ್ರೂರ ತಾನೂ ॥ ಕಲಿ ಹನುಮ ಭೀಷ್ಮಕ ಮೊದಲಾದ ಭಕತರ । ಒಲಿದು ಸಂಭವಿಸಿದ ಯಾತರ ಮಹಿಮೆಗೆ ॥ ಹರಿ ಕೃಷ್ಣ ಎನಬಾರದೆ ॥ ೬ ॥ ಹರಿ ಕೊಡಲಿಲ್ಲೆನುತಾ । ಮೂಢಾತ್ಮರು । ಬರಿದೆ ದೂರುವರಿ ವ್ಯರ್ಥ ॥ ಶರಣೆಂ ದು ನಾಮವ ಸ್ಮರಿಸಲು ಇಷ್ಟಾರ್ಥ । ಕರುಣಿಸದೀರ್ಪನೆ ಗುರು ವೆಂಕಟೇಶ ನು ॥ ಹರಿ ಕೃಷ್ಣ ಎನಬಾರದೇ ॥ ೭ ॥

॥ ಮಂಗಲಪದ ॥

॥ ೪೯ ॥ ರಾಗ, ಪುನ್ನಾಗವರಾಳಿ [ಧಾಟಿ:- ಘೋರ ನಿಗಮವ ಗೆದ್ದ] ಏಕತಾಳ

ವೆಂಕಟರಮಣಗೆ । ಶ್ರೀನಾರಸಿಂಹಗೆ। ಬಿಂದುಮಾಧವನಿಗೆ ಮಂಗಲಂ ॥ ಹರಿ ವೆಂಕಟರಮಣಗೆ ॥ ಪಲ್ಲ ॥ ತಮನ ಕೊಲ್ಲುತ ವೇದಾ । ಗಮವ ತಂದಜಗಿತ್ತಾ। ವಿಮಲ ಶ್ರೀಝಷವಿಧ ಮಂಗಲಂ ॥ ಹರಿ ವೆಂಕಟರಮಣಗೆ ॥ ॥ ೧ ॥ ಬೃಂದಾರಕರಿಗೆ ತಾ । ನಂದು ಸುಧೆಯನಿತ್ತಾ । ನಂದ ಕಚ್ಛಪರೂಪ ಮಂಗಲಂ ॥ ಹರಿ ವೆಂಕಟರಮಣಗೆ ॥ ೨ ॥ ಅಸಮ ಹೇಮಾಕ್ಷನ । ದಶನದಿಂಬರಿವುತ । ರಸೆಯ ತಂದಿತ್ತ ಕ್ರೋಡ ಮಂಗಲಂ ॥ ಹರಿ ವೆಂಕಟರಮಣಗೆ ॥ ೩ ॥ ಶೀಳಿ ದೈತ್ಯನ ಕೊಂದ । ಬಾಲನಿಗೊಲಿದ ಕ। ರಾಳ ನೃಸಿಂಹನಿಗೆ ಮಂಗಲಂ ॥ ಹರಿ ವೆಂಕಟರಮಣಗೆ ॥ ೪ ॥ ಪ್ರಕಟ ಬಲಿಯೊಳ್ಬೇಡಿ । ದ್ಯುಕುತ ದಿವ್ಯಶ್ರೀಪದ । ನಖದಿ ಗಂಗೆಯ ಪೆತ್ತವಗೆ ಮಂಗಲಂ ॥ ಹರಿ ವೆಂಕಟರಮಣಗೆ ॥ ೫ ॥ ವಿಗಡ ಕ್ಷತ್ರಿಯರ । ಜಗದಿ ಸಾಧಿಸಿ ಕೊಂದ । ಭೃಗು ಭಾರ್ಗವರಾಮಾ ಮಂಗಲಂ ॥ ಹರಿ ವೆಂಕಟರಮಣಗೆ ॥ ೬ ॥ ಆ ದಶವದನ ಮು। ಖ್ಯಾದಿ ದೈತ್ಯರ ಕೊಂದ । ಕೋದಂಡಧರ ರಾಮಾ ಮಂಗಲಂ ॥ ಹರಿ ವೆಂಕಟರಮಣಗೆ ॥ ೭ ॥ ಭೋಗಿಶಯನ ಮಹಾ।ಸಾಗರಾಲಯವಾಸ । ಗೋಗೋಪಾಲಕಕೃಷ್ಣ ಮಂಗಲಂ ॥ ಹರಿ ವೆಂಕಟರಮಣಗೆ ॥ ೮ ॥ ನಿಪುಣ ಮೋಹನಾಕಾರ । ಸುಫಲಪ್ರದಶರೀರ । ತ್ರಿಪುರಸಂಹರ ಬೌದ್ಧ ಮಂಗಲಂ ॥ ಹರಿ ವೆಂಕಟರಮಣಗೆ ॥ ೯ ॥ ಸುಮನಸಾಶ್ರಯಧೀಶ । ಅಮಿತ ಮ್ಲೇಂಛ ವಿನಾಶ । ವಿಮಲ ಶ್ರೀರೂಪ ಕಲ್ಕ್ಯ ಮಂಗಲಂ ॥ ಹರಿ ವೆಂಕಟರಮಣಗೆ ॥ ॥ ೧೦ ॥ ವರ ಮೂಲಿಕಪುರೇಶ । ಪರಮ ಶ್ರೀವೆಂಕಟೇಶ । ಕರುಣಿ ರಮಾಪತೆ ಮಂಗಲಂ ॥ ಹರಿ ವೆಂಕಟರಮಣಗೆ । ಶ್ರೀನಾರಸಿಂಹಗೆ । ಬಿಂದುಮಾಧವನಿಗೆ ಮಂಗಲಂ ॥ ೧೧ ॥ ಶ್ರೀಃ ॥

॥ ಶ್ರೀವೆಂಕಣ್ಣಕವಿಕೃತ ಪದಗಳು ಸಂಪೂರ್ಣಂ ॥

॥ ಶ್ರೀಕೃಷ್ಣಾರ್ಪಣಮಸ್ತು ॥

ಶ್ರೀ ವೆಂಕಣ್ಣ ಕವಿಗಳ ಮೋಹದ ಶಿಷ್ಯರಾದ
ಕವಿವರ್ಯ ವಾಸುದೇವಪ್ರಭುಕೃತ ಪದಗಳು.

॥ ೫೦ ॥ ರಾಗ, ತೋಡಿ [ಧಾಟಿ:- ಕಾಮಿನೀ ಕರದು ತಾರೇ] ಏಕತಾಳ

ಶ್ರೀಲೋಲ ಪಾಲಿಸೆನ್ನಾ । ದಯದಿ ಗೋ ಗೋ।ಪಾಲ ಹೊಂದಿದೆ ನಾನಿನ್ನಾ ॥ ಪಲ್ಲ ॥ ಶೀಲ ಸುಗುಣ ಸುವಿ। ಶಾಲ ಸತ್ಕೀರ್ತಿ ಸುರ। ಜಾಲವಂದಿತ ಕರುಣಾಲವಾಲ ಪ್ರಸನ್ನಾ । ಹೊಂದಿದೆ ಚರಣಾ ॥ ಶ್ರೀಲೋಲ ಪಾಲಿಸೆನ್ನಾ ॥ ಅನುಪಲ್ಲ ॥ ಅಧಿಕ ಪಯಸಂಚಾರಣಾ । ಭಾರವತುಲ । ಕುಧರಧರ ಭೂಪೋಷಣಾ ॥ ಮದಮುಖಾಸುರ ತನು ಹೃದಯವಿದಾರಣ । ಬುಧವಿಧ ನೃಪತತಿಕದನಕರ್ಕಶ ಘನ ॥ ವದನದಶಾರಿಯೆ ಯದುವಂಶೋದ್ಭವ । ವಿದಿತ ದಿಗಂಬರಪ್ರದ ಮ್ಲೇಂಛಾನ್ವಯ । ಉದಧಿದವಾನಲ ಸದಮಲ ವಿಗ್ರಹ । ಮಧುದ್ವಿಷ ಸದ್ಗುಣನಿಧಿ ಸರ್ವೋತ್ತಮ ॥ ಶ್ರೀಲೋಲ ಪಾಲಿಸೆನ್ನಾ ॥ ೧ ॥ ಎಸೆವ ಗೋಕುಲದಿ ಪುಟ್ಟೀ । ಪೂತನಿಸ್ತನ। ವಿಷಸೇವಿಸದೆಯ ಮೆಟ್ಟೀ ॥ ಅಸುವನೀಗಿಸಿ ಭಂಡಿ । ಮುಸುಡಿಗೊದೆದು ಕೊಂದು । ಅಸಮ ವಾತಾಸುರನಸುವಾ ತೊಲಗಿಸುತ ॥ ಎಸದಳ ಸಿಗಿದು ತುಂಡೆಸಗುತ ಬಕನನು । ವೃಷಧೇನುಕಾದ್ಯರ ಬಸುರ ಬಗಿದು ಬಲು । ಶಿಶುತನದೋರಲು ಬಿಸಜಾಕ್ಷಿಯರಲಿ । ಗುಸುಕಿ ಪಾಲ್ಬೆಣ್ಣೆಯ ಮೊಸರುಂಡಾಡಿದ ॥ ಶ್ರೀಲೋಲ ಪಾಲಿಸೆನ್ನಾ ॥ ೨ ॥ ಗೆಳೆಯರೊಡನೆ ಕೂಡುತ್ತಾ । ವೃಂದಾವನದಿ । ಕೊಳಲೂದಿ ಪಶುಕಾಯುತ್ತಾ ॥ ತಲೆಗೆ ಪೀಲಿಯು ಸುತ್ತಿ ಮೆಲುವ ಕೂಳಿಯ ಬುತ್ತಿ । ಬಳಗ ಗೋವಳರೆಂದು ವಲಿವವರ ರಕ್ಷಿಸೆ ॥ ಬಳಿಕ ಕಾಳಿಂದಿಯ ತಳುಕಿ ಧುಮುಕಿ ಫಣಿ। ಗಳದಿ ಕುಣಿದು ಮನಸಲಿಸಿ ಅಕ್ರೂರಗೆ । ಜಲದೊಳು ವಿಶ್ವವ ಕಳೆದು ತೋರಿಸಲು । ಗೆಲವಿಲಿ ಮಥುರೆಯ ವಳೆಯಕ್ಕೈದಿದ ॥ ಶ್ರೀಲೋಲ ಪಾಲಿಸೆನ್ನಾ ॥ ೩ ॥ ದಾರಿಯೊಳ್ ರಜಕನನ್ನು । ಕಂಠವ ನಖದಿಂ । ಚೀರೆ ಮುಂದೆ ಚಿಪ್ಪಿಗನು ॥ ಭೋರನೆರಡಂಗಿಯ ಚಾರುಚರಣಕ್ಕಿಟ್ಟು । ಆರಾಧಿಸಲು ದಯದೋರಿ ಸಾರೂಪ್ಯವಿತ್ತು ॥ ಸಾರಿ ಮುಂದಕೆ ಮಾಲೆಗಾರಗೊಲಿದು ಮುರು । ಟೇರಿದ ಕುಬುಜೆಯುದ್ಧಾರವ ಗೈವುತ । ಭಾರಿ ಧನುವ ಮುರಿತೂರಿ ಗಜವಚಾ। ಣೂರಮುಷ್ಟಿಕರೆಡೆ ಥೋರುಗಳೆದ ಹರಿ॥ ಶ್ರೀಲೋಲ ಪಾಲಿಸೆನ್ನಾ॥ ೪ ॥ ಮಾಣದೆ ಕಂಸನ ಕೊಂದು । ಆ ಪಟ್ಟ ಉಗ್ರ।ಸೇನಗೀವುತಲಂದೂ ॥ ತ್ರಾಣೆ

ಮುರನರಕ ದಾನವ ಹಂಸಡಿಂಬಿಕ। ಚಾಣ ಚೈದ್ಯಾದಿ ಖಳರ ಗೋಣವ ಮುರಿದಿಟ್ಟು ॥ ಕ್ಷೋಣಿಯು ಭಾರವು ಮಾಣಿಸಿ ನರನಿಗೆ । ಪ್ರಾಣಸಖಾಯುವು ಕಾಣಿಸಿ ಸಾರಥಿ । ನೀನೆಯಾಗುತ ಕುರುಸೇನೆಯ ಸವರಿಸಿ । ಏನರಿಗನು ದಿನ ಮಾನಿಪ ಸ್ವಾಮಿ॥ ಶ್ರೀಲೋಲ ಪಾಲಿಸೆನ್ನಾ॥ ೫ ॥ ಧ್ರುವ ರುಕ್ಮಾಂಗದ ನಂಗದಾ। ಧರ್ಮಾಂಗದ ಭೂ। ವಿಜ ಸುದಾಮ ಪ್ರಹಲ್ಲಾದಾ ॥ ಪವನಜಾ ಮೊಳಕ್ರೂರವನಿಪ ಹರಿಶ್ಚಂದ್ರ । ನವದಳಾಂಬರೀಷ ಜವನಾತ್ಮಭವ ಶೇಷ ॥ ತವಕಿ ಬಲಿಯು ಉದ್ಧವ ದ್ರುಪದಜೆ ಮುನ । ಕವಲಿಲ್ಲದೆ ಇತ್ತ ತವದಾಶ್ರಿತರನು । ಜವದಿ ಸಲಹಿಕೊಂಡವ ನೀನಲ್ಲವೆ । ಭುವನದೊಡೆಯ ಅಜಭವಕಾಧಾರನೇ ॥ ಶ್ರೀಲೋಲ ಪಾಲಿಸೆನ್ನಾ ॥ ೬ ॥ ವರಕಲಿಯುಗದ ಜನ । ನುದ್ಧರಿಸಲು । ಕರೆದು ಮಾರುತ ಸುತನಾ ॥ ತೆರಳು ದಕ್ಷಿಣ ಹಿಮಕರ ನಾಮ ಪುರಕವ । ತರಿಸಿಕೊಂಡಿರು ಪಿಂತೆ ಬರುವೆ ತಾನೆಂದಾಜ್ಞೆಯು ॥ ಶಿರದಿ ಧರಿಸಿ ಬಂದಿರುತ ಮಧ್ಯಗೃಹ । ವರಬುಧನರಿತಾ ನರನಾಗಿ ಜನಿಸಿ । ಗುರು ಮಧ್ವಾಯರ್ಯರೆಂದರಿಸುತಾಶ್ರಮವ ಈ। ಪರಿ ಯುಗಗಿದೆ ಸತ್ಕರುಣಾಂಭೋನಿಧಿ ॥ ಶ್ರೀಲೋಲ ಪಾಲಿಸೆನ್ನಾ ॥ ೭ ॥ ಕಡಲಾ ದ್ವಾರಕಿಯಿಂದಲೀ । ಗೋಪೀಚಂದನದೊ । ಳೊಡಗೂಡಿ ಹರುಷದಲೀ ॥ ಪಡಗನೇರುತ ಬಂದು ಉಡುಪೀ ರಜತಪೀಠ । ವಡರ ಊರಿಸಿದ ಕುಲದೊಡೆಯ ಮಧ್ವಾರ್ಯರು ॥ ಕಡು ಭಕ್ತಿಯೊಳೆರಡಡಿಗೆರಗುತ ಕೈ । ಪಿಡಿದು ರತ್ನಾಸನಗೊಡುತ ಸ್ಥಾಪನೆಗೈ । ದೊಡನೆ ನಿನ್ನರ್ಚನೆಗಿಡುತ ನಡಸಲಿಷ್ಟ । ವಿಡುತಾಶ್ರಮಗಳ ಪಡಿಸಿದ ಮಹಿಮನೆ ॥ ಶ್ರೀಲೋಲ ಪಾಲಿಸೆನ್ನಾ ॥ ೮ ॥ ಕಡೆಗಿಟ್ಟದ್ವೈತ ಮತ । ಮೋಹಕ ಶಾಸ್ತ್ರ । ಕೆಡಹೀ ಶ್ರೀಮಧ್ವಮತ ॥ ಹಿಡಿಸಿ ಏಕೋ ವಿಷ್ಣು ಒಡೆಯ ನಿಶ್ಚಯವೆಂದು । ಹೊಡಿಸಿ ಶಾಸ್ತ್ರಡಂಗುರ ಬಿಡದಷ್ಟಯಮಿಗಳಿಗೆ ॥ ಕೊಡುತ ಕಮಂಡಲ ದಂಡಾಶ್ರಮ ಸಹಿ। ತೊಡನೆ ಶ್ರೀಹರಿ ನಿನ್ನಡಿಗಳ ಪೂಜೆಯ । ನಡೆಸಿ ನೈವೇದ್ಯವ ಷಡುರಸಾನ್ನದಿ ಬುಧ । ಪಡೆಗಳ ಸಾಸಿರ ಕಡೆಗೆಸಗುಣಿಸುವೆ ॥ ಶ್ರೀಲೋಲ ಪಾಲಿಸೆನ್ನಾ ॥ ೯ ॥ ವರ ಅಷ್ಟ ಮಠಾಧಿಪರು । ಭೂಸುರರಿಂಗೆ । ಗುರುಗಳಾಗಿ ಮೆರೆವರೂ ॥ ಎರಡು ವತ್ಸರಕ್ಕೊರ್ವ ಹರಿ ನಿನ್ನ ಪೂಜಿಸು । ತ್ತಿರುತ ರಥದಿ ಮಕರ ಮಹೋತ್ಸವಂಗಳ ॥ ವಿರಚಿಸಿ ನಡೆಸುವ ಪರಿ ವೈಕುಂಠದ । ಸಿರಿ ಸಮ ವೈಭವ ಉರಗರಾಜನಿಂ । ಗರಿದು ಸ್ತುತಿಸುವಡೆ ಸುರನರಭುಜಗರ । ಪೊರವೆ ಎನ್ನೋ

ರ್ವನ ಕರುಣದಿಂ ಪಾಲಿಸೋ ॥ ಶ್ರೀಲೋಲ ಪಾಲಿಸೆನ್ನಾ ॥ ೧೦ ॥ ಪರಮ ದ್ವಾರಕಿಯು ಇದು । ರಜತಪೀಠ । ಪುರದಿ ಸುಸ್ಥಿರದಿ ನಿಂದೂ ॥ ಶರಣಜನ ರಿಷ್ಟಾರ್ಥ ಕರುಣಿಸಿ ಸಲಹುವ । ಗುರು ಸಾರ್ವಭೌಮ ಜಗದ್ಗುರು ಮಧ್ವಾಚಾರ್ಯರ ॥ ಕರದಿ ಪ್ರತಿಷ್ಠೆಯ ವಿರಚಿಸಿಕೊಂಡಿಹ । ಗಿರಿ ಗೋ ವರ್ಧನಧರ ವಿಶ್ವಂಭರ । ಹರಿ ಸರ್ವೋತ್ತಮ ವರದ ರಮಾಧವ । ನಿರತ ಸಲಹೋ ಶುಭಕರನೆ ಶ್ರೀಕೃಷ್ಣನೆ ॥ ಶ್ರೀಲೋಲ ಪಾಲಿಸೆನ್ನಾ । ದಯದಿ ಗೋ ಗೋ । ಪಾಲ ಹೊಂದಿದೆ ನಾ ನಿನ್ನಾ ॥ ೧೧ ॥ ಶ್ರೀ ॥

॥ ೫೧ ॥ ರಾಗ, ಭೈರವಿ [ಧಾಟಿ:- ಸಂದಿಕ್ಕೆಯ ಸ್ವಾಮಿಯವು] ತ್ರಿವುಡೆತಾಳ

ವೆಂಕಟೇಶಾ । ಜಯ ನಮೋ । ವೆಂಕಟೇಶಾ ॥ ಪಲ್ಲ ॥ ವೆಂಕಟೇಶನೆ ಎನಗೊದಗಿದೀ ಸಂಕಟವು ಪರಿಹರಿಸು ಬೇಗದಿ ॥ ವೆಂಕಟೇಶ ॥ ಅನುಪಲ್ಲ ॥ ಘೋರತರ ಸಂಸಾರ ಶರಧಿಯ । ಪಾರಗಾಣೆನು ಮೊದಲಿ ಅದರೊಳು । ಕ್ರೂರಯುಗ ದುರಿತದ ಲತೆಗಳು ಶ । ರೀರಕದು ವೇಷ್ಟಿಸುತಲುರುಳ್ವೆನು ॥ ಭಾರಿ ಮಾಗುಬ್ಬಸವ ಅದನಿ । ನ್ನಾರಿಗೊರಪಡೆ ಕ್ಕಾವರ್ತ್ತೆ ಹೊಣೆ । ಗಾರ ನೀ ನಲ್ಲವೆ ಸಲಹೊ ಎ । ನ್ನಾರ ಭಾರವು ನಿನ್ನದೈಸಲೆ ॥ ವೆಂಕಟೇಶಾ ॥ ೧ ॥ ಮೊದಲು ಜನ್ಮಾಂತರದಿ ನಾ ಮಾ । ಡಿದ ಋಣವ ಸಾಧಿಸಲು ಜನನಿಯ । ಉದರದಲಿ ಮಲಮೂತ್ರ ಮಾಂಸವು । ರುಧಿರ ಕ್ರಿಮಿ ಕದದೀರ್ಪುದದರೊಳು ॥ ಮುದದಿ ಕೈಕಾಲ್ಪುಡಿಸಿ ಪೊಲಸಿನೊಳ್ । ಹುದುಗಿ ತ್ರೈಶತ ದಿವಸ ಪರಿಯಂ । ತರದಿ ನನುಭವಿಸಿದ ವ್ಯಥೆಯ ಆ । ಪದನಗಳು ನಿನಗದುವೆ ಗೋಚರ ॥ ವೆಂಕಟೇಶಾ ॥ ೨ ॥ ಪೊಡವಿಯೊಳಗುದ್ಭವಿಸಿದಾಕ್ಷಣ । ಬಿಡದೆ ಕ್ಷುಧೆ ಪೀಡಿರ್ಸತಲಳಲ್ಪರೆ । ವಡಲ ಬೇನೆ ಈ ಮಗುವಿಗೆನ್ನು । ತ್ತಡಿಗಡಿಗೆ ಮೂಗೊತ್ತಿ ಕೈಕಾಲ್ ॥ ಪಿಡಿದು ಮದ್ದನೆ ಕುಡಿಸುವರು ಮೈ । ಯುಡಗಿರುವೆ ಸುಶಿಕವಿಯೆ ಮರುಗಿದರ್ । ಕಿಡಿವಳ್ಳೆ ತ್ಯಾ ಮೊಲೆಯ ಬ್ಯಾಗೆ ಆ । ಕಡು ಭವಣೆ ನಿನಗರಿಕೆಯ್ಯೆ ॥ ಜಯ ವೆಂಕಟೇಶಾ ॥ ೩ ॥ ತರಹರಿಸಿ ತರಳತ್ವವನು ಬರೆ । ಮರುಳರಾವದಿ ದಿನಕಳಿದೆ ಸ್ಮರ । ವಿರಹ ಬಾಧಿಸೆ ಪ್ರಾಯದಿಂ ಮತಿ । ಮರದು ನಿನ್ನನು ಸ್ಮರಿಸದಾದೆನು ॥ ಪಿರಿದನದರಿಂದೀಗ ಕ್ಲೇಶದಿ । ಕರಗುವೆನು ಮನವಿರವ ನೀನದ । ನರಿವೆ ಸಚರಾಚರಭರಿತ ಪರಿ । ಹರಿಸುತೆನ್ನನ ವರತ ಪಾಲಿಸೋ ॥ ವೆಂಕಟೇಶಾ ॥ ೪ ॥ ಮರವೆ ನಿನ್ನನು ಸುಖದ ವೇಳ್ಯದಿ । ಸ್ಮರಿಪೆ ಆಸತ್ತಿನೊಳು ಜಡಮತಿ । ಬರಡ ದುಷ್ಟಾಧಮನು ಅತಿಮದ ।

ಭರಿತ ನಾನೆಲೊ ದೇವ ವಿಶ್ವಂ ॥ ಭರನೆ ಎಣಿಸದಿರೆನ್ನ ಶತಸಾ। ವಿರ ಅನಂತಪರಾಧ ಕ್ಷಮಿಸುತ । ಕರುಣಿಸನ್ನಿಷ್ಟಾರ್ಥ ಭಕ್ತರ। ಪೊರೆವ ಬಿರಿದುಂಟಾಗಿ ರಕ್ಷಿಸು ॥ ವೆಂಕಟೇಶಾ ॥ ೫ ॥ ಬಿಸಜನಾಭನೆ ನಿನ್ನ ನಾ ಥ್ಯಾ। ನಿಸವ ಮೊದಲಿನ ತಪ್ಪ ನೋಳ್ಪರೆ । ಬಸುರೊಳಗೆ ಶಿಶು ಮುವಡಿ ಮೈಯ್ಯನು । ಮಸಗಿದೊಡೆ ತ್ಯಾ ಯಾರೊಡನೆ ಕೋಪಿಸುವಳೆಲೊ ಜಗದೀಶ ಮನ್ಮನಸಿನ ದವೇಕ್ಷೆಯ ನೀಗ ಕರುಣಿಸು । ಪಶುಪತೀ ಬ್ರಹ್ಮಾಮರಾಳಿ ಪ್ರಸರಪಾಲಕ ನೀನಹುದೆಲೈ ॥ ವೆಂಕಟೇಶಾ ಜಯ ॥ ೬ ॥ ಉಣುವೆನಾ ಪೂರ್ವಾರ್ಜಿತವ ಎಂದೆನುತ ಭಾವಿಸಲೆಂತು ಎನ್ನಯ। ತನುಮನವು ಸಕಲೇಂದ್ರಿಯ ವಿಷಯಗ। ಳಿನಿತು ನಿನ್ನಾಧೀನವಲ್ಲವೆ ॥ ಎನಗದೆಲ್ಲಿ ಸ್ವತಂತ್ರ ಕರುಣಾ । ವನಧಿ ಪಾಲಿಸು ನೀ ಸಮರ್ಥನೆ। ಅಣುವೊದಲು ಚತುರಾಸ್ಯ ಪರಿಯು। ತೆಣಿಸಿ ಸೂತ್ರದಿ ಕುಣಿಸುವಾತನು ॥ ವೆಂಕಟೇಶಾ ॥ ೭ ॥ ಜನಿತದಾರಿ ಮಥ್ಯಾಂತ ಪರಿಯಂ। ತೆಣಿಸಿದರೆ ಹುರುಳಿಲ್ಲ ಕಾನನ। ಕೃಣುಗುರುಡ ಸುಳಿವಂತೆ ಈ ಭವ। ವನು ಜಯಿಸಿ ಪಾವನನಪಡೆ ತವ ॥ ಘನ ಪದಾಂಬುಜ ನೆನಸಿ ದೃಷ್ಟಿಯಿಂ। ತೆನಿತು ನೀ ಪ್ರೇರಿಸಿದ ಬುದ್ಧಿಯ। ನೆಣಿಸುವವ ನಾ ಸ್ಮರಿಸುವೆನು ಹೇ। ವನಜನಾಭ ನಮೋ ನಮೋ ಜಯ ॥ ವೆಂಕಟೇಶಾ ॥ ೮ ॥ ಒಲಿಯುಲಿಲ್ಲವೆ ದೇವ ನೀ ಮು। ನ್ನಿಲಿ ಪ್ರಹಲ್ಲಾದಂಬರೀಷಜ। ಮಿಳ ರುಕ್ಮಾಂಗದ ಧ್ರುವ ಗಜೇಂದ್ರಗೆ। ಬಲಿ ವಿಭೀಷಣಕ್ರೂರರುದ್ಧವ ॥ ಕಲಿ ವಿಜಯ ದ್ರುಪದಜೆ ಸುದಾಮ ಸು। ಫಲ ಭಕುತ ಸಂಜಯಕೆ ಕರುಣಾ । ಜಲಧಿ ತವಗೆನ್ನಳಲು ಗೋಚರ। ಸಲಿಸುವಡೆ ವಿರಿದಿಲ್ಲ ನಿನಗದು ॥ ವೆಂಕಟೇಶಾ ॥ ೯ ॥ ಶ್ರುತಿಗಳನು ಅಜಗಿತ್ತೆ ಸುಧೆ ಸುರ। ಪತಿಗೆರದೆ ಭೂಮಿಯನುಳುಹಿ ಕೊ। ಗುತ ಕರದ ಅರ್ಭಕನ ಸಲಹುತ। ಸತತ ಬಲಿದ್ವಾರವನು ಕ್ಯಾವುತ ॥ ಪಿತನನುಜ್ಞೆಯ ಸಲಿಸಿ ಭಾಸ್ಕರ। ಸುತಗೊಲಿದು ಗೋಕುಲವ ರಕ್ಷಿಸಿ। ವ್ರತೆಯರಿಂಗೆ ಕೈಗೊಟ್ಟು ಹಯವೇ। ರುತ ತ್ರಿಜಗ ಪಾಲಿಸಿದುದಿಲ್ಲವೆ ॥ ವೆಂಕಟೇಶಾ ॥ ೧೦ ॥ ನೀನೆ ಸರ್ವವ್ಯಾಪಕನು ಸರ್ವಜ್ಞ। ನೀನೆ ಸರ್ವಜಗತ್ ಪ್ರವರ್ತಕ । ನೀನೆ ಸರ್ವಾಧಾರವಿಗ್ರಹ। ನೀನೆ ಸರ್ವಾಶ್ರಿತರನುಗ್ರಹ ॥ ನೀನೆ ಸರ್ವೇಶ್ವರ ದಯಾನಿಧಿ। ನೀನಖಿಳ ಬ್ರಹ್ಮಾಂಡನಾಯಕ। .... ॥ ವೆಂಕಟೇಶಾ ॥ ೧೧ ॥ ಜಯ ನಮೋ ಜಗದೀಶ ಜಗದಾ। ಶ್ರಯ ನಮೋ ಗೋವಿಂದ ಹರಿಕೀ। ರ್ತಯ ನಮೋ ಮತ್ಸರ್ವ

ಭಾರ್ಗವ್ಯೋ। ಪಯ ನಮೋ ಜಯಪ್ರದ ವಿಪರ್ಧನ ॥ ಪ್ರಿಯ ನಮೋ ಸದ್ಭಕ್ತ ಲೌಘ ನಿ। ಭರ್ಯ ನಮೋ·· ··········· ···· ·· ·········

·········ನಮೋ ನಮೊ ರಕ್ಷಿಸೈ ಹರಿ ॥ ವೆಂಕಟೇಶಾ ॥ ೧೨ ॥ ಸತ್ವ ರಜತಮ ಗುಣಕೆ ಏಕೋ। ವಿಷ್ಣು ನೀನೇ ಧಿಟವೆನುತ ಶ್ರುತಿ । ಮೊತ್ತ ಉಸುರುತಲಿದೆ ಪರಾತ್ಪರ। ವಸ್ತು ನಿನ್ನನು ದೃಢದಿ ನಾ ಭಯ ॥ ಭಕ್ತಿಯಲಿ ಧ್ಯಾನಿಪಡೆ ನಾನೇನ್। ಶಕ್ತನೇ ನೀ ದಯದಿ ಎನ್ನಿ। ಸ್ವಾರ್ಥ ತಿಳಿದೀಕ್ಷಣ ಸಲಿಸು ಪಟ। ಭಕ್ತಸ್ಥರ ವೆಂಕಟ ರಮಾಪತೆ ॥ ವೆಂಕಟೇಶಾ ॥ ೧೩ ॥ಶ್ರೀ ॥

॥ ೫೨ ॥ ರಾಗ, ಗೌಳಪಂತು [ಧಾಟಿ:- ನಾಶಿಕಲಿನ್ನಳವೆ ಕೀರ್ತನೆಯಾ] ಆದಿತಾಳ

ಕರುಣಿಸೊ ಭಾಗ್ಯಪ್ರದಾಯಕಾ ॥ ಶ್ರೀವೇಂಕಟನಾಯಕ ॥ ಕರುಣಿಸೊ ॥ ಪಲ್ಲ ॥ ಕರುಣಿಸು ವೇದಾಗಮ ವೇದ್ಯಾ। ಶರಣಾಗತ ಜನಕನನಾಶ್ರಿತಸಾಧ್ಯಾ। ಸುರುಚಿರ ಪೀತಾಂಬರ ಶಂಖ ಸುದರ್ಶನ ಪದ್ಮಗದಾಧರ ಇಷ್ಟಾರ್ಥವ ನೀ ॥ ಕರುಣಿಸೊ ಭಾಗ್ಯಪ್ರದಾಯಕಾ ॥ ಅ. ಪ. ॥ ಅತುಲಿತ ಮಹಿಮಾರ್ಣವ ಸುಚರಿತ್ರಾ। ಅತಿ ಸೌಂದರ ಸಲಿಲಜದಳ ನೇತ್ರಾ। ಶಿತಕಂಠಾದಿ ವಿಬುಧನುತಿ ಪಾತ್ರಾ। ದಿತಿಜಾರಣ್ಯ ಪ್ರಭಂಜನ ಮಿತ್ರಾ ॥ ಸತತಾನಂದ ಮನೋಹರಾ। ಸದಯಾನಿಧಿವಿಗ್ರಹ। ಪತಿತಪಾವನ ಶ್ರೀವರಾ ॥ ಶ್ವೇತಾಸನವರ ಶಾಶ್ವತ ವೈಕುಂಠಪುರೀಶ್ವರಾ। ತ್ರೈಜಗದೋದ್ಧಾರಾ ॥ ವ್ಯತಿತಾಯುತನಾಥ ಕ್ಷಮ ಧಾಮಾ। ಚತುರಾಸ್ಯ ವಾಚೋಸ್ಪತಿ ಮುಖ್ಯ ನಿರ್ಜರ ಸಾರ್ವಭೌಮಾ। ದಾರಿದ್ರ ಧ್ವಂಸಾಮಿತ ಪುಣ್ಯ ಸತ್ಫಲ ಸಂಪೂರಣ ಕಾಮಾ। ಕಲುಶೌಘವಿರಾಮಾ ॥ ಹಿತಕರ ಸೃಷ್ಟಿ ಸ್ಥಿತಿ ಲಯ ಸುಗುಣಾನ್ವಿತ ಏಕೋ ವಿಷ್ಣು ಸ್ವತೇವಾ। ಸೂನೃತಾಮೃತ ಭಾಷಿತ ಸಂಜೀವಾ। ದುಷ್ಕೃತವರ್ಜಿತ ಮಹಾನುಭಾವಾ। ಪ್ರೀತಯ ಪ್ರೀತಿಮಾಶ್ರಿತಜನ ವಾಂಛಿತ। ಶ್ರುತಿ ಸ್ಮೃತಿತತಿ ಸಂಸ್ತುತ ರತಿಪತಿ ಪಿತ ॥ ಕರುಣಿಸೊ ॥ ೧ ॥ ಮಕರಕುಂಡಲ ಧೃತಕೌಸ್ತುಭವನಾಲಾ। ಮುಕುತ ಲಲಾಟ ತ್ರಿನಾಮ ವಿಶಾಲಾ। ಶಕಟ ಪ್ರಲಂಭಾಸುರ ಭಯಕಾಲಾ। ಭಕತುಂಡ ವಿದಾರಣ ಗುಣಶೀಲಾ ॥ ಪ್ರಕಟ ಗೋಕುಲೋದ್ಧಾರಕಾ। ಸಚರಾಚರ ಜೀವಾ। ನಿಖಿಳ ವಿಶ್ವಾಂಡ ಪ್ರೇರಕಾ। ನಿಯತಾಶ್ರಿತವರ ಸದ್ಭಕ್ತ ಪ್ರೇಮ ಸಂಸಾರಿಕಾ। ಆಮಯ ಪರಿಹಾರಕ । ಸಕಲಂತರ್ಯಾಮಿ ಶಾಶ್ವತ ಫಲದೀಕ್ಷಾ। ಅಕ್ರೂರ ಮುಖ್ಯಾನಕೆ ದುಂದುಭಿ

ಯುದ್ಧವ ಯದು ಸಂಚಯರಕ್ಷಾ । ಗಂಗಾಸುತ ವಿದುರಾಂಬಕ ವಾಂಛಿತ ಶೌರ್ಯಾನ್ವಿತ ಪಾಂಡವ ಪಕ್ಷಾ । ದುರ್ಯೋಧನ ಶಿಕ್ಷಾ । ರುಕುಮಾಂಗದ ಬಲಿಯಕುಟಿಲ ಧ್ರುವ ಧಾರ್ಮಿಕ ಪ್ರಹಲ್ಲಾದ ವಿನುತ ಶ್ರೀಶಾ । ನಾಟಕ ಧರ ಅಪರಿಮಿತ ವಿಲಾಸಾ । ಭಾವಿಕ ಸಜ್ಜನ ಮಾನಸ ವಾಸಾ ॥ ವಿಕಸಿತ ಕಮಲಾಂಬಕ ನಾರಾಯಣ । ಪ್ರಕೃತಿ ವಿಕೃತಿ ಗುಣ ಶಕುತ ಜಗನ್ಮಯ ॥ ಕರುಣಿಸೊ ॥ ೨ ॥ ಉತ್ತಮ ಪಯ ಸಂಚಾರಣಧೀರಾ । ಗೋತ್ರಧರಾ ಮೃತ ಮಥನ ವಿಲಾಸಾ । ಸತ್ಯ ಕ್ಷಿತಿಚೋರಾಸುರದ್ವೇಷಾ । ಭಕ್ತೋದ್ಧಾರ ವ್ಯಯಾಕೃತಿವೇಷಾ ॥ ಸತ್ವಾಧಿಕ ತ್ರಿವಿಕ್ರಮಾ । ಬಲಿಸಂಚಿತ ಫಲಪ್ರದ ಯುಕ್ತಾರಣ್ಯ ಶೋಭಾಶ್ರಮಾ । ಪ್ಲವಗಾಪ್ತಯು ಪಾಲಕ ನಿತ್ಯಾನಂದ ಕಲ್ಪ ದ್ರುಮಾ । ರಾಧಾಮುತ ಪ್ರೇಮಾ । ರಕ್ತಾಂಗ ಪ್ರಸಿದ್ಧ ಸುಚಿರವ್ರಾತಾ । ಸಪ್ಷಿಸಿತಾರೂಢ ಪ್ರತ್ಯಕ್ಷಾ । ಖಡ್ಗಾಯುಧಧರ ಪ್ರಖ್ಯಾತಾ । ವರ ಮಂಗಲ ಪುರ ವಟಪತ್ರಾಧಿಪ। ಶುಭಕರ ಶ್ರೀವೆಂಕಟನಾಥಾ । ಅನಶ್ರಿತ ಮಮ ದಾತಾ। ಸತ್ಯಾತ್ಮಕ ಪುರುಷೋತ್ತಮ ಭವಜಲ। ಉತ್ತಾರಣ ನಾಮ ವಿಶಾಲಾ । ಶ್ರುತಿ ಶಾಸ್ತ್ರ ಸುಗೀತಾಗಮ ಲೋಲಾ । ತಾಪತ್ರಯ ಹರ ಸದ್ಗುಣಶೀಲಾ ॥ ಸುತ್ರಾಮ ವಿನುತ ಚಿತ್ರ ವಿಚಿತ್ರ ಚರಿತ್ರ ಸುಪಾತ್ರ ಪವಿತ್ರ ರಮಾಪತೇ ॥ ಕರುಣಿಸೋ ॥ ೩ ॥ ಶ್ರೀಶ ॥

॥ ೫೩ ॥ ರಾಗ, ಆಸಾವೇರಿ [ಧಾಟಿ:- ಪಾಲಿಸ ಮಹಾದೇವಿ] ತ್ರಿವುಡೆತಾಳ

ಪಾಹಿ ಶ್ರೀ ಮಹಾದೇವಾ । ಶ್ರೀಮಹಾದೇವ ನಿ। ಸ್ಸೀಮ ಭಕ್ತಸುಪ್ರೇಮಾ ॥ಪಾಹಿ ಶ್ರೀ ॥ಪ॥ ಕಾಮಿತಾರ್ಥಪ್ರದಾತಾ। ನಿರ್ಜರ ಸಾರ್ವ। ಭೌಮ ಶಂಭು ಸನಾಥಾ । ಕೀರ್ತಿ ವಿಖ್ಯಾತಾ । ಸೋಮಾರ್ಕರುಚಿರಾಮಿತಾ ॥ ವಿಭ್ರಾಜಿತ ॥ ವ್ಯೋಮಕೇಶ ಸನಾಮ ಘನರಣ । ಭೀಮ ಮುಖ ನಿರ್ಧೂಮ ದಕ್ಷ ಪಿ । ರಾಮ ಸದ್ಗುಣಧಾಮ ನಿಗಮ । ಸ್ತೋಮನುತ ಸುತ್ರಾಮ ಪೂಜಿತ ॥ ಪಾಹಿ ಶ್ರೀ ॥ ೧ ॥ ಸ್ಥೂಲಾಂಗಜ್ವವಿಭೀಕರಾಳ ಪಂಚವಕ್ತ್ರ ವಿಶಾಲ ಶೋಭ ವಿಶೇಷಾ । ನಿತ್ಯಾನಂದ । ನೀಲಕಂಠ ಮಹೇಶಾ । ಕೌಶಿಕ ಮಾನಿ । ಜಾಲ ಬ್ರಹ್ಮಾಂಡಧೀಶಾ ॥ ರಜತಾದ್ರಿವಾಸಾ ॥ ಕಾಲಕಾಲ ತ್ರಿಶೂಲ ಖಡ್ಗಕಪಾಲ ಗೋನಸಮಾಲಧೃತ ಋಷಿ । ಗಾಲವಾರ್ಚಿತ ಶೈಲ ಜಾಧವ । ಲೀಲ ತ್ರಿಜಗತ್ಪಾಲ ಗುಣನಿಧೆ ॥ ಪಾಹಿ ಶ್ರೀ ॥ ೨ ॥ ಪಟನಿನಾದ ವಿಲೋಲ ನಟನಾನಂದ ಸುಶೀಲ ಘಟಿತ ರೌದ್ರಾಕಾರಾ । ಅಘೋರ

ಸಂ । ಕಟ ಕ್ಲೇಶೌಘ ಕುಠಾರ । ಮಹೋಗ್ರ ಉತ್ಕಟ ವಿಷಕಪಮಿತಹಾರಾ ॥ ತ್ರಿಭುವನೋದ್ಧಾರಾ ॥ ಪಟುತರರಾಜಿತ ನಿಟಿಲ ನಯನ ಸು । ಭಟ ಮಥನ ದ್ವಿಜ ಪಟಲವಿಕ್ರಮ । ಕುಟಿಲ ಶೂನ್ಯಪ್ರ ಕಟಕಲುಷ ಭಯ।ಕಟಕಮಥನ ಧೂರ್ಜಟ ಜಟಾಧರ ॥ ಪಾಹಿ ಶ್ರೀ ॥ ೩ ॥ ಭೃಂಗೀಶಪ್ರಿಯ ಸಾಧುಸಂಗ ಸುಸ್ಥಾವರ ಜಂಗಮಾಶ್ರಿತ ಪಾದಾ । ಭವದೂರ ಭ। ಸ್ಮಾಂಗ ವಿಶ್ವವಿನೋದಾ। ಪ್ರಮಥಾದಿ ಭೂ। ತಂಗಣ ತಮ ಪ್ರಸಾದಾ ॥ ವೇದಾಂತ ವೇದ್ಯಾ ॥ ತುಂಗ ಶೌರ್ಯ ಮತಂಗ ವಸನ ಕು । ರಂಗಧರ ಧೃತ ಮಂಗಳಾಬ್ಧಿ ಅ । ಭಂಗ ವೃಷಭ ತುರಂಗವಮಿತ ಕೃ। ಪಾಂಗ ದಿವ್ಯ ಸುಲಿಂಗ ಶಾಶ್ವತ ॥ ಪಾಹಿ ಶ್ರೀ ॥ ೪ ॥ ಸತತ ಗೋಕರ್ಣ ಪತ್ತಣವಾಸ ಮನ್ಮನೋಹಿತ ಮಹಾಬಲೇಶ ದೇವಾ । ಸದ್ವೈಷ್ಣವ । ಮತಮುದ್ಧರ ಸಂಜೀವಾ । ಅಖಿಲೇಶಾ ಅಪ್ರತಿಮ ಮಹಾನುಭಾವಾ ॥ ದೇವಾದಿದೇವಾ ॥ ಶ್ರುತಿ ಸ್ಮೃತ್ಯಾಗಮ ತತಿವಿನುತ ಸುಲ । ಲಿತ ಕಥನ ಮತಿಯುತ ರಮಾಪತಿ । ಯತುಳ ಪ್ರಿಯ ಸುಂಗತ ಕೃಪಾರ್ಣವ । ಪತಿತ ಜನವಾಂಛಿತ ಸದಾಶಿವ ॥ ಪಾಹಿ ಶ್ರೀ ಮಹಾದೇವಾ ॥ ॥ ೫ ॥ ಶ್ರೀ೬೩ ॥

॥ ೫೪ ॥ ರಾಗ. ಕಾಂಬೋಧಿ [ಪಾಲಿಸೊ ಮಹಾದೇವಾ ।] ತ್ರಿವುಡೆತಾಳ

ಪಾಲಿಸೆ ಮಹಾದೇವೀ । ಲೋಕ ಸಂಜೀವೀ । ಪಾಲಿಸೆ ಮಹಾದೇವೀ॥ ॥ ಪಲ್ಲ ॥ ಪಾಲಿಸೆನ್ನನು ಪರಮಗುಣನಿಧಿ। ಮೂಲರೂಪಿಣಿ ಶ್ರೀಲತಾಂಗಿಯೆ॥ ॥ ಪಾಲಿಸೆ ಮಹಾದೇವೀ ॥ ಅನು ॥ ಇಂದುಧರನ ಪ್ರೀತೆ । ಲೋಕ ಪ್ರಖ್ಯಾತೆ। ಸ್ಕಂದ ಗಣಪ ಮಾತೇ ॥ ಸುಂದರೀ । ದೈತ್ಯಾದಿ ಸಮರ ಧುರಂಧರೀ । ಕೌಸ್ತುಭ ಸುಕಂಬುಕಂಧರೀ ॥ ವಂದಿತಾಂಘ್ರಿ ಪ್ರಕಾಶ ರವಿಶಶಿ । ಕುಂದರದನೆ ಮುಕುಂದ ಸೋದರಿ । ಇಂದ್ರ ಮುಖ್ಯಾಮರ ಕದಂಬ ಸುವಂದ್ಯೆ ನಿರತಾನಂದದಿಂದಲಿ ॥ ಪಾಲಿಸೆ ಮಹಾದೇವೀ ॥ ೧ ॥ ಶಂಕರ ಮನಮೋಹಿನೀ । ಸಲೆ ಸರ್ಪವೇಣೀ । ಪಂಕಜದಳಲೋಚನೀ ॥ ಶಂಕರೀ । ಸುಜನಾದಿ ದುರಿತ ಭಯಂಕರೀ । ನವಕುಸುಮಮಾಲಾಲಂಕರೀ ॥ ಪಂಕಜಾಸನವಿನುತೆ ವಿಮಲೆ ಶಶಾಂಕವದನೆ ಸುಶೀಲೆ ವರದಾ । ಲಂಕೃತದಿ ತವ ಚರಣ ಭಜಕರಾತಂಕವನು ಪರಿಹರಿಸೆ ಕರುಣದಿ ॥ ಪಾಲಿಸೆ ಮಹಾದೇವೀ ॥ ೨ ॥ ದುರುಳ ಮಹಿಷಮುಖ್ಯರೂ । ಬಾಧಿಸೆ ಸುರರು । ಮರೆಹೊಕ್ಕು ನುತಿಸಿದರೂ ॥ ಧರಿಸಿದೇ । ಕೀರ್ತಿಯನು ದಿತಿಜರನೊರಸಿದೇ । ಸುಮನಸರ ಭಯವಪಹರಿಸಿದೇ ॥ ನಿರತ

ಧ್ಯಾನಿಪ ಶರಣರನು ಉ। ದ್ಧರಿಪ ಬಿರಿದನು ತಾಳ್ದಿ ತ್ರಿಜಗಗಿ । ಹರ ಮಹಾ ಮಂಗೇಶ ಮೋಹನ। ದರಷಿ ಶಾಂತಾದುರ್ಗೆ ಶಾಂಭವಿ ॥ ಪಾಲಿಸೆ ಮಹಾ ದೇವೀ ॥ ೩ ॥ ಶ್ರೀ ॥

॥ ೫೫ ॥ ರಾಗ, ಕಲ್ಯಾಣಿ [ಧಾಟಿ:- ಸೋಡು । ಸುನದಿ ಕೊಂಡಾಡು] ಆದಿತಾಳ

ದೇವೀ ಸುಜನಸಂಜೀವಿ । ಪರಮ ಕೃಪಾವನಧಿಯು ನೀನೇ ॥ ಪಾವನಾಂಗಿ ಸುರಾವಳಿವಿನುತೆ । ಶ್ರೀವರಹಿ ವೈಷ್ಣವಿ ಕಾತ್ಯಾಯನಿ । ಕೇವಲ ತವ ಪದ ಸೇವಕ ನಾ ಧಿಟ ॥ ದೇವಿ ॥ ಪ ॥ ಶಾಂಭವೀ । ನಾರದಾದಿ ಮುನಿ ನಿಕುರುಂಬ ಪೋಷೆ ಜನನೀ । ದೇವೀ । ಕಂಬುಕಂಠೆ ಕಲ್ಯಾಣಿಯೆ ಶುಂಭ ನಿಶುಂಭ ದೈತ್ಯಮಥನೀ ॥ ಅಂಬಿಕೇ । ನಿಜಭಕ್ತಸಮೂಹ ಕುಟುಂಬಿಕೇ ॥ ನಿನ್ನಂಘ್ರಿ ಯುಗಳನರೆ॥ ನಂಬಿ ಬಂದೆ ಎನ । ಗಿಂಬುದೋರಿ ದುರ್ಗಾಂಬಿಕೇ ಸುಖವಾರಂಭದಿ ಪಾಲಿಸೆ ॥ ದೇವಿ ॥ ೧ ॥ ಸೌಂದರೇ । ತ್ರಿಜಗನ್ಮಯೆ ಸನಕಸನಂದನಾದಿ ವಿನುತೇ । ದೇವೀ । ಮಂದಯಾನೆ ಸ್ಥಾವರಜಂಗಮ ಜನವಂದ್ಯೆ ಚಾರುಚರಿತೇ ॥ ಚಂದಿರಾ । ನನೆ ಮುನಿಜನ ಮಾನಸಮಂದಿರಾ । ವಾಸಿನಿ ಹೈಮಾವತಿ ॥ ಕುಂದರಾಂಗಿ ಪೂರ್ಣೇಂದುವದನೆ ಆ । ನಂದಭರಿತೆ ಗುಣಸಿಂಧು ಮಹೇಶ್ವರಿ ॥ ದೇವಿ ॥ ೨ ॥ ಅಭಿಹಿತೇ । ಸೂನೃತೆ ಸುಲಲಿತೆ ಪ್ರತಿರಹಿತೆ ನಿನ್ನ ಪದವಾ । ಕಂಡೆನು । ಅತುಲಸೌಖ್ಯ ಶಾಶ್ವತ ಸುಫಲಪ್ರದ ಸತತ ಪಾಲಿಸವ್ವಾ ॥ ಮತಿಯುತೇ । ಸನುಮತ ಶಂಖ ಸುದರ್ಶನ ಧೃತ ಯುತೇ॥ ಶ್ರೀವಿಷ್ಣುಶಕ್ತಿ ದೇ॥ವತೆ ನಮೋ ನಮಃ ಶ್ರಿತಜನವಾಂಛಿತೆ । ಶ್ರುತಿ ಸ್ಮೃತಿತತಿಸಂಸ್ತುತೆ ಸರ್ವಾತ್ಮಕಿ ॥ ದೇವಿ ॥ ೩ ॥ ಕಾಮಿತಾಮಿತ । ಫಲ ದಾಯಕಿ ಅಮಮಾನಿ ಆದಿಮಾಯೇ । ನಿನ್ನಯ । ನಾಮ ಜಿವ್ಹ ಸಂಜೀವನ ಮಣಿ ನಿಸ್ಸೀಮೆ ಎನ್ನ ತಾಯೇ॥ ಪ್ರೇಮದೀ। ರಕ್ಷಿಸು ಅನಶ್ರ್ವತ ಸುಕ್ಷೇಮದೀ॥ ದಯದೋರೀಕ್ಷಣ ॥ ಸುರಸಾರ್ವಭೌಮೆ ಗುಣಧಾಮೆ ತವಾಂಘ್ರಿಯ । ತಾಮರಸಗಳಿಗೆ ನಾ ಮಣಿವೆಸು ಧಿಟ ॥ ದೇವೀ ॥ ೪ ॥ ಕಂಡೆನೂ । ಶೂಲಾಗ್ರದಿ ಮಹಿಷನ ಮುಂಡಕೂರಿ ಸವರೀ । ದುದರಿಂ । ಮುಂಡಕೂರವೆನ್ನುವ ನಗರದಿ ಸ್ಥಿರಗೊಂಡು ನಿಂತೆ ಗೌರೀ ॥ ಚಂಡಿಕೇ । ಶ್ರೀಪತಿಯ ಭಗಿನಿ ಚಾಮುಂಡಿಕೇ ॥ ಎನಗಿಷ್ಟಾರ್ಥವ ಕೊಡು ॥ ಖಂಡಲಾದಿ ಸುರತಂಡವಿನುತೆ ಅಖಿ । ಳಾಂಡ ಕೋಟಿ ಬ್ರಹ್ಮಾಂಡನಾಯಕಿ ॥ ದೇವಿ ॥ ೫ ॥ ಶ್ರೀ ॥

॥ ೫೬ ॥ ರಾಗ, ಯದುಕುಲಕಾಂಬೋಧಿ [ಧಾಟಿ:- ಸಾರಿದೆನೆಲೊ ನಿನ್ನ] ತ್ರಿಪುಟತಾಳ

ವೆಂಕಟರಮಣ ದೇವರ ದೇವ ನಿನಗಿದು । ಸಂಕಟ ಬಂದೊದಗಿದು
ದ್ಯಾತಕೇ ॥ ಪುಂಗೊಟ್ಟನೊಳು ಆಲದೆಲೆಯ ಮೇಲೊರಗಿಪ್ಪ । ದುಂಗುಟ
ಬಾಯೊಳಗಿಟ್ಟು ಬಾಲಕನಾದಾ ॥ ವೆಂಕಟರಮಣ ॥ ಪಲ್ಲ ॥ ಮೋದಭರಿತ
ಮಹದಾದಿಲೋಕಂಗಳ । ಭೇದಿ ಸುಷುಮ್ನಾನದಿ ಬಹಿರೋದಕಾ ॥ ಶ್ರೀದೂತೀ
ವಿಶಲ ಪ್ರಮೋದದಿ ವಟಪತ್ರ। ಆವರಿಸಿದ ಶಯನಾ ಕಮಲದಳನಯನಾ ॥
ಆದಿಯೊಳಜನ ಪುಟ್ಟಿಸಿದ ಲೀಲೆ। ನೀನು। ಸಾಧಿಸಿ ತಮನ ಕುಟ್ಟಿದ ಮೇಲೇ।
ಆ । ವೇದಗಳಜಗೆ ಕೊಟ್ಟಾಗಲೇ ॥ ಮೋಹಿನಿಗೆನುತಲಿ ಮಧುಕೈಟಭರ
ಸೀಳೆ । ಭೂದೇವಿಯನು ರಚಿಸಿ ಈರೇಳು ಲೋಕವ ॥ ಭೇದವಿಲ್ಲದೆ ಧರಿಸಿ
ಗಿರಿಯನು । ಆದಿ ವರಹನಾಗಿ ದೈತ್ಯನ । ಕಾದಿ ಗಲಿದು ವಿನೋದದಿಂದಲಿ ।
ಮೇದಿನಿಯ ತಂದಿರುವ ಸಾಹಸಿ ॥ ವೆಂಕಟರಮಣ ॥ ೧ ॥ ಹಿರಣ್ಯಕಶ್ಯಪ
ಸಣುಗನು ಕರೆಯಲು ನಿನ್ನ । ಕರುಣದಿ ಕಲ್ಲಕಂಭದೊಳುದಿಸೇ ॥ ಶರಣಾ
ಗತವಾತ್ಸಲ್ಯವ ತೋರಿಸಲು ಸುರ। ನರೋರಗರು ಕಂಗೆಡಲದ್ಭುತವೋ ॥
ದುರುಳ ದೈತ್ಯನನುದರವ ಸೀಳೀ। ಆ । ಕರುಳಮಾಲೆಯ ಕಂಧರದಿ ತಾಳೀ ।
ಅಜ। ಗರಳಕಂಧರ ಸುರರ್ಬೆದರೆ ಕೇಳೀ ॥ ಪ್ರಳಯವಿಂದಹುದೆನುತ್ತಿಳಿದು ಬ್ಯಾ
ಬಿಡಲಾಗ । ತರಳಗಭಯವಿತ್ತಲ್ಲರನು ಸಂತೈಸುತ ॥ ಧರಣಿ ಈರಡಿ ಮಾಡಿ
ಸಲಿಯುತ । ಧರಣಿಪಾಲರ ಸದದು ಮುರಿಯುತ । ಧರಣಿಪಾಗ್ರಣಿ ಎನಿಸಿ
ನೀನೇ । ತರುಣಿ ಸಹಿತಾರಣ್ಯದೊಳಗಿದ್ದ ॥ ವೆಂಕಟರಮಣ ॥ ೨ ॥ ಗೊಲ್ಲ
ನಾತ್ಮಜನೆಂದೆನಿಸಿ ಗೋಕುಲದೊಳ । ಗುಲ್ಲಾಸದಲಿ ಬಾಲಚಾರಿತ್ರವಾ ॥
ಪಲ್ಲವಿಸುತ ಗೋಪಸಖಿಯರ ಮನೆಮನೆ । ಯಲ್ಲೀರ್ವರ್ ಪಾಲ್ಬೆಣ್ಣೆಮೊಸರನೆ
ತೆಗೆದುಂಡು ॥ ಕಳ್ಳನೆನಿಸಿಕೊಂಬುದ್ಯಾತಕೋ । ವೇಶ್ಯ। ವೇಶ್ಯಕ್ಕವರು ದೂರ
ಲ್ಯಾತಕೋ । ಆ । ಹಳ್ಳಿಹೆಂಗಳ ಕೂಡಲ್ಯಾತಕೋ ॥ ಬಲ್ಲಿದ ತ್ರಿಪುರದ ಸತಿ
ಯರ ಗೆಲಿದು ನೀ । ಮಲ್ಲನೆ ತುರಗವಾಹನನಾಗಿ ಮೆರೆದೆಯೋ ॥ ಎಲ್ಲಿಗೆ
ಲ್ಲಿಗೆ ಕರೆಯೆ ಭಕ್ತರು । ನಿಲ್ಲದಲ್ಲಿಗೆ ಓಡುತೈದುತ । ಎಲ್ಲ ಸಂಕಟಗಳ ಪರಿ
ಹರಿಸಿ। ಸಲ್ಲಲಿತ ವರಗಳನು ಕೊಡುತಿಹ ॥ ವೆಂಕಟರಮಣ ॥ ೩ ॥ ಅಂಬರೀ
ಷನು ದ್ವಾದಶಿಯನು ಸಾಧಿಸಲಾಗ । ಡಂಭ ದುರ್ವಾಸ ಶಾಪವ ಕೊಡ
ಲೂ ॥ ಹಂಬಲಿಸುತ ಮುಂದೊಂದು ಕಾರಣಕ್ಕಾಗಿ । ಬೆಂಬಿಡದಟ್ಟಿದ
ಮುನಿಯ ಚಕ್ರದೊಳಂದು ॥ ಜಂಭಾರಿಸುತ ರಣರಂಗಾಗ್ರ। ಗನ್ಯಾ। ಗಂಬ

ರಕ್ಷಕನನುಗನುರಗಾಸ್ತ್ರ । ಬರೆ । ಸಂಭ್ರಮದಿಂದ ಪಾರ್ಥನ ತೇರಾ ॥ ಕುಂ
ಭಿನೀಗೊತ್ತಿದ ಪಾದಾರವಿಂದವ । ನಂಬಿದ ಭಕತರಿಗಿಂಬುದೋರಿ ಕಾವಾ ॥
ಅಂಬುಧಿಶಯನಂಬುಜಾಕ್ಷನೆ । ಅಂಬುಜೋದ್ಭವನಸುರಶಿಕ್ಷನೆ । ಎಂಬ
ಮಾನವರಿಂಗೆ ತಾನಹೆನೆಂಬ ಬಿರಿದನು ತೋರಿಸಲಹುವ॥ ವೆಂಕಟರಮಣ ॥
॥ ೪ ॥ ವೈಕುಂಠಪತಿಯೆ ಶ್ರೀಪತಿಯೆಂದು ನಾ ಮುನ್ನಾ । ಬಿಂಕಟದಲಿ
ಮನದೊಳಗೊಮ್ಮೆ ನೆನೆದರೆ ॥ ಕಂಕಟಕವುಟಾವಿ ಜಲಚರ ಪಶುಪಕ್ಷಿ ।
ಕಿಂಕಿಟ ಕಿಟಲೆಂಬ ಕೀಟಕ್ರಿಮಿಗಳೊಳು ॥ ಧಿಂಕಿಟ್ಟು ಲಾಲಿಸಿ ಬಳಲುವೆನೆ ।
ಇಂಥ । ಮಂಕಟ ಜಲುಮದಿ ತೊಳಲುವೆನೆ । ಮಹ । ಸಂಕಟದೊಳಗೆ ನಾಪಳ
ಲುವೆನೆ ॥ ನಿನ್ನ । ಸಂಕಟದೊಳಗಿಂದು ಮರ್ತ್ಯರೂಪದಿ ಬಂದು । ವೆಂಕಟ
ರಮಣನೆಂದಾನು ಸ್ಮರಿಸಲೆನ್ನ ॥ ಸಂಕಟವನಿದ ನಿನ್ನದಲ್ಲ್ಲಿ ! ವೆಂಕಟಾ ಬಿರಿ
ದಂಕ ನರಹರಿ । ವೆಂಕಟಾದ್ರಿ ಶ್ರೀ ತಿರುಮಲೇಶನೆ । ನೀಂ ಕಟಾಕ್ಷವನಿತ್ತು
ಸಲಹೊ ॥ ವೆಂಕಟರಮಣ ದೇವರ ದೇವ ॥ ೫ ॥ ಶ್ರೀ ॥

॥ ೫೭ ॥ ರಾಗ, ಕಲ್ಯಾಣಿ [ಧಾಟಿ:- ಆರು ಹಿತವರು ನಿನಗೆ] ಝಂಪೆತಾಳ

ಯಾಕೆ ನೀನಿಲ್ಲಿ ಪವಡಿಸಿದೆ ಜಗದೀಶಾ । ಶ್ರೀಕಾಂತ ಗೋವಿಂದ
ರಾಜ ಪಟ್ಟಣದೊಳಗೇ ॥ ಯಾಕೆ ನೀನಿಲ್ಲಿ ಪವಡಿಸಿದೆ ಜಗದೀಶಾ ॥ ಪಲ್ಲ ॥
ಚಲುವ ಕ್ಷೀರಾರ್ಣವದೊಳನುಗಾಲ ತೆರೆಯು ಘುಳು । ಘುಳಿಸಿ ಭೋ
ರ್ಗುಡಿಪ ಘೋಷವನು ಕೇಳ್ದು ॥ ಬಲು ಕರ್ಕಶತೆಗನ್ನುತಲಿ ಇದೇಕಾಂತ ।
ನಿಳಿಯವಿದೆ ಎಂದು ಬಂದಿಲ್ಲಿ ಮಲಗಿದೆಯಾ ॥ ಯಾಕೆ ನೀನಿಲ್ಲಿ ॥ ೧ ॥
ಬೆರಸಿ ನರಕಾಸುರನ ತರುಣನು ರಣಾಗ್ರದೊಳು । ನರಗೆಸೆದ ವರಪದಾಡೆಗೆ
ಎದೆಯನೂ ॥ ಭರದೊಳೊಡ್ಡುತಲಿ ಫಲುಗುಣನನುಳುಹಿಸಿ ನಿ । ಷ್ಠುರಕೆ
ನೋವೆಂದು ಈ ಪರಿಯೊಳ್ಮಲಗಿದೆಯಾ ॥ ಯಾಕೆ ನೀನಿಲ್ಲಿ ॥ ೨ ॥ ಅನುಗಾಲ
ಬಲಿಯ ಬಾಗಿಲ ಕ್ಯಾದುಯುವನ ಪಡಿ । ಯನು ಸಾಲದೆನುತ ನೀ ಕನಲಿ
ಮಲಗಿದೆಯಾ॥ ಮನದಿ ಮಾನವೆ ಅರ್ಜುನನ ಸಾರಥಿಕೆಯದುಂ । ಬಳಿಯು
ಸಲೆ ವಡಿಸಿಪೋದುದು ಎಂದೆನುತಲೀ ॥ ಯಾಕೆ ನೀನಿಲ್ಲಿ ॥ ೩ ॥ ಮುಪ್ಪಡರಿ
ದಬಲೆ ಕುಬುಜೆಯ ನೀ ಸೊಂಕಲು ಜಗದೊ । ಳಿಪ್ಪ ಜನರೆಲ್ಲ ಕೈತಟ್ಟಿ
ನಗುತಾ ॥ ಡಪ್ಪಳಿಯನಿಕ್ಕಲಾ ನಾಚಿಕೆಯದೋರಿ ನ । ಮ್ಮಪ್ಪ ನೀನಿಲ್ಲಿ
ಮಲಗಿಪ್ಪುದಹುದಹುದೇ ॥ ಯಾಕೆ ನೀನಿಲ್ಲಿ ॥ ೪ ॥ ಜಲಮೊಳಾಡುತ ಗಿರಿಯ
ನೆಗಹಿ ಬೆನ್ನುಳುಕಿ ಭೂ । ಲಲನೆಯನು ಪೊತ್ತು ತಂದಾಲಸ್ಯವೋ ॥ ಬಲು

ಭಟನ ಸೀಳಿ ಇಳೆಯುಳಿದು ಪದನಖದಿ ನೀ । ೦ಳಿಯಲೋಸುಗವೆ ಬೆಳ ಬೆಳದು ಮಲಗಿದೆಯಾ ॥ ಯಾಕೆ ನೀನಿಲ್ಲಿ ॥ ೫ ॥ ಝುಡಿಮ ಕ್ಷತ್ರಿಯರ ಘೋರಡವಿ ತಿರುಗುತ ದಣಿದು । ಕುಡಿದ ವಿಷಭ್ರಮಣೆ ಏರಿದ ಭಾವವೋ॥ ಬಿಡದೆ ಸ್ತ್ರೀಯರ ವ್ರತವಗೆಡಿಸಿ ಮ್ಲೇಂಛರನು ಸದೆ । ಬಡಿಬಡಿದು ಬೇಸರದೊ ಳೊರಗಿ ಮಲಗಿದೆಯಾ ॥ ಯಾಕೆ ನೀನಿಲ್ಲಿ ॥ ೬ ॥ ಸುಗುಣನಿಧಿ ಭಕುತರೇ ನೆಂದಡಪರಾಧವನು । ಬಗೆಗೊಳದೆ ಪಾಲಿಸುವೆನೆಂದಾಡಿದೇ ॥ ಜಗದೀಶ ಮಲಗಿ ಬಹು ಯುಗವ್ಯಾತು ಬೇಗೇಳು । ಅಗಲದಿರು ಎನ್ನ ರಕ್ಷಿಸೊ ರಮಾ ರಮಣಾ ॥ ಯಾಕೆ ನೀನಿಲ್ಲಿ ಪವಡಿಸಿದೆ ಜಗದೀಶಾ ॥ ೭ ॥ ಶ್ರೀಃ ॥

॥ ೫೮ ॥ ರಾಗ, ಕೇತಾರಗೌಳ [ಧಾಟಃ- ಸಾರಿದನೆಲೋ ನಿನ್ನಾ] ತ್ರಿವುಡೆತಾಳ

ಕರುಣಿಸೆನ್ನನು ವೆಂಕಟೇಶ ಎನ್ನೊಡೆಯಾ । ಹರಿಯೇ ದಮ್ಮಯ್ಯಾ ತೋರೆನಗೆ ನಿನ್ನಡಿಯಾ ॥ ಕರುಣಿಸೆನ್ನನು ॥ ಪಲ್ಲ ॥ ತಿರುಮಲೇಶನೆ ನಿನ್ನ ಚರಣ ದರುಶನಕೆ ಈ । ಧರಣಿಯ ಜನರಿಗೆ ತರಿಸಿ ಸಾಹಿತ್ಯವಾ ॥ ಕರುಣಿಸಿ ಪರಶಿಯನೂ । ಶೇಷಾದ್ರಿಗೆ । ಬರಸುವೆಯವರಾ ನೀನೂ । ಪ್ರತ್ಯಕ್ಷ ಗೋ । ಚರಿಪೆ ಶ್ರೀಮೂರ್ತಿಯನೂ । ವೈಕುಂಠದ ॥ ಶಿರಿಯಿತ್ತು ಪೊರವುದಿಲ್ಲವೇ ನೀ ಸರ್ವರನೂ ॥ ಹರ ಸುರಪ ಸರಸಿಜಭವಾದ್ಯರ । ನರ ಸಚರಾಚರ ಜೀವ ರಾಶಿಯ । ಭರದಿ ರಕ್ಷಿಪ ದೇವ ಅವರೊಳು । ಬರಡನಾ ಪರದೇಶಿ ಯೊಬ್ಬನ ॥ ಕರುಣಿಸೆನ್ನನು ॥ ೧ ॥ ಮೊದಲು ನಾನಂತ ಸಹಸ್ರಯೋನಿ ಯೊಳು ನಾ । ಸುದಿಸಿ ಕ್ಲೇಶದಿ ಬಳಲುತ ನವದೆನು ದೇವ ॥ ವಿಧದಿ ಈ ನರಜನ್ಮದೀ । ಬಂದೆನು ಈಗ । ಇದರೊಳಾದರು ದಯದೀ । ನಿನ್ನಯ ದಿವ್ಯ । ಪದವ ತೋರಿಸೊ ಮುದದೀ ॥ ರಕ್ಷಿಸು ಎನ್ನ ಸದಮಲಾನಂದ ಮೂರು ತಿಯೇ ದಯಾಬ್ಧಿ ॥ ಇವರು ಎನಗಿಲ್ಲೆನುತಲೌಕದಿ । ಮುದದಿ ನಡವುತ ಸಂ ಗ್ರಹಿಸಿದೆನು । ಮಧುದ್ವಿಷನೆ ಎನ್ನವಗುಣ ನಿವಾರಿಸು । ತ್ರಿವಿಧ ಶೇಷಾಚಲವ ಕಾಣಿಸೋ ॥ ಕರುಣಿಸೆನ್ನನು ॥ ೨ ॥ ಸತತ ನಿನ್ನನು ನಾ ಧ್ಯಾನಿಸಲಿಲ್ಲ ಒಮ್ಮೆಗೆ । ನುತಿಸಿದ ಫಲದಿ ಅನಂತ ಜನ್ಮದ ಪಾಪ ॥ ಹತವಾಗಿ ಪೋಪುದೆಂ ದು । ನಿಶ್ಚಯ ಮಹಾ । ಶ್ರುತಿಯುಸುರುವುದು ಎಂದೂ । ಶ್ರೀ ವೆಂಕಟಾ । ಪತಿಯೆ ನೀ ಸಲಹೊ ಇಂದೂ ॥ ನಾಲಿಗೆಯೊಳು । ನುತಿಪೆ ದಮ್ಮಯ್ಯಾ ಪಾಲಿ ಸೊ ದೇವ ಬಂದೂ॥ ಪಥಕೆ ಸಾಹಿತ್ಯಗಳ ಕೊಡುತಿರು। ಪತಿಯೆ ನಿನ್ನಂಘ್ರಿಗಳ

ಕಾಣಿಸಿ । ವ್ಯಥೆಯ ಬಿಡಿಸು ರಮಾರಮಣನೆನ । ಗತಿ ಹಿತವ ಪಾಲಿಸು ದಯಾನಿಧೇ ॥ ಕರುಣಿಸೆನ್ನನು ವೆಂಕಟೇಶ ಎನ್ನೊಡೆಯಾ ॥ ೩ ॥ ಶ್ರೀ ॥

॥ ೫೯ ॥ ರಾಗ, ಪೀಲು [ಧಾಟಿ:-] ಏಕತಾಳ

ಬಾರೋ ಬೇಗ ಬಾರೋ ರಾಮಾ । ಬಾರೋ ನೀ ಮೊಗದೋರೋ ರಾಮಾ ॥ ಬಾರೋ ಬೇಗ ಬಾರೋ ರಾಮಾ ॥ ಪಲ್ಲ ॥ ಅಗಣಿತ ಮಹಿಮಾ । ರಘುಕುಲೋದ್ಭಾವಾ । ನಿಗಮಾಗಮ ಪೂಜಿತ ಶ್ರೀರಾಮಾ ॥ ಬಾರೋ ಬೇಗ ಬಾರೋ ॥ ೧ ॥ ಕುಜನ ಕುಠಾರೀ । ಸುಜನೋದ್ಧಾರೀ । ಭಜಕನಿಕರ ದುರಿತಾರೀ ರಾಮಾ ॥ ಬಾರೋ ಬೇಗ ಬಾರೋ ॥ ೨ ॥ ಪಂಕಜ ನಯನ ಶ್ರೀ ವೆಂಕಟರಮಣಾ । ಸಂಕಟಹರ ಶ್ರೀ ರಮಾಪತಿ ಚರಣಾ ॥ ಬಾರೋ ಬೇಗ ಬಾರೋ ರಾಮಾ ॥ ೩ ॥ ಶ್ರೀ ॥

॥ ೬೦ ॥ ರಾಗ, ಕಾಂಬೋಧಿ [ಧಾಟಿ:- ನಾರಸಿಂಹ ನಮೋ ನಮೋ] ತ್ರಿವುಡೆತಾಳ

ವೆಂಕಟೇಶ ನಮೋ ನಮೋ । ಜಯ । ವೆಂಕಟೇಶ ನಮೋ ನಮೋ ॥ ಜಯ ವೆಂಕಟೇಶ ನಮೋ ನಮೋ । ಜಯ । ವೆಂಕಟೇಶ ನಮೋ ನಮೋ ॥ ॥ ಪಲ್ಲ ॥ ಶ್ರೀಶ ವೈಕುಂಠಾದಿ ವಾಸ ಪ । ರೇಶ ಜಗದಾಧಾರ ರತ್ನಪ । ಭೂಷಲಂಕೃತ ದಿವ್ಯನಾಮ ಶ್ರೀ । ವಾಸುದೇವ ನಮೋ ನಮೋ ॥ **ಹರಿ ನಾರಾಯಣ ಹರಿ ನಮೋ ನಾರಾಯಣ** ॥ ೧ ॥ ಪಂಕಜೋದ್ಭವ ಮುಖ್ಯಮರ ಸುತ । ಶಂಖ ಚಕ್ರ ಗದಾಧರನೆ ಮುಹಾ । ಶಂಕರಪ್ರಿಯ ಮೂಲನಾಮ ಶ್ರೀ । ಸಂಕರುಷಣ ನಮೋ ನಮೋ ॥ ಹರಿ ನಾರಾಯಣ ಹರಿ ನಮೋ ನಾರಾಯಣ ॥ ೨ ॥ ಉದ್ಧವಕ್ರೂರಾದಿ ಶರಣ ಸ । ಮುದ್ರ ಯಾದವ ಕುಲ ತಿಲಕ ಸ । ಮೃದ್ಧಿ ಧೇನು ಸುಮೂಲ ನಾಮ ಶ್ರೀ । ಸಂಕರುಷಣ ನಮೋ ನಮೋ ॥ ಹರಿ ನಾರಾಯಣ ಹರಿ ನಮೋ ನಾರಾಯಣ ॥ ೩ ॥ ಸನಕ ಭೃಗು ಶುಕ ಶೌನಕಾದ್ಯರು । ಅನಿಮಿಷರು ಋಷಿಜನ ಸಮೂಹವು । ನೆನದು ನರ್ತಿಪ ಮೂಲನಾಮ ಶ್ರೀ । ಅನಿರುದ್ಧಾಯ ನಮೋ ನಮೋ ॥ ಹರಿ ನಾರಾಯಣ ಹರಿ ನಮೋ ನಾರಾಯಣ ॥ ೪ ॥ ಪ್ರಳಯೋದಕ ಮಧ್ಯದಲಿ ಮಹ ವಟ । ದೆಲೆಯು ರಚಿಸಿ ಮೇಲೊರಗಿ ನಾಭೀ । ವಳಿಯದಿಂದಜನನು ಪಡದ ಮಹ । ಚಲುವ ದೇವ ನಮೋ ನಮೋ ॥ ಹರಿ ನಾರಾಯಣ ಹರಿ ನಮೋ ನಾರಾಯಣ ॥ ೫ ॥ ಸೃಷ್ಟಿಸ್ಥಿತಿಲಯ ಕಾರಣದಿ ಪರ । ಮೇಷ್ಟಿ ಭವರಂ ಸೃಜಿಸಿ ನಡಸುವ । ಶ್ರೇಷ್ಠ ಏಕೋ ದೇವ

ವೆನಿಸಿದ। ಕೃಷ್ಣನಡಿಗೆ ನಮೋ ನಮೋ ॥ ಹರಿ ನಾರಾಯಣ ಹರಿ ನಮೋ ನಾರಾಯಣ ॥ ೬ ॥ ಶ್ರುತಿ ತತಿಯ ಕದ್ದೋಡಿ ಜಲದೊಳ । ಗತಿ ಜವದಿ ಪೊಕ್ಕಿರುವ ತಮನನು । ಮಥಿಸಿ ವೇದಜಗಿತ್ತ ಮತ್ಸ್ಯ । ಕೃತಿಯ ದೇವ ನಮೋ ನಮೋ ॥ ಹರಿ ನಾರಾಯಣ ಹರಿ ನಮೋ ನಾರಾಯಣ ॥ ೭ ॥ ಮಥಿಸಿ ಕ್ಷೀರಾರ್ಣವನು ಸುಧೆಸುರ । ತತಿಗೆರೆಯಲೋಸುಗದಿ ಮಂದರ। ಜತನದಿಂ ಪೊತ್ತಿರುವ ಕೂರ್ಮ । ಕೃತಿಯ ರೂಪ ನಮೋ ನಮೋ॥ ಹರಿ ನಾರಾಯಣ ಹರಿ ನಮೋ ನಾರಾಯಣ ॥ ೮ ॥ ಮೂಢತನದಿಂದವನಿಯನು ಕೊಂ । ಡೋಡಿದವನಸುವನು ವಿಭಾಡಿಸಿ । ಪಾಡೆಯಲಿ ರೂಢಿಯನು ಸಲಹಿದ । ಕ್ರೋಡರೂಪ ನಮೋ ನಮೋ ॥ ಹರಿ ನಾರಾಯಣ ಹರಿ ನಮೋ ನಾರಾಯಣ ॥ ೯ ॥ ದುರುಳನುದರದ ಕರುಳ ಕೊರಳೊಳು । ಧರಿಸಿ ತರಳನ ಕರದಭಯ ಕರ । ತಳದಿ ತೋರಿದ ಕರುಣನಿಧಿ ಶ್ರೀ । ನರ ಮೃಗಾಯ ನಮೋ ನಮೋ ॥ ಹರಿ ನಾರಾಯಣ ಹರಿ ನಮೋ ನಾರಾಯಣ ॥ ೧೦ ॥ ಭೂಮಿ ಎರಡೆಜ್ಜೆಯೊಳಳದು ನಿ । ಸ್ಸೀಮ ಬಲಿಯನು ವಿತಳ ಕಳುಹಿ ಸು । ತ್ರಾಮನನು ಸಲಹಿದ ದಯಾಬ್ಧಿ ಶ್ರೀ । ವಾಮನಾಯ ನಮೋ ನಮೋ ॥ ಹರಿ ನಾರಾಯಣ ಹರಿ ನಮೋ ನಾರಾಯಣ ॥ ೧೧ ॥ ಪಡೆದವನ ನುಡಿ ಕೇಳಿ ಮಾತೆಯ । ಕಡಿದು ಬೇರುಳುಹಿಸುತ ಕ್ಷತ್ರಿಯ । ಘಡೆ ಬಡಿದು ಬೀಸಿದನು ಧೇನುವ । ಕೊಡಲಿ ರಾಮ ನಮೋ ನಮೋ ॥ ಹರಿ ನಾರಾಯಣ ಹರಿ ನಮೋ ನಾರಾಯಣ ॥ ೧೨ ॥ ತ್ರಿಶಿರ ಖರದೂಷಣ ದಶಮುಖಾ । ದ್ಯಸುರ ನಾಶ ಸುರೌಘವಂದಿತ । ಶ್ರೀಶ ಕೋದಂಡಧರ ಕೋಸಲ । ಧೀಶ ರಾಮ ನಮೋ ನಮೋ ॥ ಹರಿ ನಾರಾಯಣ ಹರಿ ನಮೋ ನಾರಾಯಣ ॥ ೧೩ ॥ ನಂದಗೋಪ ಯಶೋದೆ ಗೋಪೀ । ವೃಂದಪಾಲಕ ಸಕಲ ಸದ್ಗುಣ । ಸಾಂದ್ರ ಗೋಕುಲವಾಸ ಶ್ರೀ ಗೋ । ವಿಂದ ಕೃಷ್ಣ ನಮೋ ನಮೋ ॥ ॥ ಹರಿ ನಾರಾಯಣ ಹರಿ ನಮೋ ನಾರಾಯಣ ॥ ೧೪ ॥ ತ್ರಿದಶರನು ಬಾಧಿಪ ನಿರಂತರ । ಮದದಿ ತ್ರಿಪುರದೊಳಿರುವ ದುರುಳರ । ಸುದತಿಯರಿಗೊಲಿದಿಪ ದಿಗಂಬರ । ಚದುರ ಬೌದ್ಧ ನಮೋ ನಮೋ ॥ ಹರಿ ನಾರಾಯಣ ಹರಿ ನಮೋ ನಾರಾಯಣ ॥ ೧೫ ॥ ತೇಜಿಯನು ನಡಸುತ ವಿನೋದದಿ । ತೇಜಿಸುವ ಖಡ್ಗವನು ಝಳಪಿಸಿ । ಮೂಜಗದ ಮ್ಲೇಂಛರ ತರಿದ ಮಹಾ । ರಾಜ ಕಲ್ಕ್ಯ ನಮೋ ನಮೋ ॥ ಹರಿ ನಾರಾಯಣ ಹರಿ

ನಮೋ ನಾರಾಯಣ ॥ ೧೬ ॥ ಕಿಂಕರ ಜನೋದ್ಧಾರ ಈ ವಳ। ಲಂಕೆಯೊಳು ರತ್ನಾಸನದಿ ಮಹಾ। ಲಂಕರದೊಳೊಪ್ಪುವ ರಮಾಪತಿ । ವೆಂಕಟೇಶ ನಮೋ ನಮೋ ॥ ಹರಿ ನಾರಾಯಣ ಹರಿ ನಮೋ ನಾರಾಯಣ ॥ ೧೭ ॥ ಶ್ರೀಃ ॥

॥ ೬೧ ॥ ರಾಗ. ಬೃಂದಾವನ ಸಾರಂಗ [ಧಾಟಿ:- ಗೋವಿಂದಾ ಹರಿ] ಏಕತಾಳ

ನರಸಿಂಹಂ ಭಜ ನರಸಿಂಹಂ ಭಜ । ನರಸಿಂಹಂ ಭಜ ನರಸಿಂಹಂ ॥ ಪಲ್ಲ ॥ ಶ್ರೀಕೇಶವ ನಾರಾಯಣ ಮಾಧವ । ಲೀಲಾರ್ಚಿತ ಝಷ ನರಸಿಂಹ ॥ ಲೋಕಪ್ರೇರಕ ಗೋವಿಂದ ವಿಷ್ಣು ಕರು । ಣಾಕರ ಕಶ್ಯಪ ನರಸಿಂಹ ॥ **ನರಸಿಂಹಂ** ॥ ೧ ॥ ಮಧುಸೂದನ ತ್ರಿವಿಕ್ರಮ ವಾಮನ । ಸದಯ ಶ್ರೀಧರ ಮೃಗ ನರಸಿಂಹ ॥ ನಿಧಿ ಹೃಷೀಕೇಶ ಶ್ರೀಪದುಮನಾಭ ಮಹಾ । ಕದನಭಯಂಕರ ನರಸಿಂಹ ॥ **ನರಸಿಂಹಂ** ॥ ೨ ॥ ದಾಮೋದರ ಸಂಕರುಷಣ ವಾಸು । ದೇವ ಗಂಗೆಯ ಪೆತ್ತ ನರಸಿಂಹ ॥ ಕೋಮಲ ಪ್ರದ್ಯುಮ್ನನಿರುದ್ಧ ಸುಗುಣೋ । ದ್ದಾಮ ಭಾರ್ಗವಋುಷಿ ನರಸಿಂಹ ॥ ॥ **ನರಸಿಂಹಂ** ॥ ೩ ॥ ಪುರುಷೋತ್ತಮ ಅಧೋಕ್ಷಜ ದಶಕಂ । ಧರ ಹತ ರಾಘವ ನರಸಿಂಹ ॥ ವರದಾಚ್ಯುತ ಪರಮಾತ್ಮ ಜನಾರ್ದನ । ಕರುಣಿ ಉಪೇಂದ್ರ ಶ್ರೀ ನರಸಿಂಹ ॥ **ನರಸಿಂಹಂ** ॥ ೪ ॥ ಶ್ರೀಕರ ಹರಿ ಕೃಷ್ಣಾಯ ನಮೋ ವರ । ಗೋಕುಲಪಾಲ ಶ್ರೀ ನರಸಿಂಹ ॥ ಭೀಕರ ತ್ರಿಪುರ ಸೀಮಂತಿನಿ ಸಂಚಯ । ದಾ ಕಡುವ್ರತಜಿತ ನರಸಿಂಹ ॥ **ನರಸಿಂಹಂ** ॥ ೫ ॥ ವಿನಿತಾರೂಢ ಕಲಿಕೆಯಮಿತಾಮಿತ । ಸನಕಸನಕವಿನುತ ನರಸಿಂಹ ॥ ಅನುಪಮ ಸಚರಾಚರಭರಿತಾಶ್ರಿತ । ಜನರಕ್ಷಾಮಣಿ ನರಸಿಂಹ ॥ **ನರಸಿಂಹಂ** ॥ ॥ ೬ ॥ ಪನ್ನಗರಾಜಗಸಾಧ್ಯ ದಯಾನಿಧಿ । ನಿನ್ನ ಪೊಗಳುವೆನು ನರಸಿಂಹ ॥ ಎನ್ನೊಳವಿಲ್ಲ ನೀ ಮುನ್ನ ಸದ್ಭಕ್ತರ । ಮನ್ನಿಸಿ ಕಾಯ್ದೆ ಶ್ರೀ ನರಸಿಂಹ ॥ **ನರಸಿಂಹಂ** ॥ ೭ ॥ ತರಳ ಪ್ರಹ್ಲಾದನೆ ಪರಿಪರಿಯಾತನೆ । ವರ ಪಿತನೀಯಲು ನರಸಿಂಹ ॥ ಹರಿಯೆ ಬೇಗ ಬಾ ಬಾ ಎನುತಲಿ ಬ್ಯಾ । ದೆರದು ಕೂಗುತಿರೆ ನರಸಿಂಹ ॥ ನರಸಿಂಹಂ ॥ ೮ ॥ ನಿಖಿಲ ಕಣ್ದೆರೆ ಸುರಕಟಕ ಬೆದರೆ ಅಜ । ಘಟ ತೊಡೆದಂದದಿ ನರಸಿಂಹ ॥ ಛಿಟಛಿಟಛಿಟ ಉತ್ಕಟ ಸ್ತಂಭದೊಳಾ । ಭರ್ಗಟೆ ಶಬ್ದೆಸಗಿದ ನರಸಿಂಹ ॥ ನರಸಿಂಹಂ ॥ ೯ ॥ ಶತಕೋಟಿ ಸಿಡಿಲು ಹೊಡೆವಂದದಿ ಅ । ದ್ಭುತ ಘರ್ಜನೆಯಲಿ ನರಸಿಂಹ ॥ ಅತಿಬಲ

ವಜ್ರಸ್ತಂಭ ಹೊಡೆದು ಪೊರ । ಡುತ ವೈದೋಂದೆ ನರಸಿಂಹ ॥ **ನರಸಿಂಹಂ** ॥ ೧೦ ॥ ಝುಡಿದು ಹಿರಣ್ಯಕಶಿಪುವಿನ ಕಟಿಯನು । ಹಿಡಿದೆಳದ್ಯೊಯಿದ ನರಸಿಂಹ ॥ ಬಿಡದೆ ತ್ರಿಸಂಧ್ಯಾಕಾಲ ಹೊಸ್ತಿಲೊಳು । ತೊಡೆವಡೆಗೊಕಿದ ನರಸಿಂಹ ॥ **ನರಸಿಂಹಂ** ॥ ೧೧ ॥ ತೆರೆದ ಬಾಯ ಕಣ್ಬುರುಹಿ ನಖಾಗ್ರದಿ । ಕೊರದುದರ ಬಗದೆ ನರಸಿಂಹ ॥ ಕರುಳನು ಕೊರಳೊಳು ಧರಿಸಿ ಶೋಣಿತ ಸುರಿ । ಸುರಿದು ಚಲ್ಲ್ಯಾಡಿದೆ ನರಸಿಂಹ ॥ **ನರಸಿಂಹಂ** ॥ ೧೨ ॥ ತೆರದ ನಯನದುರಿಯುಲಿ ಆ ದೈತ್ಯನ । ಹರಣವನುಳುಹಿದ ನರಸಿಂಹ ॥ ಸುರರೊಳು ಹಿರಣ್ಯಕಶಿಪುವಿನ ಪುಣ್ಯಕೆ । ಸರಿಸಾಟ ಯಾರೈ ನರಸಿಂಹ ॥ **ನರಸಿಂಹಂ** ॥ ೧೩ ॥ ಅಂಜದಿರೆನುತಪ್ಪುತಲಾ ಬಾಲಗೆ ಕರ। ಕಂಜವು ದೋರಿದ ನರಸಿಂಹ ॥ ರಂಜಿತ ಸಿರಿಸಾಮ್ರಾಜ್ಯದೈಶ್ವರ್ಯದ । ಪುಂಜಪದವಿ ಇತ್ತೆ ನರಸಿಂಹ ॥ **ನರಸಿಂಹಂ** ॥ ೧೪ ॥ ಶರಣರ ವಾಂಛಿತ ಬಿರಿದು ನಿನಗೆ ಸರಿ । ಸರಿ ಕರುಣಾಂಬುಧಿ ನರಸಿಂಹ ॥ ವರ ಮೂಲಿಕಪುರವಾಸ ರಮಾಪತಿ । ಇಂಸೆಮ್ಮೊಳು ಕೃಪೆ ನರಸಿಂಹ ॥ **ನರಸಿಂಹಂ** ॥ ೧೫ ॥ ಶ್ರೀಃ ॥

॥ ೬೨ ॥ ರಾಗ, ಬೃಂದಾವನಸಾರಂಗ [ಧಾಟಿ- ನರಸಿಂಹಂ ಭಜ] ಏಕತಾಳ

ಕೃಷ್ಣ ಹರೇ ಜಯ ಕೃಷ್ಣ ಹರೇ ಜಯ । ಕೃಷ್ಣ ಹರೇ ಜಯ ಕೃಷ್ಣ ಹರೇ ॥ಪಲ್ಲ॥ ಶ್ರೀವರ ಸುಜನರ ಕಾವ ದಯಾಪರ । ದೇವ ಗುಣಾಂಬುಧಿ ಕೃಷ್ಣ ಹರೇ ॥ ಸ್ಥಾವರಜಂಗಮ ಜೀವರಿಗಿಷ್ಟವ। ನೀವುತ ರಕ್ಷಿಪ ಕೃಷ್ಣ ಹರೇ ॥ **ಕೃಷ್ಣ ಹರೇ** ॥ ೧ ॥ ಮಿಡುಕದೆ ನಿಗಮಗಳಡಗಿಸಿದವನನು । ಬಡಿದು ಕೆಡಹಿದ ಶ್ರೀಕೃಷ್ಣ ಹರೇ ॥ ಬಿಡದೆ ವೇದಜನಿಗೆ ಕೊಡಲು ಮೀನಾಗುತ । ಕಡಲೊಳಗಾಡಿದ ಕೃಷ್ಣ ಹರೇ ॥ **ಕೃಷ್ಣ ಹರೇ** ॥ ೨ ॥ ಸಿಂಧು ಮಥಿಸಿ ಮಹಾಮಂದರ ಮುಳುಗಿರ । ಲಂದು ಬೆನ್ನಾಂತ ಶ್ರೀಕೃಷ್ಣ ಹರೇ ॥ ಚಂದದಿ ಸುಧೆ ಸುರವೃಂದಕೆ ಉಣಿಸಿದ । ನಂದ ಕಚ್ಛಪರೂಪ ಕೃಷ್ಣ ಹರೇ ॥ ॥ **ಕೃಷ್ಣ ಹರೇ** ॥ ೩ ॥ ರಸೆಯ ಕದ್ದೋಡಿದ ಅಸುರನ ಬಸುರನು। ದಶನದಿ ಸೀಳಿದ ಕೃಷ್ಣ ಹರೇ ॥ ಶಶಿಧರ ಸುತಿಸಲು ವಸುಮತಿಯನ್ನುಳು । ಹಿಸಿದ ಕ್ರೋಡಾಕೃತಿ ಕೃಷ್ಣ ಹರೇ ॥ **ಕೃಷ್ಣ ಹರೇ** ॥ ೪ ॥ ಮೃಡನಡುಗಲು ಭೋರ್ಗರೆಡಿಸಿ ಬ್ರಹ್ಮಾಂಡದ । ಅಡಿ ಮಗುಚುವಂದದಿ ಕೃಷ್ಣ ಹರೇ ॥ ಝುಡಿದು ಘರ್ಜಿಸಿ ಖಳನೊಡಲ ಸೀಳಿ ರಕುತ । ಕುಡಿದು ಬಾಲನ ಕಾಯ್ದ

ಕೃಷ್ಣ ಹರೇ ॥ ಕೃಷ್ಣ ಹರೇ ॥೫॥ ಮತಿಯುತ ಬಲಿ ಸುರಪತಿಯ ಗದ್ದುಗೆ ಬಯಸೆ । ಸುತಲಿರೆ ತಿಳಿದು ಶ್ರೀ ಕೃಷ್ಣ ಹರೇ ॥ ಕ್ಷಿತಿಯನಳೆದು ತತ್ಕ್ರತುವ ಕೆಡಿಸುತವನ । ವಿತಳಕ್ಕಿಳುಹಿಸಿದ ಕೃಷ್ಣ ಹರೇ ॥ ಕೃಷ್ಣ ಹರೇ ॥ ೬ ॥ ಪಡದ ಮಾತೆಯ ಶಿರ ಹೊಡೆದು ಮತ್ತವಳಸು । ಬಿಡದೆ ರಕ್ಷಿಸಿದ ಶ್ರೀಕೃಷ್ಣ ಹರೇ ॥ ಝುಡಿದು ಕ್ಷತ್ರಿಯ ಪಡೆ ಬಡಿದು ಸಂಹರಿಸಿದ । ಕೊಡಲಿಭಾರ್ಗವ ರಾಮ ಕೃಷ್ಣ ಹರೇ ॥ ಕೃಷ್ಣ ಹರೇ ॥೭॥ ಜಲಧಿ ಬಂಧಿಸಿ ದಶಗಳನ ಬಳಗ ಸಹ । ಕಣನೊಳು ತರಿದ ಶ್ರೀ ಕೃಷ್ಣ ಹರೇ ॥ ತಳುವ ತ್ರಿಕುಟಾಚಲವನು ಶರಣನಿ । ಗೊಲಿದು ಪಾಲಿಸಿದ ಶ್ರೀಕೃಷ್ಣ ಹರೇ ॥ ಕೃಷ್ಣ ಹರೇ ॥ ೮ ॥ ನಿಲ್ಲದೆ ಗೊಲ್ಲರ ಪಳ್ಳಿಯೊಳಾಡುತ । ಕಲ್ಲಿಯ ಕೊಳುಂಡ ಕೃಷ್ಣ ಹರೇ ॥ ಬಿಲ್ಲಹಬ್ಬದ ನೆವದಲಿ ಮಾವ ಕಂಸನ । ಚಲ್ಲಬಡಿದ ಶ್ರೀಕೃಷ್ಣ ಹರೇ ॥ ಕೃಷ್ಣ ಹರೇ ॥೯॥ ಶಶಿಮುಖಿಯರ ತನ್ನೊಶಗೈಯ್ಯಲು ಉಟ್ಟ । ವಸನಬಿಟ್ಟೋಡಿದ ಕೃಷ್ಣ ಹರೇ ॥ ಕುಶಲದಿ ತ್ರಿಪುರದ ನಿಶಿಚರರನು ಕೊಂ । ದಸುವ ತೊಲಗಿಸಿದ ಕೃಷ್ಣ ಹರೇ ॥ ಕೃಷ್ಣ ಹರೇ ॥ ೧೦ ॥ ದಟ್ಟಚಲ್ಲಣ ಬಿಗಿದುಟ್ಟು ಪಗಡಿಯಳ।ಪಟ್ಟು ತೇಜಿಯಡರ್ದ ಕೃಷ್ಣ ಹರೇ ॥ ಈಟ ಕಠಾರಿಗಳ್ತೊಟ್ಟು ಖಡ್ಗದಿ ತಲೆ । ಕುಟ್ಟಿ ಮ್ಲೇಂಛರ ಕೊಂದ ಕೃಷ್ಣ ಹರೇ ॥ ಕೃಷ್ಣ ಹರೇ॥ ೧೧ ॥ ಇಳೆಯ ಭಾರವ ಪರಿಹರಿಸಿ ಭಕತರಘ । ಕಳದು ರಕ್ಷಿಸಿದ ಕೃಷ್ಣ ಹರೇ ॥ ತಳುವದೆನ್ನನು ಕ್ಯಾದುಳಿಸೊ ನಿನ್ನ ಪದ । ನಳಿನಕ್ಕೆರಗುವೆನು ಕೃಷ್ಣ ಹರೇ ॥ ಕೃಷ್ಣ ಹರೇ ॥ ೧೨ ॥ ಅತಿಪಾತಕಿ ನಾನೆನುತ ಕೈಬಿಟ್ಟರೆ । ಗತಿಯ ಕಾಣೆನು ಬೇರೆ ಕೃಷ್ಣ ಹರೇ ॥ ಶತಸಾವಿರ ಅಪರಾಧ ಎನ್ನಯ ಕ್ಷಮಿ । ಸುತ ರಕ್ಷಿಸೊ ಜಯ ಕೃಷ್ಣ ಹರೇ ॥ ಕೃಷ್ಣ ಹರೇ ॥೧೩॥ ಮಡುವಿನೊಳಗೆ ಕರಿ ಮಿಡುಕಿ ಬಾಯಾರಿ ಕೂ । ಗಿಡಲೊದಗುತ ಬಂದೆ ಕೃಷ್ಣ ಹರೇ ॥ ಝುಡಿದು ನಕ್ರನ ಸೀಳಿ ಪಿಡಿದು ಆ ಗಜನನು । ಬಿಡಿಸಲಿಲ್ಲವೆ ಮುನ್ನ ಕೃಷ್ಣ ಹರೇ ॥ ಕೃಷ್ಣ ಹರೇ ॥ ೧೪ ॥ ಅಂಬುಜಸಖ ಕುವರನು ರಣದೊಳಗೆ ನಿನ । ಗಂಬ ಪೂಡಿರೆ ನೋಡಿ ಕೃಷ್ಣ ಹರೇ ॥ ಕುಂಭಿನಿಯೊತ್ತಿ ನರನ ಕ್ಯಾದವ ನೀ ದ । ಯಾಂಬುಧಿಯಲ್ಲವೆ ಕೃಷ್ಣ ಹರೇ ॥ ಕೃಷ್ಣ ಹರೇ ॥ ೧೫ ॥ ಬಿಡದೆ ಎನ್ನನು ಕರ ಪಿಡಿದು ರಕ್ಷಿಸು ಭವ । ಕಡಲನು ದಾಟಿಸೊ ಕೃಷ್ಣ ಹರೇ ॥ ಧಡವ ಕಾಣಿಸು ಎನ್ನೊಡೆಯ ನೀನೆಂದು ನಿ । ನ್ನಡಿಗೆರಗುವೆ ಜಯ ಕೃಷ್ಣ ಹರೇ ॥ ಕೃಷ್ಣ ಹರೇ ॥ ೧೬ ॥ ಸತಿಗಳಿವರು ಪರಸತಿಯ ಮುಂಶರಗ ದು । ಮರ್ತಿ

ಪಿಡಿದೆಳೆಯುಲು ಕೃಷ್ಣ ಹರೇ ॥ ರತಿಪತಿಪಿತ ನೀ ಗತಿ ಎಂದಬಲೆ ಕೂ। ಗುತ ಕರೆಯುಲು ಕ್ಯಾದೆ ಕೃಷ್ಣ ಹರೇ ॥ **ಕೃಷ್ಣ ಹರೇ** ॥ ೧೭ ॥ ಕಡು ತರಳನು ಘೋರಡವಿಯೊಳ್ತಪದಿ ನಿ । ನ್ನಡಿಗಳ ಪಿಡಿಯುಲು ಕೃಷ್ಣ ಹರೇ ॥ ಬಿಡದೆ ಧ್ರುವಗೆ ಪದ ಕೊಡುತ ರಕ್ಷಿಸಿದ ಎ । ನ್ನೊಡೆಯ ನೀನಲ್ಲವೆ ಕೃಷ್ಣ ಹರೇ ॥ ॥ **ಕೃಷ್ಣ ಹರೇ** ॥ ೧೮ ॥ ಕಡುಬಡತನ ಬಂದಡರಿ ಸುದಾಮ ನಿ । ನ್ನಡಿಯ ಧ್ಯಾನಿಸುತಿರೆ ಕೃಷ್ಣ ಹರೇ ॥ ಪಿಡಿಯವಲನುಣುತ ತಡೆಯದೆ ಸಂಪದ । ಕೊಡುತ ರಕ್ಷಿಸಿದ ಕೃಷ್ಣ ಹರೇ ॥ **ಕೃಷ್ಣ ಹರೇ** ॥ ೧೯ ॥ ಮುನ್ನ ನಿನ್ನೆನದ ವರನ್ನು ರಕ್ಷಿಸಿದೆ ನೀ। ಎನ್ನ ಬಿಟ್ಟಿರುವೆಯ ಕೃಷ್ಣ ಹರೇ ॥ ಬನ್ನಬಟ್ಟೆನು ಬಲು ಇಸ್ನಾದರೆನ್ನನು। ಮನ್ನಿಸಿ ಸಲಹೊ ಶ್ರೀಕೃಷ್ಣ ಹರೇ॥ **ಕೃಷ್ಣ ಹರೇ** ॥ ೨೦ ॥ ವರ ವಳಲಂಕಾಪುರದಿ ನಿರಂತರ । ಸ್ಥಿರವಾಗಿರುತಿಹ ಕೃಷ್ಣ ಹರೇ ॥ ಶರಣಾಗತರನು ಪೊರೆವ ಶ್ರೀವೇಂಕಟ । ಕರುಣಿ ರಮಾಪತಿ ಕೃಷ್ಣ ಹರೇ ॥ **ಕೃಷ್ಣ ಹರೇ** ॥ ೨೧ ॥ ಶ್ರೀಃ ॥

॥ ೬೩ ॥ ರಾಗ, ಕಾಂಬೋಧಿ [ಧಾಟಿ:- ಕೃಷ್ಣ ಹರೇ ಜಯ] ತ್ರಿವುಡೆತಾಳ

ರಾಮ ಹರೇ ಜಯ ರಾಮ ಹರೇ ಜಯ । ರಾಮ ಹರೇ ರಘು ರಾಮ ಹರೇ ॥ಪ॥ ಶ್ರೀರಘುವಂಶೋದ್ಧಾರ ಭಕತಸಂ । ಸಾರಿಕ ಸದ್ಗುಣ ರಾಮ ಹರೇ ॥ ಚಾರು ಕೌಸಲ್ಯಕುಮಾರಕನೆನಿಸಿದ । ಭೂರಿ ನಾಟಕಧಾರೀ ರಾಮ ಹರೇ॥ **ರಾಮ ಹರೇ** ॥ ೧ ॥ ಅತಿಬಲ ತಾಟಕಿಮಥನ ಸುಬಾಹುಕ। ಹತ ತ್ರಿಶಿರಾಂತಕ ರಾಮ ಹರೇ ॥ ಹಿತಕೌಶಿಕ ಸತ್ಕ್ರತುಪೂರಣ ಶಾ । ಶ್ವತ ಮೂರುತಿ ರಘುರಾಮ ಹರೇ ॥ **ರಾಮ ಹರೇ** ॥ ೨ ॥ ಭಾಪುರೆ ಮನುಕುಲ ದೀಪ ಅಹಲ್ಯಾ । ಶಾಪವಿಮೋಚನ ರಾಮ ಹರೇ ॥ ಆ ಪರಮೇಶನ ಚಾಪವ ನೆಗಹಿದ । ಭೂಪ ಕೃಪಾನಿಧಿ ರಾಮ ಹರೇ ॥ **ರಾಮ ಹರೇ** ॥ ೩ ॥ ಕ್ಷಿತಿಜೆ ಗೊಲಿದು ಬರೆ ಪಥವಲಿ ಭಾರ್ಗವ । ವ್ರತಿಯ ಗೆಲಿದ ರಘುರಾಮ ಹರೇ ॥ ಪಿತನಾಜ್ಞೆಗೆ ಅದ್ಭುತದಾರಣ್ಯಕೆ । ಸತಿ ಸಹಿತೈದಿದ ರಾಮ ಹರೇ ॥ **ರಾಮ ಹರೇ** ॥ ೪ ॥ ದೋಷಿ ಶೂರ್ಪನಖಿ ನಾಶಿಕಹರ ಖರ । ದೂಷಣಾರಿ ರಘುರಾಮ ಹರೇ ॥ ವೇಶ ಪೊಂಮೃಗವಿನಾಶ ಜಟಾಯುವಿ । ಗಾ ಸುಫಲಪ್ರದ ರಾಮ ಹರೇ ॥ **ರಾಮ ಹರೇ** ॥ ೫ ॥ ಮೂಢ ಕಬಂಧನ ಗೂಡಿಸಿ ಸುರದಿ। ಬೇಡತಿಗೊಲಿದ ಶ್ರೀರಾಮ ಹರೇ ॥ ನೋಡಿ ವಾತಜನ ಕೈಗೂಡಿ ಸುಗ್ರೀವನ। ಜೋಡಿನವನ ಗೆದ್ದ ರಾಮ ಹರೇ ॥ **ರಾಮ ಹರೇ** ॥ ೬ ॥ ಬೆಟ್ಟಗಳನು ತಂ

ದೊಟ್ಟ ಶರಧಿಯೊಳು । ಕಟ್ಟಿಸಿ ಸೇತುವ ರಾಮ ಹರೇ ॥ ಧಿಟ್ಟ ಪ್ಲವಗಬಲ ವಟ್ಟಿಸಿ ಲಂಕಾ । ಪಟ್ಟಣ ಹೊಗಿಸಿದ ರಾಮ ಹರೇ ॥ **ರಾಮ ಹರೇ** ॥ ೭ ॥ ದೇವಾಂತಕ ನಗಹರ ಜೀವಾಂತಕ । ರಾವಣ ಮುಖ್ಯ ಶ್ರೀರಾಮ ಹರೇ ॥ ದೇವ ವಿಭೀಷಣಗಾ ವೈಭವನಿತ್ತ । ಆ ವಿಬುಧಾರ್ಚಿತ ರಾಮ ಹರೇ ॥ **ರಾಮ ಹರೇ** ॥ ೮ ॥ ಅನಲನ ಮುಖದಿಂ ಜನಕತನುಜೆಯುತ । ವಿನಯದಿಂ ಬರಿಸಿದ ರಾಮ ಹರೇ ॥ ಇನಸೋಮಾನ್ವಯನಸು ಕೈವಲ್ಯಾ । ಸನಕೇರಿದ ರಘುರಾಮ ಹರೇ ॥ **ರಾಮ ಹರೇ** ॥ ೯ ॥ ವಾನರತತಿ ರವಿಸೂನು ಶರಣ ಪವ । ಮಾನಿ ಸಮೇತ ಶ್ರೀರಾಮ ಹರೇ ॥ ಜಾನಕಿಯನುಜರ ತಾನೆ ಕೈವಿಡಿದು ವಿಮಾನ ಕ್ಕಡರಿದ ರಾಮ ಹರೇ ॥ **ರಾಮ ಹರೇ** ॥ ೧೦ ॥ ಪ್ರೇಮದಿ ಬರುತಿರಲಾ ಮಾರ್ಗದಿ ಋಷಿ । ಸ್ತೋಮವ ಮನ್ನಿಸಿ ರಾಮ ಹರೇ ॥ ಆ ಮಹಾ ನಂದೀ ಗ್ರಾಮದಿ ಭರತನ । ತಾ ಮುದ್ದಾಡಿದ ರಾಮ ಹರೇ ॥ **ರಾಮ ಹರೇ** ॥೧೧॥ ಮೆರೆವ ಅಯೋಧ್ಯಾಪುರದೊಳು ಸರಿದು ಸ । ತ್ಕರಿಸಿ ಮಾತೆಯರಿಗೆ ರಾಮ ಹರೇ ॥ ಗುರುವಿಗೆರಗಿ ಪ್ರಜೆ ಪರಿವಾರಕೆ ಸಂ । ದರುಷಣವಿತ್ತ ಶ್ರೀರಾಮ ಹರೇ ॥ **ರಾಮ ಹರೇ** ॥ ೧೨ ॥ ರಾಜಿಪ ಕೀಶ ಮಹಾಜನಕ್ಕೆಲ್ಲ ಸು । ಭೋಜನ ವೆಸಗಿದ ರಾಮ ಹರೇ ॥ ರಾಜಮಾನ್ಯ ರಾಜಾಸನಕ್ಕೇರಿದ । ರಾಜ ಶ್ರೀಕರ ರಘುರಾಮ ಹರೇ ॥ **ರಾಮ ಹರೇ** ॥ ೧೩ ॥ ಮಾನಿಸಿ ಭಕತಗೆ ತಾನೆ ಶ್ರೀ ರಂಗ ವಿ । ಮಾನವ ಪಾಲಿಸಿ ರಾಮ ಹರೇ ॥ ವಾನರರನು ಪರಮಾನಂದದಿ ಗೀ । ರ್ವಾಣರ ಮಾಡಿದ ರಾಮ ಹರೇ ॥ **ರಾಮ ಹರೇ** ॥ ೧೪ ॥ ಲೋಕದ ವರ ವಳಲಂಕಾಪುರದೊಳು । ಖ್ಯಾತದಿ ನೆಲಸಿದ ರಾಮ ಹರೇ ॥ ಶ್ರೀಕರ ಮಾಪತಿ ವೆಂಕಟರಮಣ ಕೃ । ಪಾಕರ ಜಯ ಜಯ ರಾಮ ಹರೇ ॥ **ರಾಮ ಹರೇ** ॥ ೧೫ ॥ ಶ್ರೀಃ ॥

॥ ೬೪ ॥ ರಾಗ, ಸುರುಟ [ಧಾಟಿ:-] ಚೌತಾಳ

ಶ್ರೀಹರೀ ಕೃಷ್ಣ ಮುರಾರೀ । ಕೇಶವ ಚಕ್ರಧಾರೀ ॥ ಶ್ರೀಹರಿ ಕೃಷ್ಣ ॥ ಪಲ್ಲ ॥ ಸುಂದರ ಸುಮನಸ । ಬೃಂದ ಮಾನಿ ಮಾನಸ । ನಂದ ಗೋವರ್ಧನೋದ್ಧಾರೀ ॥ ಶ್ರೀಹರಿ ಕೃಷ್ಣ ॥ ೧ ॥ ಹಂಸವಾಹನಸ್ತುತ್ಯ । ಕಂಸ ಮಥನ ನಿತ್ಯಾ । ಹಂಸಡಿಬಕಚಾಣೂರವೈರೀ ॥ ಶ್ರೀಹರಿ ಕೃಷ್ಣ ॥ ೨ ॥ ವಾತ ವತ್ಸಪ್ರಲಂಬ । ಖ್ಯಾತ ಬಕಧೇನುಕ । ಪೂತನಿ ಪ್ರಾಣಾಪಹಾರೀ ॥ ಶ್ರೀ ಹರಿ ಕೃಷ್ಣ ॥ ೩ ॥ ಕಂತುಪಿತ ಶ್ರೀ ಲಕ್ಷ್ಮೀ । ಕಾಂತ ಶ್ರೀಕೃಷ್ಣ ಮುದ । ಸಂತ

ಸುದರ್ಶನಧಾರೀ ॥ ಶ್ರೀಹರಿ ಕೃಷ್ಣ ॥ ४ ॥ ಸಾರಸಭವಪಿತ । ಶ್ರೀರಮಾಧವ ಪಾರ್ಥ । ಸಾರಥಿ ದುರಿತ ಉತ್ತಾರೀ ॥ ಶ್ರೀಹರಿ ಕೃಷ್ಣ ಮುರಾರೀ ॥ ೫ ॥ ಶ್ರೀ

॥ ೬೫ ॥ ರಾಗ, ಅಸಾವೇರಿ [ಧಾಟಿ:– ಕರುಣಿಸೊ ಭಾಗ್ಯಪ್ರದಾಯಕಾ] ಏಕತಾಳ

ನುತಿಸಲೆನ್ನಳವೆ ಕೀರ್ತಿಯಾ । ಶ್ರೀರಾಮನ ಮೂರ್ತಿಯ । ನುತಿಸಲೆನ್ನಳವೆ ಕೀರ್ತಿಯಾ ॥ ಪಲ್ಲ ॥ ನುತಿಸಲೆನ್ನಳವಲ್ಲ ರಾಘವನಾ । ರತಿಪತಿ ಪಿತನಾನತ ವಾಂಛಿತನಾ । ಸಿತಕಂಠಾದಿ ಸುರೌಘಾರ್ಚಿತನಾ । ಶ್ರುತಿಸ್ಮೃತಿ ತತಿ ರಘುಪತಿಯ ಚಾರಿತ್ರವಾ ॥ ನುತಿಸ ॥ ಅ.ಪ. ॥ ಪರಮ ದಶರಥಾತ್ಮಜ ನೆಂದೆನಿಸೀ । ವರ ಗಾಧಿಜ ಮನದರ್ಥಿಯ ಸಲಿಸೀ । ದುರುಳ ಸುಬಾಹು ತಾಟಕಿಯ ಸಂಹರಿಸೀ । ಚರಣರಜದೊಳಹಲ್ಯೆಯನುದ್ಧರಿಸೀ ॥ ಹರನ ಬಿಲ್ಲೆತ್ತಿ ಝಾಡಿಸೀ । ಭೂಜಾತೆಯ ಸ । ತ್ಕರಿಸೀ ಭಾರ್ಗವನ ಸೋಲಿಸೀ । ತಾ ಪಿತನಾಜ್ಞೆಗೆ ಸಂ । ಚರಿಸುತಾರಣ್ಯವ ಶೋಧಿಸೀ । ದೈತ್ಯರನೊರಸೀ ॥ ಭರದಿ ಮೃಗವ ತರಿದು ಮುಂದೆ ಬರುತಾ । ಸೀತಾಸುದ್ದಿಯ। ನೊರೆದ ಜಟಾಯುವಿಗೆ ಮುಕ್ತಿಯ ಕೊಡುತಾ । ಪವಮಾನಗಿತ್ತು । ದರುಶನ ಭಾಸ್ಕರಜಗೊಪ್ಪಿಸಿಕೊಳುತಾ । ವಾಲಿಯ ಕೊಲುತಾ । ಮೆರೆವ ಪ್ಲವಗಬಲವೆರಸಿ ಕಲ್ಲೊಟ್ಟುತಾ ॥ ಶರನಿಧಿಯನುರೆ ಬಂಧಿಸಿ ನಡದೂ। ದಶ। ಗೊರಳನ ವಂಶವೆಲ್ಲವ ಬಡಿದೂ । ಆ । ಪುರಕಿಡುತಲಿ ಶರಣನಿಗೊಲಿದೂ ॥ ಭರಿತ ವಿಮಾನಕ್ಕಡರಿ ಸತಿ ಸಹಿತೈ।ತರುತ ಅಯೋಧ್ಯವಿಸ್ತರವೇರ್ದ ವಿಭವವ॥ ನುತಿಸ ॥೧॥ ಮನುಜರ ಕಲಿಯುಗದಲಿ ರಕ್ಷಿಸಲು । ಅನುಜ ಲಕ್ಷ್ಮಣ ಸೀತೆ ಸಮೇತದೊಳು । ಮಿನುಗೆ ಮೂರುತಿಯಾಕೃತಿಯ ಧರಿಸಲು । ವನಜಭವನು ಅರ್ಚಿಸಿ ಪೂರ್ವದೊಳು ॥ ಸನಕಸನಂದನಾದ್ಯರು। ದೈನ್ಯದಿ ಪ್ರತಿಮೆ।ಯನು ಬೇಡಿಕೊಳಲು ವಂದ್ಯರೂ । ಲೋಕೇಶ ಕೊಡಲು । ಮಣಿದು ಪೂಜಿಸುತಿರ್ದರೂ ॥ ಕೆಲವು ಯುಗಾಂತರ।ವನು ಪೋಗೆ ಬಾದರಾಯಣರಿಗಂದೂ । ತ್ರೈವಿಗ್ರಹವನು । ವಿನಯದಿಂದಿತ್ತರು ತಾವೈತಂದೂ । ಬದರಿಕಾಶ್ರಮಕೆ। ಅನಿಲ ಸರ್ವಜ್ಞಾಚಾರ್ಯರೈತಂದೂ ॥ ಅವರಿಂದಿರಲಿ ನಿಂದೂ ॥ ಸನುಮತದಿಂ ಕೇಳಲು ಪಾಲಿಸಿ । ಗುಣ। ವನಧಿಯ ಬೀಳ್ಕೊಡುತಿರಲಾಗಾ । ಆ । ಕ್ಷಣದಲಿ ಮರಳಿ ಪುರಕೆ ಬರುತಾ । ನ । ಮ್ಮನುಪಮ ಗುರುಗಳ ಕರದಾಗಾ । ಘನ ಋಷಿಕೇಶತೀರ್ಥಾರ್ಯರ ಮುಖದೊಳು।ಫಣಿಶಾಯಿಯನು ಪ್ರತಿಷ್ಠಿಸಿ

ದರ್ಶಿಯಾ ॥ ನುತಿಸ ॥ ೨ ॥ ಚಾರುಪ್ರತಿಷ್ಠೆಯ ಗೈಯ್ಯುವ ಮೊದಲೂ ।
ಆ ಋಷಿಕೇಶತೀರ್ಥಾರ್ಯರು ಬರಲು । ಆರಾಧಿಪ ವಿಗ್ರಹವಿದದರೊಳು ।
ಭೂರಿ ಪ್ರಕಾಶಿಸುವನು ತಗ್ಗಿನೊಳು ॥ ಓರಂತೆಲ್ಲರು ನೋಡಿರೋ। ತಾಂಡವ
ಕೃಷ್ಣ । ಕಾರಣಿಕನ ಪಾಡಿರೋ ॥ ಭೃಗುಋಷಿ ಪೂಜಿಸುವ ಉ । ದಾರ
ವ್ಯಾಸರ ಕೊಂಡಾಡಿರೋ ॥ ನಿತ್ಯವಿ ಸ್ತುತಿಮಾಡಿರೋ ॥ ಭೋರನೆ ವಾದಿ
ರಾಜರಿಗಿತ್ತಾ । ಹಯವದನ ಪ್ರಥುಮೆ । ಸಾರಸೌಭಾಗ್ಯವಿದುವೆನುತ್ತಾ । ಆ
ನಂದತೀರ್ಥಾಚಾ । ರ್ಯರ ಮೂರುತಿಯನಿತ್ತಾ । ಠೀವಿಯ ನೋಟಿತ್ತಾ ॥
ನೀರಜಭವ ತ್ರಿಪುರಾರಿ ಮುಖ್ಯಾಮರ । ವಾರ ಪೊಗಳಲುಪದಳ ವಿಭವೂ ।
ರಘು । ವೀರಸ್ಥಿರದಿ ನಿಂತಾಗಮವೂ । ಇಕೊ । ದೋರುತಲಿಪೆ ಬಹು ಸಂ
ಭ್ರಮವೂ ॥ ಮಾರಜನಕ ದುರಿತಾರಿ ವೈಷ್ಣವಕುಲೋ । ದ್ಧಾರಭಕತಸಂ
ಸಾರಿಕನಾಟಕ ॥ ನುತಿಸ ॥ ೩ ॥ ಬಲಭಾಗದಿ ನಿಂದಿಹ ಲಕ್ಷ್ಮಣನಾ । ಲಲ
ನೆ ಭೂಜಾತೆ ವಾಮದೊಳಿಹ ಹದನಾ । ತಿಳಿದು ನೋಡಿರೊ ಮಧ್ಯದಿ ರಘು
ವರನಾ । ಉಳಿವ ಪ್ರಥುಮೆ ತಗ್ಗಿನೊಳಿಹ ಹದನಾ ॥ ಬಲು ಸೌಂದರ್ಯವ
ತೋರ್ಪುದೂ। ಕೆತ್ತಿಗೆ ಮುಕುಟ। ತಲೆಗೆರಕವಾಗಿರ್ಪುದೂ। ಕರ್ನಕುಂಡಲ।
ವಲುಗಿ ಶೋಭಿಸುತ್ತಿರ್ಪುದೂ॥ ಕಂಠಕ್ಕೊಪ್ಪುವಾ । ಚಲುವ ಪದಕಮಣಿ ಕೇ
ಯೂರಾ। ಕೌಸ್ತುಭರತ್ನದಿ । ಪೊಳೆವ ಚಾಮೀಕರದಮಿತಹಾರಾ । ಕಂಠಿಯು
ಎಳೆ। ತುಳಸಿಮಾಲೆ ಮೌತಿಕಹಾರಾ । ಕರದ ಶೃಂಗಾರಾ ॥ ಬಳೆ ಸರಪಣಿ
ಬೆರಳುಂಗುರ ಸರಿಯೂ। ಥಳಥಳಿಸುವ ಕಟ ವಡ್ಯಾಣಾ। ನೇ। ವಳ ಸರಪಣಿ
ಪೇಳಲದೇ ನಾ । ಘಲ । ಘಲಿಸುವ ಪದಗೆಜ್ಜೆವಿಧಾನಾ ॥ ಉಲಿವಂಬಿಡುವ
ನೂಪುರ ಪಾಡುಗ ನಿ । ಟ್ಟಳಿಯ ಮೋಹಿಪ ಕೋಸಲದರಸನ ವಿಧ ॥ ನುತಿಸ ॥
॥ ೪ ॥ ಭೂರಿ ದೈತ್ಯರ ವಧಿಸಲು ಗರ್ವದೊಳು । ಕ್ರೂರ ಕೋದಂಡನು
ವಾಮಹಸ್ತದೊಳು । ಕೂರಲಗನು ಬಲಕರಾಗ್ರದೊಳು । ಧಾರಣಗೈದು
ನಿಂತಿಹ ಠೀವಿಯೊಳು ॥ ದೋರುತ್ತಲಿದೆ ಆನಂದವೂ । ಹಿಂದೆ ಮುಂದಿಟ್ಟ ।
ಚಾರು ಹೆಜ್ಜೆಗಳ ಚಂದವೂ। ಪೊಗಳಲೆನ್ನಳವೆ। ಶ್ರೀರಮಾಧವನೈಶ್ವರ್ಯವೂ।
ಮೆರೆವ ಪಶ್ಚಿಮ । ಪಾರಾವಾರ ತಟಕ್ಕೊಪ್ಪಿದ ವಿಧದೀ । ಶೋಭಿಪಘಲ । ಭಾರ
ವೆಂದೆನಿಪ ಪಟ್ಟಣದೀ । ಶ್ರೀಋಷಿಕೇಶ ತೀರ್ಥಾ । ರ್ಯರ ಪಾರಂಪರೆಯ
ಕರಪುಟದೀ ॥ ರತ್ನವಿಸ್ತರದಿ । ರಾರಾಜಿಸಿ ನೆಲಸುತ ಬುಧವಂಶೋ । ದ್ಧಾರವ
ಗೈಯ್ಯುವ ಯತಿಕುಲಲಲಾಮಾ ! ಸುವಿ । ಚಾರ ವಮಿತ ಸದ್ಗುಣಧಾಮಾ ।

ಕರು । ಣಾರಸಭರಿತ ಸುಜನಪ್ರೇಮಾ ॥ ಶ್ರೀರಘುವರಭೂಷಣ ತೀರ್ಥಾ ರ್ಯರು ನಿರ । ತಾರಾಧಿಸುವ ಉದಾರ ಶ್ರೀರಾಮನ ॥ ನುತಿಸಲೆನ್ನಳವೆ ಶ್ರೀಪತಿರಾಯಾ ॥ ೫ ॥ ಶ್ರೀಃ ॥

॥ ೭೭ ॥ ರಾಗ, ಮಧ್ಯಮಾವತಿ [ಧಾಟಿ:- ಕಂಡು ಕೃತಾರ್ಥನಾದೆ] ತ್ರಿಪುಡೆತಾಳ

ಕರುಣದಿ ಪಾಲಿಸೆನ್ನ । ಕೀರ್ತಿಸಂಪನ್ನಾ । ಕರುಣದಿ ಪಾಲಿಸೆನ್ನ ॥ ॥ ಪಲ್ಲ ॥ ಕರುಣನಿಧಿ ಕಮಲಾಕ್ಷ ಭಾಸ್ಕರ । ಕಿರಣ ಭಾಸುರ ಚರಣ ಯುಗ್ಮದ । ಶರಣರಘುಮುಸ್ತರಣ ಭವಭಯ । ಹರಣ ಶ್ರೀಮದ್ವೆಂಕಟೇಶನೆ ॥ ॥ ಕರುಣದಿ ॥ ಅನು ॥ ಧನ್ಯನಾದೆನು ಹರಿಯೇ । ನಿನ್ನಂಘ್ರಿಗಳ ನ್ನು ಕಂಡೆ ಹೇ ಧೊರೆಯೇ । ನೀನಲ್ಲದೆ । ಅನ್ಯದೈವವ ನರಿಯೆ ॥ ಭಾಗ್ಯದ ಶಿರಿಯೇ ॥ ಚಿನ್ಮಯನೆ ಸಚರಾಚರದ ಚೈತನ್ಯಮೂರುತಿ ನಿನ್ನ ಮರತೆನೆಂ । ದೆನ್ನ ಮನ್ನಿಸ ದಿರಲು ಮತ್ತಾರೆನ್ನ ಕ್ಯಾವವರನ್ನ ಕಾಣೆನು ॥ ಕರುಣದಿ ॥ ೧ ॥ ತರಳ ಪ್ರಹ ಲ್ಲಾದನಿಗೆ । ಪಿತನು ಬಾಧಿಸೆ । ಮರುಗಿ ಕೂಗಲಾ ಧ್ವನಿಗೆ । ಶೀಘ್ರದಿ ಬಂದು । ದ್ಧರಿಸಿದೆ ಬಾಲಕಗೇ॥ ವಾರಣೇಂದ್ರಗೇ ॥ ತ್ವರಿತದಿಂದೈತಂದು ಸಲ ಹಿದೆ । ಪೊರದೆ ಧ್ರುವಗೆ ಅಜಾಮಿಳಗೆ ತವ । ಚರಣದಾಶ್ರಿತರಿಂಗೆ ಕ್ಯಾದಾ ತೆರದ ಕೃಪೆಯಲಿ ರಕ್ಷಿಸೆನ್ನನು ॥ ಕರುಣದಿ ॥ ೨ ॥ ನಿತ್ಯತೃಪ್ತನೆಂದೆನಿಸಿ । ವಿದುರನು ನಿನ । ಗತಿಯಿಂದಲಿ ಮನ್ನಿಸೀ । ಕ್ಷೀರವನು ತಂ । ದಿತ್ತು ಪೂಜಿಸಿ ಪ್ರಾರ್ಥಿಸೀ ॥ ಚರಣಕರ್ಪಿಸೀ ॥ ಮತ್ತೆ ಸ್ತುತಿಸಲು ಕುಡಿದೆ ಲೋಕಕೆ ವಿಚಿತ್ರವನು ತೋರಿಸಿ ಸುದಾಮ ತಂ। ದಿತ್ತ ಪ್ರಥುಕ ತಂಡುಲವ ಸೇವಿಸು । ತಿತ್ತೆ ಪ್ರತಿ ದ್ವಾರಕಿಯ ಭಾಗ್ಯವ ॥ ಕರುಣದಿ ॥ ೩ ॥ ಕರದಿ ತ್ತಜಗೆ ಶೃತಿಯಾ । ತಮಾಸುರನ । ಕಾದಿಕೊಂದಿತ್ತ ಧಾತ್ರಿಯಾ । ದೈತ್ಯನ ಕಾಯಾ । ಕಿರಿಮ ತಂದೆ ನೀ ಕ್ಷಿತಿಯಾ ॥ ಕೀರ್ತಿ ಮೆರಸಿದೆಯಾ ॥ ಆ ಸುರುಹ ತಪ್ಪಿಸಿ ತೂಗಿ ಭೂತಳ । ಕ್ಕೆರಗಿಸಿದೆ ವರ ಕೈಯ್ಯ ಕೊಡಲಿಯ । ತೊರಸೆ ಶರಧಿಯ ಕೌಸ್ತುಭಧೃತ । ತೊರದೆ ಸ್ತ್ರೀಯರ ಕಲ್ಕ್ಯಮೂರುತಿ ॥ ॥ ಕರುಣದಿ ॥ ೪ ॥ ಘಾರುಣಿಗಧಿಕವಾದ । ರಾಜಿಸುವ ಕು । ಮಾರಧಾರೆಯ ತಟದಾ । ನೇತ್ರಾವತಿ । ತೀರ ಪಶ್ಚಿಮ ಪಾರ್ಶ್ವದಾ ॥ ವಟಪುರದಿ ಮೆರೆದಾ ॥ ವೀರ ವೆಂಕಟರಮಣ ವಿಶ್ವಾ । ಧಾರ ತವ ಚರಣಾರವಿಂದವ । ಸೇರಿಸೆನು ದಯದೋರಿ ರಕ್ಷಿಸು । ಮಾರಜನಕನೆ ಶ್ರೀರಮಾಧವ ॥ ಕರುಣದಿ ಪಾಲಿ ಸೆನ್ನ ॥ ೫ ॥ ಶ್ರೀಃ ॥

॥ ೬೭ ॥ ರಾಗ [ದಾಟಿ:-] ತಾಳ

ಸಮುಯುವಿದಲ್ಲಾ ರನ್ನಾ । ತಾಳೊ ಮೋಹನ್ನಾ । ಸಮುಯುವಿದಲಾ ರನ್ನಾ ॥ ಪಲ್ಲ ॥ ಸಮುಯುವಿದಲ್ಲ ವ್ಯರ್ಥ । ಭ್ರಮಿಸಬೇಡೆಲೊ ಕಾಂತ । ಸುಮಶರಸುರುಬೆಗೆ । ಕ್ರಮವ ತೋರ್ಪೆ ನಾ ಬಗೆ ॥ ಸಮುಯ ॥ ಅ. ಪ. ॥ ಸುಳಿದಾಡಬೇಡವಯ್ಯಾ । ಸ್ಮರಿಸಿನ್ನರೆ । ಘಳಿಗೆ ಸುಮ್ಮನೆ ನಿಲ್ಲಯ್ಯಾ ॥ ಕಾಪಿಹರು ಬಂಧು । ಬಳಗನೆನ್ನಯ ಕೇಳ್ವಿಯಾ । ತಾಳು ಸುಮ್ಮಯ್ಯಾ । ತಳುಪ ಮಾಡಿದರೆ ನಾ। ಸುಳಿವೆ ಕಾಮತಂತ್ರದಿ । ಗಲಿಬಿಲಿಸುತಾ ಕಳವಳಿವು ತೊಲಿವುದು। ಕೆಲಸವಿದಲ್ಲಿದು ಚಲುವ ನೀ ನಡಿನಡಿ ॥ ೧ ॥ ನಡುಹಗಲಿನೊಳೀನಿದು । ಬೀದಿಯೊಳಿಂಥಾ । ಮಡುಹು ಮಾಳ್ಪುದು ಸಲ್ಲದು ॥ ಅಮರ್ದಪ್ಪಿ ಕುಚವ । ಪಿಡಿವದುಚಿತವಲ್ಲದು । ಆಗದಾಗದು । ಕಡೆಗೆ ಯನ್ನವರು ಕೇಳ್। ಬಿಡರು ಬಲ್ ಜೋಕೆ ನಿನ್ನ ॥ ಬಿಡು ಬಡಿವಾರ ನಡೆಯದು ತಡಿತಡಿ । ಗಡಬಡಿಸದಿರು ನೀ ಸುಡಿಯ ನಿಧಾನಿಸು ॥ ಸಮುಯ ॥ ೨ ॥ ಸುಗುಣ ಶ್ರೀ ವೆಂಕಟೇಶ್ವರಾ । ಬ್ರಹ್ಮಾದಿವಂದ್ಯ । ನಿಗಮುಪೂಜಿತ ಶ್ರೀಧರಾ । ಮಾನಾಭಿಮಾನ । ಮಿಗೆ ನಿನ್ನದೈ ಕೃಪಾಕರ । ಕಾಯೊ ದಾತಾರಾ । ನಗೆಗೇಡಾಗದಂದದೀ। ಬಗೆದೋರಿ ಕೂಡೆನ್ನ ಕೈ । ಮುಗಿವೆ ರಮಾಪತಿ । ಅಗಲದಾ ಬಗೆಯಲೀ। ಸೊಗಯಿಸು ಮೂಲಿಕೆ ನಗರಾಧಿಪ ಇದು ॥ ಸಮುಯ ॥ ೩ ॥ ಶ್ರೀ

ಮೂಲ್ಕಿ ರಘೋತ್ತಮನ ಪದಗಳು.

॥ ೬೮ ॥ ರಾಗ, ಶಂಕರಾಭರಣ [ಧಾಟಿ:- ನೋಡಿರೋ । ಶ್ರೀನಿವಾಸ] ಅಷ್ಟ ತಾಳ

ಭಾವಕೀ । ನೋಡಿವನ್ಯಾರೇ । ಭಾವಕೀ ॥ ಭಾವ ನೋಡ್ಯಾವಾತನಿವನೂ । ಸರ್ವದೇವವರೇಣ್ಯನಂತಿಹನು । ಆಹಾ । ಶ್ರೀವಿಲಾವಣ್ಯವ ಭಾವಿಸಿ ಪೊಗಳಲು । ಸಾವಿರಗ್ರೀವನಿಗಳ್ವಾವಾಗಸಾಧ್ಯವು ॥ ಭಾವಕೀ ॥ ಪಲ್ಲ ॥ ಸರಸಿಜಾಸನೆ ಈ ರಾಷ್ಟ್ರದಲಿ । ಬಂದು । ಸ್ಥಿರವಾಗಿ ನಿಂತ ಪ್ರೇಮದಲೀ । ಚೈತ್ರ । ವರ ಚತುರ್ಥಿಯ ಇರುಳಿನಲೀ । ದೀಕ್ಷೆ । ವಿರಚಿಸಿ ಯಜ್ಞಶಾಲೆಯಲಿ ॥ ಆಹಾ ॥ ಮೆರೆವ ಭೂಸುರರ ಸತ್ಕರಿಪ ವೇದದ ಘೋಷ । ಧರಣೆಗೈಸುವ ವಿದಾಶ್ಚರಿಯವೇನಿದ ಪೇಳೆ ॥ ಭಾವಕೀ ॥ ೧ ॥

ತರಳೆ ನೀ ಕೇಳು ಪ್ರವೀಣೆ । ಈತ । ಸುರಗಾದ್ರಿವಾಸನು ಕಾಣೆ ॥ ಪರಶುರಾಮ ಸೃಷ್ಟಿಯೊಳಿರುವ ಸುಜನರನು । ಧ್ಧರಿಸಲೋಸುಗ ಬಂದಿರುವ

ಬ್ರಹ್ಮರಥವ ॥ ವಿರಚಿಸುತ್ತೇರುವ ಪರಸಾರಂಭಕೆ । ಮೆರೆವ ಸುಮಂಗಲಕರ ಮಖದೀಕ್ಷೆಯು ॥ ವಿರಚಿಸಿ ದಿವ್ಯಾಂಕುರವ ಸಮರ್ಪಿಸು । ವರೆ ಬ್ರಾಹ್ಮಣರ ತತಿಭರಿತ ವಿಘೋಷಾ ॥ ತರಳೆ ನೀ ॥ ೨ ॥

ಚದುರೆ ಪಂಚಮಿಯುದಯದಲೀ । ತನ್ನ । ಸದನ ದ್ವಾರದ ಇದಿರಿನಲೀ । ಸಂಭ । ವದಗಿ ನಿಂದಿರಿಸಿ ಲೀಲೆಯಲೀ । ಸರ್ವ । ಬುಧರ ಮಧ್ಯದಿ ಆ ರಾತ್ರಿಯಲೀ ॥ ಆಹಾ ॥ ಮುದದಿ ಹಕ್ಕಿಯನೇರಿ ವಿಧದಿ ಮತ್ತೆರಡನೆ । ಯಧಿಕ ತೇರಡರುವ ಸದನವೇನಿದ ಪೇಳೇ । ಭಾವಕೀ ॥ ೩ ॥

ಮುಗುದೆ ಕೇಳ್ ಧ್ವಜಕೆ ಸ್ತಂಭವನೂ । ಮಾಡಿ । ನಿಗುರಿಸುವ ದುಂಟೀ ಧ್ವಜಯನೂ ॥ ಬಗೆಗೆ ತೂಡುತಾಗ್ರದೀ ಖಗವಾಸುಗರೀವರ । ಮಿಗೆ ಮೇಲಡರಿಸುತ್ತಾ ಸುಗುಣ ಸ್ವಾರಿ ಯೋಚಿಸಿ ॥ ನಿಗಮಸಮೂಹವು ಪೊಗಳಲು ಗರುಡನ । ಸೆಗಲೇರಿಸೀ ಝುಗಝುಗಿಸುವದಾಭರ ॥ ಜಗಳ ಪ್ರಕಾಶದಿ ಜಗದುದ್ಧಾರನು । ಮುಗುಳೆ ರಥವ ಬರ ಸೊಗಸಿದ ನೋಡೇ ॥ ॥ ತರಳೆ ನೀ ॥ ೪ ॥

ಬಾಲೆ ಓಹೋ ಈತನ್ಯಾರೇ । ಅಮ್ಮ । ಶೂಲಿಯಂತಿಹ ಹೊಂತಕಾರೇ । ಗುಣ । ಶೀಲನು ಸ್ಥೂಲಶರೀರೇ । ನೋಡೆ । ಮೇಲು ಪೀತಾಂಬರಧಾರೆ ॥ ಆಹಾ ॥ ಕೋಲುಬೆತ್ತವು ತ್ರಿಶೂಲ ಕೃಷ್ಣಾಜಿನ । ಸೀಳು ಚರ್ಮವು ಪಿಡಿದೋಲಗಿಸುವನ್ಯಾಕೇ ॥ ಭಾವಕೀ ॥ ೫ ॥

ಕಂಡೆಯಾ ನಿಪುಣನಾಕ್ಷತ್ರಿಯಾ । ಇವನ । ಮುಂದೆಯೊಳಿಹ ಭಾಗೀರಥಿಯಾ ॥ ರುಂಡಮಾಲೆಯು ಕರ್ಣಕುಂಡಲಗಳ ಜೋಡು । ಕುಂಡಲಿ ತ್ರಿಶೂಲವುದ್ದಂಡ ಡಮರುಗವು ॥ ಗುಂಡುಡಿಗೆಯು ಮೇಲೆ ಹಿಂಡುಗೆಜ್ಜೆಯು ಸರ । ಗೊಂಡೆ ಸುವರ್ಣದ ತಂಡದಿ ಮೆರೆವ ಪ್ರ ॥ ಚಂಡ ಜಟಾಧರಮಂಡಲದೊಳಗೆ ಅ । ಖಂಡಿತ ಭೈರವ ಪಂಡಿತನಿವನೂ ॥ ತರಳೆ ನೀ ॥ ೬ ॥

ಮತ್ತೊಂದಿಹುದು ಈ ಪುರುಷನ । ಸುತ್ತ । ಮುತ್ತಿಕೊಂಡಿದೆ ಭೂತಗಡಣಾ । ಇರ್ವ । ರೊತ್ತಿಲಿ ಬ್ರಹ್ಮರಾಕ್ಷಿವನಾ । ಕಣಿ । ವುತ್ತಲಿಹರು ನೋಡೀ ಹದನಾ ॥ ಆಹಾ ॥ ಬಿತ್ತರಿಸೆನಗೆ ಚಂತ್ರ ಸುಪಾತ್ರಪ । ವಿತ್ರನ ಚಿತ್ರವಿಚಿತ್ರವೇನಿದ ಪೇಳೇ ॥ ಭಾವಕೀ ॥ ೭ ॥

ಬಿಡದೆ ಸಜ್ಜನರ ಬಾಧಿಸುತಾ । ಮಹಾ । ದಡಿಗಜಟ್ಟಿಗ ಭೂತಪ್ರೇತಾ ॥ ವಡನೆ ಬ್ರಹ್ಮರಾಕ್ಷಸ ಮಿಡುಕ್ಯಾಡುವ ಪಿಶಾಚ । ಗಡಣ ಝೋಂಪಿಸಲು ಮೃಗದರೀ ಪೀಡಿಸುತಿರೆ ॥ ಕಡು ಶೌರ್ಯನು ಘೋರ್ಗುರ್ಡಿಸುತ ತೀರ್ಥವ । ಝಡಿದು ಖಳರ ಸೆರೆಪಿಡಿದಾ ಬ್ರಹ್ಮರ ವಶ ॥ ಕೊಡುತಾ ವೇಳ್ಯದಿ ಕೊಡುವ ಬಲಿಗೆ ಖುಷಿ । ವಡುತಾ ಮೃಡಸೊಳು ಸಿಡಿದಾಡುವವು ॥ ತರಳೆ ನೀ ॥ ೮ ॥

ಧನ್ಯನಿವನು ಧರಿತ್ರಿಯಲಿ । ಭಲೆ । ಮಾನ್ಯನವನು ತ್ರಿದಶರಲಿ । ಸುಪ್ರ । ಸನ್ನ ಶ್ರೀಹರಿಯ ಸೇವೆಯಲಿ । ಕೃಪೆ । ಯನು ಪಡದ ನಿಷ್ಟೆಯವಲಿ ॥ ಆಹಾ ॥ ಕನ್ನೆ ಸದ್ಗುಣಗಣರನ್ನೆ ಕೇಳಿಲೆ ಈತ ಮುನ್ನನೆಲ್ಲಿರ್ದ ಸಂಪನ್ನ ಪೇಳೆನಗೆ ಕೇಳ್ ॥ ಭಾವಕೀ ॥ ೯ ॥

ಪುರವು ಈತಗೆ ಗಂಗಾತೀರ । ರಾಮೇ । ಶ್ವರಕೆ ಮುತ್ತೈದ ಈ ಧೀರ ॥ ಭರದಿ ಸೇತುಸ್ನಾನವ ವಿರಚಿಸಿ ಹೇಮಾದ್ರಿಗೆ । ತೆರಳಿ ಶ್ರೀನಿವಾಸನ ದರುಶನವ ಮಾಡಿರೆ ॥ ಕರದು ಶರಣನೆಂದರಿತು ಮುಂತ್ರಿತ್ವವ । ಧರಿಸಿ ಪರಿಜನ ಬರಿಸಿ ಕಾಣಿಕೆಯನು ॥ ತರಿಸನುತಲಿ ಹರಿಯವಲು ಬಂದಿಲ್ಲಿರುವ ಶ್ರೀಚ್ಛೈರವ ಘೋರ ನಯನವಸಿ । ತರಳೆ ನೀ । ೧೦ ।

ಅರಿತೆ ನಾ ನಿನ್ನ ನಿಷ್ಟೆಯವಾ । ಇಂಥಾ । ಸರಸದುತ್ಸವದ ಸಂಭ್ರಮವಾ । ನೋಡಿ । ಭರದಿ ದಾಟಿದೆ ಭವಾರ್ಣವವ । ಇನ್ನು । ಮರೆಯದೀತನ ದಿವ್ಯಪದವ ॥ ಆಹಾ ॥ ಸ್ಮರಿಸಿರೂ ಮೂಲಿಕೆಸ್ಥರದ ಶ್ರೀ ವೆಂಕಟೇ । ಶ್ವರ ನರಸಿಂಹ ಶ್ರೀಕರ ರಘುನಾಥವನ ಕೇಳ್ । ಭಾವಕೀ ॥ ೧೧ ॥ ಶ್ರೀ ॥

॥ ೬೯ ॥ ರಾಗ, | ಭಾಟಿ:- | ತಾಳ

ರಮಣಿ ಇಂದಿನಲಿ ನೋಡಮಮ ಚೋದಿಗವಿದೇನಮಿತ । ಬ್ರಹ್ಮಾಂಡ ನಾಯಕನಾ ॥ ಕ್ರಮಿಸದೆ ಪೆಗಲೋಳ್ । ಸಂಭ್ರಮದಿ ಪೊತ್ತು ಸ್ವಾಂಗೆ ಗಮಿಸುವ ಕಪಿ ಈತನ್ಯಾರೆ ॥ ೧ ॥

ಕಪಿಯನ್ನದಿರೆಲೆ ನಿಪುಣೆ ಈ ಹನುಮನು । ಸುಫಲನು ನಿನ್ನಾಣೆ । ತ್ರಪನಕಲೇಶನು ಕೃಪೆಯೊಳಿವನ ಮೋದ । ಉಪಚರಿಸಿದ ಕಾಣೆ ॥ ಕಪಟವಿ ದಲ್ಲಿದು ನೃಪತಿಗೆರಗಿ ಜಲ । ಧಿಪನನುಲ್ಲಂಘಿಸಿದಾ । ಚಪಲನು ಲಂಕೆಯ ನುಪವನದಲಿ ಖಳ । ರಪರಿಮಿತ ಸಂಹರಿಸಿದಾ ॥ ೨ ॥

ಎಲ್ಲಿ ದೊರಕಿದ ಶ್ರೀವಲ್ಲಭಗಿವ ಬಂಟ । ಬಲ್ಲಿದ ಪ್ಲವಗರಾಜೇಂದ್ರ ॥ ಯಿಳ್ಳ ತ್ರಿಜಗದೊಳು ಮಲ್ಲಿಗಣೆಯು ಕೇಳ್ ಸು। ಳ್ಳಲ್ಲ ಧೀರನೆಂದು ತೋರು ತ್ತಿದೇ ॥ ೩ ॥

ಕುಂದೇನಿವಗೆ ಪರಾಕ್ರಮದೊಳ್ ಸಖಿ । ಇಂದ್ರಾರಿಯು ರಣದೀ । ಹಿಂದೆ ಬ್ರಹ್ಮಾಸ್ತ್ರದಿ ಬಂಧಿಸಿ ಮರ್ಕಟ । ವೃಂದವೆಲ್ಲವು ಭರದೀ ॥ ಕೊಂದಿಡ ಲಾಕ್ಷಣ ಚಂದ್ರದ್ರೋಣಾದ್ರಿಯು । ತಂದು ಸಂಜೀವನದೀ। ಸಂಧಿಸಿ ಸೈನ್ಯದ ಸಿಂಧುಯೆಬ್ಬಿಸಿದ ಸ । ಲೀಂದ್ರನಿವನು ಧಿಟದೀ ॥ ೪ ॥

ಗಿರಿಯ ಪೆಗಲಿನೊಳು ಧರಿಸಿ ತಂದನೆ ಜೀವ । ತೂರೆದನೆಲ್ಲರಸುಳುಹಿ ದನೇ ॥ ಸರಿಯಿಲ್ಲ ಇವ ತನ್ನ ಧೊರೆಯ ಚಿತ್ತವ ಸಾಧಿ । ಸಿರುವ ತಾ ಭಲಿ ಶೂರನಹುದು ॥ ೫ ॥

ನಾರಿ ಕೇಳ್ ಮಹಿಜಾಚೋರನ ರಣದಲಿ । ಮಾರುತಿ ರಾಘವಗೇ । ತೇರಾಗುತ ಪೆಗಲೇರಿಸಿ ಖಳನ ವಿ । ಕಾರವೆಸಗಿದ ಮುಗೆ ॥ ಕ್ರೂರ ದೇವಾಂ ತಕ ಶೂರ ನರಾಂತಕ । ರಾಸವದೊಳಗವರ ॥ ವೀರಭದ್ರನ ಕರವಾಳ ಸೆಳ ಸಿರ । ಹಾರಿಸಿದ ಸುಭಟವರಾ ॥ ೬ ॥

ಭೃಂಗಕುಂತಳೆ ಕೇಳ್ ಶ್ರೀರಂಗಧಾಮನ ರಣ । ರಂಗದೀ ಪೊರುವ ದುಚಿತವೂ ॥ ಸಂಗ್ರಾಮವಲ್ಲಿದು ಹಿಂಗದೀಗಲು ಪೊತ್ತಾ । ಯಿಂಗಿತವೇನೆ ಪೇಳವ್ವಾ ॥ ೭ ॥

ಪ್ರಥಮದಿ ಸೀತಾಪತಿಯ ಸೇವೆಗ ತಾ । ರಥವಾಗಿಹ ಪರಿಯಾ । ಕ್ಷಿತಿಯಲಿ ಪ್ರತ್ಯಕ್ಷಕೆ ಶಕಟವನೇ । ರುತ ಮುಂಡಿಸಿ ಹರಿಯಾ ॥ ಜತನದಿ ಪೊತ್ತುಕೊಳ್ಳುತಲತಿಸಂಭ್ರಮ । ಹಿತವೆಮಗದು ತೋರೀ । ಅತಿಸೌಭಾಗ್ಯ ವು ಪ್ರತಿದಿನ ಪಾಲಿಪ । ಸತಿ ಕೇಳ್ ದಯದೋರೀ ॥ ೮ ॥

ಯುವತಿ ನೋಡೆಲಿ ಶ್ರೀ ಕೇಶವನು ಯೇನಿದು ತನ್ನ । ಭವನ ಸುತ್ತಲು ಬಹನ್ಯಾಕೇ ॥ ನಿವಹ ನೃತ್ಯವಾದ್ಯನೂದುವ ಶಂಖಧ್ವನಿಯು ಕೇಳ್ । ವಿವರಿಸೆನಗೆ ಈ ವಿನೋದಾ ॥ ೯ ॥

ಬಾಲೆ ನೋಡೆಲೊ ಈಕೊ ಸಾಲು ಸಾಲಿನಲೀ । ಹಿಲಾಲು ದೀವಿಟಿಕೆ ಗಳು । ಮೇಲು ನಿಸಾಣಿ ಚಡಾಳಿಪ ಚಮರ ವಿ । ಶಾಲ ಛತ್ರ ಟಕ್ಕೆಯೊಳೂ ॥ ಲೀಲೆಯಲಿ ರಜತ ಕೋಲು ಬೆತ್ತವು ಪಿಡಿ। ದೋಲಗಿಸುವ ಸುಜನಾ । ಜಾಲ ರಕ್ಷಿಸಲು ಶ್ರೀಲೋಲ ಸೆವದಿ ಬಹ । ಶೀಲಸುತ್ಸವಕೆ ಘನಾ ॥ ೧೦ ॥

ಮರವೆನೆ ನಿನ್ನ ಕೇಳ್ ಸರಸಿಜಾನನೆ ಇಹ । ಪರಕೆ ಸಾಧನವ ತೋರಿ ಸಿದೇ ॥ ಮೆರವ ಸೃಷ್ಟಿಯಾನಂದ ಪರಮ ಮೂಲಿಕೆಯೋಳ್ ಶ್ರೀ । ಕರ ರಮಾಧವನ ನಾ ಕಂಡೇ ॥ ೧೧ ॥ ಶ್ರೀ ॥

॥ ೭೦ ॥ ರಾಗ [ಧಾಟಿ:-] ತಾಳ

ಚಂದಿರವದನೆ ಕೇಳಿಂದು ಸಪ್ತಮಿಯೊಳಾ । ನಂದದುತ್ಸಹವಿದೇನೇ ॥ ಮುಂದರಧರನ ಪೊತ್ತವನೀತಸುರಗನ್ಯಾ । ರಂದು ಪೇಳೆನಗೆ ಜಾಣೇ ॥ ೧ ॥

ಲಾಲಿಸು ಪ್ರೇಮದ ಬಾಲೆ ನೀ ಮುದದೀ । ಶ್ರೀಲಲಾಮನ ಭಾಗ್ಯ ಪೇಳ್ವ ಸಂತಸದೀ ॥ ಶೀಲ ಸುಗುಣ ಸುಖಶಾಲಿ ಶ್ರೀವೈಕುಂ । ಠಾಲಯದಲಿ ಒಡ್ಡೋಲಗಗೊಟ್ಟಿಹ । ಮೂಲ ಸುಪ್ರತ್ತಿಗೆ ವ್ಯಾಳನಿವನು ಈ । ಭೂ ಲೋಕದೊಳಾಲೀಲೆಯ ತೋರುವ ॥ ೨ ॥

ಕಮಲದಳಾಕ್ಷಿ ನೋಡಮುವು ಭುಜಂಗನಿ । ಗಮಿತ ಪೆಡೆಗಳಿದೇನೇ ॥ ವಿಮಲನ ಶಿರದ ಮೇಲಿತ್ತಿ ಪಿಡಿದ ಈ । ಕ್ರಮವ ಪೇಳೆನಗೆ ಜಾಣೇ ॥ ೩ ॥

ಇಂದಿದು ಪೊಸತಲ್ಲ ಮಥುರಪಟ್ಟಣದೀ । ಹಿಂದೆ ಶ್ರೀಹರಿಯವತರಿಸ ಲಾಕ್ಷಣದೀ ॥ ಕಂದನೆನುತ ಶ್ರುತಿವಂದ್ಯನ ಯೆತ್ತುತ । ಅಂದು ಗೋಕುಲ ಕಿಡಲಂದು ಶೌರಿಯು ಬರೆ ॥ ಮುಂದೆ ತನ್ನೊಡಲನು ಬಂದಿವ ಹಾಸಿ ಮೇ । ಲಿಂದು ನೆಗಹಿ ಪೆಡೆಯುಂದೇ ನೆಗಹಿದಾ ॥ ೪ ॥

ನಾರಿ ಕೇಳಿವ ಹೊಂತಕಾರಿ ಸರಿಸ್ಪಪ । ಧೀರನೆಯಹುದಹುದೂ ॥ ವಾರಿಜಾಕ್ಷನ ಪೊತ್ತ ಭಾರವ್ಯಾಕಿರದು ವಿ । ಚಾರಿಸಿ ಪೇಳೆಯಿದು ॥ ೫ ॥

ವಾಸುಕಿಯೆನಿಸೀ ಹಾಸಿಕೆಯಾದ ಹರಿಗೇ । ಬೇಸರಿಲ್ಲದೆ ಮುಂದೆ ನೇಣಾದ ಗಿರಿಗೇ ॥ ಸಾಸಿರಪೆಡೆಯು ವಿಲಾಸದೀ ಪಸರಿಸು । ತಾ ಸರಸದೀ ಕ್ಷಿತಿ ತೋಷದೀ ಪೊರೆವಾ ॥ ಶೇಷಪ್ರಬಲ ಅತಿ ವೇಷಧರನು ಮಹ । ಶೇಷ ನಿವನು ಜಗದೀಶನ ಶರಣಾ ॥ ೬ ॥

ಭಾವೆ ಲೇಸಿದು ವಾಸುದೇವಗೆ ಹಾವಿನ ಸಹ । ವಾಸವಾಯಿತಲ್ಲೇ ॥ ಶೀವಿ ಮತ್ತೊಂದ ಕೇಳುವೆನು ಹತ್ತವತಾರ । ಕೋವಿದಗಹುದು ಬಾಲೇ ॥

ದಿಟ್ಟೆ ಕೇಳಹುದು ಕೊಂದನು ಮುನ್ನ ತಮನಾ । ಬೆಟ್ಟವ ನೆಗಹಿ ಭೂಮಿಯ ತಂದು ಖಳನಾ ॥ ಹೊಟ್ಟೆ ಬಗಿದು ಅಡಿಯಿಟ್ಟು ನೃಪರ ತಲೆ । ಕುಟ್ಟಿ ಅಬ್ಧಿಗೆ ಕಲ್ಲೊಟ್ಟಿ ಗೋಕುಲದಲೀ ॥ ಪುಟ್ಟ ನಾಚಿಕೆಯನು ಬಿಟ್ಟು ಬತ್ತಲೆ ಹಯ । ಥಟ್ಟುವಡರಿದ ಈ ಸೃಷ್ಟಿಗೊಡೆಯನಿವ ॥ ೮ ॥

ಏನು ಚೋದಿಗವು ಶ್ರೀನಿವಾಸನು ಮುನ್ನ । ತಾನೇ ಶೇಷಾದ್ರಿಯಲೀ ॥ ಜಾಣನಲ್ಲೀರ್ದುಕ್ಷಿಲ್ಲ್ಯಾಕೆ ಬಂದಿರುವ ನಿ । ದಾನ ಪೇಳ್ ಪ್ರೇಮದಲೀ ॥

ಶರಣವತ್ಸಲನೆಂಬ ಬಿರಿದುಳ್ಳ ಹರಿಯೂ । ಸುರನರೋರಗರ್ಗೆ ಸೌಭಾಗ್ಯದ ಸಿರಿಯೂ ॥ ವರ ಪ್ರಹಲ್ಲಾದನು ಶರಿರಾಜನು ಧ್ರುವ । ತರಳೆ ದ್ರೌಪದಿ ಸಹ ಕರೆಯಲು ಬಂದಿಹ ॥ ತೆರನಂತೆಮ್ಮನು ಪೊರೆಯಲು ಬಂದಿ । ಲ್ಲಿರುವ ಸುವರ್ಣದ ಗಿರಿಯಾಧಿಪನಿವಾ ॥ ೧೦ ॥

ಭಳಿರೆ ಶಾಬಾಸು ಯೇ ಲಲನೆ ಮೂಲಿಕೆಯೊಳು । ಚಲುವ ರಮಾಧವನಾ ॥ ಪಲಿದು ತೋರಿಸಿದೆ ಸತ್ಕುಲದೊಳುತ್ತಮೆ ಕೇಳು । ತಿಳಿದೆ ನಿಸ್ಸಯ ಸುಜ್ಞಾನಾ ॥ ೧೧ ॥ ಶ್ರೀಃ ॥

॥ ೭೧ ॥ ರಾಗ. [ಧಾಟಿ:-] ತಾಳ

ಸರಸಿಜಾಕ್ಷಿ ಇವನ ನಿಜವನರಿಯದಲ್ಲೆ ಬಾಲೇ ॥ ಹರಿಯಾ ಸಿರಿಯಾ ಸ್ಥಿರಿಯಾ ಪರಿಯಾನರುಹಿಸ ಆ ಲೀಲೇ ॥ ಸರಸಿಜಾಕ್ಷಿ ॥ ೧ ॥

ಮೊದಲು ವೇದಚೋರನ ಕೊಂದಾ । ಮತ್ತೆ । ಸುಧೆಯು ನಿರ್ಜರರುಣಲೆಂದಾ । ಭೂಮಿ । ಯೊಡಗೀ ಕಂಕುಳೊಳಿಟ್ಟು ತಂದಾ ॥ ಖಳನ ॥ ಸದದು ಗಂಗೆಯು ತನ್ನ । ಪದದುಂಗುಟದಿ ಪೆತ್ತಾ ॥ ಈತನೇ । ನೋಡವ್ವ ಭಾಗ್ಯನಿಧೀ ॥ ಈತನೇ ॥ ೨ ॥

ಯೇಸು ಇವನ ಚರಿತೆ ಕೇಳ್ವದಾಶಿ ಯೆನಗೇನ್ ಬಾಲೇ । ಆಸುವೇಶ ಶ್ರೀಶಗೇನ್ ಸು । ಭಾಷೆ ಪೇಳಾ ಲೀಲೇ ॥ ೩ ॥

ಮೆರೆವ ಭಾರ್ಗವನಾಗಿ ಬಂದಾ । ಲಂಕಾ । ಪುರವು ಭಕ್ತನಿಗಿತ್ತಾನಂದಾ । ಗೇಹ । ಶರಧಿ ಮಧ್ಯದಿ ಮಾಡಿ ನಿಂದಾ ॥ ಮುದ್ದು ॥ ಸುರಿವ ಮೋಹಕನಾಗಿ । ತುರಗಸ್ವಾರಿ ಗೈದಾತಾ ॥ ಈತನೇ ॥ ೪ ॥

ಮತ್ತೇನಗೈದ ಶ್ರೀ ಪುರುಷೋತ್ತಮನು ಬಾಲೇ । ಚಿತ್ರ ವಿಚಿತ್ರ ಚಾರಿತ್ರ ಚಿತ್ತರಿಸಾ ಲೀಲೇ ॥ ೫ ॥

ಏದುರನ ಗೃಹದಿ ಪಾಲುಂಡಾ । ರುಕ್ಮಾಂ । ಗದನಾತ್ಮಜನ ಅಪ್ಪಿಕೊಂಡಾ । ಕೂಡಿ । ಮುದುಕಿ ಕುಬುಜೆಯ ಸ್ನೇಹ ಕಂಡಾ ॥ ಧ್ರುವಗೆ ॥ ಪದವ ಪಾಲಿಸುತ ದ್ರೌಪದಿಗ ಅಕ್ಷಯವಿತ್ತಾ ॥ ಈತನೇ ॥ ೬ ॥

ಹಲವು ಜನರ ಸಲಹೀ ಕೆಲರ ಕೊಲುವ ಬಗೆಯೇನೆ ಬಾಲೇ ॥ ಅಳಸಿ ಬೆಳಸಿ ಸುಳಿಸುವ ಈ ವಳವ ಪೇಳಾ ಲೀಲೇ ॥ ೭ ॥

ಸಾಧುಸಜ್ಜನರಿಗಾಧಾರೀ । ದುಷ್ಟ । ರಾದವರ ವ್ರಾತಕುಠಾರೀ । ನಿತ್ಯ । ಮೋದಭರಿತ ಸುವಿಚಾರೀ । ಅಮಿತ । ವೇದವಂದಿತನು ಅನಾದಿಮೂರುತಿ ॥ ದೇವಾ ॥ ಈತನೇ ॥ ೮ ॥

ಹರಿಯು ಇಂಥ ಮಹಾತ್ಮನೆ ಅರಿಯುವಲ್ಲಿ ಬಾಲೇ । ಭರದೊಳಿದ್ದು ಸ್ವಾರಿಗೀತ ತೆರಳ್ವನೆಲ್ಲಿ ಪೇಳೇ ॥ ಸರಸಿ ॥ ೯ ॥

ಸ್ವಾರಿಯಸ್ವಮಿಯೊಳುಂಟವಪ್ಪ । ಕೇರಿ । ಕೇರಿಗೈತರ ವಾಸುದೇವಾ । ಭಕ್ತೋ । ದ್ಧಾರ ಸಮ್ಮೆಲ್ಲರ ಕಾವಾ । ಬಗೆ । ಗಾರ ಆರತಿಯ ಶೃಂಗಾರ ನೋಡುತ ಬಂದಾ ॥ ಈತನೇ ॥ ೧೦ ॥

ಅತಿ ಸಂಭ್ರಮವು ಈ ಮೂಲಿಕೆಯೊಳ್‌ ಹಿತದಿ ಕಂಡೆ ಬಾಲೇ ॥ ಅತುಲಿತ ಮಹಿಮ ಶ್ರೀರಮಾಪತಿಯು ಗೈದಾ ಲೀಲೇ ॥ ಸರಸಿ ॥ ೧೧ ॥

॥ ೭೨ ॥ ರಾಗ, [ಧಾಟಿ:-] ತಾಳ

ಅಮಮ ಇದೇನೇ ಇಂದಿನ ಲೀಲೇ । ನೋಡೆ । ವಿಮಲ ಶ್ರೀ ರಂಗ ನಾಟವು ಬಾಲೇ ॥ ಅಮಮ ॥ ಪಲ್ಲ ॥ ಬ್ರಹ್ಮರುದ್ರಾದಿ ನಿರ್ಜರರಿಂದೂ । ತಮ್ಮ । ತಮ್ಮ ವಿಮಾನಕದರಿ ನಿಂದೂ ॥ ಜನ್ಮಸಾರ್ಥಕವಾಯಿತು ಎಂದೂ । ಸಭದೊ । ಳೊಮ್ಮಲಿ ಘೋಷಗ್ಯವಾದ್ಯಾಕಿಂದೂ ॥ ೧ ॥

ಕಮಲದಳಾಕ್ಷಿ ನೋಡೆಲೆ ನೀರೆ । ಇಂದು । ನವಮಯುತ್ಸವದ ಈ ಬಗೆ ಬೇರೆ । ಕಮಲ ॥ ಪಲ್ಲ ॥ ಕ್ಷೀರಸಾಗರಶಯನ ವಿನೋದದಿ । ಭಾರಿ । ತೇರನೇರಿದನೆಂಬುಲ್ಲಾಸದಿ ॥ ಭೂಮಿಬು । ಧರು ನೀಕ್ಷಿಸಿ ತೋಷದಿ । ಆ ಉ । ದ್ಧಾರನ ಗುಣ ನುತಿಪರು ಘೋಷದಿ ॥ ಕಮಲ ॥ ೨ ॥

ಅಖಿಲ ಬ್ರಹ್ಮಾಂಡ ನಾಯಕನಿವನು । ಭೂತ । ನಿಕರಕೆ ಬಲಿಯ ಚಲ್ಲುತ ಕೊಳನು ॥ ಸಕಲಾಂತರ್ಯಾಮಿ ಮತ್ತೆ ರಥವನು । ನೇರ್ದ । ಪ್ರಕಟಿಸಿ ದೇನೆ ಪೇಳೆನಗದನು ॥ ಅಮಮ ॥ ೩ ॥

ವಡಿಗ ಭೂತಾದಿವ್ರಾತಕೆ ದಯದಿ । ತೃಪ್ತಿ । ಪಡಿಸಲು ಬಲಿಯ ಚಲ್ಲುತ ಮುದದಿ ॥ ಬಿಡದೆ ಉದ್ಧಾರಗೈಯ್ಯುತ ತೋಷದಿ । ತೇರ । ನಡರಿ ಬಾಹನು ನೀ ನೋಡೆಲೆ ಕೆಳದಿ ॥ ಕಮಲ ॥ ೪ ॥

ಸೋಮಾರ್ಕಜೋತಿ ನೋಡೆ । ಜನ । ಸ್ತೋಮಚ್ಚೈಸುಂಡೆ ಬಿಂಸು ಮಿಗಿಲು ॥ ಚಾಮರ ಛತ್ರ ಸಮ್ಮೇಳದೊಳು । ಗುಣ । ಧಾಮನ ಸ್ವಾರಿಯೇ ನಿದು ಪೇಳು । ಅಮಮ ॥ ೫ ॥

ಪಟಹ ಡಿಂಡಿಮಡಕ್ಕೆ ಶ್ರುತಿಮೌರಿ । ಈ ತಂ। ಬಟಭೇರಿ ಮುಖ್ಯವಾದ್ಯ ದಶೌರಿ ॥ ಸಟೆಯಲ್ಲಿ ಇದಕೊ ರಥವನೇರಿ । ನಮ್ಮ । ಕಟಕ ರಕ್ಷಿಸಲು ಬಾಹವವಾರಿ । ಕಮಲ ॥ ೬ ॥

ಬಿಡದೆ ಇನ್ನೊಂದ ಕೇಳುವೆ ಕಾಣೆ । ತೇರ । ಥಡೆಗೊದಗಿದ ಮೇಲೆ ನಿದು ಜಾಣೆ ॥ ಬೆಡಿ ಕಂಭಧ್ವನಿಯು ಗರ್ಜನೆ ಯೇನೆ । ಇಂಥಾ । ಬೆಡಗ ಪೇಳಿನಗೆ ಭಲೆ ಶಾಣೆ । ಅಮಮ ॥ ೭ ॥

ಜನರು ಯಲ್ಲಾಡಡಂಜಿದ ಭಯವ। ತಮ್ಮ ।ತನುವಿಗೆ ಸೋಂಕಿರಲದ ನೆಲ್ಲವಾ ॥ ಮನದೀ ರ್ಘೊಮ್ಮೆನಿಸಿ ಬೆಚ್ಚೋಡಿಸುವ । ಕಂಭ । ಧ್ವನಿಯೆಸಗು ವುದಿದು ಹರಿಯಾಟವಾ । ಕಮಲ ॥ ೮ ॥

ಮುರಳಿ ಯೇರಿದ ಇದ್ಯಾವ ವಿಮಾನ । ಚಕ್ರ । ತಿರುಗುತಲಿದೆ ನೋಡದರ ತ್ರಾಣ ॥ ಬರುವ ಘರ್ಜನೆಯು ಕೇಳು ನಿದಾನ । ವಿಶ್ವಾಂ । ಭರನ ಲೀಲೆಯಿದು ಪೇಳು ವಿಧಾನಾ ॥ ಅಮಮ ॥ ೯ ॥

ಸಿಂಧುರಗಮನೆ ಸುರತಲೋಲೆ । ಇದು । ಚಂದ್ರಮಂಡಲವು ಕೇಳೆಲೆ ಬಾಲೆ ॥ ಇಂದ್ರಾದಿ ಸುರರೋಲೈಸುವ ಲೀಲೆ । ಗಾಗಿ । ಇಂದು ಇದೇರಿ ಬರುವನಲ್ಲೇ ॥ ಕಮಲ ॥ ೧೦ ॥

ಚಲುವ ಪಲ್ಲಂಕಿ ಯೇರಿದ ಕಾಣೇ । ಯಡ । ಬಲದೀ ಸ್ತ್ರೀಯರೀರ್ವರ್ಯಾರೆಲೆ ಜಾಣೇ ॥ ಬಳಿಕ ತೊಟ್ಟಿಲೊಳು ಮಂಡಿಸಿ ತಾನೇ । ವೇದ । ಗಲಭೆಯೊಳ್ತೂಗಿಕೊಂಬ ಯಿದೇನೇ ॥ ಅಮಮ ॥ ೧೧ ॥

ಆದಿಪತ್ನಿ ಶ್ರೀಲಕ್ಷ್ಮಿ ತಾನೊಬ್ಬಳೇ । ತೋರ್ಪ । ಳೀದ್ವಯ ರೂಪಿಲಿ ಮೆರದಿಹಳೇ ॥ ವೇದವೇದ್ಯನ ಕೂಡುತ ವಿನೋದದೀ । ಈ ಪ । ರೀ ದಿವ್ಯ ವಸವಂತ ಮಂಟಪದೀ ॥ ಕಮಲ ॥ ೧೨ ॥

ಪರಮ ಪಾವನೆಯೆ ಲಾಲಿಸಿ ಕೇಳೇ । ದೇವ । ಮೆರೆವ ಮಂಟಪದಿಂದ ಪೊರಡುತಲೇ ॥ ಯರಕವಾಗಿ ರಮೆಯ ಗೂಡುತಲೇ । ಸುತ್ತು । ಬರುತೋಳಪೊಕ್ಕು ನುಂಡಿಸಿದ ಬಾಲೇ ॥ ಅಮಮ ॥ ೧೩ ॥

ರತಿಪತಿಪಿತನು ಇದೇ ಪಂಯೂ । ನಮ್ಮ । ಹಿತಕಾಗಿ ಮೂಳ್ಪ ವರುಷಕೊಮ್ಮೆಯೂ ॥ ಸತತ ಸಜ್ಜನರ ರಕ್ಷಿಪ ಜವದೀ । ಕೇಳ । ಚ್ಯುತ ನಮ್ಮುದ್ಧರಿಸುವ ಕರುಣನಿಧೀ ॥ ಕಮಲ ॥ ೧೪ ॥

ಆಹಹ ಆನಂದದೊಂದಿದೆ ಯೆನಗೇ । ತಾಯೇ । ಬಹು ಜನ್ಮ ಮರೆಯ ಬಹುದೆ ನಿನಗೇ ॥ ಮಹಿಯೊಳಧಿಕ ಈ ಮೂಲಿಕೆಯೊಳಗೇ । ನಿನ್ನ । ಸಹಾಯವಿ ಕಂಡೆ ಶ್ರೀರಮಾಧವಗೇ ॥ ಅಮಮ ॥ ೧೫ ॥ ಶ್ರೀ ॥

॥ ಕವಿ ವಾಸುದೇವಪ್ರಭುಕೃತ ಪದಗಳು ಸಂಪೂರ್ಣಂ. ॥

ಕವಿ ಶೇಷಪ್ರಭುಕೃತ ಪದಗಳು.

॥ ೭೩ ॥ ರಾಗ, ಜಂಜೋಟಿ [ಧಾಟಿ:- ಬಾರೋ ಶ್ರೀಹರಿ ಭಕ್ತ] ಚೌತಾಳ

ಶ್ರೀರಾಧಾವಲ್ಲಭ ಸಜ್ಜನಸುಲ್ಲಭ । ದಾಂದ್ರಚ್ಛೇದನ ಪಾಪವಿಮೋಚನ ॥ ನಾರದನುತ ಭಾಗೀರಥಿಪಿತ ಮಹಾ । ಘೋರ ದುಂತ ಉತ್ತಾರಣ ಹರಿಯೆ ॥ ಶ್ರೀರಾಧಾವಲ್ಲಭ ॥ ಪಲ್ಲ ॥ ನಿತ್ಯನಿರಂಜನ ದೈತ್ಯವಿಭಂಜನ । ಸತ್ಯಾತ್ಮ ಪಾವನ ಸದ್ಭಕ್ತಜೀವನ ॥ ಸತ್ವರಜೋತಮ ಕರ್ತುರ ಪರಾತ್ಪರ । ಮೂರ್ತಯೇ ನಮಃ ನಮೋಸ್ತು ಸರ್ವೇಶ್ವರ ॥ ಶ್ರೀರಾಧಾವಲ್ಲಭ ॥ ೧ ॥ ಸಿಂಧುಸಂಚಾರಣ ಮಂದರಧಾರಣ । ಇಂದಿರಾನಾಯಕ ಸುಂದರ ಆನಕ ॥ ದುಂದುಭಿನಂದನ ಚಂದ್ರಚೂಡ ಅಮರೇಂದ್ರ ದ್ರುಹಿಣನುತ ದ್ವಂದ್ವಪದಾಬ್ಜ ॥ ಶ್ರೀರಾಧಾವಲ್ಲಭ ॥ ೨ ॥ ಚಿಂತಿತಾರ್ಥಪ್ರದ ಚಿನ್ಮಯ ರೂಪದಾ । ನಂತ ಶ್ರೀಮೂರ್ತಿಯು ಆನಂದ ಕೀರ್ತಿಯು ॥ ನಾಂತೆನ್ನಯ ಹೃದಯಾಂತರದಲ್ಲಿ ನಿ । ರಂತರ ವ್ಯಾಪಿಸೊ ಶ್ರೀಹರಿಯೇ ॥ ಶ್ರೀರಾಧಾವಲ್ಲಭ ॥ ೩ ॥ ಪದ್ಮಪತ್ರೇಕ್ಷಣ ಪಾಂಡವ ರಕ್ಷಣ । ಪದ್ಮನಿಭೇಕ್ಷಣ ಪರಬ್ರಹ್ಮ ಪಾವನ ॥ ಪದ್ಮಾಲಯ ಪಿತ ಪದ್ಮವಿರಾಜಿತ । ಪದ್ಮಜಪಿತ ಪದ್ಮಾಪತೀರಮಣ ॥ ಶ್ರೀರಾಧಾವಲ್ಲಭ ॥ ೪ ॥ ಶಂಖಚಕ್ರಾನ್ವಿತ ಶಾರ್ಙ್ಗಧನ್ವ ಧೃತ । ಪಂಕಜಲೋಚನ ಪಾಪವಿಮೋಚನ ॥ ಪಂಕಜಭವಪಿತ ರಮಾಪತೀ ವಳ । ಲಂಕಾಧೀಶ್ವರ ವೆಂಕಟರಮಣಾ ॥ ಶ್ರೀರಾಧಾವಲ್ಲಭ ॥ ೫ ॥

॥ ೭೪ ॥ ರಾಗ, ಸಾರಂಗ [ಧಾಟಿ:- ಕೊಡೊ ಕೊಡೊ ಕೊಡೊ] ಚಾಪುತಾಳ

ಶ್ರೀವೈಕುಂಠಪತೇ ವಿಶ್ವಪತೇ । ಪಾಲಯ ಮಾಂ ಪುರುಷೋತ್ತಮಾ ॥
ಶ್ರೀವೈಕುಂಠಪತೇ ॥ ಪಲ್ಲ ॥ ಜಲಚರ ಮಂದರಧಚಲಾಚಲಾಧೃತ । ಕಲಾ
ಪೂರ್ಣ ನರಸಿಂಹಾ ॥ ಬಲಿಗರ್ವವಿದಾರಣ ಘನಶ್ಯಾಮ । ಲಲಿತ ಸದ್ಗುಣ
ಭಾರ್ಗವ ॥ ಶ್ರೀವೈಕುಂಠಪತೇ ॥ ೧ ॥ ಕೌಸಲ್ಯೋದರ ಕುಮುದಸುಧಾಕರ ।
ಕಂಸಾಂತಕ ಕಮಲೇಶಾ ॥ ಹಂಸಯಾನಪಿತ ತ್ರಿಪುರವಧೂವ್ರತ । ಧ್ವಂಸಿ
ತುರಂಗಮವಾಹನಾ ॥ ಶ್ರೀವೈಕುಂಠಪತೇ ॥ ೨ ॥ ವಿಶ್ವಮಯ ವಿಶ್ವಾತ್ಮ
ಜಯ ಜಯ । ವಿಶ್ವಂಭರ ಮಹಾಕಾಯಾ ॥ ವಿಶ್ವವ್ರಜ ವಿಶ್ವಾಂಡಪ್ರೇರಣ ।
ವಿಶ್ವ ವಿಶ್ವಮಯಧಾರಣಾ ॥ ಶ್ರೀವೈಕುಂಠಪತೇ ॥ ೩ ॥ ಕಾಳಿಯಮಸ್ತಕ
ರಂಜಿತ ಪದಕ। ಮಲಾಯ ಕರುಣಾಸಾಗರಾ ॥ ನೀಲಗಾತ್ರ ನಿರ್ಮಲ ಶ್ರೀ
ತುಳಸೀ । ಮಾಲಾಲಂಕೃತ ಕೌಸ್ತುಭಾ ॥ ಶ್ರೀವೈಕುಂಠಪತೇ ॥ ೪ ॥
ಭಾಸುರಾಂಘ್ರಿಯುಗ್ಮ ವಳಲಂಕಾ । ಕೋಶಧೀಶ ಶ್ರೀಕೃಶವಾ ॥
ವಾಸುದೇವ ಕೇಶವ ಶಿವ ಪ । ದ್ಮಾಸನಪಿತ ಶ್ರೀರಮಾಧವಾ ॥ ಶ್ರೀವೈಕುಂಠ
ಪತೇ ॥ ೫ ॥ ಶ್ರೀಃ ॥

॥ ೭೫ ॥ ರಾಗ, ಆರಭಿ [ಧಾಟಿ:- ಕಲಯೇ ವಿಷ್ಣು ಕೃಷ್ಣ] ಏಕತಾಳ

ವಂದೇ ಶ್ರೀಕೃಷ್ಣಂ । ಗೋಪಾಲಕೃಷ್ಣಂ ॥ ಪಲ್ಲ ॥ ವೃಂದಾವನ
ಸಂಚಾರಣ ಶ್ರೀಮದಾ । ನಂದತೀರ್ಥವಂದಿತ ಪದದ್ವಂದ್ವಂ ॥ ವಂದೇ ॥
॥ ಅನು ॥ ದಕ್ಷಂ । ಧರಣೀಧರ ಶತಪತ್ರಾಕ್ಷಂ । ಭೀಕರ ದೈತ್ಯಾನ್ವಯ
ಶಿಕ್ಷಂ । ಅಣುರೇಣುಚರಾಚರರಕ್ಷಂ ॥ ಪಕ್ಷೀಂದ್ರಗಮನಂ ॥ ಅಕ್ಷಯಾತ್ಮ
ಸಹಸ್ರಾಕ್ಷರಕ್ಷ ಸಾ । ಕ್ಷಾತ್ಕರ ಶ್ರೀಲಕ್ಷ್ಮೀಶ ಪರೀಕ್ಷಂ ॥ ವಂದೇ ॥ ೧ ॥
ನಿತ್ಯಂ । ನಿರಮಯ ನಿಗಮಾಗಮಸ್ತುತ್ಯಂ। ಮುನಿಜನ ಹೃತ್ಕಮಲಾದಿತ್ಯಂ ।
ಮುರಲೀ ಮೃದುವಾದನಕೃತ್ಯಂ ॥ ನಂದಯಶೋದಾ ॥ ನಿತ್ಯತೃಪ್ತ ನಿತ್ಯಾತ್ಮ
ನಿರಂಜನ । ಸತ್ಯಸಾಕ್ಷಿ ಸಾತ್ವಿಕಗುಣಭರಿತಂ ॥ ವಂದೇ ॥ ೨ ॥ ತರಣಂ ।
ಬಹು ಜನ್ಮಾಂತರ ದುಸ್ತರಣಂ । ಕರುಣಾಕರ ದೀನೋದ್ಧರಣಂ । ಪೂತ
ನಾದ್ಯಸುರ ಸಂಹರಣಂ॥ ಕೌಸ್ತುಭರತ್ನಾಭರಣಂ ॥ ದೇವಕಿತರುಣಂ ಭಾಸ್ಕರ
ಕಿರಣಂ । ಭವಭಯಹರಣಂ ಪಾವನಚರಣಂ ॥ ವಂದೇ ॥ ೩ ॥ ಧೀರಂ ।
ಜಾನಕಿಮುಖಚಂದ್ರಚಕೋರಂ । ಜನಿಮೃತಿಭಯಶೋಕವಿದೂರಂ । ಭವ
ಭಂಜನ ಭಕ್ತೋದ್ಧಾರಂ ॥ ಜಿತಶೂರಂ ॥ ರಾತ್ರಿಂಚರಗಣ ಮದವಾರಣ

ಕಂಠೀರವ ಕೌರವ । ವಾರವಿದಾರ ಮುರಾರಿಮುದಾರಂ ॥ ವಂದೇ ॥ ೪ ॥ ಶಾಂತಂ । ಸದ್ಗುಣ ರಂಜಿತ ನಿಶ್ಚಿಂತಂ । ವಿಶ್ವಂಭರ ಶ್ರೀಮದನಂತಂ । ಗಂಗಾಜನಕ ರಮಾಕಾಂತಂ ॥ ನಿಜ ಕಾಂತ್ಯಾಭಾಂತಂ ॥ ಘೋರ ದುರಿತ ಧ್ವಾಂತ ಪತಂಗಾನಂತಶಾಯಿ । ವೇದಾಂತವೇದ್ಯ ವಿಶ್ವಾಂತರವ್ಯಾಪ್ತಂ ॥ ವಂದೇ ॥ ೫ ॥ ಶ್ರೀಃ ॥

॥ ೭೬ ॥ ರಾಗ ಬೇಗಡೆ [ಧಾಟಿ:-ರಾಮಕೃಷ್ಣ ನಾರಾಯಣ ಶ್ರೀಹರಿ] ಏಕತಾಳ.

ನಮೋ ನಮೋ ಶ್ರೀ ವಿಷ್ಣು ಕೃಷ್ಣ ಜಯ । ನಮೋ ನಿಖಿಳ ನಿರ್ಜರ ವಂದ್ಯ ॥ ಪಲ್ಲ ॥ ನಿರಂಜನ ಕೃಪಾಕರಂ ಜನಾರ್ದನ । ಪರಂಜ್ಯೋತಿ ಪರಮಾನಂದಾ ॥ ನಮೋ ನಮೋ ॥ ಅನುಪಲ್ಲ ॥ ಪತಂಗಭಾಸುರ ಮತಂಗ ರಕ್ಷಕ। ರಥಾಂಗಪಾಣಿ ಶ್ರೀಗೋವಿಂದಾ ॥ ನಮೋ ನಮೋ ॥ ೧ ॥ ಅನಂತ ಗುಣ ಪಾವನಾನಂತಜಗಜೀ । ವನಾ ತ್ರಿದಶನುತ ಪದದ್ವಂದ್ವಾ ॥ ನಮೋ ನಮೋ ॥ ೨ ॥ ಲತಾಂತಶರಧೃತಪಿತಂ ತ್ವ ಶ್ರೀರಮಾ । ಪತಿಂ ತ್ರಿಗುಣ ಪೂರ್ಣಾನಂದಾ ॥ ನಮೋ ನಮೋ ॥ ೩ ॥ ಶ್ರೀಃ ॥

॥ ೭೭ ॥ ರಾಗ, ಪೀಲು [ಧಾಟಿ:- ನಂಬು ನಂಬು ನಾರಾಯಣನಾ] ಏಕತಾಳ

ನಂಬು ನಂಬು ಸೀತಾರಾಮನಾ । ಸತ್ಯದೃಢದಿ । ನಂಬಿದರೆ ಕಾಯ ಲಾರನೇ ॥ ಕುಂಭಿನಿಯೊಳ್ಸಾಧುಭಕ್ತರ । ರಕ್ಷಿಸುವ ಕಾರು । ಣ್ಯಾಂಬುಧಿ ಶ್ರೀಸೀತಾರಾಮನಾ ॥ ನಂಬು ॥ ೧ ॥ ಎಂಜಲ ಎಂದೆನಿಸಿ ನೋಡದೇ । ಶಬರೀಗೊಲಿದು । ಭುಂಜಿಸಿದಂಜಿಕೆಯ ಮಾಡದೇ ॥ ಕಂಜನಾಭ ಶ್ರೀ ರಘುರಾಮನಾ । ನಾಮದ ವಜ್ರ । ಪಂಜರವಿರೆ ಭಯವಿದೇನ್ ಘನಾ ॥ ॥ ನಂಬು ॥ ೨ ॥ ಮಂಗಲಪ್ರದ ಶ್ರೀರಾಮನು । ಕರುಣದಿ ಸುಗ್ರೀ । ವಂಗೆ ಸೌಭಾಗ್ಯವನಿತ್ತನು ॥ ಅಂಗದನ ಕಾಯಲಿಲ್ಲವೇ । ರಾಮನ ಚರ । ಣಂಗಳನ್ನು ಸ್ಮರಿಸಲಿಲ್ಲವೇ ॥ ನಂಬು ॥ ೩ ॥ ಜನಕನಂದನೆಯ ಕುರುಹನು । ತಂದಾ ಹನುಮಗೆ । ವನಜಭವನ ಪದವನಿತ್ತನು ॥ ಚಿನುಮಯಾನಂದ ಶ್ರೀರಾಮನು । ವಿಭೀಷಣಗೆ । ಘನವಾದ ಸಂಪದವನಿತ್ತನು ॥ ನಂಬು ॥ ೪ ॥ ಎಂಥಾ ಕರುಣಿಯೊ ರಾಮನು । ಸ್ಮರಪಿತ ಶ್ರೀರಮಾ । ಕಾಂತ ಸುರ ಸಾರ್ವಭೌಮನು ॥ ಯಂತಾದರು ನಮ್ಮ ಕಾವನು । ನಾವ್ ಬಯಸಿದ । ಚಿಂತಿತಾರ್ಥಗಳನೀವನೂ ॥ ನಂಬು ನಂಬು ॥ ೫ ॥ ಶ್ರೀಃ ॥

॥ ೭೮ ॥ ರಾಗ, ಪೀಲು [ಧಾಟಿ:- ಶ್ರೀರಾಧಾವಲ್ಲಭಾ ಸಜ್ಜನಸುಲ್ಲಭಾ] ಆದಿತಾಳ

ಶ್ರೀ ರಘೂತ್ತಮ ರಾಘವಾ । ಶ್ರೀರಘೂತ್ತಮ ರಾಘವಾ ॥ ಪಲ್ಲ ॥ ನಿಗಮಾರ್ಚಿತ ಪದ । ಯುಗ ಭೃಗುದ್ರುಗುಹರ । ಅಗಣಿತಘ ಭುಜಗ ಖಗ ಮೃಗಧರನುತ । ಶ್ರೀರಘೂತ್ತಮ॥ ಪಲ್ಲ ॥ ವಾಂಚರ ಮತ್ಸ್ಯವತಾರ। ಗಿರಿ । ಧಾರಣ ವರಹ ಶರೀರ ॥ ವೀರ ನೃಸಿಂಹಮುದಾರ ಧರಣಿಸುರ । ವಾರ ವಾರಿನಿಧಿ ವಾರಿಜಾರಿ ॥ ಶ್ರೀರಘೂತ್ತಮ ॥ ೧ ॥ ಯತಿಕುಲ ನಳಿನ ದಿನೇಶ। ರಘು । ಪತಿ ಶ್ರೀಕೃಷ್ಣ ಪರೇಶಾ ॥ ತ್ರಿತಯ ಪುರವಧು ವ್ರತಭಂಗ ಸೂಸ್ರುತ। ಜಿತಮ್ಲೇಂಛಾನ್ವಯ ಶ್ರುತಿತತಿನುತ ॥ ಶ್ರೀರಘೂತ್ತಮ ॥ ೨ ॥ ಕೋಸಲ ನಗರನಿವಾಸಾ । ಖರ । ದೂಷಣಾರಿ ಸರ್ವೇಶಾ॥ ವಾಸವಸುತ ಕಮಲಾಸನ ಪಿತ ಶ್ರೀರ। ಮೇಶ ವಿಭೀಷಣಪೋಷಣಧೀಶಾ॥ ಶ್ರೀರಘೂತ್ತಮ ॥ ೩ ॥ಶ್ರೀ॥

॥ ೭೯ ॥ ರಾಗ ಬೃಂದಾವನಸಾರಂಗ [ಧಾಟಿ:- ಕರುಣದಿ ಪಾಲಿಸನ್ನ] ತ್ರಿವುಡೆತಾಳ

ನುತಿಸಲಳವೆ ಕೀರ್ತಿಯಾ । ಭುವನೇಂದ್ರರರ್ಥಿಯ । ನುತಿಸಲಳವೆ ಕೀರ್ತಿಯಾ ॥ ನುತಿಸಲಳವೇ ಯತಿಕುಲಾರ್ಣವ । ಪ್ರತಿಸುಧಾಕರರಂಘ್ರಿ ಕಮಲವ । ಶ್ರಿತಜನ ಮನೋರಥವ ಸಲಿಸುವ । ಸತತ ಶ್ರೀಗುರುಸಾರ್ವ ಭೌಮರ ॥ ನುತಿಸ ॥ ಪಲ್ಲ ॥ ಸರಸಿರುಹಭವಾಂಡದೀ । ಭೂಲೋಕದ । ಶರಧಿ ಏಳರ ಮಧ್ಯದೀ ॥ ಶಾಲ್ಮಲಿ ಕುಶಪ್ಲ। ಕ್ಷರಶಾಖಾಕ್ರೌಂಚಪಕ್ಷದೀ ॥ ಜಂಬೂದ್ವೀಪದಿ ॥ ಕುರುಹಿರಣ್ಯಕರಮ್ಯ ಇಳಾವ್ರತ । ಹರಿವರುಷಭದ್ರಾಶ್ವ ವರ ಕಿಂ । ಪುರುಷಕೇತು ಮಾಲಾದಿಯುದರೊಳು ! ಮೆರೆವ ಭರತಖಂಡದಲಿ ವರ ಭಾ॥ ಸುರ ಹಿಮಾಚಲದಗ್ರ ತೆಂಕಣ । ಸುರನದೀತೀರದಲಿ ಕಾಶೀ । ಪುರ ಮಠಾಧೀಶ್ವರರ ಪಾರಂ । ಪರೆಯ ಶ್ರೀಭುವನೇಂದ್ರರಂಘ್ರಿಯ ॥ ॥ ನುತಿಸ॥ ೧ ॥ ಸುಮತೀಂದ್ರ ಶ್ರೀತೀರ್ಥರ । ಕೋಮಲಕರ । ಕರಯುಗ್ಮ ಸಂಜಾತರಾ ॥ ಸುಜನಹೃತ್ಕಮಲ । ದ್ಯುಮಣೀ ಕೀರ್ತಿವಿಖ್ಯಾತರಾ ॥ ದೀನ ನಾಥರಾ ॥ ವಿಮಲ ಪರಬ್ರಹ್ಮಾತ್ಮವಿದ್ಯಾ । ಕ್ರಮವರಿತ ಕಾರುಣ್ಯನಿಧಿ ಬಹು। ಕ್ಷಮೆಗುಣಾನ್ವಿತ ಕ್ಷಿತಿಗೆ ಪಾವನ । ರಮಿತ ಯತಿಕುಲತಿಲಕ ಸಜ್ಜನ ॥ ನಮಿತ ಭವಭಯತಿಮಿರಭಾಸ್ಕರ । ಯಮನಿಯಮ ಯೋಗಂಗಳನು ತಿಳಿ । ದಮಲ ಗುಣಚಾರಿತ್ರ ಕಲ್ಪ । ದ್ರುಮ ದಯಾಪರರಂಘ್ರಿ ಕಮಲವ ॥ ॥ ನುತಿಸ ॥ ೨ ॥ ಝಡಿವ ದುಂದುಭಿಭೇರಿಯು । ಶ್ರುತಿವರ್ಷಿಯು । ಹೊಡೆವ

ಡಂಕ ನಗಾರಿಯು ॥ ಹೊನ್ನಂದಣ । ನಡರುತ್ತೈತಹ ಸ್ವಾರಿಯಾ ॥ ಕೇರಿಕೇರಿ ಯಾ ॥ ಕಡುಕ್ರ್ಯಪೆಯೊಳೀಕ್ಷಿಸುತ ಬರೆ ಜನ । ರಡಿಗೆರಗಲತಿ ದೃಢ ದಭಯಕರ । ಜಡಜವೆತ್ತಿ ಮಂತ್ರಾಕ್ಷತೆಯ ಶಿರ । ಕಿಡುತ ತೃಪ್ತಿಯವಡಸಿ ಸಲಹುವ ॥ ಕಡುದಯಾಪರರಂಘ್ರಿಕಮಲಕೆ । ಎಡಿದೆಸೆವ ಸಿತಛತ್ರ ಚಾಮರ । ಘಡನ ಶಂಖಧ್ವಾನ ಸಂಭ್ರಮ । ಜೊಡನೆ ಬಹ ಯತಿವರ್ಯ ರಂಘ್ರಿಯು ॥ ಸುತಿಸ ॥ ೩ ॥ ಕೋಮಲಮುಖಕಾಂತಿಯು । ಅರುಣಾಧರೋ। ದ್ಧಾಮ ರದನಪಂಕ್ತಿಯು ॥ ನಿಖಿಲದೊಳೊಪ್ಪುವ । ನಾಮ ಮಧ್ಯದೊ ಳೊತ್ತಿಹ ॥ ತಿಲಕದ ಛಾಯಾ ॥ ತಾಮರಸದಳನಯನ ನಾಶಿಕ । ರಾಮಣೀ ಯಕ ಮೆರೆವ ದ್ವಾದಶ । ನಾಮ ಶ್ರೀಮುದ್ರೆಗಳ ಧರಿಸಿದ । ವ್ಯೋಮಕಾರಾ ಸ್ತೋಮಮಧ್ಯದಿ ॥ ಸೋಮನಂದದಿ ಭೂಮಿಸುರರೊಳ । ಗಾಮನೋಹರ ರಾದ ಯತಿಕುಲ । ಭೌಮ ಸಜ್ಜನಕಾಮಧೇನು ಸು । ಪ್ರೇಮ ಸದ್ಗುಣೋ ದ್ಧಾಮರಂಘ್ರಿಯು ॥ ಸುತಿಸ ॥ ೪ ॥ ಮೆರೆವಾದಿತ್ಯಮಂಡಲದ । ಕಾಂತಿಯು ಬೆಳ । ಗಿರುವ ಕಮಂಡಲದ ॥ ಪ್ರಭೆಯು ರತ್ನ । ಸ್ಫುರಿತ ಕೋಮಲ ದಂಡದ ॥ ರಾಜಿಸುವ ಗಳದ ॥ ಭರಿಕಂಠಿಯನುಟ್ಟಿರುವ ಕಾವಾಂ । ಬರದ ವಿಪ್ರರ ನೆರದ ರತ್ನಾ । ಕರದ ಚಂದ್ರನ ತೆರದ ಅಮೃತವ । ಸುರಿದ ಕರುಣಾ ಕರದ ದೃಷ್ಟಿಯ ॥ ತೆರದಮಿತ ಭಾಸುರವ ಮೂರ್ತಿಯ । ಚರಣಮಹಿಮೆಯ ನರಿತರಿಗೆ ಭವಾಂ । ತರದ ಕಿಲ್ಬಿಷ ತರಿದು ಕೀರ್ತಿಯ । ದೊರೆದು ಪೃಥಿವಿಲಿ ಮೆರೆದ ಮಹಿಮರ ॥ ಸುತಿಸ ॥ ೫ ॥ ಭೂಲೋಕದೊಳಗೆಣೆಯ । ಗಾಣೆನು ಸತ್ಯ। ಶೀಲ ವೈಷ್ಣವಾಗ್ರಣಿಯಾ ॥ ಯತಿಕುಲರತ್ನ । ಮಾಲ ಶಿಖಾಮಣಿಯ ॥ ಭಾಗ್ಯದ ಕಣಿಯ ॥ ಶ್ರೀಲಲಾಮನ ಮೂರ್ತಿಯನು ಹೃದ । ಯಾಲಯದಿ ಸ್ಥಾಪನೆಯಗೈದು ವಿ । ಶಾಲಮನದಿಂದಖಿಳ ಸುಜನರ । ಪಾಲಿಸುತ ಬಹು ಜನ್ಮ ದುರಿತ ॥ ವ್ಯಾಳಗರುಡ ದುರ್ವಾದಿಗಳ ಹೃ । ತ್ಕೂಲ ಶ್ರೀವೈಷ್ಣವ ಮ ತಾಂಬುಜ । ಬಾಲ ಭಾಸ್ಕರ ಮಧ್ವಮುನಿಯ ವಿ । ಶಾಲ ದ್ವಯಚರಣಾಬ್ಜ ಭೃಂಗರ ॥ ಸುತಿಸ ॥ ೬ ॥ ಕಾಶೀನಗರನಿವಾಸರ । ಮಾಧವೇಂದ್ರ ಯ ।ತೀಶ ಕುಲ ರಾಜೇಂದ್ರರ ॥ ಕರಕಮಲಸಂಜಾ । ತ ಸೂರ್ಯೇಂದ್ರರ ಶಿಷ್ಯರಾ ॥ ವಿಬುಧೇಂದ್ರತೀರ್ಥರ ॥ ಆ ಸುಗುಣನಿಧಿಯಾದ ವಿಮಲ ಯ। ತೀಶ ಸುಮ ತೀಂದ್ರಾದಿ ಗುರುಗಳ । ಭಾಸುರಾಂಘ್ರಿಗಳನ್ನು ಸ್ಮರಿಸಲು ನಾ । ನೀಸು ಧನ್ಯ ಕೃತಾರ್ಥನೋ ಕಮ ॥ ಲಾಸನನ ಪಿತ ರಮೇಶ ಮಿತ್ರ ಪರಾಶರಾತ್ಮಜ

ವ್ಯಾಸ ನಹರಿ । ದಾಶರಥಿಯನು ಪೂಜಿಸುವ ಕರು । ಣಾಶರಧಿ ಭುವ ನೇಂದ್ರ ತೀರ್ಥರ ॥ ನುತಿಸಲಳವೆ ॥ ೬ ॥ ಶ್ರೀ ॥

॥ ೮೦ ॥ ರಾಗ. ಕಾಂಬೋಧಿ [ಧಾಟಿ:- ಯಾವ ಕುಲವು । ಸ್ವಾಮಿ] ಏಕತಾಳ

ಚಂದವೇನೊ । ಗೋವಿಂದ ನೀನು ॥ ಇಂದು ಎನ್ನ ಮರತೆಯಾ । ನಂದವಾಯಿತೇನೋ ॥ ಚಂದವೇನೋ ॥ ಪಲ್ಲ ॥ ಮೂಢನೆಂದು ಎನ್ನ । ದೂಡದಿಂದು ಮಿಕ್ಕ । ನಾಡುದೈವಂಗಳ ಕೂಡೆ । ಬೇಡಿದೇನೇ ಕೃಷ್ಣ ದಯದೀ ॥ ನೋಡಿ ಸಲಹದಿರಲು ನಿನ್ನ । ದೂರಲ್ಯಾಕೋ । ನಿನ್ನ ಸೇರ ಲ್ಯಾಕೋ ॥ ಕೃಷ್ಣ ॥ ಚಂದವೇನೊ ॥ ೧ ॥ ಪಡೆದ ಮಾತೆಯು ಮಗುವ । ಬಡದೆ ಪ್ರೀತಿಯು ಮಾಡಿ । ಕೊಡಲು ಮೊಲೆಯುಸ್ಸುಂಡು । ಝಡಿದು ತಾಯ ತೊಡೆಯ ತುಳಿಯೆ ॥ ಕಡುನಿಷ್ಠುರದ ಮನದಿ ಮಾತೆ । ಮುನಿವ ಳೇನೋ । ಕ್ರೋಧ ನೆಸೆವಳೇನೋ ॥ ಕೃಷ್ಣ ॥ ಚಂದವೇನೋ ॥ ೨ ॥ ಹರಿ ಕೃಪಾಕರ ಕೃಷ್ಣ । ಕರುಣಸಾಗರ ನಿನ್ನ । ಶರಣರ ರಕ್ಷಿಸಿದಂತೆ । ಕರುಣದಿ ರಕ್ಷಿಸಲು ನಿನ್ನ ॥ ಚರಣದ ಸ್ಮರಣೆಯು ಮೊದಲಿ । ಮರತೆನಲ್ಲಾ । ಮಿಕ್ಕ ಕೊರತೆಯಿಲ್ಲಾ ॥ ಕೃಷ್ಣ ॥ ಚಂದವೇನೋ ॥ ೩ ॥ ವ್ಯರ್ಥವಾಗಿದೆ ಜನ್ಮ । ಸಾರ್ಥಕಾಗದೆ ಸರ್ವ । ತೀರ್ಥಾತ್ಮಕನೆ ನಿನ್ನ ದಿವ್ಯ । ಮೂರ್ತಿಯ ಪೂಜಿಸಿ ನಾ ಕೃ ॥ ತಾರ್ಥನಾಗದೆ ವಿಷಯುಕ್ಕೆಳಸಿ । ಕೆಟ್ಟೆನಲ್ಲೋ । ನೀ ಕೈ ಬಿಟ್ಟೆ ಯಲ್ಲೋ ॥ ಕೃಷ್ಣ ॥ ಚಂದವೇನೋ ॥ ೪ ॥ ನಿಗಮವಂದ್ಯನೇ ಕೃಷ್ಣ । ಸುಗುಣವೃಂದನೇ ಎನ್ನ । ಅಗಣಿತ ಜನ್ಮಾಂತರದ । ಅಘವ ಪರಿಹರಿಸಿ ಕಾಯೋ ॥ ಮುಗುಳಂಬನ ಜನಕ ಶ್ರೀರಮಾ । ಲೋಲ ನೀನೂ । ನಿನ್ನ ಬಾಲ ನಾನೂ ॥ ಕೃಷ್ಣ ॥ ಚಂದವೇನೋ । ಗೋವಿಂದ ನೀನೂ ॥ ೫ ॥ ಶ್ರೀ ॥

॥ ೮೧ ॥ ರಾಗ, ಶ್ಯಾಮಕಲ್ಯಾಣ [ಧಾಟಿ:- ದಯಮಾಡಿ ಪತಸೇ। ಶಾರದೇ] ಚಾಪುತಾಳ

ವಾಣಿ ವರದೇ । ವರಪದ್ಮಪಾಣೀ । ವಾಣಿ ವರದೇ ॥ ಪಲ್ಲ ॥ ವರ ಪದ್ಮಪಾಣೀ । ಶೃಂಗರ ನಾಗವೇಣೀ । ನಿರತಕಲ್ಯಾಣಿ ಸುರುಚಿರ ಕೀರ ವಾಣೀ ॥ ವಾಣಿ ವರದೆ ॥ ಅನುಪಲ್ಲ ॥ ಶರದೀಂದುವದನೇ । ವರ ಕುಂದ ರದನೆ । ಸುರಮುನಿ ಸನಕಸನಂದನ ಹೃತ್ಸದನೇ ॥ ವಾಣಿ ವರದೇ ॥ ೧ ॥ ಕಲಹಂಸಯಾನೇ । ಕೋಕಿಲಗಾನೇ । ಚಲಿಸದೆನ್ನ ಜಿಹ್ವೆಯೊಳ್ನೆಲಸಿರು ನೀನೇ ॥ ವಾಣಿ ವರದೇ ॥ ೨ ॥ ಕರುಣವವೆರಸೀ । ವರ್ಷವ ಸುರಿಸಿ । ಧುರಿತ

ಥಗೆಯಲಿ ರಕ್ಷಿಸು ದಯವೆರಸೀ ॥ ವಾಣಿ ವರದೇ ॥ ೩ ॥ ಚಿತ್ರಾರ್ಕದ್ಯುತಿ ಯು । ಚಂದ್ರನಾಕೃತಿಯು । ಚಿತ್ರ ತಾಟಂಕ ಸುರತ್ನ ಮೂಗುತಿಯಾ ॥ ವಾಣಿ ವರದೇ ॥ ೪ ॥ ಅಗರು ಶ್ರೀಗಂಧಾ । ಯುಕ್ತಕರ್ದಮದ । ಮೃಗಮದ ಕುಂಕುಮ ತಿಲಕದಾನಂದ ॥ ವಾಣಿ ವರದೇ ॥ ೫ ॥ ಅಂಗಜಪಿತ ರಮಾ । ಕಾಂತನ ಸೊಸೆಯೇ । ಶೃಂಗೇರಿ ಪುರವಾಸೆ ಬ್ರಹ್ಮಸರಸಿಯೇ ॥ ವಾಣಿ ವರದೇ ॥ ೬ ॥ ಶ್ರೀಃ ॥

॥ ೮೨ ॥ ರಾಗ, ಸುರುಟಿ [ಧಾಟಿ:- ಹ್ಯಾಗೆ ನಿನ್ನ ಚರಣಾ] ಆದಿತಾಳ

ಪಾಲಿಸು ಶ್ರೀಹರಿಯೇ । ಸದ್ಗುಣ । ಶೀಲ ಭಾಗ್ಯನಿಧಿಯೇ ॥ ಶ್ರೀಲಲಾಮ ಶೇಷಾಚಲಧೀಶ ಶ್ರೀ । ಲೋಲ ಬಾಲಭಾಸ್ಕರಸಂಕಾಶನೇ ॥ ಪಾಲಿಸು ॥ ಪಲ್ಲ ॥ ಕಂಡವರಿಂಗೆರಗೀ । ದೈನ್ಯವ । ಗೊಂಡೆ ಖಿನ್ನನಾಗೀ ॥ ಭಂಡನಾಗಿ ಬಳಲಿಸಿ ಬಹು ಕಾಯವ । ದಂಡಿಸಿದೆನು ರಕ್ಷಿಸೊ ಶ್ರೀಹರಿಯೇ ॥ ಪಾಲಿಸು ॥ ೧ ॥ ಯಾರಿಗೆ ದೂರುವೆನು । ಭಕ್ತೋ । ದ್ಧಾರನಲ್ಲವೆ ನೀನು ॥ ಘೋರ ದುರಿತ ಸಾಂದ್ರದ ವ್ಯಥೆಯು ಇ । ನ್ಯಾರಿಂಗೊರವೆ ಅದನಾರು ಕ್ಷಾಪರ್ರು ॥ ಪಾಲಿಸು ॥ ೨ ॥ ಏಸಪರಾಧವನು । ಗೈದೆ ನಾ । ನೇಸು ಪಾಪಾತುಮನೋ ॥ ಈಸಪರಾಧವನೆಣಿಸದೆ ಎನ್ನಯ । ಕ್ಲೇಶವ ಪರಿಹರಿಸೋ ದಯಾನಿಧೇ ॥ ಪಾಲಿಸು ॥ ೩ ॥ ಕರುಣಾಸಾಗರನೇ । ತ್ರಿಜಗ ।ದ್ಭರಿತ ಕೃಪಾಕರನೇ ॥ ಪರಮಾತ್ಮ ದಯಾಪರ ಪುರುಷೋತ್ತಮ । ಪರಂಜ್ಯೋತಿ ಪರಬ್ರಹ್ಮ ಸ್ವರೂಪನೆ ॥ ಪಾಲಿಸು ॥ ೪ ॥ ರಂಗನಾಥನೆನ್ನಾ । ಕಾಯೊ ವಿ । ಹಂಗರಾಜಗಮನಾ ॥ ಗಂಗಾಜನಕ ರಮಾಧವ ಕರುಣಾ । ಪಾಂಗ ರಂಗ ಮಂಗಲಾಂಗ ರಕ್ಷಿಸು ॥ ಪಾಲಿಸು ॥ ೫ ॥ ಶ್ರೀಃ ॥

॥ ೮೩ ॥ ರಾಗ, ನವರೋಜು [ಧಾಟಿ:- ಕ್ಷೀರಾಂಬುಧಿಯುಸ್ಸ ತೊಟ್ಟಿಲ] ಅಷ್ಟತಾಳ

॥ ಜೋಗುಳಪದ ॥

ಸ್ವರ್ಣಕೆತ್ತಿಗೆಯಾದ ಚಲುವ ತೊಟ್ಟಲಿಗೇ । ರನ್ನರತ್ನದ ಸರಪಣಿಗಳ ಬಿಗಿದೂ ॥ ಚಿನ್ನದ ಕೊಲಿಗೆ ಕಟ್ಟುತಲಿ ಯಶೋದೆ । ಚಿಣ್ಣ ಕೃಷ್ಣನನಿಟ್ಟು ತೂಗಿ ಪಾಡಿದಳು ॥ ಜೋ ಜೋ ॥ ೧ ॥ ಬಾಲ ಭಾಸ್ಕರಕೋಟಿ ತೇಜನೆ ಜೋ ಜೋ । ಶೀಲ ಸದ್ಗುಣ ಸುರಭೋಜನೆ ಜೋ ಜೋ ॥ ಬಾಲಕಾಗ್ರಣಿಯೆ ವಿಶ್ವಂಭರ ಜೋ ಜೋ ಎಂದು । ಬಾಲೆ ಯಶೋದೆಯು ತೂಗಿ ಪಾಡಿ

ದಳೂ ॥ ಜೋ ಜೋ ॥ ೨ ॥ ಅಚ್ಯುತಾನಂತ ಗೋವಿಂದನೆ ಜೋ ಜೋ ।
ಸಚ್ಚಿದಾನಂದ ಮುಕುಂದನೆ ಜೋ ಜೋ ॥ ವತ್ಸಕೌಸ್ತುಭಧರ ಕೇಶವ
ಜೋ ಜೋ । ಮತ್ಸಕೇತಕೋಟರೂಪನೆ ಜೋ ಜೋ ॥ ಜೋ ಜೋ ॥ ೩ ॥
ನಿಶಿಚರಾಂತಕ ನಿತ್ಯಾನಂದನೆ ಜೋ ಜೋ । ಪಶುಪತಿ ಶಕ್ರಾದಿವಂದ್ಯನೆ
ಜೋ ಜೋ ॥ ಬಿಸಜಾಕ್ಷ ಮೂರ್ತಿ ವಿಶ್ವಂಭರ ಜೋ ಜೋ । ವಸುದೇ
ವಾತ್ಮಜನೆಂದು ತೂಗಿ ಪಾಡಿದಳು ॥ ಜೋ ಜೋ ॥ ೪ ॥ ಸಿಂಧುಶಯನ
ಚತುರ್ವೇದಸಂರಕ್ಷಾ । ಮಂದರಧಾರಿ ಹಿರಣ್ಯಾಕ ಶಿಕ್ಷಾ ॥ ಸೌಂದರತೇಜ
ನೃಸಿಂಹಪರೀಕ್ಷಾ । ಕುಂದರದನ ತ್ರಿವಿಕ್ರಮ ಕಮಲಾಕ್ಷಾ ॥ ಜೋ ಜೋ ॥
॥ ೫ ॥ ಋಷಿಕುಲನಿಧಿ ಪರಿಪೂರಣ ಚಂದ್ರಾ । ದಶಕಂಠ ಮಥನ ರಾಘವ
ಯಾದವೇಂದ್ರಾ ॥ ಪಶುಪತಿಸಖ ತ್ರಿಪುರಾರಿ ಉಪೇಂದ್ರಾ । ಎಸೆವಶ್ವವೇಂದ
ಸದ್ಗುಣಸಾಂದ್ರಾ ॥ ಜೋ ಜೋ ॥ ೬ ॥ ರತಿಪತಿಪಿತ ಶ್ರೀರಮಾಧವ ಜೋ
ಜೋ । ಅತುಲಿತಮಹಿಮ ಶ್ರೀಭೂಧವ ಜೋ ಜೋ ॥ ಧೃತಶಂಖ ಚಕ್ರ
ಗದಾಬ್ಜನೆ ಜೋಜೋ । ಪ್ರತಿರಹಿತ ದೇವಕಿಸುತ ಕೃಷ್ಣ ಜೋ ಜೋ ॥
॥ ಜೋ ಜೋ ॥ ೭ ॥ ಶ್ರೀ ॥

॥ ೮೪ ॥ ರಾಗ, ಆನಂದಭೈರವಿ [ಧಾಟಿ:- ಅಮ್ಮಾ ನೀ ಯಾತಕೆ] ಏಕತಾಳ

ಶ್ರೀಹರಿಯೇ ಯನ್ನ ಮರತಿರುವರೆ ಇದು ಸರಿಯೇ । ಪಾಲಿಸು ನೀ
ಧೊರೆಯೇ ॥ ತರಳತನದಿ ನಾ ಮರತೆನೆಂದು ನೀ । ಜರದು ಬಿಟ್ಟರೆ ಮುಂದೆ
ಪೊರವರ್‍ಯಾರೈ ಶ್ರೀ ॥ ಹರಿಯೇ ॥ ಪಲ್ಲ ॥ ಒಡೆಯ ನೀನಾಗಿ ಸಲಹುದೀಗ ।
ನಿನ್ನಯ ಪದ । ಅಡಜಕೆರಗುವೆ ನಾ ಬೇಗ ॥ ಕಡುದಾರಿದ್ರ್ಯದ ಕಡಲೊಳು
ಮುಳುಗಿದೆ । ತಡಿಯ ಕಾಣಿಸೊ ಜಗದೊಡೆಯ ದಯಾವಿ ಶ್ರೀ ॥ ಹರಿಯೇ ॥
॥ ೧ ॥ ತರಳ ಧ್ರುವರಾಜನಿಗೊಲಿದೆ । ಅಂಬರೀಷನ । ಭರದಿ ಚಕ್ರದಿಂದಲಿ
ಕ್ಯಾದೇ ॥ ತರಳೆಯ ಸಭೆಯಲ್ಲಿ ದುರುಳ ಬಾಧಿಸುತಿರೆ । ಭರದೊಳಕ್ಷಯ
ವಿತ್ತುದ್ಧರಿಸಲಿಲ್ಲವೇ ಶ್ರೀ॥ ಹರಿಯೇ ॥ ೨ ॥ ಕಷ್ಟಬಟ್ಟೆ ಭವದೊಳಾನು। ಎನ
ಮನದ । ಭೀಷ್ಟ ಪಾಲಿಸೊ ದೇವ ನೀನು ॥ ಸೃಷ್ಟಿಗೊಡೆಯ ದಯದೃಷ್ಟಿ
ಯಿಂದಲಿ ಮನ । ಸಿಟ್ಟು ಸಲಹೊ ಪರಮೇಷ್ಠಿ ಜನಕ ಶ್ರೀ ॥ ಹರಿಯೇ ॥ ೩ ॥
ತಂದೆ ನೀನಲ್ಲವೆ ಜಗದೀಶಾ । ಪಾಲಿಸು ನಿನ್ನ । ಕಂದನಲ್ಲವೆ ಸರ್ವೇಶಾ ॥
ಹಿಂದುಮುಂದ ನಾನೊಂದನರಿಯೆ ದಯ । ದಿಂದ ಕಾಯೊ ಮುಚುಕುಂದ
ವರದ ಶ್ರೀ ॥ ಹರಿಯೇ ॥ ೪ ॥ ಮಂಗಲಪುರವಾಸಾ । ಶ್ರೀಶ ಶ್ರೀವೆಂಕ

ಟೇಶಾ । ಅಂಗಜಜನಕ ಶ್ರೀರಮೇಶಾ ॥ ಮಂಗಲಾಂಗ ನಿನ್ನಂಘ್ರಿ ಸೇವಕರ ಸು । ಸಂಗವ ಪಾಲಿಸು ಗಂಗಾಜನಕ ಶ್ರೀ ॥ ಹರಿಯೇ ॥ ೫ ॥ ಶ್ರೀ ॥

॥ ೮೫ ॥ ರಾಗ, ಹಿಂದುಸ್ಥಾನಿ [ಧಾಟಿ:- ಲೋಕಭರಿತನೋ । ಕೃಷ್ಣ] ರೂಪಕತಾಳ

ಮಂಗಳಾರತಿಯ ಪಾಡಿರೋ । ಮಾನುನೀಯರು ॥ಪಲ್ಲ॥ ಗಂಗಾಜನಕ ರಂಗ ಕರುಣಾ । ಪಾಂಗ ಮೋಹನಾಂಗನೆಸುತ ॥ ಅನುಪಲ್ಲ ॥ ಮತ್ಸ್ಯ ಕೂರ್ಮನಾದಗೇ । ವರಹ ನಾರಸಿಂಹಗೇ । ಸ್ವಚ್ಛ ವಾಮನಾಕೃತಿಗೇ । ಸಜ್ಜಿತ ಪರಶುರಾಮಗೇ ॥ ಮಂಗಳಾ ॥ ೧ ॥ ಕಾಮಜನಕ ರಾಮಗೇ ಸು । ತ್ರಾಮವರದ ಕೃಷ್ಣಗೇ । ಪ್ರೇಮದಿಂದ ಕ್ಷ್ಯಾವ ಬೌದ್ಧ : ಸ್ವಾಮಿ ಕಲ್ಕಿ ರೂಪಗೇ ॥ ಮಂಗಳಾ ॥ ೨ ॥ ಮೂಲ ಏಕಲರೂಪಗೇ । ಶ್ರೀಲೋಲ ವೆಂಕಟೇಶಗೇ । ಕಾಲಭಯವಿನಾಶ ಸರಸರಿ । ಶೀಲ ಬಿಂದುಮಾಧವಗೇ ॥ ॥ ಮಂಗಳಾ ॥ ೩ ॥ ಶ್ರೀ ॥

॥ ೮೬ ॥ ರಾಗ, ಆರಭಿ [ಧಾಟಿ:- ಶ್ರೀನಿವಾಸನ ಸಾರಿವವರಿಗೆ] ಏಕತಾಳ

ಶ್ರೀಮನೋಹರ ಕೃಷ್ಣನಿಗೆ । ಜಯ ಮಂಗಲಂ ॥ ಕೋಮಲಾಂಘ್ರಿ ಸರೋಜಯುಗ್ಮಗೆ । ಶುಭಮಂಗಲಂ ॥ ಪಲ್ಲ ॥ ನಿತ್ಯನಿರ್ಗುಣ ನಿರ್ಮಲಾತ್ಮಕ । ಸತ್ಯನಿಧಿ ಪುರುಷೋತ್ತಮಗೆ ವರ । ಸತ್ಯಸಾಕ್ಷಿಗೆ ಸಾರ್ವಭೌಮಗೆ । ಜಯ ಮಂಗಲಂ ॥ ಶ್ರೀಮನೋಹರ ॥ ೧ ॥ ಆದಿಮಾಯಾತೀತ ನಿರುಪಮ। ನಾದಿಮೂರುತಿಯಂತ್ಯರಹಿತಗೆ । ವೇದವೇದ್ಯಗೆ ಇಷ್ಟಪೂರ್ಣಗೆ । ಶುಭ ಮಂಗಲಂ ॥ ಶ್ರೀಮನೋಹರ ॥ ೨ ॥ ಕಂಜಸಖ ಶತಕೋಟತೇಜಗೆ । ಮಂಜುಳಾಂಗಗೆ ಮದನಪಿತಗೆ ನಿ । ರಂಜನಾತ್ಮಕ ನಿತ್ಯಮೂರ್ತಿಗೆ ॥ ಶುಭ ಮಂಗಲಂ ॥ ಶ್ರೀಮನೋಹರ ॥ ೩ ॥ ಶಂಖಚಕ್ರಗದಾಬ್ಜ ಶ್ರೀವ । ತ್ಸಾಂಕಿತ ಶ್ರೀರಾಧಾಕೃಷ್ಣ ಶ । ಶಾಂಕವದನಗೆ ಶಾಂತಮೂರ್ತಿಗೆ ॥ ಶುಭಮಂಗಲಂ ॥ ॥ ಶ್ರೀಮನೋಹರ ॥ ೪ ॥ ವಾರಿಜಾಸನವಂದ್ಯನಿಗೇ ಭಾ । ಗೀರಥೀಪಿತ ಶ್ರೀ ರಮೇಶಗೆ । ಚಾರು ಉಡುಪಿನ ಕೃಷ್ಣನಂಘ್ರಿಗೆ । ಜಯ ಮಂಗಲಂ ॥ ಶ್ರೀಮನೋಹರ ನಾರಾಯಣಗೆ । ಜಯ ಮಂಗಲಂ ॥ ೫ ॥ ಶ್ರೀ ॥

॥ ಕವಿ ಕೇಶವಪ್ರಭುಕೃತ ಪದಗಳು ಸಂಪೂರ್ಣಂ ॥

॥ ಶ್ರೀಕೃಷ್ಣಾರ್ಪಣಮಸ್ತು ॥

ಕವಿ ರಾಮಕೃಷ್ಣಯ್ಯನವರ ಪದಗಳು.

॥ ೮೭ ॥ ರಾಗ, ಸಾರಂಗ [ಧಾಟಿ:- ಕೊಡೊ ಕೊಡೊ ಕೊಡೊ] ಚಾಪುತಾಳ

ಹರಿ ಸರ್ವೋತ್ತಮ ಶ್ರೀಪುರುಷೋತ್ತಮ । ಶ್ರೀಧರ ಲಕ್ಷ್ಮೀಕಾಂತಂ ॥ ॥ ಪಲ್ಲ ॥ ಹೇಮಾಂಬರಧರ ಸುಂದರಮೂರುತೆ । ನೀಲಮೇಘ ನಿಭಶೋಭಂ॥ ನಿತ್ಯನಿರಂಜನ ಮತ್ಸ್ಯವತಾರಂ । ಘ್ಯಾಯೆ ದಯಾಬ್ಧೇ ಸಂತತಂ ॥ ಹರಿ ಸರ್ವೋತ್ತಮ ॥ ೧ ॥ ಸನಕಸನಂದನ ಪೂಜಿತಮೃದುಪದ । ವನಜಯುಗ್ಮ ಭವದೂರಂ ॥ ಅನಘ ವಿಚಿಂತ್ಯಂ ಮಂದರಧಾರಿಂ । ಕೃತುಭುಜ ವಂಶೋದ್ಧಾರಕಂ ॥ ಹರಿ ಸರ್ವೋತ್ತಮ ॥ ೨ ॥ ಅತ್ರಿಪುತ್ರನಿಭ ಸ್ನಿಗ್ಧವಕ್ತ್ರ ಶತಪತ್ರ ನೇತ್ರ ಋಷಿಸ್ತೋತ್ರಂ ॥ ಸುತ್ರಾಮಾರ್ಚಿತ ಧಾತ್ರಿ ಉದ್ಧಾರಕ । ಸೂಕರ ರೂಪಾನಂದಿತಂ ॥ ಹರಿ ಸರ್ವೋತ್ತಮ ॥ ೩ ॥ ಅಂತ್ಯರಹಿತ ವೇದಾಂತ ವೇದ್ಯ ಮದನಂತ ಶಾಂತ ಭಗವಂತಂ ॥ ಸಂತರಕ್ಷ ಸರ್ವಾಂತರ್ಯಾತ್ಮಕ । ವೀರ ನೃಸಿಂಹ ಪಾಲಯ ॥ ಹರಿ ಸರ್ವೋತ್ತಮ ॥ ೪ ॥ ಬ್ರಹ್ಮಚರ್ಯಧರ ಅದಿತೀನಂದನ । ನಿರ್ಮಯ ಪ್ರಕೃತಿಪರೇಶಂ ॥ ಧರ್ಮಶಾಸನಾ ಭಾರ್ಗವ ಗುಣನಿಧೆ । ಬುಧಜನಪಾಲನ ಕೋಮಲಂ ॥ ಹರಿ ಸರ್ವೋತ್ತಮ ॥ ॥ ೫ ॥ ಸತ್ಯದೃಢವ್ರತ ದಶರಥನಂದನ । ಧೂರ್ತ ದಶಾಸ್ಯವಿದಾರಿತಂ ॥ ಕೀರ್ತಿವಾರಿಧೇ ಜನಿತಮೂರ್ತಿಕೇ । ಸೀತಾವಲ್ಲಭ ಶ್ರೀಧರಂ ॥ ಹರಿ ಸರ್ವೋತ್ತಮ ॥ ೬ ॥ ಮುರಲೀನಾದಿತ ಗೋವರ್ಧನಧರ । ಗರುಡಧ್ವಜ ಹಸಿತಾಂಗಂ ॥ ವರತರ ಸುಖದಂ ಪಾಂಚಜನ್ಯಧರ। ಪಾರ್ಥಸಾರಥೇ ಶ್ಯಾಮಲಂ॥ ॥ ಹರಿ ಸರ್ವೋತ್ತಮ ॥ ೭ ॥ ಬುದ್ಧಾಕೃತಿಧರ ಭವ್ಯಸವ್ಯಯುತ । ಭದ್ರ ನಿಶ್ಕಕಳಖಿಳೇಶಂ ॥ ಶೂದ್ರ ಮ್ಲೇಂಛಕುಲನಾಶನ ಪಾವನ । ಕಲ್ಕ್ಯಸ್ವರೂಪಕಂ ಕೇಶವಂ ॥ ಹರಿ ಸರ್ವೋತ್ತಮ ॥ ೮ ॥ ಭಾಸುರ ವರ ವಳಲಂಕಾಧಿಪವಿ । ಸ್ಥೇಶ ಶ್ರೀವೆಂಕಟನಾಥಂ ॥ ಈಶ ಶ್ರೀಗುರು ನರಸಿಂಹದೇವ ಋಷಿ । ಕೇಶವ ಮೂರುತೆ ಪಾಹಿ ಮಾಂ ॥ ಹರಿ ಸರ್ವೋತ್ತಮ ॥ ೯ ॥ ಶ್ರೀಃ ॥

॥ ೮೮ ॥ ರಾಗ, ಆರಬಿ [ಧಾಟಿ:- ಕಲಯೇ ಶ್ರೀವಿಷ್ಣು ಕೃಷ್ಣ] ಆದಿತಾಳ

ಪ್ರಣತೇ ಶ್ರೀವಿಷ್ಣು ವೈಷ್ಣವವಿಭು ವಿಷ್ಣು । ಪ್ರಣತೇ ॥ ಪಲ್ಲ ॥ ಪ್ರಣವ ರೂಪ ಶ್ರೀಪೂರ್ಣಪ್ರಜ್ಞ । ಸದ್ವಿನುತ ಪದಾಬ್ಜಯುಗಂ ವನಮಾಲಂ ॥ ಪ್ರಣ

ತೇ ॥ ಅನುಪಲ್ಲ ॥ ಭದ್ರಂ । ಭೂಭೂಧರ ಪುಣ್ಯಸಮುದ್ರಂ । ಬ್ರಹ್ಮಾಂಡ ಧೇಕ್ಷ ಅಘಭಿದ್ರಂ । ಭಯಭೀಕೃತ ದಾನವರಾದ್ರಂ ॥ ಕಾದ್ರೇಯಶಯನಂ ॥ ಚಿದ್ರೂಪಾತ್ಮಸುಧೇಯಾಪ್ಯೃತ ಸಾರ್ಧಮು। ರದ್ರಕ್ಷಾದ್ರಿಧರಂ ಸಖಿರುದ್ರಂ ॥ ಪ್ರಣತೇ ॥ ೧ ॥ ಶುದ್ಧಂ । ಶಾಂತಾಕರ ವೇದಪ್ರಸಿದ್ಧಂ । ಸದ್ಧರ್ಮ ಕೀರ್ತಿ ಸಾನ್ನಿಧ್ಯಂ । ಶಶಿವರ್ಣ ಪದಾಶ್ರಿತಸಾಧ್ಯಂ ॥ ಭವರೋಗವೈದ್ಯಂ ॥ ವೃದ್ಧಿ ರೂಪ ನಿರವದ್ಯ ಸಾಕ್ಷಿಕಾರಾಧ್ಯ ಪ್ರದ್ಯವೇದ್ಯಂ ಅನಿರುದ್ಧಂ॥ ಪ್ರಣತೇ ॥ ೨ ॥ ಹಂಸಂ । ಹೃಷೀಕೇಶ ಕೈಟಭಧ್ವಂಸಂ । ಹರಿ ಕೃಷ್ಣರೂಪ ಜಿತಕಂಸಂ । ಶ್ಯಾಮಾಂಬರ ರುಚಿರಸುತಂಸಂ ॥ ಪರತತ್ವ ಸಂಸಂ ॥ ಹಂಸರೂಢ ಸಂಸಾರ ಸಸರ್ಜಿತ । ಸಂಸ್ತುತ ಸುರಮುನಿ ಮಾನಸಹಂಸಂ ॥ ಪ್ರಣತೇ ॥ ೩ ॥ ಕತ್ರುಂ । ಕಮಲಾಂಬಕ ದೇವಕಿಪುತ್ರಂ । ಕೌಸ್ತುಭಲಂಕೃತ ಸುಚರಿತ್ರಂ। ನಿರ್ಮಲ ಶಾಮಲನಿಭಗಾತ್ರಂ ॥ ಕಮನೀಯಸ್ತೋತ್ರಂ ॥ ಧಾತ್ರಿಭತ್ರು ಶುಭ ವಕ್ತ್ರತೀರ್ಥಪದ । ಚಿತ್ರಸೂತ್ರಧಾರಕ ಸುಪವಿತ್ರಂ ॥ ಪ್ರಣತೇ ॥ ೪ ॥ ವರ್ಯಂ । ಮಹಲಕ್ಷ್ಮಿಮುಖಾಂಬುಜಸೂರ್ಯಂ । ಮೃತಿಜನ್ಮಕ್ಲೇಶಹರ ಶೌರ್ಯಂ । ವೈಕುಂಠವಾಸ ಸ್ಥಿರಧೈರ್ಯಂ ॥ ಭೂತಾತ್ಮಶೌರ್ಯಂ ॥ ಆರ್ಯಮಾದಿ ಗ್ರಹಪರ್ಯಯ ಚರ್ಯಕ । ಕಾರ್ಯಪ್ರದ ಮಹವೀರ್ಯ ಮುದಾರ್ಯಂ ॥ ಪ್ರಣತೇ ॥ ೫ ॥ ಶೀಲಂ । ಮತ್ಸ್ಯಾಕೃತಿ ನಗಧರಲೀಲಂ । ಕಿಟಕನಕಕಶ್ಯಪು ಮೃತ್ಯೂಲಂ । ವಟು ಪರಶುಧರಂ ಗುಣಜಾಲಂ । ದಶ ಕಂಠ ಕಾಲಂ ॥ ಲೀಲಂ ಗೋಪಿಕಲೋಲಂ ಬುದ್ಧಖಳಾಳಿ ಮ್ಲೇಂಛಖಂಡನ ಭೂಪಾಲಂ ॥ ಪ್ರಣತೇ ॥ ೬ ॥ ವೀರಂ । ಚಿಘ್ರಾಣಮರ್ಕಜ್ವಪೂರಂ । ವರ ಭೀಕರ ಮುಖಪಯಸಾರಂ । ಭುತ ಅಷ್ಟದಂಷ್ಟ ಸುಕಠೋರಂ ॥ ಸ್ತಂಭ ವಿದಾರಂ ॥ ಪಾರಮಹಿಮ ಪ್ರಹಲ್ಲಾದರಕ್ಷ ಗುರು । ನಾರಸಿಂಹ ವಳಲಂಕ ಪುರೇಶಂ ॥ ಪ್ರಣತೇ ॥ ೭ ॥ ಶ್ರೀ ॥

॥ ೮೯ ॥ ರಾಗ, ಕಾಮಕಲ್ಯಾಣಿ [ಧಾಟಿ:- ಹರಿ ಸರ್ವೋತ್ತಮ ಶ್ರೀ] ಏಕತಾಳ

ಜಯ ಜಯ ಹೇ ಕೊಲ್ಹಾಪುರ ವಾಸಿನಿ । ಪದ್ಮನಪ್ರಿಯೇ ಕ್ಷೀರ ಸಿಂಧುಸುತೆ ॥ ಪಲ್ಲ ॥ ಜಯ ಜಗನ್ಮಾತೆ ಸಚ್ಚಿನ್ಮಯ ಪ್ರಕೃತಿ ನಿರ್ಮಯೆ ದಯೆ ಸುಶ್ರೀಯೆ ಶೇಷ ಸಿರೀ ॥ ಪಯಜಾತೆ ನಾಮೆ ಸನಾಮೆ ಮನೋರಮೆ । ನಯ ಸತ್ಯಸಾಕಾರೆ ರತ್ನಗರ್ಭೆ ॥ ಜಯ ॥ ೧ ॥ ಅರ್ಧಾಂಗಮಾಲಿ ಎಶಾಲಿ

ಅಲಂಕರಿ । ಭದ್ರ ದಾರಿದ್ರವಿಚ್ಛೇದನಿಯೇ ॥ ಕರ್ದಮಜಾಸನ ಜನನೀ ಸಂತತ ಸುಖ । ವರ್ಧಿನಿ ಸ್ವಧರ್ಮಮುರಾಜನುತೇ ॥ ಜಯ ॥ ೨ ॥ ಸಂತತ ಸ್ವಸ್ಥಿರೆ ಸಂತಪ್ರಸನ್ನೆ ಮ। ಹಾಂತ ಅನಂತ ಸೌಭಾಗ್ಯಮಯೇ ॥ ಕಂತು ಮಾತೆ ಕಂಜನೇತ್ರೆ ಕುತೂಹಲೇ । ಕಾಮಿತಾರ್ಥದಾತೆ ಭಕ್ತನಾಥೆ ॥ ಜಯ॥ ॥ ೩ ॥ ಅಕ್ಷಯಾತ್ಮಕಿ ಮಹಾಲಕ್ಷ್ಮೀ । ಲಕ್ಷ್ಮೀ ಲಕ್ಷಂಧೇಕ್ಷೆ ಸದ್ಭಾವಿಕ ರಕ್ಷಕರೇ ॥ ಸೂಕ್ಷ್ಮ ಸ್ಥೂಲ ವಿಶ್ವಸಾಕ್ಷಿ ಸಾಕ್ಷಿ । ಸಾಕ್ಷಾದ್ದಾಕ್ಷಾಯಣೀ ಪ್ರಿಯೇ ಮೋಕ್ಷದಾತೇ ॥ ಜಯ ॥ ೪ ॥ ಅಂಬಿಕೆ ವರದೆ ಮುಖಾಂಬಿಕೇ ಸುಖ್ಯಾತ । ಕುಂಭ ಕುಂಭಕುಚ ಕಂಬುಕಂಠೇ ॥ ಅಂಬೆ ಅಂಬೆ ಕಲರಂಬೆ ಸ್ವರ್ಣಪಿ । ತಾಂಬರರಂಭಣಲಂಕರಿತೇ ॥ ಜಯ ॥ ೫ ॥ ಇಂದಿರವಿಂದಿರ ಮಂದಿರ ಮಂದಾರೆ । ಚಂದ್ರಾಸ್ಯೆ ಚಂದ್ರಿಕ ಚಾರುಹಸ್ತೇ ॥ ಸುಂದರಿ ಸುಂದರಿ ಶಾಂತಸುಸುಂದರಿ । ಪೂರ್ಣಾನಂದ ನಂದ ನಂದನಿಧೇ ॥ ಜಯ ॥ ॥ ೬ ॥ ಸಾರಸಧ್ವಜ ವಜ್ರಲಾಂಛನ ಪದಯುಗೆ । ಸಾರಶಕ್ತಿ ಶಕ್ತಿ ಭಕ್ತಿ ರೂಪೇ ॥ ಕ್ರೂರ ಹಿರಣ್ಯಕಶ್ಯಪುವೈರಿ ಮುದ್ಗರು । ನಾರಸಿಂಹ ವಕ್ಷಸ್ಥಲ ನಿವಾಸೇ ॥ ಜಯ ॥ ೭ ॥ ಶ್ರೀಃ ॥

॥ ೯೦ ॥ ರಾಗ, ಶ್ಯಾಮಕಲ್ಯಾಣಿ [ಧಾಟಿ:- ಪಾಹಿ ಮಾಂ ಶ್ರೀವೇಣು] ರೂಪಕತಾಳ

ಪಾಲಿಸೈ ಶ್ರೀವೆಂಕಟೇಶ್ವರಾ । ಶ್ರೀಲೋಲ ಬಿಡದೆ । ಪಾಲಿಸೈ ಶ್ರೀವೆಂಕಟೇಶ್ವರಾ ॥ ಪಲ್ಲ ॥ ಪಾಲಿಸೈ ಶ್ರೀವೆಂಕಟೇಶ ನೀಲವರ್ಣ ದೀನಪೋಷ । ಶೀಲಮತಿ ವಿಶಾಲ ಕಾಲಕಾಲ ಬಾಲಲೀಲ ರಂಗಾ ॥ ಪಾಲಿಸೈ ॥ ಅನುಪಲ್ಲ ॥ ಪೆಂಟಣಿಸಿದ ಜಲಧಿಯೊಳಗೆ । ತುಂಟ ಕಟಕಿ ತಮನು ಘನನಿ । ಗಂಟಮೂಲ ಶ್ರುತಿಗಳೊಯ್ಯೆ । ಟೆಂಟಣಿಸುತ ಕೋಪದಿಂದ ॥ ಕಂಟಕಿಯನು ತರಿಯಲೋಸುಗಾ । ಮತ್ಸ್ಯಾಕೃತಿಯನು । ಉಂಟೆಣಿಸುತ ಅಸುರವಾಶಿಗಾ । ಕ್ಷೀರಾಬ್ಧಿ ಮಥಿಸ॥ ಲೆಂಟು ದಿಗ್ವಿಪಾದಿ ಸುರರಿಗೀಂಟಿದಮೃತಕ್ಕಾಗಿ ಶ್ರೀವೈ । ಕುಂಠನಾಥನೆನಿಸಿ ಗಿರಿಯ ಪಂಠಿ ತಾಳ್ದ ಕಂಕಮಟನೆ ॥ ಪಾಲಿಸೈ ॥ ॥ ೧ ॥ ಗರ್ವದಿಂದ ಖಳನು ವಿಮಲ । ಊರ್ವಿಯನ್ನು ಕದ್ದು ನಡೆಯೆ । ಸರ್ವಜನ ಸುಪರ್ವನೇಕ । ಸಾರ್ವಭೌಮನೆಂದು ನುತಿಸೆ ॥ ನಿರ್ವಹಿಸಲು ಸುರರು ದೂರನು। ತಾನಭಯವಿತ್ತು । ಪೂರ್ವಯುಂಗ ವರಹರೂಪನೂ ॥ ಕೈಕೊಂಡು ದುರುಳನ ॥ ಶೀರ್ವರಿದು ಕಂಭದಿಂದ ದೂರ್ವ ಪಿಡಿಯುಸುಗುಳಿ ವಂದಿ । ತರ್ವರಿಯನ ಕ್ರೂದ ದುರಿತ ಪರ್ವತೌಘ ವಜ್ರ ನೃಹರಿ ॥

॥ ಪಾಲಿಸೈ ॥ ೨ ॥ ಶಕ್ರಪದವಿಯ ಬಯಸಿ ದೈತ್ಯ । ಚಕ್ರವರ್ತಿ ಗೈದ ಯಜ್ಞನ । ತಿಕ್ರಮಿಸಲು ವಿಪ್ರವಟುವಿ । ನಾಕ್ರಮದಲಿ ದಾನ ಬೇಡಿ ॥ ಶುಕ್ರ ನಯನ ಹರಣಗೊಳ್ಳುತಾ । ವಿರಾಟಧರ ತ್ರಿ । ವಿಕ್ರಮಾಖ್ಯ ರೂಪ ತಾಳುತಾ ॥ ಧರಿತ್ರಿಯುಳಿದು ॥ ವಿಕ್ರಮವಿ ಬಲಿಕವಾಟ ಚಕ್ರಿಯೆನಿಸಿ ಕ್ಷತ್ರಿ ಕುಲವ । ವಕ್ರತನವ ಸಂಹರಿಸಿದ ಚಕ್ರನಿಭ ಕುಠಾರ ತಾಳ್ದ ॥ ಪಾಲಿಸೈ । ॥ ೩ ॥ ಹಿಂದೆ ಖಳರ ವೃಂದವನ್ನು । ನಂದು ತರಿಯುಲಾಗಿ ಅಜನ । ನಂದನ ಸುತನೆಂದೆನಿಸಿ । ಇಂದಿರಾಕ್ಷಿ ನೆವವ ದಶವ ॥ ಕಂಧರಾವ ಮುಂದದೈತ್ಯರ ॥ ಹವಾಗ್ರದಿಂದ । ಕೊಂದು ಸಲಹಿ ವಂದ್ಯಭಕ್ತರಾ ॥ ಒಳಿಕ ಬಿಡದೆ ॥ ನಂದ ಗೋಕುಲವಲ್ಲಿ ನಂದ ಕಂದನಾಗಿ ಪುಟ್ಟಿ ಪಾರ್ಥ । ನಿಂದ ದುಷ್ಟ ಕೌರವರನು ಕೊಂದಿಸಿದ ಮುಕುಂದ ಕೃಷ್ಣ ॥ ಪಾಲಿಸು ॥ ೪ ॥ ಮತ್ತರಾಗಿ ಗೈವ ತ್ರಿಪುರ । ಮತ್ತಕಾಶಿನಿಯರ ವ್ರತವ । ಚಿತ್ತಲೆತ್ತುವಿಂದ ಕೆಡಿಸಿ । ಮತ್ತೆ ತೇಜಿ ಏರಿಸುತ್ತ ॥ ಮತ್ತಿಸಿರ್ಪ ಮ್ಲೇಂಛವರ್ಗವಾ । ಸಂಹರಿಸಿ ಭಕ್ತ । ಮೊತ್ತ ನಿತ್ಯ ಸಲಹಿ ಮಾಧವಾ ॥ ಆನಂದದಿಂದ ॥ ಛತ್ರ ಪಟದಪ್ಪುರದಿ ನುತಿಸ ಭೃತ್ಯರುತ್ತಮರನ್ನು ಕ್ಯಾವ । ಕರ್ತೃ ಗುರು ನೃಸಿಂಹ ನಮೋ ನಮೋಸ್ತು ವೀರ ವೆಂಕಟೇಶ ॥ ಪಾಲಿಸೈ ಶ್ರೀವೆಂಕಟೇಶ್ವರಾ ॥ ೫ ॥ ಶ್ರೀ೩ ॥

॥ ೯೧ ॥ ರಾಗ, ಜುಂಜೋಟಿ [ಧಾಟಿ:- ದೇವ ಮಜದಿವ್ಯ ಮೂರ್ತಿ । ಸರಸ್ವತಿ] ಅಷ್ಟತಾಳ

ಶ್ರೀರಾಮ ಸೀತಾಪತೇ । ಶ್ರೀರಘುಪತೇ । ಶ್ರೀರಾಮ ॥ ಪಲ್ಲ ॥ ಶಾರದೆಂದು ನಿಭ ಚಾರುಮುಖಾಂಬುಜ । ಸಾರಸಾಂಬಕ ರಾಜತೇ ॥ ಶ್ರೀರಘುಪತೇ ॥ ೧ ॥ ಭೂಮಿಪಾಲ ಸಾರ್ವಭೌಮ ದುರ್ವಾದಳ । ಶ್ಯಾಮಸುಂದರ ಮೂರುತೇ ॥ ಶ್ರೀರಘುಪತೇ ॥ ೨ ॥ ಕೌಸಲ್ಯಾ ಜಠರಾಬ್ಧಿ ಪೂರ್ಣಚಂದ್ರಮ ನಿತ್ಯ । ಹಂಸವಾಹನಪೂಜಿತೇ ॥ ಶ್ರೀರಘುಪತೇ ॥ ೩ ॥ ಕೋದಂಡಪಾಣಿ ಆಜಾನುಬಾಹು । ವೇದವೇದ್ಯ ಸತ್ಯಸಾನ್ನಿಧೇ ॥ ಶ್ರೀರಘುಪತೇ ॥ ೪ ॥ ನವರತ್ನ ಮಕರಕುಂಡಲ ಮಕುಟಾಂಕಿತ । ನವಪೀತಾಂಬರ ಧಾರಿತೇ ॥ ಶ್ರೀರಘುಪತೇ ॥ ೫ ॥ ಅಗ್ರಗಣ್ಯ ಸದಾನುಗ್ರಹಿ ಕಪಿವರ್ಯ । ಸುಗ್ರೀವಾದ್ಯಭಿವಂದಿತೇ ॥ ಶ್ರೀರಘುಪತೇ ॥ ೬ ॥ ವಾಸುದೇವಾದಿ ಪುರುಷ ಪುರುಷೋತ್ತಮ । ವಾಸವಾರ್ಚಿತ ಶ್ರೀಪತೇ ॥ ಶ್ರೀರಘುಪತೇ ॥ ೭ ॥ ಪವನ ಸರ್ವಜ್ಞ ತೀರ್ಥಾರ್ಯರೊಂದಿತ ಪಾದ । ಭುವನೇಂದ್ರ ತೀರ್ಥಾರ್ಚಿತೇ ॥ ಶ್ರೀರಘುಪತೇ ॥

॥ ೮ ॥ ಸಿಂಹಾಸನಸ್ಥ ಪ್ರಶಸ್ಥ ಮದ್ಗುರು ನಾರ । ಸಿಂಹ ಕೃಪಾಂಭೋನಿಧೇ ॥ ಶ್ರೀರಘುಪತೇ ॥ ೯ ॥ ಶ್ರೀ ॥

॥ ೯೨ ॥ ರಾಗ ಸಾರಂಗ [ಧಾಟಿ:- ಸಾಕು ಸಾಕು ಮನುಜಸೇವೆಯು] ರೂಪಕತಾಳ

ಅಭಯ ಬೇಡೊ ಸುಮನಸುಂದರ । ಶ್ರೀಹರಿಯ ಪ್ರಿಯ । ಅಭಯ ಬೇಡೊ ಸುಮನಸುಂದರ ॥ ಪಲ್ಲ ॥ ಅಭಯ ಬೇಡೊ ಪ್ರಿಯ ರಮಾ । ವಿಭು ಜಗನ್ನಿವಾಸನೊಡನೆ । ಉಭಯಸುಖವನೀವ ಚೆಲ್ವ । ಅಬುಜನೇತ್ರ ಸೊಬಗನೆಂದು ॥ ಅಭಯ ॥ ಅನುಪಲ್ಲ ॥ ಘೋರಭವದ ಪಾಶ ಮುನ್ನ । ಓರಣಿಸಿದೆ ಕೊರಳೊಳು । ಚಾರು ನವಸುಭಕ್ತಿ ಮುಖವು । ಸ್ವಾರಪಿಂವ ಮಾರಪಿತನ ॥ ಅಭಯ ॥ ೧ ॥ ನೊಂದು ವಾರಣೇಂದ್ರ ತನ್ನ । ದಂದುಗದಲಿ ನುತಿಸಲು । ಬಂದು ರಕ್ಷಿಸಿದ ಮುಕುಂದ । ಸಿಂಧುಶಾಯಿ ಎಂದು ಹರಿಯ ॥ ॥ ಅಭಯ ॥ ೨ ॥ ನಿಗಡ ದೈತ್ಯ ತರಳನನ್ನು । ಅಗಣಿತದಲಿ ಬಾಧಿಸೇ । ಮುಗುವು ಕರೆಯೆ ಬಂದು ಕ್ಯಾದ । ನಿಗಮನುತ ಪರಾಕು ಎನುತ ॥ ಅಭಯ ॥ ॥ ೩ ॥ ಕಿಂಕರೌಘ ಸುಪ್ರಸನ್ನ । ಸಂಕಟೌಘ ಧ್ವಂಸನ । ವೆಂಕಟೇಶ ವರದವಳ । ಲಂಕೆಯಧಿಪ ಗುರು ನೃಹರಿಯ ॥ ಅಭಯ ॥ ೪ ॥ ಶ್ರೀ ॥

॥ ೯೩ ॥ ರಾಗ, ಬೇಗಡೆ [ಧಾಟಿ:- ನಿರವಧಿ ಸುಖದಾ । ಹರ ಮಹಾದೇವ] ಚಾಪುತಾಳ

ಪರವಿಧಿವರದ ಶ್ರೀ । ಹರಿ ಶ್ರೀನಿವಾಸಾ ॥ ಪಲ್ಲ ॥ ಸ್ಥಿರಸುಖಭರಿತಂ । ಶೋಭನಚರಿತಂ । ಗರುಡವರೂಥಂ । ಗೋಮಿನಿನಾಥಂ ॥ ಹರ ॥ ಅನು. ॥ ವಿಷ್ಣು ಸರ್ವೇಶಂ । ವಿನುತಸುಘೋಷಂ । ಕೃಷ್ಣವತಾರಂ । ಕೀರ್ತಿಸಾರಂ ॥ ಜಿಷ್ಣುಪಾಲಜಾ । ವಿಲೋಕರಚೇಲಂ । ಉಷ್ಣಕಿರಣ ಮಿತ । ಭಾಸ ಸುಶೀಲಂ ॥ ಹರ ॥ ೧ ॥ ವಿಭು ವಾಸುದೇವಂ । ಕೌಸ್ತುಭಗ್ರೀವಂ । ಇಭಪತಿ ಯಭಯಂ । ನಭವನತುಭಯಂ ॥ ಶುಭ ವಿಭವಾಸ್ಪದ । ಅಬುಜದಳೇಕ್ಷಣಂ ॥ ಹರ ॥ ೨ ॥ ಪರಬ್ರಹ್ಮ ಬೋಧಂ । ಪಾರ್ಥಪ್ರಮೋದಂ । ಪರಜಿತಕಾಲಂ । ಪ್ರಹಲ್ಲಾದಪಾಲಂ ॥ ವರ ಮೂಲಿಕ ವಳಲಂಕವಿರಾಜಂ । ಗುರು ನರಸಿಂಹ ಮದ್ರಾಜಾಧಿರಾಜಂ ॥ ಹರವಿಧಿ ॥ ೩ ॥ ಶ್ರೀ ॥

॥ ೯೪ ॥ ರಾಗ, ಬೇಗಡೆ [ಧಾಟಿ:- ಭಾಪಿಸುವೆ ಸಂಜೀವಿ ನಿನ್ನನು] ಏಕತಾಳ

ತೋರಿಸೈ ದಯಸಾರಸಂಪನ್ನಾ । ಶ್ರೀನಾರಸಿಂಹ । ಭೂರಿಭಾಗ್ಯ ಮುದಾರ ಗುಣಪೂರ್ಣ ॥ ಪಲ್ಲ ॥ ಚಾರುಚರಿತ ವಿಶಾರದಾಂಕ ಸು । ಸ್ಮೇರ

ವಿಕ್ರಮ ಮೇರು ಮಂದರ । ಧಾರ ದೈತ್ಯಪ್ರಹಾರ ಚಕ್ರವ । ಧಾರ ದೀನೋದ್ಧಾರ ಎನ್ನೊಳು ॥ ತೋರಿಸ್ಯೆ ॥ ಅನುಪಲ್ಲ ॥ ನಾಗಶಯನ ನತಾಗ್ರಜಾಗ್ರಜ ನಾಗರಿಪುಗಮನಾ । ದುಃಖಿತ । ನಾಗವರದ ಸುನಾಗಜಾಂಬಕ ನಾಗಧರ ಸುಮನಾ । ಸಾರ್ಚಿತ । ಭೋಗಭಾಗ್ಯನಿಯೋಗ ದಯ ಸುರನಾಗನಘ ಶಮನಾ । ವಿಕ್ರಮ ॥ ನಾಗಮತಿಯುತ ನಾಗನಾಗ ಸು । ತಾಗಮಾಗಮ ನಾಗಮುಖಿ ನಂ । ಭೋಗ ಸಂಪದರಾಗರಂಜಿತ । ನೈಗಮೇಶ ನರಾಗ ನರಹರಿ ॥ ತೋರಿಸ್ಯೆ ॥ ೧ ॥ ಹಂಸಗಮನೋತ್ತಂಸಪೂಜಿತ ಹಂಸಚಿದ್ರೂಪಾ। ಭ್ರಾಜಿತ । ಹಂಸಕೋಟಿ ಸುಧಾಂಶು ವಹ್ನಿಪ್ರಶಂಸ ಸುಕಲಾಪಾ । ಸುತ ಪರ। ಹಂಸ ವರ ಸಿತಹಂಸವಾಹನ ಹಂಸಕುಲಭೂಪಾ । ಪಾಲಿತ ॥ ಹಂಸವಿದ್ಯಾ ಹಂಸವಿಸ್ಫುರ । ಹಂಸಲೋಚನ ಹಂಸಹಂಸಕ । ದಾಂಶು ದೈತ್ಯಧ್ವಂಸ ಮಾತುಳ । ಕಂಸಭಂಜನ ಹಂಸ ವೇಂಕಟ ॥ ತೋರಿಸ್ಯೆ ॥ ೨ ॥ ಮಂದಹಾಸ ಮುಕುಂದ ನಿತ್ಯಾನಂದ ಪರಿಪೂರ್ಣಾ । ಭವ ಭಯ । ಬಂಧಗುಣ ನಿರ್ಬಂಧ ಕುಲಹರ ನಂದಧರ ವರ್ಣಾ । ಅಜ್ಞಾ । ನಾಂಧನಾಶನ ಮಂದರಿಪು ನಮಿತಾಂಧರಿಪು ಪೂರ್ಣಾ । ಸನ್ನುತ ॥ ಸುಂದರಂ ಬಲಿಬಂಧನಾನತ । ಪ್ರಾಂದಪಾಲಕ ವಂದಿತಾಮರ । ಕುಂದರದನ ರಾಕೇಂದುವದನಾ । ನಂದ ಸಂಯುತ ಬಿಂದುಮಾಧವ ॥ ತೋರಿಸ್ಯೆ ॥ ೩ ॥ ದೇವದೇವನ ಭಾವ ಕೀರ್ತಿಪ್ರಭಾವ ಜಗದೀಶಾ । ಶೋಭಿತ। ಭಾವಜಾಂತಕ ಭಾವರಾಚಿತ ಶ್ರೀವಧೂಕೋಶಾ। ಪ್ರಜ್ವಲ। ಪಾವನಾಂಗ ಕೃಪಾವಲಂಬ ಸ್ವಭಾವ ವಿಶ್ವೇಶಾ । ಜಯ ಜಯ । ರಾವಣಾಂತಕ ಶುಭಾವಲೋಕನ । ಸಾವಧಾನ ವಿಭಾವಸುಜ್ವಾಲ । ದೈವಮುಖ್ಯರಯುದಾವ ಭಜಕರ । ಕಾವ ಘೋರಿ ಶ್ರೀದೇವ ವಿಠ್ಠಲ ॥ ತೋರಿಸ್ಯೆ ॥ ೪ ॥ ಗೋಪನಂದನ ಗೋಪವಾಹನ ಗೋಪನುತ ಚರಣ । ಸಾಹಸ । ಗೋಪಧ್ಯಾನಿತ ಗೋಪದಯ ಸುರಗೋಪ ಸತ್ಕರುಣಾ । ಮನ್ಮಥ । ತಾಪಹರ ನಿರ್ಲೇಪ ನೀರದ ರೂಪಕಾವರಣಾ । ವಿಕಸಿತ ॥ ಗೋಪನೇತ್ರ ಸುಗೋಪ ಕಾಂತಿಪ್ರ । ಲಾಪ ಭಂಜಿತ ಪಾಪಸೇವಿತ । ಗೋಪಕ್ಷಮಿತ ಕೃತಾಪರಾಧ ಪರಾತ್ಪರಾತ್ಪರ ಶ್ರೀಪತೇ ಹರಿ ॥ ತೋರಿಸ್ಯೆ ॥ ೫ ॥ ಭೀಮ ರಣನಿಸ್ಸೀಮ ಶ್ರೀರವಿರಾಮ ಶ್ರೀರಾಮಾ । ಗರ್ವಿತ । ಕಾಮ ಕಾರ್ಯೋದ್ದಾಮ ಕರ ನಿರ್ನಾಮ ಸಕ್ಷೇಮಾ। ರಾಜಿತ। ಭೂಮಿಜಾನನ ಸೋಮ ಕರಕಂಜಾ ಮನೋರಾಮಾ। ತಾರಕ॥ ನಾಮ ಭಾರ್ಗವರಾಮ ದರ್ಪೋ। ದ್ದಾಮ ಕುಲವಿಶ್ರಾಮ ವಿರಚಿತ।

ಸಾಮಗಾನ ಲಲಾಮ ಕಾಂಚನ। ದಾಮ ಧಾರಣ ಶ್ರೀಮಹೀಪತೇ ॥ ತೋರಿ ಸ್ಯೈ ॥ ೭ ॥ ಬಾದೆ ಬಲು ನಿರ್ಬಂಧ ಭವಭಯದಿಂದ ಬಹಳಾಗೀ । ತಾಪದಿ । ನೊಂದು ಕುಂದುತ ಬೆಂದೆ ಕರುಣಾಸಿಂಧು ನೀನಾಗೀ । ಕೈಪಿಡಿ।ದಿಂದು ನೀ ಮುಚುಕುಂದಗೊಲಿದಿರುವಂದ ಲೇಸಾಗೀ । ತೋರಿಸಿ ॥ ಚಂದವಲಿ ದಯ ದಿಂದನಾನತ। ಬಂಧು ನಿತ್ಯಾನಂದ ಹೃದಯದಿ। ನಿಂದು ಪದ್ರಿಪು ವಂದಗೆಡಿಸಿ ದು। ದಾಂಧಮಿಹಿರ ಮುಕುಂದ ರಕ್ಷಿಸೊ ॥ ತೋರಿಸ್ಯೈ ॥ ೭ ॥ ಪಾತಕಿಯು ಧೀ ವಿತಕೆನಗಿನ್ನೀತನೆಂದೆಂಬಾ । ಮನಸಿನ । ರೀತಿಯೋ ಧ್ವಜಕೇತನುತ ಪುರುಹೂತನಿಕುರುಂಬಾ । ಅಜಮುಖ । ನೇತರವನು ಪುನೀತನೇ ರಘುಜಾತ ನೀ ಗೊಂಬಾ । ಹಟದಿ ॥ ನ್ನೀತ ಕೈಬಿಡುನಾತನಸ್ಲರ । ಜಾತದವನಾ ಪಾತಿ ಶಯ ಸಂ। ಭೂತಭೂತಿಯನಾತು ನಾ ನಿ।ಷ್ಪಾತಕಿ ಯು ಸುಪುನೀತನಹೆನ್ನೈ॥ ॥ ತೋರಿಸ್ಯೈ ॥ ೮ ॥ ದಕ್ಷವರ್ದಪತಾಕ್ಷ ಮಿತ್ರದಳಾಕ್ಷ ಶ್ರೀರಂಗಾ । ಹಾ ಟಕ । ಕಕ್ಷನಘಕುಲ ಕಕ್ಷಕಾನಳಧ್ವಕ್ಷ ನೀಲಾಂಗಾ । ನಿರ್ಜರ । ಪಕ್ಷ ಪರ ನಿಟಿಲಾಕ್ಷಸಖ ಸಂರಕ್ಷ ಭವಭಂಗಾ ॥ ಕರ್ರಿತ ॥ ತಕ್ಷಕಾಂತಕ ಲಕ್ಷ ದುರ್ಧರ। ಸೀಕ್ಷಿತಾಮಲ ಯಕ್ಷಹಾರ ಪು । ಮುಕ್ಷು ಹೃದ್ಗಮ ಮೋಕ್ಷ ದಾಯಕ।ನೀಕ್ಷಿಸನ್ನ ಕಟಾಕ್ಷದಿಂದಲಿ ॥ ತೋರಿಸ್ಯೈ ॥ ೯ ॥ ನಿನ್ನ ಪದಯುಗ ವನ್ನು ನಿತ್ಯದೊಳೆನ್ನ ಪ್ರತ್ನಮುಂದ । ದಿರಿಸುತ । ಖಿನ್ನನಾಗುತ ಘಿನ್ನ ಗತಿಯೊಳು ಮುನ್ನ ಧ್ರುವವರದಾ । ಧ್ಯಾನಿಸು।ವೆನ್ನ ವಾಂಛಿತವನ್ನು ಪಾಲಿಪು ದಿನ್ನು ನಿರ್ಭೇದಾ । ಮೇನೆನ॥ ಲೆನ್ನ ಹೃದಯೋತ್ಪನ್ನ ಭೀಷ್ಪವ । ನಿನ್ನು ಕೇಳಾ ನೆನುವದೇನ್ ಸಂ । ಪೂರ್ಣರಸವಾದೋನ್ನತದ ನಿ । ತ್ಯಾರ್ಣವದ ಸಂಪನ್ನ ಪಾಲಿಸೊ ॥ ತೋರಿಸ್ಯೈ ॥ ೧೦ ॥ ಮೂಲಪುರುಷ ವಿಶಾಲಮಹಿಮ ಸುಶೀಲ ಸುರರಾಜಾ । ಲಕ್ಷ್ಮೀ । ಲೋಲ ಮಾನುಷಲೀಲ ನಂದನೃಪಾಲ ವರ ತನುಜಾ । ಸುರಮುನಿ । ಜಾಲ ಗೋಪೀಬಾಲ ಸುಂದರ ನೀಲಕರ ನೈಜಾ । ಸದ್ಗುಣ ॥ ಶೀಲ ಶಂಕರಸಾಬಧರ ವನ । ಮಾಲ ದುಃಖಿತ ಬಾಲವರದ ದ । ಯಾಲ ಪಾಲಕ ಕಾಲಕಾಲ ಕ । ರಾಲ ನರಹರಿ ಮೂಲಿಕಾಧಿಪ ॥ ತೋರಿ ಸ್ಯೈ ॥ ೧೧ ॥ ಶ್ರೀಃ ॥

॥ ೯೫ ॥ ರಾಗ, ಸೌರಾಷ್ಟ್ರ [ಧಾಟಿ:- ಶರಣು ಶಂಕರ ಭೂಷಣಾದ್ರಿಗೆ] ತ್ರಿಪುಡೆತಾಳ

ಹ್ಯಾಗೆ ಪೋಗಲಿ ಯಮಪನಲ್ಲಿಗೆ । ಯೇನು ಕೊಡಲಿ ಶ್ರೀರಂಗಗೆ ॥ ನಾಗಶಯನನು ನಮ್ಮ ರಕ್ಷಿಪ । ರಿಕ್ತಹಸ್ತದಿ ಹೀಗೆ ನಾ ॥ ಪಲ್ಲ ॥

ಕಾಣಿಕೆಗೆ ಮನೆಯೊಳಗೆ ಯೇನು । ಕಾಣಲಿಲ್ಲವೆ ಜಾಣೆಯೇ ॥ ಜಾಣ ಕೃಷ್ಣಗೆ ಯೇನು ಕೊಟ್ಟರು । ಪ್ರಾಣನಾಥ ಸಂತುಷ್ಟನೆ ॥ ೧ ॥ ದೇವ ದಾನವರಾದಿ ಗುರು ಮೊದ। ಲಾದವರು ಇವರಲ್ಲಿಗೆ ॥ ದಾವನಾದರು ಏನು ಇಲ್ಲದೆ । ಪೋಗುವನೆ ಅವನಲ್ಲಿಗೆ ॥ ೨ ॥ ಬಾಲ್ಯಸಖನಿರುವಲ್ಲಿ ಪೋಗಲು । ಚೆಲ್ವಪುರುಷನ ಕಾಣಲು ॥ ಯೆಲ್ಲಿ ನಮಗೆ ಯೇನು ತಂದಿರಿ। ಯೆಲ್ಲಿ ಕೊಡು ಯಿಂತೆಂಬನು ॥ ೩ ॥ ಪಟ್ಟದರಸಿಯುರೆದ್ದು ಬಂದು । ಥಟ್ಟ ಶ್ರೀ ಗೋಪಾಲಗೆ ॥ ಇಷ್ಟು ಅಷ್ಟಂತೆನೆ ಮಹಿಮೆಯು। ಅಷ್ಟಭಾಗ್ಯ ಸಂಪನ್ನಗೆ ॥ ೪ ॥ ನಾರಸಿಂಹನ ದರುಶನವನೂ। ಯಾರು ಮಾಡಿದರವರಿಗೆ ॥ ಸಾರತರ ಸೌಖ್ಯ ಸುಖಂಗಳು । ಕೊಟ್ಟು ಸಲಹುವ ನಮ್ಮಗೆ ॥ ಹ್ಯಾಗೆ ॥ ೫ ॥ ಶ್ರೀ ॥

॥ ೯೬ ॥ ರಾಗ, ಕಲ್ಯಾಣಿ [ಧಾಟಿ:- ಸಾಕು ಸಾಕು ಮನುಜ] ರೂಪಕತಾಳ

ಮಂಗಳಾಂಗ ಮನ್ನಿಸು ತಪ್ಪನು । ರಂಗನಾಥ । ರಕ್ಷಿಸೈಯ್ಯ ತಂದೆ ಯನ್ನನು ॥ ಪಲ್ಲ ॥ ಮಮತೆಯಿಲ್ಲದ ಮಡದಿ ಯಾತಕೆ । ರಂಗನಾಥ । ಸುಮತಿಯಿಲ್ಲದ ಸುತನು ಯಾತಕೆ ॥ ಕುಮತಿಯುತರ ಸಂಗವೇಕೆ। ಸಮತೆ ಯಿಲ್ಲದ ಬಂಧುವೇಕೆ । ಅಮಿತ ನಿನ್ನ ಚರಣಕಮಲ ರಮಿತನಾಗದ ಮನುಜ ನೇಕೆ ॥ ೧ ॥ ಕಣ್ಣುಯಿಲ್ಲದ ರೂಪು ಯಾತಕೆ । ರಂಗನಾಥ । ಹೊನ್ನು ಇಲ್ಲದ ಬಾಳು ಯಾತಕೆ ॥ ಮುನ್ನ ಮಾಗು ಇಲ್ಲದ ಮೊಗವು । ಮಣ್ಣು ತಿಂದು ಹೋದರೇನು । ಅಣ್ಣ ನಿನ್ನ ಭಕುತಿಯಿಲ್ಲದ । ಸಣ್ಣ ಮನುಜ ಸತ್ತರೇನು ॥ ೨ ॥ ದಾನವಿಲ್ಲದ ಧನವಿದ್ಯಾತಕೆ । ರಂಗನಾಥ । ಜ್ಞಾನವಿಲ್ಲದ ವಿದ್ಯೆಯಾತಕೆ ॥ ಆಣೆಯಿಲ್ಲದ ಅರಸು ತಾನು । ಅಡವಿಪಾಲು ಆದರೇನು । ದೀನಬಂಧು ನಿನ್ನ ನಂಬದ । ಮಾನಹೀನ ಮನುಜನೇಕೇ ॥ ೩ ॥ ಮಕ್ಕಳಿಲ್ಲದ ಮನೆಯು ಯಾತಕೆ । ರಂಗನಾಥ । ಅಕ್ಕರಿಲ್ಲದ ಊಟ ಯಾತಕೇ। ಸೊಕ್ಕಿ ನಡೆವ ಬಂಟನ್ಯಾಕೆ । ಮಿಕ್ಕು ಮೀರ್ವ ಶಿಷ್ಯನೇಕೆ । ರಕ್ಕಸಾರಿ ನಿನ್ನ ಸೇರದ। ಸೊಕ್ಕು ನರಜನ್ಮವೇಕೆ ॥ ೪ ॥ ಸಾಕು ಸಾಕು ದೀನನಾದೆನು । ರಂಗನಾಥ । ಸಾಕು ಸಾಕೈ ಬೇಗ ಯನ್ನನು ॥ ಕಾಕು ಮಾಡಿಯೆ ವೈಕುಂಠ । ನಗರದೊಡೆಯ ನಾರಸಿಂಹ । ಯೇಕಭಕ್ತಿಯಿಂದಲಿರುವೆ । ನ್ಯಾಕೆ ಕೈಯ್ಯ ಬಿಡುವೆ ಧೊರೆಯೇ ॥ ಮಂಗಳಾಂಗ ॥ ೫ ॥ ಶ್ರೀ ॥

॥ ೯೭ ॥ ರಾಗ, ಘಂಟಾರವ ಅಥವಾ ಅರಬಿ, ಏಕತಾಳ.

ಶ್ರೀಮನೋಲ್ಲಭ ನಾರಾಯಣಗೇ । ಶುಭಮಂಗಲಂ ॥ ಭೂಮಿಕಾಂತಗೇ ನಿತ್ಯಾನಂದಗೇ । ಜಯಮಂಗಲಂ ॥ ಶ್ರೀಮನೋಹರ ॥ ಪಲ್ಲ ॥ ಉತ್ತಮೋತ್ತಮ ಕೋಮಲಾತ್ಮಗೆ । ಸತ್ಯವಿಭು ಸರ್ವೋತ್ತಮಗೆ । ಘನ ಸತ್ಯಸಂಧಗೆ ಶ್ರೀಮುಕುಂದಗೇ ॥ ಜಯ ಮಂಗಲಂ ॥ ಶ್ರೀಮನೋಹರ ॥ ॥ ೧ ॥ ಕಂಜಬಾಂಧವನಂತ ಭಾಸಗೆ । ಕಂಜನಾಭಗೆ ಕಾಯಜಪಿತಗೆ ॥ ಪ್ರಭಂಜನ ಪ್ರಿಯ ಸತ್ಯಕೀರ್ತಿಗೆ ॥ ಶುಭಮಂಗಲಂ ॥ ಶ್ರೀಮನೋಹರ ॥ ॥ ೨ ॥ ವೇದಸಿದ್ಧ ಅನಂತಶಾಯಿ । ಅನಾದಿಪುರುಷಗೆ ಶಾಂತಮೂರ್ತಿಗೆ ॥ ಬೋಧಸಾಕ್ಷಿಗೆ ಭಕ್ತಪ್ರೇಮಿಗೆ ॥ ಶುಭ ಮಂಗಲಂ ॥ ಶ್ರೀಮನೋಹರ ॥ ॥ ೩ ॥ ಪಂಕಜೋದ್ಭವ ವಂದ್ಯಚರಣಗೆ । ಶಂಖಚಕ್ರ ಗದಾಬ್ಜಧಾರಿಗೆ ॥ ಶಂಕರಪ್ರಿಯ ಸಾರ್ವಭೌಮಗೆ ॥ ಜಯ ಮಂಗಲಂ ॥ ಶ್ರೀಮನೋಹರ ॥ ॥ ೪ ॥ ನಾರದಾದಿ ಮುನೀಂದ್ರನುತ । ಶೋಭಾಕರಗೆ ಗುರು ನಾರಸಿಂಹಗೆ ॥ ವೀರ ವರ ಪ್ರಹಲ್ಲಾದವರದಗೆ ॥ ಶುಭ ಮಂಗಲಂ ॥ ಶ್ರೀಮನೋಹರ ॥ ॥ ೫ ॥ ಶ್ರೀ ॥

॥ ೯೮ ॥ ರಾಗ [ಧಾಟಿ: -] ತಾಳ

ಜಯ ಮಂಗಲಂ ನಿತ್ಯ ಶುಭಮಂಗಲಂ ॥ ಪಲ್ಲ ॥ ಗೋಕುಲದಲಿ ಪೊಂಗೊಳಲಿಸುತಾ । ಗೋಪಿಯರುರ ಕೂಡೆ ನಲಿದಾಡುತಾ ॥ ಮಕುಟವ ತುಳಿದು ಕಾಳಿಂಗನ ಮರ್ದಿಸಿ । ಭಕತರ ಕಾಯ್ವ ಗೋಪಾಲಕೃಷ್ಣಗೆ ॥ ॥ ಜಯ ॥ ೧ ॥ ಅಂಬುಜಪಾಣಿ ಬಿಂಬಾಧರೆಗೆ । ಅಂಬುಜಲೋಚನೆ ಪಾರ್ವತಿಗೆ ॥ ಅಂಬುಜಭವ ಪುರವಾಸನ ರಮಣಿಗೆ । ಅಂಬುಜಗಂಧಿ ಮೂಕಾಂಬಿಕೆಗೆ ॥ ಜಯ ॥ ೨ ॥ ಶೇಷಗಿರೀಶಗೆ ಸುಲಲಿತಗೆ । ಶೇಷಶಯನ ಸರ್ವೇಶ್ವರಗೆ ॥ ಭಾಸುರ ವರ ವಳಲಂಕಾಧೀಶಗೆ । ಈಶ ಶ್ರೀಗುರು ನರಸಿಂಹನಿಗೆ ॥ ಜಯ ॥ ೩ ॥ ಶ್ರೀ ॥

॥ ಕವಿ ರಾಮಕೃಷ್ಣಕೃತ ಪದಗಳು ಸಂಪೂರ್ಣಂ ॥

॥ ಶ್ರೀಮದ್ದೇಶಾರ್ಪಣಮಸ್ತು ॥

ತಲಚೇರಿ ವಾಸುದೇವ ಶ್ಯಾನುಭಾಗಕೃತ ಪದಗಳು.

॥ ೯೯ ॥ ರಾಗ, ಮುಖಾರಿ [ಧಾಟಿ:- ಶ್ರೀಪಳಲಂಕೇಶಾಯ ನಮೊ] ಏಕತಾಳ

*
ಶ್ರೀ ಭುವನೇಂದ್ರ ದಯಾವನಧಿ । ಸುಜನಾಬ್ಧಿ ಕಲಾನಿಧಿ ॥ ಪಲ್ಲ ॥
ಕಾಶೀಮಠ ಪರಂಪರೆಯೊಳು ಪ್ರಕಾಶ ।
ಶೀಸಿಪ ಸುಮತೀಂದ್ರತೀರ್ಥ ಯತಿ ನಿಯು ॥
ಮನೀಲ ಕರಾಂಬುಜಭವ ನಿರತ ಜ ।
ಠಾಕುರವ್ಯಾಸ ರಾಮ ಚರಣಾರ್ಚಕ ॥ ಶ್ರೀ ಭುವನೇಂದ ॥ ೧ ॥
ಧಿಕ್ಕರಿಸುತ್ತ ವಿಷಯಸುಖವನು ತಃ ।
ಪಕ್ವಳಗಾಗಿ ಸದ್ಬೋಧೆಯಿಂ ಮುಮುಕ್ಷರ ॥
ತಿಕ್ಕುತುದ್ಧರಿಸಲಾಜ್ಞಾನಾರಣಿ ಮತಿ ।
ಭುಕ್ಕನಿಸಿದ ದ್ವಿಜಕಮಲ ದಿವಾಕರ ॥ ಶ್ರೀ ಭುವನೇಂದ್ರ ॥ ೨ ॥
ವಂದ್ಯ ನಿಪುಣಕೋವಿದ ರೂಪದ ಪದ ।
ನೇಂದುವಿರಾಜಿತ ಸ್ವೈಭವದಿ ಸುರೇಂ ॥
ದ್ರಂ ದಿವದೊಳು ಮೆರೆದಿರುವ್ವೋಲ್ ದ್ವಿಜರೊಳ್ ।
ಗುಂ ದಿಗ್ದೇಶದ ಕೀರ್ತಿಯ ಬೆಳೆಸಿದ ॥ ಶ್ರೀ ಭುವನೇಂದ್ರ ॥ ೩ ॥
ರತವಿರಕ್ತಿ ಕೇಲಿಕಾಬ್ದದೊಳಗ ಸ ।
ವೇತ್ರಿಯಾಶ್ರಮ ಕೊಂಡುತಾಳಿಪಕ್ಷೈಯು ॥
ನತರಾಜನ ಸತ್ಕಾರದೊಳಾತನ ।
ಮಃತದಿಂ ಕಲಿಕಾಲಮಲ್ಲಿ ನೆಲಸಿದ ॥ ಶ್ರೀ ಭುವ ॥ ೪ ॥ ಮುಂದರಿಸಿದೆ.

* ಈ ಮೇಲಿನ ಪದದ ಪ್ರತಿ ಒಂದು ಸಾಲಿನ ಆದ್ಯ ಅಕ್ಷರವನ್ನು ಓದಲಾಗಿ "ಶ್ರೀಕಾಶೀಮಠಾಧಿಪತಿ ಭುವನೇಂದ್ರಗುರವೇನಮಃ" ಎಂತ ಆಗುತ್ತದೆ.

ಭೇದದೊಳಿಹ ವಸುಧೇಂದ್ರರ ಚಿತ್ತದ । ಕ್ರೋಧನಿವಾರಿಸಿ ವಿನಯ ಬೆಳಸು
ತವರ್ ॥ ಮೇದಿನಿಯುಸು ತೊರೆದ ವಾರ್ತೆಯಿಂ ದುಃ । ಖೋದಧಿಯೊಳು
ಮುಳುಗಿದ ಯಮಿರತ್ನವೆ ॥ ೫ ॥ ರೌದ್ರಿಯೊಳಲ್ಲಿಂದ ಮಂಜುಳಾಪುರ ।
ಭದ್ರ ನೃಸಿಂಹನ ಕಾಣಲ್ಕಲ್ಲಿಯ ॥ ಕ್ಷುದ್ರ ವಿವಾದ ನಿವಾರಿಸಿ ಸ್ವಜನ
ಸ । ಮುದ್ರದೊಡನೆ ಮೂಲಿಕೆಗಾಗಮಿಸಿದ ॥ ೬ ॥ ನಂತರ ಶಿಷ್ಯಸಮಾಜದ
ಸೇವೆಯ । ಸುಂ ತಳೆದಲ್ಲಿಂ ಮುಂದರಿಸ ನಗರ ॥ ಪ್ರಾಂತ್ಯದಿ ಬಿರಿದಿನ ವಾದ
ಗೆಲಿದುಃ ಶ್ರೀ । ಮಂತ ರಾಜರಿಂ ಮಾನ್ಯವ ಪಡೆದಿಹ ॥ ೭ ॥ ಗೌಡಸಾರಸ್ವತ
ದ್ವಿಜ ಚರಿತವ । ಪ್ರೌಢರರುಹುತ್ತಲ್ಲ್ಯಲ್ಲಿ ಸ್ಥಾಪನೆಯ ॥ ಪೌಡಿನಿಂದ ದೇವಾ
ಲಯ ಮಠಗಳ । ನೌಡೆತ್ತದಂತೆ ಗೈದ ಮಹಾತ್ಮರ ॥ ೮ ॥ ಕಾರಕಳದಿ
ದಾರಿಯಗೋಸುಗ ವ್ಯಪ । ಹಾರ ನಡೆಯಲದ ಜೈಸುತ ಮಂಜುಳ ॥
ಊರಲಿ ಧಾತುವಿನೊಳು ವರದೇಂದ್ರರಿ । ಗಾರಾಧ್ಯ ಚತುರ್ಥಾಶ್ರಮವಿತ್ತಿಹ
॥ ೯ ॥ ಮಂಗಳೂರಲಿ ಮಣೇಲಕಾರರ ಪ್ರ । ಸಂಗವೇಳೆ ಗೋಕರ್ಣ ಕಾಶಿ
ಕಲ ॥ ಹಂಗಳೊಳ್ ಜಾತ್ಯಾಧಿಕಾರವ ಸ್ಥಾಪಿಸಿ । ಗಂಗಾಸ್ನಾನಕೆ ಬಿಜಯಂ
ಗೈದಿದ ॥ ೧೦ ॥ ಕಾಶಿಯೊಳಿಹ ಕವಳೆಯ ಮಠವನ್ನರ । ಪಾಶದೊಳಿದ್ದುದ
ಬಿಡಿಸುತ ಯಾತ್ರೆಯ ॥ ತೋಷದಿ ಪೂರೈಸುತ ಸನ್ಮಾನದ । ಲೇಸಿನಿಂದ
ವಸುಪುರಕ್ಕೈದೊದಗಿದ ॥ ೧೧ ॥ ಮಾರ್ಗಶೀರ್ಷ ಸಿತ ಪಾಡ್ಯ ವ್ಯಯದಲಿ ।
ವರ್ಗದ ದುರ್ದಶೆ ಈಕ್ಷಿಸಲಾರದೆ ॥ ನಿರ್ಗಮಿಸಿದರೈ ಸಕಲರು ಗೋಳಿಡೆ ।
ಸ್ವರ್ಗವಾಸಮಂ ತಳೆದ ಸುಗುಣಮಣಿ ॥ ೧೨ ॥ ಹರಿಯೆ ಸರ್ವ ವಿದ್ಯಾ
ಗುಣ ಭಾಗ್ಯದ । ಶಿರಿಯನ್ನೊಯ್ದ ವಿಯೋಗದುಃಖ ಮಹ ॥ ಶರಧಿಯೊಳದ್ದು
ಕಂಗಾಣದೆಮ್ಮನು । ಧ್ಧರಿಸೈ ವರದೇಂದ್ರರಿಂದ ಕರುಣದಿ ॥ ೧೩ ॥ ಸತ್ಯ
ಕ್ಷಮಾಗುಣ ನಿಯತನೀತಿಯಾ । ಗತ್ಯವಾದ ಕ್ರಮಗಳ ಏರ್ಪಾಟವು ॥
ಜಾತ್ಯಭ್ಯುದಯದ ಚಿಂತನೆ ಕೀರ್ತಿಯು । ನಿತ್ಯ ಬೆಳಗಲಿ ಪ್ರಕೃತ ಗುರು
ಗಳೊಳವು ॥ ೧೪ ॥ ವಾಸುದೇವಶಾಣ್ಣವಿ ಮೂಲಿಕೆಯ ನಿ । ವಾಸಿಯು
ಸಕಲರನುಜ್ಞೆಯಿಂದ ರಚಿ ॥ ಸೀ ಸತ್ಕೃತಿ ಸಭೆಯೊಳು ವೋಳಲಂಕಾ ।
ಧೀಶ ನೃಹರಿ ಶ್ರೀರಮೇಶಗರ್ಪಿಸಿದ ॥ ೧೫ ॥ ಶ್ರೀ ॥

॥ ೧೦೦ ॥ ರಾಗ, ಖಮಾಚ [ಧಾಟಿ:-] ಅಷ್ಟತಾಳ

ಹಿಂಗದೆ ಮನದಣಿಯೇ । ರಂಗನಾ ಭಜಿಸೊ ॥ ರಂಗನಾ ಭಜಿಸೊ ॥
ರಾಮನ ಪೂಜಿಸೊ ॥ ಹಿಂಗದೆ ಮನದಣಿಯೆ । ರಂಗನಾ ಭಜಿಸೊ ॥ ಪಲ್ಲ ॥

ಹಿಂಗುವದು ಭವಾ । ಮಂಗಲವೀವಾ । ಕಂಗೊಳಿಪುದು ಪದವಾ । ಭಂಗ ಗಳೋಡಿಸುವಾ ॥ ರಂಗನ ಭಜಿಸೊ ॥ ೧ ॥ ಭಕ್ತಿಗೆ ನಂಟು । ಮುಕ್ತಿಗೆ ಗಂಟು । ಶಕ್ತಿಯನೀಂಟು । ಯುಕ್ತಿಯೊಳೇನುಂಟು ॥ ರಂಗನ ಭಜಿಸೊ ॥ ॥ ೨ ॥ ಬಾಳುವೆ ಮೂರಿ । ಕೂಳಿಗೆ ಪೂರಿ । ನಾಳಿಗೆ ದಾರಿ । ಕೇಳೆಲೊ ಚಿತ್ತ ದೋರಿ ॥ ರಂಗನಾ ಭಜಿಸೊ ॥ ೩ ॥ ಕಾಲವ ನೀ ನೋಡೇ । ಪಾಲನೆಯ ನೀ ಬೇಡೇ । ಶೂಲಿಸಖನ ಪಾಡೆ । ನಾಲಿಗೆಗೇನ್ಕೇಡೇ ॥ ರಂಗನಾ ಭಜಿಸೊ ॥ ೪ ॥ ದುಷ್ಟರ ಸೇರಬೇಡ । ಶಿಷ್ಟರ ದೂರಬೇಡ । ನಿಷ್ಠುರವಾಡಬೇಡ । ಕಷ್ಟವು ಹರಿ ನೋಡಾ ॥ ರಂಗನಾ ಭಜಿಸೊ ॥ ೫ ॥ ಕಾಯುವು ಸ್ಥಿರವಲ್ಲ ॥ ಮಾಯೆಯು ಬಿಡದಲ್ಲ । ಆಯವು ಬೇರಿಲ್ಲ । ಕಾನನು ಲಕ್ಷ್ಮೀನಲ್ಲಾ । ರಂಗನ ಭಜಿಸೊ ॥ ೬ ॥ ಆಶೆಯ ನೀ ಬಿಡು । ದೋಷವನೀಡಾಡು । ಕೇಶವನ ಕೊಂಡಾಡು । ತೋಷದೊಳ್ಮುಳುಗಾಡು ॥ ರಂಗನ ಭಜಿಸೊ ॥ ೭ ॥ ಯೋಚನೆ ಹೋಗದೆ । ನಾಚಿಕೆಯಾಗದೆ । ಯಾಚಿಸಬಾರದೆ । ಮೋಚನೆ ದೋರದಿಹುದೇ ॥ ರಂಗನ ಭಜಿಸೊ ॥ ೮ ॥ ವ್ಯರ್ಥವಿ ಕಾಲ ಕಳೆವೆ । ಅರ್ಥದ ಮೋಹಕ್ಕಳುವೆ । ಕೀರ್ತಿಯ ಬಿಟ್ಟು ಫಲವೇ । ಕೀರ್ತನೆಯೊಳೇನ್ ಫಲವೆ ॥ ರಂಗನ ಭಜಿಸೋ ॥ ೯ ॥ ಭಾಸುರಸಂಕಾಶ । ವಾಸುದೇವ ರಮೇಶ । ದಾಸರ ಹೃದ್ವಾಸ । ಪೋಷಿಪ ಜಗದೀಶಾ ॥ ರಂಗನ ಭಜಿಸೊ ॥ ॥ ೧೦ ॥ ಶ್ರೀಃ ॥

॥ ೧೨೧ ॥ ರಾಗ, ಕಾಂಬೋಧಿ] **ಏಕಾದಶೀಮಾಹಾತ್ಮ್ಯ.** [ತ್ರಿವುಡೆತಾಳ

ನರಹರಿ ನಾರಾಯಣ ನಮೋ । ನರಹರಿ ನಾರಾಯಣ ನಮೋ । ನರಹರಿ ನಾರಾಯಣ ನಮೋ । ನರಹರಿ ನಾರಾಯಣಂ ॥ ಪಲ್ಲ ॥ ಶ್ರೀ ನೃಸಿಂಹನ ನಾಮ ಮನುಜರ । ಘೋರ ದುರಿತವ ದಹಿಸಿ ಸುಕೃತದ । ದಾರಿಯೊಳು ನಡಸುತ್ತ ಮೋಕ್ಷ । ದ್ವಾರವನು ಹೊಗಿಸುವದು ದಿಟವಿದು ॥ ನರಹರಿ ನಾರಾಯಣ ॥ ೧ ॥ ಕ್ಷಿತಿಯೊಳತಿಪಾತಕರು ಬಹುತರ । ವ್ರತ ಹರಿಸ್ಮರಣೆಯನು ಗೈದು ಸ । ದ್ಗತಿಯ ಸಾಧಿಸಿ ಜನ್ಮಮೃತಿಯುಪ । ಹತಿ ಭವಾಬ್ಧಿಯನುತ್ತರಿಸುವರೂ ॥ ನರಹರಿ ನಾರಾಯಣ ॥ ೨ ॥ ದೃಷ್ಟಿಸುವ ಫಲಗಳಲಿ ಫಲವಹ । ಶ್ರೇಷ್ಠವಾವುದೆನುತ್ತ ಜನಪ ಯು । ಧಿಷ್ಠಿರನು ಬೆಸ ಗೊಳಲು ಕರುಣದಿ । ಜಿಷ್ಣುಸಖನಾದರದೊಳೆಂದನು ॥ ನರಹರಿ ನಾರಾ

ಯಣ ॥ ೩ ॥ ಈಸು ವ್ರತದಿ ಪವಿತ್ರವಹ ಹರಿ । ವಾಸರೆಂಬೇಕಾದಶಿಯ ವ್ರತ । ವೇ ಸಕಲ ಪುಣ್ಯಪ್ರದವು ಮಹಾ । ದೋಷಹರ ಇಷ್ಟಾರ್ಥಸಿದ್ಧಿಯು॥ ನರಹರಿ ನಾರಾಯಣ ॥ ೪ ॥ ಎಂದೆನಲು ಕೈಮುಗಿದೆರಗಿ ಸುರ । ವಂದ್ಯನೆನಗದರಾಗಮವನೊಲ । ವಿಂದಲರುಹೆನೆ ದಯದಿ ಕುಂತೀ । ನಂದನಗೆ ತಕ್ಕೈಸಿ ನುಡಿದನು ॥ ನರಹರಿ ನಾರಾಯಣ ॥ ೫ ॥ ಹಿಂದೆ ಖಳ ಪೃಥುಮಾನ್ಯನೆನಿಸುವ । ಮಂದಮತಿಯುದುಭವಿಸಿ ಯೋನಿಜ । ರಿಂದ ಮಡಿಯದ ವರಗಳನು ಅರ । ವಿಂದಸಂಭವನಿಂದ ಪಡೆದನು ॥ ನರಹರಿ ನಾರಾಯಣ ॥ ॥ ೬ ॥ ಕುಟ್ಟಿ ಗೋಬ್ರಾಹ್ಮಣರ ಸುರರನ । ಟ್ಟಟ್ಟುತಮರಾವತಿಯನ್ನಾಳಿಕಂ । ಗೆಟ್ಟು ಭಯದಲಿ ನಿರ್ಜರರು ಪರ । ಮೇಷ್ಠಿಯೊಳು ಪೊರಿದರೆಡರುಗಳ ॥ ನರಹರಿ ನಾರಾಯಣ ॥ ೭ ॥ ೀರದನ್ನಿಂದೆನುತ ಪಘಭವ । ವಾರಿಜಾಕ್ಷರ ನೆನೆಯಲವರು ವೈ । ದೋರಿ ನರದೊಗ್ಗಾಗಿ ಸರ್ವರು । ಸಾರಿದರು ಗಿರಿತಪ್ಪಲಂಗಳ ॥ ನರಹರಿ ನಾರಾಯಣ ॥ ೮ ॥ ಪಗೆ ಗೆಲುವದೆಂದೆನುತ ನಿಟ್ಟುಸು । ರುಗಳು ಬಿಡಲವರಣುಗಳಿಂ ಝುಗ । ಝುಗಿಪ ಕನ್ಯಾಕ ತಿಯು ಮೂಡಿತು । ಮಿಗೆ ಏಕಾದಶಿ ಎಂಬ ಪೆಸರಲಿ ॥ ನರಹರಿ ನಾರಾಯಣ ॥ ೯ ॥ ಬಿಟ್ಟ ವಸ್ತ್ರಾಭರಣ ಬಗೆಗಳ । ಕೊಟ್ಟು ಸರ್ವರು ಕಳುಹೆ ಸತಿ ಪೊರ । ಮಟ್ಟು ಘುರದಲಿ ಮಥಿಸ ದೈತ್ಯನ । ಕೊಟ್ಟರತಿ ಹರುಷದಿ ಪ್ರತಿಜ್ಞೆಯ ॥ ನರಹರಿ ನಾರಾಯಣ ॥ ೧೦ ॥ ಈ ಸುಖವನಿವಳಿತ್ತ ಕಾರಣ । ವಾಸವರ್ಧಕೈಮ್ಮೆ ಜಾಗರೋ । ಪಾಸವಬಂಬೇಕೆಯ ವ್ರತವ ಶಶಿ । ನೇಸರುಳ್ಳನಕಾಚರಿಸುವೆವು ॥ ನರಹರಿ ನಾರಾಯಣ ॥ ೧೧ ॥ ಧರೆಯೊಳೀ ವ್ರತವಿಸಗವಿರುತಿಹ । ನರರು ನರಕಕೆ ಬೀಳಲೆಂದಾ । ಗರುಡವಾಹನನಾಜ್ಞೆಯಾಗಲು । ಉರಗವೇಣಿಯದೃಶ್ಯವಾದಳು ॥ ನರಹರಿ ನಾರಾಯಣ ॥ ೧೨ ॥ ಮತ್ತನೇಕಾಬ್ದಗಳ ನಂತರ । ಪೃಥ್ವಿಪತಿ ರುಕ್ಮಾಂಗದನು ಜನಿ । ಸುತ್ತ ಸುರಮುನಿಯಿಂದ ವ್ರತವ ಸು । ವಿಸ್ತರದಿ ತಿಳಿದಾಚರಿಸಿದನು ॥ ನರಹರಿ ನಾರಾಯಣ ॥ ೧೩ ॥ ತನ್ನ ರಾಷ್ಟ್ರದಿ ವಾಸಿಸಿಪ ಚತು । ವರ್ಣ ಜನ ಶಿಶು ಪಶು ಸಮೇತದಿ । ಭಿನ್ನವಿಲ್ಲದೆ ನಡಸಿ ವ್ರತವನು । ಮುನ್ನತದ ಪುಣ್ಯಗಳ ಲಭಿಸಿದ ॥ ನರಹರಿ ನಾರಾಯಣ ॥ ೧೪ ॥ ಇಂತೆಸಗೆ ಮಾನುಷರು ಕಿಲ್ಬಿಷ । ವಂ ತೊರೆದು ವೈಕುಂಠ ಸಾರೆ ಕೃ । ತಾಂತಪುರ ಬರಿದಾಗಲಾ ಯಮ । ಚಿಂತಿಸಲು ಮೊರೆ ಇಟ್ಟುದೃಹಿಣಗೆ ॥ ನರಹರಿ ನಾರಾಯಣ ॥ ೧೫ ॥ ಬ್ರಹ್ಮ

ಮೋಹಿನಿ ಎಂಬ ತರುಣಿಯು । ನಿರ್ಮಿಸುತ ರುಕ್ಮಾಂಗದನ ವ್ರತ । ಪಂ ಮರಸಿ ಬಾ ಎಂದು ಕಳುಹಲು । ಸಸ್ಮಿತಿಸುತ್ತೈತಂದವಳಿಳೆಯೊಳು ॥ ನರಹರಿ ನಾರಾಯಣ ॥ ೧೬ ॥ ಮಂದರಾದ್ರಿಯೊಳ್ಸುಂದರದ ಸ । ನ್ಮಂದಿರವ ವಿರಚಿಸುತ ವೀಣಾ । ಚಂದಗಾನವನೆಸಗೆ ದೂತರು । ಬಂದು ತಿಳಿಸಿದರವನಿಪಾಲಗೆ ॥ ನರಹರಿ ನಾರಾಯಣ ॥ ೧೭ ॥ ಬಾಲ ಧರ್ಮಾಂಗದನ ಬರಿಸ ನೀ । ಪಾಲಿಸಿನ್ನೀ ವ್ರತವ ಬಿಡದೆ ಆ । ಲೋಲಲೋಚನೆಯಿರವ ನೀಕ್ಷಿಸಿ । ಲೀಲೆಯಿಂ ಮಹಿಸೆಂದು ಪೊರಟನು ॥ ನರಹರಿ ನಾರಾಯಣ ॥ ॥ ೧೮ ॥ ಕಂಡವಳ ಲಾವಣ್ಯ ಮೂರ್ಛಿಸಿ । ಎಂದುಗೆಡಲಾ ಗಜಗಮನೆ ಕರ । ಪುಂಡರೀಕದೊಳೆತ್ತಿ ನಿಲಿಸುತ । ಮಂಡಲಾಧಿಪನೊಡನುಸುರ್ದಳು ॥ ॥ ನರಹರಿ ನಾರಾಯಣ ॥ ೧೯ ॥ ಸಪ್ಪಳಿಲ್ಲ ಮುಬಿಷ್ಟೆ ಸಲಿಸಲು । ತಪ್ಪಿದರೆ ತವ ಸುತನ ಶಿರವೆನ । ಗೊಪ್ಪಿಸುವೆನೆಂದಭಯವಿತ್ತರೆ । ಒಪ್ಪಿ ನಿನ್ನಯ ರಮಣಿಯಾಪೆನು ॥ ನರಹರಿ ನಾರಾಯಣ ॥ ೨೦ ॥ ಆಗ ಭಾಷೆಯನಿತ್ತು ಲಗ್ನವ । ಸಾಗಿಸುತ ಸತಿ ಸಹಿತಲೈತಂ । ದಾಗಲಂತಃಪುರದಿ ಬಹು ದಿನ । ಭೋಗವ್ಯಾಪ್ತಿಯೊಳಿರ್ದ ನೃಪತಿಯು ॥ ನರಹರಿ ನಾರಾಯಣ ॥ ೨೧ ॥ ಒಂದು ದಿನ ಕಾರ್ತಿಕ ಏಕಾದಶೀ । ಎಂದು ಸಾರಿಸೆ ಕೇಳಿದಾ ವ್ರತ । ಪಂಥದಿಪೆನೆನೆ ಲಲನೆ ಕೇಳದೆ । ರಂದು ವಿಸ್ಮೃತಿಯೊಳಾಂತು ಬಿದ್ದನು ॥ ನರಹರಿ ನಾರಾಯಣ ॥ ೨೨ ॥ ಪಿರಿಯರಸಿ ಸಂಧ್ಯಾವಳಿಯು ಸತಿ । ಇರವ ಮಗಗರುಹಲ್ಕೆ ವ್ರತವನು । ಕರಿಸಲೆನ್ನಯ ತಲೆಯ ಕಡಿಯೆಂ । ದೆರಗೆ ಸುರರೈತಂದು ತಡೆದರು ॥ ನರಹರಿ ನಾರಾಯಣ ॥ ೨೩ ॥ ಮೋಹಿನಿಯು ಬೀಳ್ಕೊಡುತ ಭೂಪನ । ಸಾಹಸಕೆ ಮೆಚ್ಚುತ್ತ ಶಕ್ರನು । ಪಾವನ ವಿಮಾನದಲಿ ಕುಳಿಸುತ । ದೇವಲೋಕಕ್ಕೊಯ್ದ ಸನಾತನ ॥ ನರಹರಿ ನಾರಾಯಣ ॥ ೨೪ ॥ ಪುತ್ರ ಪರಿಜನ ಸಹಿತಲವನಿಗೆ । ಉತ್ತಮವ್ರತದಿಂದ ಮೋಕ್ಷವ । ನಿತ್ತು ಪಾಲಿಸಿದೊಡೆಯನಹ ಪುರು । ಷೋತ್ತಮನ ಭಕ್ತಿಯಲಿ ಭಜಿಸಿರೋ ॥ ನರಹರಿ ನಾರಾಯಣ ॥ ೨೫ ॥ ಬಳಿಕ ನರ್ಮದ ನದಿಯ ತೀರದಿ । ನೆಲಸಿರುವ ಗಾಲವ ಋಷಿಗೆ ನಿ । ರ್ಮಲ ಗುಣಾಂಬುಧಿ ಭದ್ರಶೀಲನೆಂ । ಬಲಗು ಮತಿ ಜನಿಸಿದ ಕುಮಾರನು ॥ ನರಹರಿ ನಾರಾಯಣ ॥ ೨೬ ॥ ಅರ್ಥಿಯಿಂ ಬಾಲ್ಯದೊಳು ಗಂಗಾ । ತೀರ್ಥಸ್ನಾನವ ಗೈಯ್ಯುತಚ್ಯುತ । ಮೂರ್ತಿಯಂ ಪೂಜಿಸುತಲೀ ವ್ರತ । ವರ್ತಿಸಲು ಪಿತ ಕೇಳ್ದನವನೊಳು ॥ ನರಹರಿ ನಾರಾ

ಯಣ ॥ ೨೭ ॥ ಹೇ ತರಳ ನೀ ಧರ್ಮಕೀರ್ತಿ ನೃಪತಿ । ಹೇತುವಾವುದೆನುತ್ತ ಕೇಳ ಲು । ತಾತ ಪುಡ್ತಾಕ್ ಜನ್ಮವಿವರವ । ನಾ ತಿಳಿದು ರಚಿಸುವೆನಿದನು ಕೇಳ್ ॥ ನರಹರಿ ನಾರಾಯಣ ॥ ೨೮ ॥ ಇಂದುಕುಲದಲಿ ಧರ್ಮಕೀರ್ತಿ ಯೆಂ । ಬೊಂದರಸು ಆ ಪೂರ್ವದಲಿ ಮುದ । ದಿಂದನೇಕದ ವ್ರತವ ಮಾಡಲು । ಕುಂದಿತಾ ಫಲದಿಂದ ರಾಜ್ಯವು ॥ ನರಹರಿ ನಾರಾಯಣ ॥ ॥ ೨೯ ॥ ಇಂತಿರಲು ಮೃಗವ್ಯಸನದಲಿ ಮನ । ಪಾಂತು ಸೈನ್ಯ ಸಮೇತ ಪೋಗೆ ಪ । ಥಾಂತರದಿ ತಾಸೊಪ್ಪ ಹಸುತೃಷೆ । ಯಂ ತೊರೆದು ಸುರ ನದಿಯ ಸಾರ್ವನು ॥ ನರಹರಿ ನಾರಾಯಣ ॥ ೩೦ ॥ ಮಿಂದು ಜಲವನು ಕುಡಿದು ತಿನಲೇ । ನೊಂದು ಸಿಕ್ಕದೆ ಬಳಲಿ ತೀರದಿ । ನೊಂದು ಮಲಗಿರೆ ಜಾಗರದಿ ದ್ವಿಜ । ಸಂದಣಿಯ ಕೀರ್ತನೆಯ ಕಂಡೆನು ॥ ನರಹರಿ ನಾರಾ ಯಣ ॥ ೩೧ ॥ ಚಿತ್ರಗುಪ್ತರು ಎನ್ನ ಪಾಪ ನಿ । ವೃತ್ತಿಸಿತು ಹರಿದಿನದ ವ್ರತದೊ । ಳೆನುತ್ತರುಹಿ ಉತ್ತಮ ವಿಮಾನದಿ । ಹತ್ತಿ ಸಾಲೋಕಕ್ಕೆ ಗಮಿ ಸಿದೆ ॥ ನರಹರಿ ನಾರಾಯಣ ॥ ೩೨ ॥ ನೆಲಸಿ ಬಹು ಕಲ್ಪಾಂತದಲಿ ಮನ । ವೆಳಸಿ ಸ್ವರ್ಗಕೆ ಬಂದು ಭೋಗವ । ಫಳಿಪ ಕರ್ಮವನಳವಡಿಸಲೀ । ಇಳೆ ಯೊಳಗೆ ನಿನ್ನಲ್ಲಿ ಜನಿಸಿದೆ ॥ ನರಹರಿ ನಾರಾಯಣ ॥ ೩೩ ॥ ಆದರಿನ್ನೆಲೆ ಮಜ್ಜನಕ ವೈಷ್ಣವ । ಸದಮಲ ವ್ರತ ಪೂಜೆಗೈಯ್ಯುತ । ಪದುಳದಿಂ ಪರತ್ರ ಸಾಧನ । ಮೊದಗಿಸಲು ನಾ ಮಾಳ್ಪೆ ಧಿಟವಿದು ॥ ನರಹರಿ ನಾರಾಯಣ ॥ ॥ ೩೪ ॥ ಚಂದ್ರಹಾಸ ಮಹೀಶ ಕಷ್ಟದಿ । ಬೆಂದು ಬಳಿಕೀ ವ್ರತವೆಸಗಲಾ । ಸಂದ ರಾಜ್ಯೈಶ್ವರ್ಯ ಸೌಖ್ಯಗ । ಳಂದಳದು ಸಾಯುಜ್ಯ ಪಡೆದನು ॥ ನರಹರಿ ನಾರಾಯಣ ॥ ೩೫ ॥ ಎಂದೊರೆದನೀ ಕಥೆಯ ಮುರರಿಪು । ಚಂದದಿಂ ಧರ್ಮಜಗೆ ಪೇಳ್ದುದ । ರಂದವನು ವಿಸ್ತರಿಸಿದುದ ಶ್ರವ । ಣಂದೆರೆದು ಲಾಲಿ ಪುದು ಸುಜನರು ॥ ನರಹರಿ ನಾರಾಯಣ ॥ ೩೬ ॥ ವಿದ್ಧವಿಲ್ಲದೆ ಶುದ್ಧ ದಶಮಿಯೊ । ಳಿದ್ದು ಏಕಾಂತದಲಿ ರಾತ್ರಿಯೊ । ಳೆದ್ದು ತ್ರೈಯಾಮದಲಿ ನಿರ । ವದ್ಯನನು ಸ್ಮರಿಸುತ್ತಲಿರುವದು ॥ ನರಹರಿ ನಾರಾಯಣ ॥ ೩೭ ॥ ಮರುದಿನ ಪ್ರಭಾತದೊಳು ಸ್ನಾನವ । ಕರಿಸಿ ತೀರ್ಥವ ಕೊಂಡು ಭಕ್ತಿ ಯೊ । ಳ್ನಿರಶನದಿ ದೇವಾಲಯದಿ ಜಾ । ಗರದಿ ಭಜಿಸುತ ಕಳದು ನಿಶಿ ಯನು ॥ ನರಹರಿ ನಾರಾಯಣ ॥ ೩೮ ॥ ಮಿಂದು ಇನನುದಯದಿ ಕ್ಷೀರಾ ಬ್ಧಿಯ । ಚಂದದಿಂದರ್ಚಿಸಿ ಪ್ರಸಾದದೊ । ಳೊಂದು ಭೋಜನದಿಂದ ನುತಿಸಿ

ಮು । ಕುಂದಗುತ್ತಾಸವನು ವಿರಚಿಸು ॥ ನರಹರಿ ನಾರಾಯಣ ॥ ೩೯ ॥ ನೇಮದಿಂ ಪೂಜಿಸುತಲೈದನೆ । ಯಾಮದೊಳು ನಿದ್ರೆಯನು ಗೈವೀ । ಯಾಮ ಪದಿನಾಲ್ಕರ ವ್ರತದ ಮಹಿ । ಮಾವಳಿಯು ಸಾಯುಜ್ಯವೀವುದು ॥ ನರಹರಿ ನಾರಾಯಣ ॥ ೪೦ ॥ ಅನ್ನಪಾನ ಸುಗಂಧ ತಾಂಬುಲ । ಕನ್ನಡಿಯಲಂಕಾರ ಮೈಥುನ । ರನ್ನದುಪಭೋಗಗಳ ವ್ರತದೊಳು । ಮನ್ನಿಸುವನಿಗೆ ನರಕ ತಪ್ಪದು ॥ ನರಹರಿ ನಾರಾಯಣ ॥ ೪೧ ॥ ಶ್ರೇಯಗುತ್ತಮಗತಿ ಸುಕೃತ ಪರ । ಮಾಯುಪ್ರಾಪ್ತಿಗುಪಾಯವೆನೆ ಕಾಂ । ತೇಯನೀ ವ್ರತವಾಚರಿಸಿ ಜಗತೀ ವಲಯದಿ ಪವಿತ್ರನಾದನು ॥ ನರಹರಿ ನಾರಾಯಣ ॥೪೨॥ ಅವನೀ ಮಹಿಮೆಯನು ಕೇಳುವ । ಸಾವಧಾನದಿ ವ್ರತವಗೈವನ । ಕಾವ ವಳಲಂಕೇಶನೆನುತಲಿ । ಭಾವಿಸುತ ಸ್ಮರಿಸಿರೊ ನಿರಂತರ ॥ ನರಹರಿ ನಾರಾಯಣ ॥ ೪೩ ॥ ನಿಗಮಚೋರನ ಮಡುಹಿ ಬೆನ್ನಿಲಿ । ನಗಪನಾಂತವನಿಯನು ದಾಡೆಯೊ । ಳ್ನೆಗಹಿ ನರಮೃಗನಾಗಿ ಧರೆಯಳೆ । ದಘಹರಗೆ ಜಯಜಯತು ಮಂಗಲ ॥ ನರಹರಿ ನಾರಾಯಣ ॥ ೪೪ ॥ ಝುಡಿದು ಕ್ಷತ್ರಿಯರನು ದಶಾಸ್ಯನ । ಕೆಡಹಿ ಕಂಸನ ಬಡಿದು ತ್ರಿಪುರದ । ಮಡದಿಯರ ವ್ರತಗೆಡಿಸಿ ತುರಗವ । ನಡರಿದಗೆ ಜಯಜಯತು ಮಂಗಲ ॥ ೪೫ ॥ ಪ್ರಾಸುಗಣಮಾತ್ರಾರ್ಥವಿಷಮಗ । ಳೀಸು ತಿದ್ದುತ ಕ್ಷಮಿಸಿ ರಕ್ಷಿಸು । ದಾಸನನು ವಾಂಛಿತವನಿತ್ತು ಶ್ರೀ । ವಾಸುದೇವ ರಮೇಶ ಕರುಣದಿ ॥ ನರಹರಿ ನಾರಾಯಣ ॥ ೪೬ ॥ ಶ್ರೀಃ ॥

॥ ೧೦೨ ॥ ರಾಗ, ಮುಖಾರಿ [ಧಾಟಿ:- ಶ್ರೀಭುವನೇಂದ್ರ ದಯಾನಿಧಿ] ಏಕತಾಳ

ಶ್ರೀ ಪೊಳಲಂಕೇಶಾಯ ನಮಃ । ದುರಿತೌಘನಿವಾರಕ । ಶ್ರೀ ॥ ಪಲ್ಲ ॥ ಭಟ್ಟಕಳದಿ ಪೊರಟಲ್ಲಿಗೆ ಬಂದಿಹ । ಶ್ರೀಸ್ಥ ಗೌಡಸಾರಸ್ವತದ್ವಿಜಂಗ ॥ ಭೀಷ್ಟ ಪಾಲಿಸಲ್ ಗುರುಗಳೀಯಲು ಪ್ರ । ತಿಷ್ಠೆಯೊಂದಿರುವ ವಿಠ್ಠಲಮೂರುತಿ ॥ ॥ ಶ್ರೀ ಪೊಳ ॥ ೧ ॥ ಕಾಶಿಮಠಾಧಿಪ ವಿಜಯೀಂದ್ರರ ಸಹ । ವಾಸದಿ ಕ್ರೋಧನಗರದಿಂ ದೀನರ ॥ ಪೋಷಿಪ ತಪಕದಿ ಗಮಿಸೀ ಪುರದೊಳು । ವಾಸಿಸಿಹ ನರಮೃಗೇಶ ದಯಾರ್ಣವ । ಶ್ರೀ ಪೊಳ ॥ ೨ ॥ ಕಾರಕಳದಿ ತೊಡಗಲವಾಂತರ ಜನ । ವಾರ ಸಹಿತ ಬಿಜಯಂಗೈದಿಲ್ಲಿಯು ॥ ಊರವರನು ಪೊರೆಯಲು ನೆಲೆಗೊಂಡಿಹ । ವೀರ ವೇಂಕಟನಪಾರಸುಖಪ್ರದ ॥ ಶ್ರೀ ಪೊಳ ॥ ೩ ॥ ವಾರಣಾಸಿ ಸಂಯಮಿಗಳಿಗಂಗಾ । ತೀರದಿ ಸ್ನಾನಸಮಯ ಮೈದೋರುತ ॥

ಕಾರುಣ್ಯದೊಳಿಲ್ಲಿಯಪರಿಸುತ್ತಿಹ । ಭೂರಿ ವಿಭವಪಡೆವ ಬಂಧುಮಾಧವ ॥ ॥ ಶ್ರೀ ವೊಳ ॥ ೪ ॥ ಭಾಗೀರಥಿಯಿಂ ವೇಂಕಟಾದ್ರಿಯೆಡೆ । ಗ್ಹೋಗಿಹ ಕಾಲ ಭೈರವಂಗೀ ಸ್ಥಳ ॥ ದಾಗಮ ವೃದ್ಧಿಸಿ ಕಾಣಿಕೆಕೊಳುವವ । ದ್ಯೋಗವಿತ್ತು ಸೇವೆಯ ಕೈಕೊಳ್ಳುವ ॥ ಶ್ರೀ ವೊಳ ॥ ೫ ॥ ದ್ವಾರದಿ ಜಯವಿಜಯರುಗಳಾ ಗ್ನೇಯದಿ । ಮಾರುತಸುತ ನೈಋತ್ಯದಿ ವಿಘ್ನನಿ ॥ ವಾರಕ ವಾಯುವ್ಯದಿ ಲಕ್ಷ್ಮಿಯು ನಾ । ಗಾರೀಶಾನ್ಯದಿ ಒಲ್ಮೆಸುತ್ತಿಹ ॥ ಶ್ರೀ ವೊಳ ॥ ೬ ॥ ಛತ್ರ ಠಕ್ಕೆ ಚಾಮರಧ್ವಜ ತೋರಣ । ವೇತ್ರವ್ಯಜನವಿಚಿತ್ರಯಾನಗಳ್ ॥ ಮಿತ್ರ ಜ್ಯೋತಿ ದೀವಟಿಕೆ ಖಜಿನಿ ಬಿರು । ಶಿತ್ಯಾದಿಗಳಿಂ ನಿತ್ಯದಿ ವಿಹರಿಪ ॥ ಶ್ರೀ ವೊಳ ॥ ೭ ॥ ವಾದ್ಯಭೇರಿ ಕಹಳೆ ನಗಾರಿಯು ಶಂ । ಖಧ್ವನಿ ಶ್ರುತಿಶಾಸ್ತ್ರ ಸಾಮಗಾನವು ॥ ಗದ್ಯವೇಣುವೀಣಾನರ್ತನದಿಂ । ಪದ್ಯಗೀತ ಶ್ರುತಿಗಳನಾ ಕರ್ಣಿಪ ॥ ಶ್ರೀ ವೊಳ ॥ ೮ ॥ ರಾಮನವಮಿ ದಿನ ಬ್ರಹ್ಮರಥೋತ್ಸವ । ಪ್ರೇಮದಿ ಮಾರ್ಗಶೀರ್ಷ ಪೌರ್ಣಮಿಯೊಳು ॥ ಭೂಮಿಗಧಿಕ ನೃಹರಿಯ ವರ್ಧಂತಿಯ । ನೇಮದಿ ಬಹು ನಿತ್ಯೋತ್ಸವ ಕೊಳ್ಳುವ ॥ ಶ್ರೀ ವೊಳ ॥ ೯ ॥ ದುಷ್ಟರ ಕಾರ್ಯಕೆ ಕೈಗೊಟ್ಟವ್ರೊಲೊಡ । ಬಟ್ಟಂತೋರುತ ಪ್ರೋತ್ಸಾಹಿಸಿ ಕಡೆ ॥ ಗೊಟ್ಟು ದೋಷಬಾಧಕದಿಂ ಗರ್ವವ । ಕುಟ್ಟ ಕಳೆವ ಶಿಷ್ಟರಿಷ್ಟಪ್ರದಾಯಕ ॥ ॥ ಶ್ರೀ ವೊಳ ॥ ೧೦ ॥ ಜಂಬುದ್ವೀಪದ ಭರತಖಂಡವೆಂ । ದೆಂಬೀ ಭಾರತ ವರ್ಷದಿ ಪ್ರವಹಿಪ ॥ ಶಾಂಭವಿತಟ ಮೂಲಿಕೆಯೊಳು ಶರಣರ । ಬೆಂಬಿಡವಿಹ ವಾಸುದೇವ ಮಾಧವ ॥ ಶ್ರೀ ವೊಳಲಂಕೇಶಾಯ ನಮಃ ॥ ೧೧ ॥ ಶ್ರೀಃ ॥

॥ ೧೧೩ ॥ ರಾಗ, ಹಿಂದುಸ್ಥಾನಿಭೈರವಿ [ಧಾಟಿ:- ಸರಸೀರುಹಾಂಬಕಿ ನಿನ್ನ] ಅಷ್ಟತಾಳ

ಕರುಣಿಸೆಮ್ಮನು ನರಹರಿಯೆ । ತವ । ಶರಣರ ಪೊರೆಯಲು ಮರೆವುದು ಸರಿಯೆ ॥ ಪಲ್ಲ ॥ ವರ ವೇದಶಾಸ್ತ್ರ ಪುರಾಣಗಳೊದರುವ । ಪರಿಮಾಜಿಸುವುದಚ್ಚರಿ ಜಗವರಿಯೆ ॥ ಕರುಣಿ ॥ ಅನುಪಲ್ಲ ॥ ಪರಮಪುರುಷನೆ ಸಜ್ಜನರು । ನಿನ್ನ । ಚರಣವ ಭಜಿಸುತ್ತಾಪದೆಯ ನೀಗುವರು ॥ ಪರತರ ಸುಖ ಪಡೆಯುವರು । ನೀ । ನ್ಹೊರತನ್ಯ ದೈವ ಜಗದೊಳಿಲ್ಲೆನ್ನುವರು ॥ ಪರಿಕಿಸಲೀಗವರರಿಕೆಯಾಲಿಸಲು ಬೇ । ಸರವಾಂತಿರುವದು ಥರವೆಯೆಂದೆಂಬರು ॥ ಕರುಣಿ ॥ ೧ ॥ ನತರ ರಕ್ಷಿಸುತ್ತಲಸಿದೆಯೊ । ದೋಷ । ತತಿಯ ಸಂತತ ನಿವಾರಿಸಿ ಶ್ರಮಿಸಿದೆಯೊ ॥ ಪತಿತಪಾಲನವ ತೊರದೆಯೊ । ಕಾಲ ।

ಗತಿಸಿ ಶೌರ್ಯಕೆ ಶಿಥಿಲತೆ ಎಣಿಸಿದೆಯೊ ॥ ಸುತಿಪರ ಕಾಯದಹಿತರಿಗೊಲಿವ ಕಾಲೋ । ಚಿತವೊ ಸತುವುದುಗಿಹುದೆಂದು ಬಗೆದೆಯೊ ॥ ಕರುಣೆ ॥ ೨ ॥ ಸಮಯದಂತೆಸಗಿಸಬಹುದೇ । ಜಗ । ದಮಿತಾಪವಾದಾಸ್ಪದವಾಗಬಹುದೇ ॥ ಅಮಮ ಕಾಪಟ್ಯಕೊಪ್ಪುವುದೇ । ಭಕ್ತ । ಸಮುದಾಯದ ನಂಬಿಕೆಯು ನಿಲಲಹುದೇ ॥ ಸಮತೆಯ ತೊರವುತಕ್ರಮಕೆಳಸುವರೆ ಹೇ । ಕಮಲಾಂಬಕನೆ ಮಹಿಮೆಯು ಮೆರೆಯುವುದೇ ॥ ಕರುಣೆ ॥ ೩ ॥ ಲೋಕನಡತೆಗಳ ನೋಡಿ । ಮಾಡ । ಬೇಕಾದ ಕಾರ್ಯಕುಪೇಕ್ಷೆಯ ಮಾಡಿ ॥ ಕಾಕುಗೊಳಿಸುವದೀ ರೂಢಿ । ಸಾಕು । ಸಾಕು ಮಾಡಯ್ಯ ತಡೆಯದು ನಿನ್ನ ಮೋಡಿ ॥ ವ್ಯಾಕುಲವೆಲ್ಲ ಹೋಗಾಡಿಸಿ ಸುಖವೀಯೊ । ಶ್ರೀಕಾಂತನೆ ಪಾಲಿಸೆಮ್ಮ ಕೈನೀಡಿ ॥ ಕರುಣೆ ॥ ೪ ॥ ಅಲ್ಪಜನರ ಪರಿಯಲ್ಲ । ಫಣಿ । ತಲ್ಪನೆ ದಯದಿ ಪಾಲಿಪುದೆಮ್ಮ ಸೊಲ್ಲ । ಕಲ್ಪಾಂತವು ಬಂದುದಿಲ್ಲ । ಇನ್ನು । ಬಲ್ಪಿಂದ ಸಲಹೊ ನಂಬಿರುವರಿಗೆಲ್ಲ ॥ ನೋಳ್ಪುದೇನೈ ವಾಸುದೇವ ರಮೇಶ ನಿ । ನ್ನೊಳ್ಪ್ರಾರ್ಥಿಪೆ ವ್ಯವಧಾನವು ಸಲ್ಲ ॥ ಕರುಣೆ ॥ ೫ ॥ ಶ್ರೀ ॥

॥ ೧೦೪ ॥ ರಾಗ, ಕುರಂಜಿ [ಧಾಟಿ:- ಭಜನೆಯ ಮಾಡಬಾರದೆ। ಶ್ರೀಹರಿ।] ಆದಿತಾಳ

ವರ್ಣಿಸಲೆನ್ನಳವೆ । ಸಂಪೂರ್ಣನ । ವರ್ಣಿಸಲೆನ್ನಳವೆ ॥ ಪಲ್ಲ ॥ ವರ್ಣಿಸಲಳವೆ ಕ್ಷೀ । ರಾರ್ಣವದೊಳು ವಟ । ಪರ್ಣಶಾಯಿ ನೀಲ । ವರ್ಣನ ಚರಿತವ ॥ ವರ್ಣಿಸ ॥ ೧ ॥ ಕಲ್ಮಷಚಿತ್ತನ । ಸೊಲ್ಮೆಯಿಂ ತಿದ್ದುವ । ಬಲ್ಮೆಯ ತಾಳ್ದಿಹ । ನಾಲ್ಮೊಗನಯ್ಯನ ॥ ವರ್ಣಿಸ ॥ ೨ ॥ ವಾಸುದೇವಲ । ಕ್ಷ್ಮೀಶನೆ ಅನುದಿನ । ಕ್ಲೇಶ ಬಡಿಸಿ ಮನ । ದಾಶೆ ಸಲಿಸು ಹರಿ ॥ ॥ ವರ್ಣಿಸ ॥ ೩ ॥ ಶ್ರೀ ॥

॥ ೧೦೫ ॥ ರಾಗ, ಕಾಂಬೋಧಿ [ಧಾಟಿ:- ದೂರದಿರು ಹರಿ ಮಾನ ಎರಾ] ತ್ರಿಪುಟತಾಳ

ತಾಳಲೆಂತೈ ಹರಿಯೆ । ಭವಬಾಧೆ ॥ ರಮಾಕಾಂತ ಅನಂತ ಗುಣವಂತ ರಕ್ಷಿಸು ॥ ತಾಳಲೆಂತೈ ಹರಿಯೆ । ಭವಬಾಧೆ ॥ ಪಲ್ಲ ॥ ವರ ಘೋರದುರಿತ ಪಾರಾವಾರಾ । ದಯಸಾರಾ ಉದಾರಾ ಎನ್ನ ಪಾರಗಾಣಿಸು ॥ ತಾಳಲೆಂತೈ ॥ ॥ ೧ ॥ ಕಾಪರ್ಯಾರೈ ನೀನುಳಿದಿಹಪರದಿ । ಕೃಪೆದೋರೈ ನೀ ಬಾರೈ ನಿನ್ನೊಳ್ ಸೇರೈಸಿ ಮನ ॥ ತಾಳಲೆಂತೈ ॥ ೨ ॥ ವಾಸುದೇವ ರಮೇಶ ದೀನಬಂಧು । ಜಗಜ್ಜೀವ ಕೇಶವ ಎನ್ನ ಠಾವ ಪಾಲಿಸು ॥ ತಾಳಲೆಂತೈ ॥ ೩ ॥ ಶ್ರೀ ॥

॥ ೧೧೬ ॥ ರಾಗ, ಸೌರಾಷ್ಟ್ರ [ಧಾಟಿ:- ಕೆಂಪುಮೂಗಿನ ಪಕ್ಷಿ] ಅಷ್ಟತಾಳ

ಬಪ್ಪ ಶುಭಾಶುಭ । ತಪ್ಪದಾದರೆ ನಿನ್ನಿಂ । ದಪ್ಪುದೇನಪ್ಪ ಹರಿ ॥ ಬಂದಾಪತ್ತನೀಗುತಾನಂದ ಪ್ರಾಪ್ತಿಸಲು ಗೋ । ವಿಂದ ನಿನ್ನ ಸೇವೆರ್ಗದು ॥ ೧ ॥ ಮುದ್ದಿನ ವರ ಲಿಪಿ । ತಿದ್ದಿ ಕ್ಯಾದುದರಿಂದ । ಹೊದ್ದಿ ನಾನಿದ್ದೇ ನಿನ್ನಾ ॥ ಕೈಯ್ಯ ಮುಗಿವೆ ಜಗ । ದಯ್ಯ ದಮ್ಮಯ್ಯ ಪಾಲಿ । ಸಯ್ಯ ನೀ ಸೈಯೆನಿಸಿ ॥ ॥ ೨ ॥ ಪ್ರಾರಬ್ಧಫಲ ವಿಾರ । ಬಾರದೆಂಬರಿವಿಂ । ದೂರ ನೀ ತಪ್ಪಿಸುವೆ ॥ ವಾಸುದೇವ ರಮೇಶ । ದೋಷ ಕ್ಷಮಿಸಿ ತವ । ದಾಸನ ರಕ್ಷಿಸಯ್ಯ ॥ ೩ ॥

॥ ೧೧೭ ॥ ರಾಗ, ಪೂರ್ವಿ [ಧಾಟಿ:- ಯಾದವೇಂದ್ರ ಪಾಲಿಸಯ್ಯ] ರೂಪಕತಾಳ

ಇಂಥಾ ಸುಖವಾಂತುವಂತೆ । ಸಂತತ ಪಾಲಿಸು ಹರಿ ॥ ಚಿಂತೆಯ ತೊರೆದು ರಮಾ । ಕಾಂತನಡಿ ಧ್ಯಾನಿಸುವ ॥ ಪಲ್ಲ ॥ ಮುಂಚಿನಿಹ ಸಂಚಿತದಿ । ಹೊಂಚಿದ ಪ್ರಸಂಚದೊಳು ॥ ಪಂಚಬಾಣನೈಯ್ಯನನು । ವಂಚಿಸದೆ ಧ್ಯಾನಿಸುವ ॥ ೧ ॥ ಯುಕ್ತವಹ ವಿಷಯ ವಿ । ರಕ್ತಿಯಿಂದ ಹೃದಯದಿ ॥ ಮುಕ್ತಿದಾಯಕನ ಪದ । ಭಕ್ತಿಯಿಂದ ಭಜಿಸುವ ॥ ೨ ॥ ಪಾವನದ ಠಾವನೀವ । ಭಾವಜಜನಕ ವಾಸು ॥ ದೇವ ರಮಾಧವನಡಿ । ದಾವರೆಗೆ ನಮಿಸುವ ॥ ೩ ॥ ಶ್ರೀಃ ॥

॥ ೧೧೮ ॥ ರಾಗ, ಕೇತಾರಗೌಳ [ಧಾಟಿ:- ಜಯ ಜಯ ಜಗತ್ಪ್ರಾಣ] ರೂಪಕತಾಳ

ಸಾಕು ಸಾಕು ನರಹರಿಯೆ ನಿ । ರಾಕರಿಸದೆ ನಮ್ಮನೆ । ಯಾಕುದಾಶಿಸುವೆ ಕರುಣದಿ । ನೀ ಕಾಯದೆ ಸುಮ್ಮನೆ ॥ ಪಲ್ಲ ॥ ಸದ್ಯದಿ ಪಾಪಾಂಬುಧಿಯೊಳು । ಬಿದ್ದವೈಯಜ್ಞಾನವು ॥ ತ್ವದ್ಧ್ಯಾನದ ಬುದ್ಧಿಲಿ ತಡ । ಹೊದ್ದಿದೆವು ಸುಮ್ಮಾನದಿ ॥ ೧ ॥ ಅಲ್ಪಮತಿಯೊಳಿಹ ಠಕ್ಕಿನ । ಕಲ್ಪನೆ ತಡೆಗೈವುದು ॥ ಬಲ್ಪಿಂದ ನಿವಾರಿಸಿ ಫಣಿ । ತಲ್ಪನೆ ಕೈಗ್ಯಾವುದು ॥ ೨ ॥ ಸಮಯದಂತೆ ನಡಸುವ ತವ । ಕ್ರಮವಿದೇನಾಶ್ಚರ್ಯವು ॥ ಮಮತೆಯಿಂ ನತರ ಪೊರವುದ । ರಮೆಯರಸನ ಕಾರ್ಯವೈ ॥ ೩ ॥ ದಾತನೀರ್ದು ಭಜಕರ ಮನ । ಕಾತರಿಪುದು ನೀತಿಯೋ ॥ ಹೇ ತಾರ್ಕ್ಷ್ಯಧ್ವಜ ನಮ್ಮನು । ಚೇತರಿಪುದರೀತಿಯೆ ॥ ೪ ॥ ಲಕ್ಷದೋಷವ ಕ್ಷಮಿಸುತು । ಪೇಕ್ಷಿಸದೇ ಸಾಮವಿ ॥ ರಕ್ಷಿಸೈ ಶ್ರೀವಾಸುದೇವ । ಲಕ್ಷ್ಮಿಯರಸ ಪ್ರೇಮದಿ ॥ ೫ ॥ ಶ್ರೀಃ ॥

॥ ೧೦೯ ॥ ರಾಗ, ರೇಗುಪ್ತಿ [ಧಾಟಿ:- ಚಿಕ್ಕವನೇ ಇವನು । ನಮ್ಮ] ಅಷ್ಟತಾಳ

ಮಂದರಧರನ ನೋಡಿ । ಯಶೋದೆಯ । ಕಂದ ಕೃಷ್ಣನ ಕೊಂಡಾಡಿ ॥ ಹಿಂದೆ ದೇವಕಿರುಗ್ಮಿಣಿಯರರ್ಥಿಗೋಸುಗ । ಚಂದದಿಂದ ಬಾಲರಂದವ ತಾಳ್ದಿಹ ॥ ಮಂದರ ॥ ಅನುಪಲ್ಲ ॥ ಹಡಗನೇರುತಲಿ ಬಂದಾ । ಕಾರುಣ್ಯದಿಂ । ದುಡುಪಿ ಪಟ್ಟಣದಿ ನಿಂದಾ ॥ ವಡಭಾಂಡದೊಳು ಬಲಗಿಡಿಸಿ ರಜತಪೀಠೆ । ಯಡರಿ ಮೆರೆವುತಿಪ್ಪ ಕಡಗೋಲ ಪಿಡಿದಿಹ ॥ ಮಂದರ ॥ ೧ ॥ ಆನಂದತೀರ್ಥರಿಂದ । ಸ್ಥಾಪಿತವಾಗಿ । ತಾ ನೆಲಸಿಹ ಗೋವಿಂದಾ ॥ ಪ್ರಾಣದೇವನ ಸ್ವಾತಂತ್ರ್ಯಾನುಸಾರ ಜನ । ಶ್ರೇಣಿಯು ನಲಿಹುವ ವೇಣುನಾದಪ್ರಿಯ ॥ ಮಂದರ ॥ ೨ ॥ ಅಷ್ಟಮಠಾಧಿಪರಾ । ಅರ್ಚನೆಗೆ ಸಂ। ತುಷ್ಟನಾಗುತಲವರಾ ॥ ದೃಷ್ಟಿಪಾವನವಾಗಿ ಕಷ್ಟಬಿಡಿಸುವಂಥಾ । ಸೃಷ್ಟಿಗೊಡೆಯ ಪರಮೇಷ್ಠಿ ಜನಕನಾದ ॥ ಮಂದರ ॥ ೩ ॥ ನಿತ್ಯನಿಗಮಸಾರದಿ । ಕೈಕೊಳುವನೊಂ । ಭತ್ತು ಪೂಜೆಯ ಪ್ರೇಮದಿ ॥ ಅತ್ಯಾತುರದಿ ಪದವ್ಮುತ್ತುವ ಸುಜನರ । ವೊತ್ತದಿಷ್ಟಾರ್ಥವನಿತ್ತು ತಾ ಪೊರೆಯುವ ॥ ಮಂದರ ॥ ೪ ॥ ರವಿಯು ಮಕರ ಸಾರುವಾ । ದಿನದೊಳು ವಾ। ಧವನು ರಥವನೇರುವಾ ॥ ವಿವಿಧ ವೈಭವ ಜನನಿವಹದೊಡನೆ ಭೇರಿ । ರವ ವಾದ್ಯಘೋಷದಿ ಭವನ ಸುತ್ತಲು ಬಾಹ ॥ ಮಂದರ ॥ ೫ ॥ ನೆರೆ ದ್ವಯವತ್ಸರದಿ । ಪೂಜಕರನ್ನು । ಪರಿಯಾಯದಾ ಕ್ರಮದಿ ॥ ಇರಿಸಲ್ಕೆಸವ ಬಹುತರದ ಮಹೋತ್ಸವ। ನೆರವೇರಿಸುವ ಜಗದ್ಭರಿತ ಮಹಿಮೆಯುಳ್ಳ ॥ ಮಂದರ ॥ ೬ ॥ ಸಾಸಿರಸಂಖ್ಯೆಯಲಿ । ನೆರವ ದ್ವಿಜ । ರಾಶಿ ಮೃಷ್ಟಾನ್ನದಲೀ ॥ ತೋಷಿಸಿ ಪ್ರತಿದಿನ ಪೋಷಣೆಯನು ಗೈವ । ವಾಸುದೇವ ಕ್ಲೇಶನಾಶಮುಂದಿರೇಶ ॥ ಮಂದರ ॥ ೭ ॥

॥ ೧೧೦ ॥ ರಾಗ, [ಧಾಟಿ:- ಶ್ರೀವೆಂಕಟೇಶ ನಾರಾಯಣ । ರಕ್ಷಿಸೆನ್ನಾ] ತಾಳ

ಶ್ರೀಶಾ ಸರ್ವೇಶಾ। ನಮಿಪೆ ಜಗದೀಶಾ ॥ ಪಲ್ಲ ॥ ಸತತ ನಿನ್ನಯ ಪದ। ನುತಿಸುವ ಶರಣಗೀ । ವ್ಯಥೆಯನೀಯುವದೊಳಿತಲ್ಲಲ್ಲಲ್ಲಲ್ಲ ॥ ೧ ॥ ಯೇಸುಜನ್ಮದಿ ಭಾಗ್ಯ । ದಾಸೆ ಗೈವವಂಗೆ । ಲೇಸ ಪಾಲಿಪ ದೇವ ನೃ ಸೈ ನೃ ನೃ ॥ ॥ ೨ ॥ ಶರಣಾನಪರಾಧವ । ಮರೆಯೊ ಶ್ರೀರಮಾಧವ । ಕರುಣದಿಂದಭಯವ ತಾ ತಾ ತಾ ತಾ ॥ ೩ ॥ ಶ್ರೀಶ ॥

॥ ೧೧೧ ॥ ರಾಗ [ಧಾಟಿ:- ಭಜ ಭಜ ಘನ ಜಲಧಿ ಮಾಝು] ತಾಳ

ಮಂಗಲಂ ರಥಾಂಗಪಾಣಿ ಶಾರ್ಙ್ಗಧರನಿಗೇ । ಜಯ ಮಂಗಲಂ ॥ ॥ ಪಲ್ಲ ॥ ಶಿವಕರ ಶಿವಪ್ರಿಯ ಶಿವಧರ ಶಿವಜಾಕ್ಷನಿಗೆ । ಸದಾಶಿವದಾಯಕ ಶಿವಭಂಜನ ಶಿವರಕ್ಷನಿಗೆ ॥ ಜಯ ಮಂಗಲಂ ॥ ೧ ॥ ಇಂದಿರೇಶ ಸುಂದ ರಾಸ್ಯ ನಂದಕಂದಗೆ । ಸದಾನಂದ ಸಿಂಧುಬಂಧನ ಭವಬಂಧಮೋಕ್ಷಗೆ ॥ ಜಯ ಮಂಗಲಂ ॥ ೨ ॥ ಶ್ರುತಿತತಿನುತ ರತಿಪತಿಪಿತನತಿಮತಿಯುತಗೆ । ನತಾಶ್ರಿತ ಶತಕ್ರತುಸುತ ಹಿತಕ್ಷಿತಿಧೃತ ಸುಚರಿತಗೆ ॥ ಜಯ ಮಂಗಲಂ ॥ ॥ ೩ ॥ ತುಂಗಬಲ ವಿಹಂಗರೂಢ ಸಂಗರಹಿತಗೆ । ವರ ಭುಜಂಗಶಯನ ಗಂಗೆಯ ಪಡೆದಂಗಜಪಿತಗೇ ॥ ಜಯ ಮಂಗಲಂ ॥ ೪ ॥ ಪ್ರಾಸುವಿಷಮು ಗಳ ಕ್ಷಮಿಸುವ ಭಾಸುರಾಂಘ್ರಿಗೆ । ಹೃದ್ವಾಸ ವಾಸುದೇವ ಶ್ರೀರಮೇಶ ನೃಹರಿಗೇ ॥ ಜಯ ಮಂಗಲಂ ॥ ೫ ॥ ಶ್ರೀ ॥

ಬಂಗ್ಲೆ ನಾರಾಯಣಕಾಮತ್ ಕೃತ ಪದಗಳು.

॥ ೧೧೨ ॥ ರಾಗ, ಮುಖಾರಿ [ಧಾಟಿ:- ಕಲಿಯುಗದ ಮಹಿಮೆಯು] ಝಂಪೆತಾಳ

ಕಂಡುದನು ಪೇಳ್ವೆ ಬ್ರಹ್ಮಾಂಡನಾಯಕನೆ । ಕೊಂಡೆಯವಿದಲ್ಲ ಗ್ರಹಕುಂಡಲವ ಶೋಧಿಸುತ ॥ ಪಲ್ಲ ॥ ಜಲಜಾಕ್ಷ ನಿನ್ನ ನಾಮಕೆ ಶ್ರವಣ ತಾರೆ ಕೊ । ಮೀ ಮಕರಲಗ್ನ ರಾಶಿಯು ಮಕರವು ॥ ಸಲೆ ಲಗ್ನದಲ್ಲೀರ್ಪ ಜಲತಾರಕೇಂದುದಕೆ । ಯಲಿ ನಿನಗೆ ಜಲದೊಳಾವಾಸವಾಯಿತು ಹರಿಯೇ॥ ॥ ೧ ॥ ಮನುಮಥನ ತಾತ ಕೇಳಿನಸುತನು ನಾಲ್ಕನೆಯ । ಮನೆಯೊಳಿರು ವನು ಲಗ್ನಕಧಿಪನೆನಿಸಿ ॥ ಮನದಿ ಯೋಚಿಸಲಿಕಾ ಶನಿದೆಸೆಯೊಳಾ ಕುಧರ। ವನು ಪೊತ್ತು ದಣಿದೆ ನೀ ವಸಧಿಯೊಳು ಹರಿಯೇ ॥ ೨ ॥ ಮಂಗಳನೆ ಸುಖ ಕಧಿಪ ಮಂಗಳನು ಸಿಂಗರಪ । ಸಿಂಗರಾಶಿಯೊಳು ತಾ ಕಂಗೊಳಿಸುತಾ ॥ ತುಂಗವಿಕ್ರಮನವನೆ ಸಂಘಟಿಸಿದನು ವನದಿ । ಹಿಂಗದಲೆ ಬೇರು ಮೆಲುವಂಗ ವನು ಹರಿಯೇ ॥ ೩ ॥ ವಾರಿಜಾಸನಪಿತನೆ ಕ್ರೂರ ಕ್ಷೇತ್ರದಿ ರಾಹು। ಸಾರೀರ್ಪ ರಾಶಿ ವೃಶ್ಚಿಕವೆಣಿಸಲು ॥ ಕಾರುಣಿಕನವನ ದೆಸೆಯಾರಂಭದಲಿ ನಿನಗೆ । ಘೋರರೂಪವ ತಾಳಲ್ಯಾತು ನರಹರಿಯೇ ॥ ೪ ॥ ಮಂದರೋದ್ಧರ ಕೇಳು

ಚಂದಿರನ ರಾಶಿಗಾ । ನಂದದಧಿಪತಿ ಸೂರ್ಯನಂದನನು ತಾ ॥ ನಿಂದು ಮೇಷದೊಳತ್ರಿಕಂದನ ನಿರೀಕ್ಷಿಸಲು । ಬಂದುದೈ ಭಿಕ್ಷೆಯುದರಿಂದ ನಿನಗೆಲಿ ಹರಿಯೇ ॥ ೫ ॥ ಅಂಬುಜಾಸನ ಕೇಳು ಒಂಭತ್ತರಧಿಪ ಶಶಿ । ಸಂಭವನು ಪಾಪದಿಂ ತುಂಬೀರ್ಪನೂ ॥ ಸಂಭವಿಸಲವನ ದೆಸೆಯಿಂದ ನೀ ಕ್ಷತ್ರಿಯಕ । ದಂಬ ಮರ್ದಿಸಿ ಧರ್ಮವುಂ ಬಿಟ್ಟೆ ಹರಿಯೇ ॥ ೬ ॥ ಸಿರಿಯರಸ ಕೇಳಿನ್ನು ದುರಿತಸ್ಥಾನಾಥಪತಿ । ಗುರುವೇಳನೆಯ ಮನೆಯೊಳಿರುವನದರಿಂ ॥ ಸಿರಿಯ ರುಪದೇಶವಿಂದಿರದೆ ಭಾರ್ಯೆಯನಗಲಿ । ಚರಿಸಿದೆಯರಣ್ಯದೊಳಗಿರುತ ನೀ ಹರಿಯೇ ॥ ೭ ॥ ಘೋರ ಪಾಪವಿನಾಶ ನಾರಿರಾಶಿಯು ನವಮು । ಕಾರವಿಯು ಸಾರಿ ನಿಂದಿರ್ಪನದರಿಂ ॥ ಜೋರ ವ್ಯಾಪಾರ ಪರನಾರಿಯರ ಕೂಡೆ ವ್ಯಭಿ । ಚಾರ ನಿನಗಾಯಿತು ರಮಾರಮಣ ಹರಿಯೇ ॥ ೮ ॥ ಜಾತ ಮೃತಿರಹಿತ ತವ ಜಾತಕವಿ ತೋರುತಿಹ । ಕೇತು ಕೈವಲ್ಯ ತಾರಕನಾಥನೂ । ಪೂತಬುದ್ಧಿಸ್ಥಾನವಾದನದರಿಂದಲಿಂ । ಭೂತಲದಿ ಸ್ಥಾಪಿಸಿದೆ ನೂತನ ಮತವ ಹರಿಯೇ ॥ ೯ ॥ ಪಾರವರ್ಜಿತ ಕವಿಯು ಸಾರೀರ್ಪ ದಶಮದೊಳ । ಗಾರವನಿಗಣೆಯುಂಟು ಧೀರನೆನಿಸೀ ॥ ಭೂರಿ ಮ್ಲೇಂಛರನು ಸಂಹಾರಗೈಯ್ಯುತ ತೇಜಿ । ಯೇರಿ ಮೆರೆಯುತ್ತಿರುವ ನಾರಾಯಣ ಹರಿಯೇ ॥ ೧೦ ॥ ಶ್ರೀ ॥

॥ ೧೧೩ ॥ ರಾಗ [ಧಾಟಿ:- ಪೇಳಲದೇಂ ಲೀಲೆಯ] ತಾಳ

ನರಹರಿಯಾ ನೋಡಿರೈ ॥ ಪ ॥ ಸರಸಿಜನಾಭನ । ನಿರುಕಿಸಲೀಕ್ಷಣ ಮನದಣಿಯಾ ನೋಡಿರೈ ॥ ಮನವೊರೆಯಾ ಬೇಡಿರೈ ॥ ಅನುಪ ॥ ತರಳ ಪ್ರಹ್ಲಾದನ ಮೊರೆಯನು ಕೇಳಿ । ಭರದಿಂ ನರಮೃಗ ರೂಪವ ತಾಳಿ ॥ ದುರುಳ ಹಿರಣ್ಯಕಶ್ಯಪನನು ಸೀಳಿದ । ಹರಿಯಾ ನೋಡಿರೈ ॥ ೧ ॥ ಭವಪಿತ ಭವನುತ ಭವತಾಪರಹಿತ । ಭವನಾಮಾಂಕಿತ ಭವಭವವಂದಿತ ॥ ನವ ಮನ್ಮಥಶತ ಧೃತಮೃತನೊಳು । ಮಿತಶಿರಿಯಾ ಬೇಡಿರೈ ॥ ೨ ॥ ಸುರನರ ಕಿನ್ನರನುತ ವಿಶ್ವಂಭರ । ಮಾರಹರವಂದಿತ ವಳಲಾಕಾಪುರ ॥ ವರ ಶ್ರೀಕರ ನಾರಾಯಣ ನರ । ಕೇಸರಿಯ ನೋಡಿರೈ ॥ ೩ ॥ ಶ್ರೀ ॥

॥೧೧೪॥ ರಾಗ, ಹಿಂದುಸ್ಥಾನಿಭೈರವಿ [ಧಾಟಿ:- ಸರಸೀರುಹಾಂಬಕಿ ನಿನ್ನ ।] ಅಷ್ಟತಾಳ

ಪೊರೆಯುವದೆಮ್ಮನು । ನರಹರಿ ನೀನು ॥ ಸ್ಮರಿಪೆವು ತವ ಪದ । ಸರಸಿಜಗಳನು ॥ ೧ ॥ ತರಳ ಪ್ರಹ್ಲಾದನು । ಮೊರೆಯಿಟ್ಟು ತಾನು । ಕರೆಯ

ಲಾಕ್ಷಣ ಬಂದೆ । ತ್ವರಿತದಿ ನೀನು ॥ ೨ ॥ ದುರುಳ ಹಿರಣ್ಯಾಕ । ಸುರವಸು ಸೀಳಿ । ಸುರರನ್ನು ಸಲಹಿದೇ । ಕರುಣವ ತಾಳಿ ॥ ೩ ॥ ಮಿತ್ರಮಂಡಳಿ ಶತಪತ್ರಕೆ ನೀನು । ಮಿತ್ರನಂತೆಸಗುವಿ ಮಿತ್ರತೆಯನ್ನು ॥ ೪ ॥ ಕಾರುಣ್ಯಾ ಮೃತ ವಾರಿಧಿಮೂರ್ತೆ । ನಾರಾಯಣ ಅವತಾರ ಸತ್ಕೀರ್ತೆ ॥ ೫ ॥ ಶ್ರೀ ॥

॥ ೧೧೫ ॥ ರಾಗ [ಧಾಟಿ:-] ತಾಳ

ಪಾಲಿಸು ಕರುಣದಿ ಲಾಲಿಸಿ ನುಡಿಯಾ । ಮಾಲೋಲನೆ ನಂಬಿದೆ ನಿನ್ನಡಿಯಾ ॥ ಪಲ್ಲ ॥ ಆದಿಪುರುಷ ಕೇಶವ ನಾರಾಯಣ । ಮಾಧವ ಶ್ರೀ ಗೋವಿಂದ ವಿಷ್ಣು ಮಧು ॥ ಸೂದನ ತ್ರೈವಿಕ್ರಮ ವಾಮನ ಘನ । ಶ್ರೀಧರ ಹೃಷಿಕೇಶನೆಯೆನಗನುದಿನ ॥ ೧ ॥ ಪದುಮನಾಭ ದಾಮೋದರ ದೇವಾ । ಬುದನುತ ಸಂಕರ್ಷಣ ವಾಸುದೇವಾ ॥ ಉದಧಿಶಯನ ಪ್ರದ್ಯುಮ್ನನನಿರುದ್ಧ। ಪದುಮಜಪಿತ ಪುರುಷೋತ್ತಮ ತವ ಪದ ॥ ೨ ॥ ಧೀರಾಧೋಕ್ಷಜ ನಾರ ಸಿಂಹ ಗಂ । ಭೀರಚ್ಯುತ ಸುಜನಾರ್ದನ ವರಶ್ರೃಂ ॥ ಗಾರ ಉಪೇಂದ್ರ ಹರೀ ಶ್ರೀಕೃಷ್ಣ । ಪಾರಾವಾರ ವಿಹಾರ ನಾರಾಯಣ ॥ ೨ ॥ ಶ್ರೀ ॥

॥ ೧೧೬ ॥ ರಾಗ [ಧಾಟಿ:-] ತಾಳ

ಕ್ಷೀರಸಾಗರಶಯನಾ । ವಾರಿಜದಳನಯನಾ ॥ ಹರಕೇಯೂರಾಭರಣಾ । ಶ್ರೀರಮಾನಾರಾಯಣಾ ॥ ಪಲ್ಲ ॥ ಸಗುಣಚರಿತಾ । ಜಗದ್ಭರಿತಾ । ಖಗಸಂಚರಿತಾ । ಅಘಸಂಹರಿತಾ ॥ ೧ ॥ ಬಾಲನಾ ತಪಸಿನಾ । ಜ್ವಾಲಿಯು ಅತಿಘನಾ ॥ ಉಳಿಗವಿದ ನೀ । ನಾಲಿಸು ಸುಮನಾ ॥ ೨ ॥ ಭಂಗಿಸಲ್ಪೋ ದೆವು । ಕಂಗೆಡುತ ಬಂದೆವು । ಹಿಂಗದ ವಸಂತ । ರಂಗದ ದೃಢವು ॥ ೩ ॥ ಆರೊಳು ನೂರ್ವೆವು । ಆರೊಳು ಸಾರ್ವೆವು । ತೋರು ಕರುಣ । ಸುರ ವಾರಕೀದಿನಾ ॥ ೪ ॥ ಬಾಲನು ಬಾಳಿದಾ । ಉರೆ ರೂಪ ತಾಳಿದಾ । ದುರುಳ ಹಿರಣ್ಯಕ । ಸುರವಸು ಸೀಳಿದ ॥ ೫ ॥ ಬಲಿರಾಜನ ಬಾಗಿಲ । ನೆಲೆಗೈದು ನೇಗಿಲ । ಛಲುವಿ ಪಿಡಿದು ನೆಲ । ಕಳುಹಿ ದಶಗಳ ॥ ೬ ॥ ಸುರುಚಿರ ಪೀತಾಂಬರ । ಧರ ವರದಿಗಂಬರ । ತುರಗವನೇರಿದ । ವರ ಮೂಲಿಕೆ ವರ ॥ ೭ ॥

॥ ೧೧೭ ॥ ರಾಗ [ಧಾಟಿ:- ಶ್ರೀಶ ಪದ್ಮನಾಭ ಪ್ರಾಣೇಶ ಪಾಲಿಸೊ] ತಾಳ

ಶ್ರೀಶ ಸುರಾಧೀಶ ನರಮೃಗೇಶ ಪಾಹಿಮಾಂ ॥ ಜಯ ಜಯ ॥ಪಲ್ಲ॥ ವೇದವೇದ್ಯನೇ। ನಿಖಿಲ ಭೇದಭೇದ್ಯನೇ । ಆದಿಮೂರ್ತಿ ಪುಣ್ಯಕೀರ್ತಿ ಮೋದ

ದಾತನೆ ॥ ೧ ॥ ಶಂಕರಪ್ರಿಯಾ । ನಿಶ್ಶಂಕಚಿನ್ಮಯಾ ॥ ಪಂಕಜಾಕ್ಷ ಪಾಪ ರಹಿತ । ಕಿಂಕರಾಭಯಾ ॥ ೨ ॥ ರಾಕ್ಷಸಾರಿಯು ನೀ । ಸಾಕ್ಷಕಾರಿಯೇ ॥ ತಕ್ಷಕಾರಿವಾಹ ವಿಬುಧ । ಪಕ್ಷ ರಕ್ಷಿಸೈ ॥ ೩ ॥ ಶಾಂತನಾಗೆಲೊ । ಲಕ್ಷ್ಮೀ ಕಾಂತನೀಗೆಲೋ ॥ ಶಾಂತ ಮುಖ್ಯವದೆಂದು ಕ್ರೋಧಕ್ರಾಂವ್ಯಾಕೆಲೋ ॥ ॥ ೪ ॥ ತಾಳಲಾರೆವೈ । ತಾಪ ಕೇಳಲಾರೆವೈ ॥ ಮೂಲಿಕಾಂಗಲೋಲ ಜೀವ । ಶೌರಿ ಪಾಲಿಸೈ ॥ ೫ ॥ ನಾರಾಯಣಾ । ಉಗ್ರರೂಪನೀಕ್ಷಣಾ ॥ ತೋರು ಶಾಂತವನ್ನು ಭಕ್ತೋದ್ಧಾರ ಗುಣಗಣಾ ॥ ೬ ॥ ಶ್ರೀ ॥

॥ ೧೧೮ ॥ ರಾಗ, ಭೀಮ್ [ಧಾಟಿ:- ಬುಧಸ್ತಂಗಪನೇ] ತಾಳ

ದೀನೋದ್ಧಾರೀ । ನೃಹರೀ । ಏನೋದ್ಧಾರೀ ॥ ಪಲ್ಲ ॥ ಮಂದರಧರ ಪೂರ್ಣೇಂದುವದನ ಸುರವೃಂದವಂದ್ಯ ನರನಾಟಕಧಾರೀ ॥ ೧ ॥ ವೇದ ವಿನುತ ಸನ್ಮೋದದಾತ ಬಿಂ । ಬಾಧರ ವರ ದೈತ್ಯಾಸ್ವಯುವೈರಿ ॥ ೨ ॥ ಘೋರ ಕಲುಷಸಂಹಾರಕ ವರ ಶ್ರೀ । ನಾರಾಯಣ ಸುವಿಚಾರ ವಿಚಾರೀ ॥ ॥ ೩ ॥ ಶ್ರೀ ॥

॥ ೧೧೯ ॥ ರಾಗ, ಕಲ್ಯಾಣಿ [ಧಾಟಿ:- ಸ್ಮರಣೆ ಒಂದೇ ಸಾಲದೇ। ಗೋವಿಂದನ] ಅಷ್ಟತಾಳ

ದಕ್ಷಸುತಾತನಯಾ । ಶ್ರೀಗಣಾ । ಧ್ಯಕ್ಷ ಸ್ವಪಕ್ಷನಯಾ ॥ ಪಲ್ಲ ॥ ರಕ್ಷರಕ್ಷವೈರಿ ಕ್ಷಯಾಕ್ಷಯಾ । ಇಕ್ಷುದಂಡ ತಿಲಭಕ್ಷಣಪ್ರಿಯ ॥ ಅ. ಪ. ॥ ಮೂಷಿಕವರಯಾನಾ । ಕರಧೃತ । ಪಾಶಾಂಕುಶ ನಾನಾ ॥ ಕ್ಲೇಶವರ್ಜಿತ ಗಿರೀಶಪ್ರಿಯಸುತ । ಶೇಷವಿಭೂಷಿತ ದೋಷವಿರಹಿತ ॥ ೧ ॥ ಸಿದ್ಧಿವಿನಾಯಕನೆ । ವಿದ್ಯಾ । ಬುದ್ಧಿಪ್ರದಾಯಕನೆ ॥ ಮುದ್ದು ಗಣೇಶನೆ ಸದ್ಯಕೆ ಯನ್ನೊಡ । ನಿದ್ದು ಸಲಹೊ ಸುರಸಿದ್ಧಸೇವ್ಯನೆ ॥ ೨ ॥ ಕುವಲಯ ಸನ್ಮಿತ್ರಾ । ವಂಶೋ । ದ್ಭವನವ ಸುಚರಿತ್ರಾ । ಭುವನಾಧಿಪನುತ್ತಾನಪಾದ ತನುಭ । ಧ್ರುವ ಚರಿತೆಯ ವಿವರಿಸ್ಪೊಲಿಸಗ್ಯೆ ॥ ೩ ॥ ಕ್ಷೀರಾರ್ಣವಜಾಲಾ । ಪ್ರಿಯ ಶ್ರೃಂ । ಗಾರಗಾನಲೋಲಾ ॥ ಘೋರದೈತ್ಯ ಸಂಹಾರಕ ಕಾಲಾ । ನಾರಾಯಣ ಅವತಾರ ಸುಶೀಲಾ ॥ ೪ ॥ ಶ್ರೀ ॥

॥ ೧೨೦ ॥ ರಾಗ, ಕೇತಾರಗೌಳ [ಧಾಟಿ:- ಪಾಲಿಸೈ ತ್ರಿಶೂಲಿಯೆ ಮುದದಿಂ] ಏಕತಾಳ

ಪಾಲಿಸೈ ತ್ರಿಶೂಲಿಯೇ ಮುದದಿಂ । ಕಲಿಕಾಲರುದ್ರನೇ ॥ ಪಲ್ಲ ॥ ವಂದಿಸುವೆ ನಯ । ಯಿಂದುವರ ದಯ । ಸಿಂಧು ಎನ್ನಯ । ಬಂಧ ಬಿಡಿ

ಸೈಯ್ಯ ॥ ಅಂದುಪಾಲ ಮುದ ಚಂದ ನಿಂತ ಧರೀ ॥ ಆಪದ್ಬಂಧುವೇ ನೀ ಬೇಗ । ಬಂದೀಗಲೆನ್ನನು ॥ ೧ ॥ ವ್ಯೋಮಕೇಶ ನಿನ್ನ । ನಾಮವನುದಿನ । ನಾ ಮರೆಯೆ ಗುಣ । ಧಾಮ ಮುನಿಜನ ॥ ಸ್ತೋಮವಂದ್ಯ ಬಿಲ್ವಪ್ರೇಮಿಯೆ ರಿಪುಕುಲದೀ ॥ ಭೀಮಾ ವಿರೂಪಾಕ್ಷ । ಕಾಮಾರಿ ನಂಬಿದೇ ॥ ೨ ॥ ಕ್ಲೇಶಹರ ಜಗ । ದೀಶನುತುರಗ । ನಾಶ ಭೂಷ ಗ । ಶೇಷ ಪನ್ನಗ ॥ ಶೇಷಶಾಯಿ ವೆಂಕಟೇಶ ವಿಠ್ಠಲ ಪ್ರಿಯರೀ ॥ ದಾಸರ ಕಾಯ್ವು ಕೈ । ಲಾಸನಿವಾಸನೆ ॥ ೩ ॥ ಶ್ರೀಃ ॥

॥ ೧೨೧ ॥ ರಾಗ, ಕೇತಾರಗೌಳ [ಧಾಟಿ:- ಸಾಕು ಸಾಕು ನರಹರಿಯೆ] ರೂಪಕತಾಳ

ಕಾಯಬೇಕು ದೇವದೇವ । ತೋಯಜಾಕ್ಷ ಮಾಧವ ॥ ಪ್ರಿಯನೆನ್ನ ಮನ್ನಿಸುತ । ನ್ಯಾಯದಪರಾಧವ ॥ ೧ ॥ ವೇದಚೋರನನು ವಿ । ನೋದದಿಂದಲಿ ಕೊಂದು ॥ ಮೇದಿನಿಯನ್ನು ಪೊತ್ತ । ಆದಿಸೂಕರ ವರ ॥ ೨ ॥ ತರಳ ಪ್ರಹ್ಲಾದನ । ಮೊರೆ ಕೇಳಿದಾಕ್ಷಣ ॥ ದುರುಳ ಹಿರಣ್ಯಕನ । ಕರುಳ ಕೊರಳ ಹರಿ ॥ ೩ ॥ ಪೊಡವಿ ದಾನವ ಬೇಡಿ । ಕೊಡಲಿ ಕದನ ಮಾಡಿ ॥ ಜಡಧಿಯ ನಡಸಿದ । ಕಡು ವ್ಯಭಿಚಾರಿ ಹರಿ ॥ ೪ ॥ ಬಾಲಕಿಯರ ಮನ । ಶೀಲವಿನಾಶನ ॥ ಮೂಲ ಶ್ರೀನಾರಾಯಣ । ಕಲ್ಕ್ಯಪರಾಯಣ ॥ ೫ ॥ ಶ್ರೀ

॥ ೧೨೨ ॥ ರಾಗ, [ಧಾಟಿ:- ಮಂಗಲಂ ರಥಾಂಗಪಾಣಿ] ತಾಳ

ಜಗದಂಬೆ ಭಗವತೀ ಮಯೂರವಾಹಿನೀ । ತ್ರಿಜಗ ಪೊರೆ ವಿಮಲಭಾಸೆ ವಿಶ್ವಮೋಹಿನೀ ॥ ೧ ॥ ವಾಣಿ ಸರ್ಪವೇಣಿ ಸುಕಲ್ಯಾಣಿ ಶಾರದೆ । ಗೀರ್ವಾಣಿ ಬ್ರಹ್ಮರಾಣಿ ವೀಣಾಪಾಣಿ ಸುವರದೆ ॥ ೨ ॥ ಇಂದುವದನೆ ಕುಂದರದನೆ ಮಂದಗಾಮಿನಿ । ಆನಂದದಿಂದ ಬಂದು ಪೊರೆ ವಿರಿಂಚಿಕಾಮಿನಿ ॥ ೩ ॥ ಚಂದ್ರಕಿರಣ ಕೋಟಿ ವಿಭ್ರಾಜ ರಾಜಿತೆ । ಭೂಮಂಡಲಾದಿನಾಯಕೀ ಬ್ರಹ್ಮಾಂಡಪೂಜಿತೆ ॥ ೪ ॥ ಅಜ್ಞರೆಸಗುವಜ್ಞಾನದ ಕೃತಿಯ ಲಾಲಿಸ । ಸುಜ್ಞಾನವಿತ್ತು ಪ್ರಾಜ್ಞರೆನಿಸಿ ಯೆಮ್ಮ ಪಾಲಿಸ ॥ ೫ ॥ ಘೋರ ಪಾಪ ಅಂಧಕಾರವವಿನಾಶಿನೀ । ಶ್ರೀರಮೇಶ ನಾರಾಯಣ ಸೊಸೆವಿಲಾಸಿನೀ ॥ ೬ ॥ ಶ್ರೀಃ ॥

॥ ೧೨೩ ॥ ರಾಗ, [ಧಾಟಿ:-] ತಾಳ

ಓಂ ನಮೋ ಭಗವತೇ ವಾಸುದೇವಾಯ । ನಮೋ ಭಗವತೇ ವಾಸುದೇವಾಯ ॥ ಪಲ್ಲ ॥ ವೇದೋದ್ಧರಾಯ ಭೂಧರಧರಾಯ । ಮೇದಿನಿ

ಧೃತ ಪ್ರಹ್ಲಾದರಕ್ಷ ಓಂ ॥ ೧ ॥ ವಟುರೂಪಾಯ ಪ್ರಕಟ ಕೋಪಾಯ । ಪಟುವಿಕ್ರಮ ಮರ್ಕಟದಲಾಯ ಓಂ ॥ ೨ ॥ ನಗವರಧರಾಯ ದಿಗಂಬರಾಯ । ದಿಕ್ಪಾಲಕ ತುರಗಾರೂಢಾಯ ಓಂ ॥ ೩ ॥ ಶ್ರೀಶ ॥

॥ ೧೨೪ ॥ ರಾಗ, ಶಂಕರಾಭರಣ [ಧಾಟಿ:- ಹರಿ ನಿನ್ನೊಲುಮೆಯು ಆಗುವ] ಆದಿತಾಳ

ಶ್ರೀರಮಾವರ ಸುರಚಿರ ಕರುಣಾಕರ ಪರಿಪಾಲಯ ಮಾಂ ॥ ಪಲ್ಲ ॥ ನಾರದಾದಿ ಸುರ । ವಾರವಿನುತ ಚರ । ಣಾರವಿಂದ ಮಹಿ । ನಾರಿ ಮನೋಹರ ॥ ಘೋರ ದೈತ್ಯಸಂ । ಹಾರಕ ಭಕ್ತತೋ । ದ್ಧಾರಕ ಅಘಸಂ । ಹಾರಕ ಪರತರ ॥ ೧ ॥ ಘೋರದುರಿತ । ಪರಿಹಾರಕ ಶೌರೇ । ಪಾರಮಹಿಮ ಗಂ । ಭೀರ ನರಹರೆ ॥ ಶರಣಾಗತರಂ । ಪೊರೆ ಶ್ರೀಹರಿಯೇ । ಸ್ಮರಿಸುತಲಿರುವೆವು। ನಿರುತವು ದೊರೆಯೇ ॥ ೨ ॥ ಶ್ರೀಶ ॥

ಹರಿದಾಸ ಲಕ್ಷ್ಮೀನಾರ್ಣಪ್ಪಯ್ಯಕೃತ ಪದಗಳು.

॥ ೧೨೫ ॥ ರಾಗ, ಮೋಹನ [ಧಾಟಿ:- ತೋರೇ ಬೇಗನೆ ತೋಯಜನಯನೇ] ಆದಿತಾಳ

ಸಿದ್ಧ ಸಾಧ್ಯಾರಾಧ್ಯಂ । ವಂದೇ ಗಣನಾಥಂ ॥ ಸಿದ್ಧ ಸಾಧ್ಯಾರಾಧ್ಯಂ ॥ ಪಲ್ಲ ॥ ಬುದ್ಧಿ ಜ್ಞಾನ ವೈರಾಗ್ಯಭಾಗ್ಯದಂ । ಮಧ್ವಾಂತರ್ಗತ ವ್ಯಾಸಪದ ನತಂ ॥ ಸಿದ್ಧ ಸಾಧ್ಯಾರಾಧ್ಯಂ ॥ ಅನುಪಲ್ಲ ॥ ಭಾರತಾರ್ಥ ಪರಿಚರ್ಯ ಕೋವಿದಂ । ಭಾನುಶತಾಭಂ । ಭಕ್ತಸುಲಭಂ ॥ ಸಿದ್ಧ ಸಾಧ್ಯಾರಾಧ್ಯಂ ॥ ॥ ೧ ॥ ಶರ್ವಾಣೀಕರ ಭೂಷಣಂ ವರಂ । ದುರ್ವಾರದುರಿತ ದುರ್ಗಭಂಜನಂ ॥ ಸಿದ್ಧ ಸಾಧ್ಯಾರಾಧ್ಯಂ ॥ ೨ ॥ ವಿಶ್ವಗುಣರೂಪ ವಿಶ್ವಾಸಪರಂ । ವಿಶ್ವವಂದಿತಂ ವೈಷ್ಣವಂ ವರಂ ॥ ಸಿದ್ಧ ಸಾಧ್ಯಾರಾಧ್ಯಂ ॥ ೩ ॥ ಲಕ್ಷ್ಮೀನಾರಾಯಣ ಪದಾಶ್ರಿತಂ । ಸುಕ್ಷೇಮಪ್ರದಂ । ಸುಜನೌಘ ಮುದಂ ॥ ಸಿದ್ಧ ಸಾಧ್ಯಾರಾಧ್ಯಂ ॥ ೪ ॥ ಶ್ರೀ ॥

॥ ೧೨೬ ॥ ರಾಗ, ಖಮಾಚ [ಧಾಟಿ:- ಸಾರಸಸಮಮುಖಿ ಪರಮಪಾವನ] ಆದಿತಾಳ

ಶ್ರೀಗಜವಕ್ತ್ರ ಪವಿತ್ರ ನಮೋ । ಮನುಮಥಜಿತ ಸುತನಯ ॥ ಶ್ರೀ ಗಜವಕ್ತ್ರ ॥ ಪಲ್ಲ ॥ ಬಾಗುವೆ ಶಿರಶರಣಾಗು ಶರಣ್ಯ. ಸುರೌಘಸನ್ನುತ ಮಹಾಗುಣಸಾಗರ ॥ ಶ್ರೀಗಜವಕ್ತ್ರ ॥ ಅನುಪಲ್ಲ ॥ ಸಿದ್ಧ ಸಮೂಹಾರಾಧ್ಯ

ಪದದ್ವಯ ಶೋಭಾ । ಸೂರ್ಯಾಭಾ । ಶುದ್ಧಾತ್ಮ ಫಣಿಪ ಬದ್ಧಕಟಿ ವಿಗತ ಲೋಭಾ ॥ ಹೃದ್ಯಜನದುರಿತ ಛಿದ್ಯವಿನಾಯಕ । ವಿದ್ಯಾದಿ ಸಕಲ ಬುದ್ಧಿ ಪ್ರದಾಯಕ ॥ ಶ್ರೀಗಜವಕ್ತ್ರ ॥ ೧ ॥ ಏಕದಂತ ಚಾಮೀಕರ ಖಚಿತವಿಭೂಷಾ। ಗಣೇಶಾ । ಪಾಕಹಪ್ರಮುಖ ದಿವೌಕಸ ಪೂಜ್ಯವಿಲಾಸಾ ॥ ಶೋಕರಹಿತ ವಿಪ್ರಾಕುಲ ಮಾನಸ । ಲೇಖಕಾಗ್ರಣಿ ಪರಾಕೆನ್ನ ಬಿನ್ನಪ ॥ ಶ್ರೀಗಜವಕ್ತ್ರ ॥ ॥ ೨ ॥ ವರ ಮಂಗಲಪುರ ಶರಭ ಗಣೇಶ್ವರ ಧೀರಾ । ಉದಾರಾ । ಸುರುಚಿರ ಶುಕ್ಲಾಂಬರಧರ ವಿಘ್ನವಿದಾರಾ ॥ ಹರಿ ಲಕ್ಷ್ಮೀನಾರಾಯಣ ಶರಣರ ಗುರು ಗುಹಾಗ್ರಜ ಮನೋಹರ ಸುಚರಿತ ॥ ಶ್ರೀಗಜವಕ್ತ್ರ ॥ ೩ ॥ ಶ್ರೀ ॥

॥ ೧೨೭ ॥ ಶ್ರೀರಾಗ. [ಧಾಟಿ:- ವನಜಾಸನ ವಿನುತಾನತ] ರೂಪಕತಾಳ

ನಲಿದಾಡಿದಳ್ ನಳಿನಾಂಬಕಿ । ನಲಿದೆಮ್ಮನು ಸಲಹಲ್ಕೀಸುಗ ॥ ॥ ನಲಿದಾಡಿದಳ್ ॥ ಪಲ್ಲ ॥ ಸುಲಲಿತ ವೀಣಾಪಾಣೇ । ಜಲಜೋದ್ಭವ ರಮಣೀ । ಸುಗುಣೀ ॥ ನಲಿದಾಡಿದಳ್ ನಳಿನಾಂಬಕಿ ॥ ಅನುಪಲ್ಲ ॥ ಕೃತಿಪಸುತೆ ಕೃಪಾನ್ವಿತೇ । ಶ್ರುತಿಸಮ್ಮತ ಗೀತೆ ॥ ಪ್ರತಿರಹಿತೇ ಸತಿಪೂಜಿತೆ । ರತಿಯಾಮಿತ ಶೋಭಿತೆ । ಧೃತಿಸಂಭೃತಿ ಮತಿದಾಯಕಿ ॥ ನಲಿದಾಡಿದಳ್ ॥ ॥ ೧ ॥ ಇಭೇಂದ್ರಗಮೆ । ವಿಧುಮುಂಡಲೇ । ನಿಭಮುಖಿ ಶಿಖಿಯಾನೆ ॥ ಅಭಯಪ್ರದೆ ಅಖಿಲೇಶ್ವರಿ। ಸುಭುಜೆ ಶುಭದೆ ವಿಭುದೆ । ಯುಭವೆ ಸದ್ವಿಭವಾಸ್ಪದ ॥ ॥ ನಲಿದಾಡಿದಳ್ ॥ ೨ ॥ ಪರಾಂಬರಿಸು ಪದಾಶ್ರಿತನ । ಪ್ರಭಾಕರ ಶತಾಭೇ ॥ ಹರಿ ಲಕ್ಷ್ಮೀನಾರಾಯಣೆ । ಶರಣೇ ರತುನಾಭರಣೇ । ಕರುಣಾರಸ ವರುಣಾಲಯೇ ॥ ನಲಿದಾಡಿದಳ್ ॥ ೩ ॥

॥ ೧೨೮ ॥ ರಾಗ ಕಲ್ಯಾಣ [ಧಾಟಿ:- ಕರಿವರದಾ ಬೇಗ ಬಾ] ಆದಿತಾಳ

ದಯಮಾಡಿ ನಡಿಸು। ಶಾರದೇ । ದಯಮಾಡಿ ನಡಿಸೇ ॥ ಪಲ್ಲ ॥ ಹೃದಯಾಂಗಣದಲಿ ಸದನವ ಮಾಡುತ। ವಿಧವಿಧ ನವರಸಮುದಯಿಸುವದನಕ ॥ ॥ ದಯಮಾಡೀ ನಡಿಸೆ ॥ ೧ ॥ ಭೃಂಗಕುಂತಳೆ ಕೃಪಾಪಾಂಗೆ ಬ್ರಹ್ಮಾಣಿ । ಕುರಂಗನಯನೆ ಶ್ರೀರಂಗಭಕ್ತಿಯಾ ॥ ದಯಮಾಡೀ ॥ ೨ ॥ ಭೂರಿ ಶಾಸ್ತ್ರ ವಿಚಾರವ ಪಾಲಿಸೆ । ಧೀರ ಲಕ್ಷ್ಮೀನಾರಾಯಣನ ಸೊಸೆ ॥ ದಯಮಾಡಿ ನಡಿಸೆ । ಶಾರದೆ ॥ ೧ ॥

॥ ೧೨೯ ॥ ರಾಗ, ಆನಂದಭೈರವಿ [ಧಾಟಿ:- ॥ ಕೃತಿ ॥] ಆದಿತಾಳ

ಸುಬ್ರಹ್ಮಣ್ಯ ಸ್ವಾಮಿತೇ ನಮೋ । ಶರಣಾಗತರ್ಗೆ ನಿರ್ಭಯವ ಪಾಲಿಸೊ ಪ್ರೇಮಿೂ ॥ ಪಲ್ಲ ॥ ಅಭ್ರ ವಾಹನಾದಿ ದೇವ । ಸಭ್ಯ ಸಂಭವಿತ ಜಗ । ದಭ್ಯುದಯಾ । ತೇಜೋಮಯಾ । ಕರ್ಬುರಾಂತಕ ನಿಶ್ಯೋಕ ॥ ಸುಬ್ರಹ್ಮಣ್ಯ ॥ ॥ ಅನುಪಲ್ಲ ॥ ಭಾವ ಭಕ್ತಿಭಾಗ್ಯಶೂನ್ಯರು । ನಿನ್ನಯ ಪಾದ । ಸೇವೆಗಾಲಸ್ಯವ ಮಾಳ್ಪರು । ಕೇವಲ ದುರ್ಜನರು ಬಾರರು । ದೇವದೇವ ನಿನ್ನ ಕರುಣಾವ ಲಂಬಿಗಳನ್ನೆಲ್ಲ । ಕಾವನೇ ಮಹಾನುಭಾವನೇ ॥ ಸುಬ್ರಹ್ಮಣ್ಯ ಸ್ವಾಮಿತೇ ॥ ॥ ೧ ॥ ಚಂದ್ರಸೂರ್ಯರಿರುವ ತನಕ । ಶಿವಬ್ರಾಹ್ಮಣ । ರಿಂದ ಪೂಜೆಗೊಳ್ಳೊ ಷಣ್ಮುಖ । ವಂದನೀಯ ಪಾರ್ವತೀಯ । ನಂದನ ನಳಿನಾಯತಾಕ್ಷ । ಇಂದುಶೇಖರ ಕುಮಾರ ಸ್ಕಂದನೇ । ನಿತ್ಯಾನಂದನೇ ॥ ಸುಬ್ರಹ್ಮಣ್ಯ ಸ್ವಾಮಿ ತೇ ॥ ೨ ॥ ಪಾವಂಜಾಖ್ಯ ಸುಕ್ಷೇತ್ರ ವಾಸ । ಪೊರೆಯೊ ಪರಮೇಶಾ । ಕೇವಲ ವಿಜ್ಞಾನ ಪ್ರಕಾಶ । ಭಾವಜೋಪಮ ಲಾವಣ್ಯಾ । ಕೋವಿದಾಗ್ರಗಣ್ಯಾ । ಮಹದೇವ ಲಕ್ಷ್ಮೀನಾರಾಯಣನ । ಸೇವಕಬುದ್ಧಿ ದಾಯಕಾ ॥ ಸುಬ್ರಹ್ಮಣ್ಯ ಸ್ವಾಮಿತೇ ॥ ೩ ॥ ಶ್ರೀಃ ॥

॥ ೧೩೦ ॥ ರಾಗ, ಕಲ್ಯಾಣಿ [ಧಾಟಿ- ಹರಿ ಕೃಷ್ಣ ಎನಬಾರದೇ] ಅಷ್ಟತಾಳ

ಕೈಯ್ಯ ಮುಗಿವೆ ಗುರುರಾಯಾ । ಶರಣು ಜಗ । ದಯ್ಯನೇ ಬಾಹು ಲ್ಲೇಯಾ ॥ ಪಲ್ಲ ॥ ವಯ್ಯನೆ ಬಿನ್ನಪಗೈಯುವೆ ಕರುಣಾಳು । ಧೈರ್ಯ ಸಾಹಸ ಗುಣ । ಧುರ್ಯನೆ ಜಯ ಜಯ ॥ ಕೈಯ್ಯ ಮುಗಿವೆ ॥ ಅನುಪಲ್ಲ ॥ ವ್ಯರ್ಥ ಜನ್ಮವಾಯಿತು । ಹರಿಯ ಸ್ಮರಣೆ । ಗೊತ್ತು ಇಲ್ಲದೆ ಹೋಯಿತು ॥ ಉತ್ತ ಮೋತ್ತಮ ಗುಣವ ಪಾಲಿಸು । ಭೃತ್ಯವತ್ಸಲ ಭಯನಿವಾರಣ । ಸತ್ಯ ಮಾರ್ಗದಿ ನಡಸು ಶಂಕರ । ಪುತ್ರ ಪುಣ್ಯಚರಿತ್ರ ಭರ್ತನೆ ॥ ಕೈಯ್ಯ ಮುಗಿವೆ ॥ ೧ ॥ ತಾಮಸ ಗುಣಗಳನೂ । ಪರಿಹರಿಸು ನಿ । ಸ್ಸೀಮಮಹಿಮನೆ ನೀನೂ ॥ ಶ್ರೀಮನೋಹರ ನಿಷ್ಠೆ ಸಜ್ಜನ । ಸ್ತೋಮ ಸಂಘವನಿತ್ತು ದುರ್ಜನ । ಸೀಮೆ ಯೊಳು ಪೊಕ್ಕಿಸಿದರೆನ್ನ ಸು । ಧಾಮಯೂಖಾಸ್ಯನೆ ಮಹೇಶನೆ ॥ ಕೈಯ್ಯ ಮುಗಿವೆ ॥ ೨ ॥ ಭೂಮಿಗಧಿಕವೆನಿಪಾ । ಪಾವಂಜಾಖ್ಯ । ಗ್ರಾಮಾಧಿಪತಿ ನಿಷ್ಪಾಪಾ ॥ ಕಾಮಿತಾರ್ಥವನೀವ ಯೋಗಿಲ । ಲಾಮ ಲಕ್ಷ್ಮೀನಾರಾಯಣನ ಮ । ಹಾಮಹಿಮೆಗಳ ಪೊಗಳಿ ಹಿಗ್ಗುವ । ಕೋಮಲಾಂಗ ಸುಮಂಗಲಪ್ರದ ॥ ॥ ಕೈಯ್ಯ ಮುಗಿವೆ ॥ ೩ ॥ ಶ್ರೀಃ ॥

॥ ೧೩೧ ॥ ರಾಗ, ಹಂಸಧ್ವನಿ [ನೋಟು, ಬ್ಯಾಂಡುಚಾಲು] ದಾದರತಾಳ

ವಲ್ಲೀದೇವಿಯ ವಲ್ಲಭನೇ । ಬಲ್ಲಿದ ಭಕ್ತಗೆ ಸುಲ್ಲಭನೇ ॥ ಸಲ್ಲಲಿತ ಪಾದ । ಪಲ್ಲವ ಭಜಿಸುವ । ರೆಲ್ಲರ ಮನಸಿನೊಳುಲ್ಲಸನೇ ॥ ವಲ್ಲಿದೇವಿಯ ॥ ೧ ॥ ವೃಂದಾರಕ ಮುನಿ ವಂದಿತನೇ । ಕಂದರ್ಪಾಮಿತ ಸುಂದರನೇ ॥ ಸ್ಕಂದನೆ ಸಚ್ಚಿದಾ । ನಂದನೆ ಪಾರ್ವತಿ । ನಂದನ ಸದ್ಗುಣ ಮಂದರನೇ ॥ ವಲ್ಲೀದೇವಿಯ ॥ ೨ ॥ ತಾರಕದೈತ್ಯ ಸಂಹಾರಕನೇ । ಸೇರಿದ ಭಕ್ತೋದ್ಧಾರಕನೇ ॥ ಮಾರಾರಿಯ ಸುಕುಮಾರನೆ ಧೀರನೆ । ಚಾರು ಮಯೂರ ತುರಂಗಮನೇ ॥ ವಲ್ಲೀದೇವಿಯ ॥ ೩ ॥ ಲಕ್ಷ್ಮೀನಾರಾಯಣ ಪ್ರಿಯನೇ । ರಕ್ಷಿಸರಿಂಗತಿ ದುಃಖದನೇ ॥ ಕುಕ್ಕುಟ ವಜ್ರಾಭಯ ಶಕ್ತಿಹಸ್ತನೇ । ಪ್ರಖ್ಯಾತ ಪಾವಂಜಾಖ್ಯಪುರನರನೇ ॥ ವಲ್ಲೀದೇವಿಯ ವಲ್ಲಭನೇ । ಬಲ್ಲಿದ ಭಕ್ತಗೆ ಸುಲ್ಲಭನೇ ॥ ೪ ॥ ಶ್ರೀ ॥

॥ ೧೩೨ ॥ ರಾಗ, ಭೈರವಿ [ಧಾಟಿ:- ಪಿಡಿಯೆನ್ನ ಕೈಯ । ರಂಗಯ್ಯ] ಅಷ್ಟತಾಳ

ಪಿಡಿಯೆನ್ನ ಕೈಯ್ಯ । ಜಗನ್ಮಯ । ಪಿಡಿಯೆನ್ನ ಕೈಯ್ಯ ॥ ಪಲ್ಲ ॥ ಪಿಡಿಯನ್ನ ಕೈಯ್ಯ ನಿ । ಷ್ಕಡಿದಾವರೆಯುಲ್ಲಿ । ವ್ಯಥವಾದ ಮನವ ಬೆಂ । ಬಿಡದೆನಗೀಯಯ್ಯ ॥ ಪಿಡಿಯೆನ್ನ ॥ ಅನುಪಲ್ಲ ॥ ಪಾಮರಮತಿಯಾ । ಪಾಪಾತ್ಮರ । ಸ್ತೀಮಾಧಿಪತಿಯಾ ॥ ಕಾಮುಖ ಪರದಾರಾ । ಭ್ರಾಮಕತಾಮಸ । ಧಾಮನ ಕಪಟವಿ । ರಾಮ ಕುಧೀಮನ ॥ ವ್ಯೋಮಕೇಶ ಭವತ್ಪದಾಶ್ರಿತ । ನಾಮಮತ್ಕಾರದಲಿ ಪಾಲಿಸು । ಹೈಮವತಿಪತಿ ಕಾಮಹರ ಸು । ತ್ರಾಮವಂದಿತ ಸೋಮಶೇಖರ ॥ ಪಿಡಿಯೆನ್ನ ಕೈಯ್ಯ ॥ ೧ ॥ ದುಷ್ಟದುರ್ಜನನಾ । ದುರಾಚಾರ । ಭ್ರಷ್ಟಜೀವನನಾ ॥ ನುಟ್ಟಿದ ನೆಲ ಮುನಿ । ಯುವನ ಕೃತಘ್ನಕ । ನಿಷ್ಟಕಾಲುಷ್ಯದ । ಘಟ್ಟ ಚೇತನನೆನ್ನ ॥ ಥಟ್ಟನೇ ದಯವಿಟ್ಟು ಸರ್ವಾಭೀಷ್ಟದಾಯಕನಾಗಿ ಕರುಣಾ । ದೃಷ್ಟಿಯಿಂದಲಿ ನೋಡು ಸನ್ಮನ । ಏಷ್ಟರಸ್ಥ ಶಿವಾಷ್ಟಮೂರುತಿ ॥ ಪಿಡಿಯೆನ್ನ ಕೈಯ್ಯ ॥ ೨ ॥ ಸತ್ಯಬಾಹಿರನಾ । ಪ್ರಪಂಚಪ್ರ । ವೃತ್ತಿಯೊಳಿಹನಾ ॥ ಅತ್ಯಂತಪಾಪಿ ಕು । ಚ್ಚಿತ್ತ ಮದಾಂಧ । ನುನ್ಮತ್ತಮಾತಂಗ ವಿ । ರಕ್ತಿವಿಹೀನನ ॥ ಎತ್ತ ಎನ್ನತ್ತಿತ್ತ ನೋಡದೆ । ಮತ್ತೆ ಕಾವ ಸಮರ್ಥರ್ಯಾರೈ । ಸತ್ವನಿಧಿ ಸುರಮೊತ್ತ ಪೂಜಿತ । ಮೃತ್ಯುಹರ ಶ್ರೀಕೃತ್ತಿವಾಸನೆ ॥ ಪಿಡಿಯೆನ್ನ ಕೈಯ್ಯ ॥ ೩ ॥ ಎಣಿಸಲುಬ್ಯಾಡಾ । ಎನ್ನಪರಾಧ । ಗಣಿತಕ್ಕೆ ಕೂಡಾ ॥ ಗುಣಗಣನಿಧಿ ಲಕ್ಷ್ಮೀ । ನಾರಾಯಣ ಸಖ । ದಣಿಯ

ಲೊಲ್ಲೆ ದಯ। ಮಾಡೆನಗೀಗಲೆ ॥ ಫಣಿಪ ಕುಂಡಲ ಪಾರ್ವತೀಪತಿ । ಪ್ರಣತ ಜನ ಮಂದಾರ ನಿರ್ಮಲ । ಪ್ರಣವರೂಪನೆ ಮಾತಿಕಾಪುರ । ಮಣಿ ಮಹಾ ಲಿಂಗೇಶ ಬೇಗನೇ ॥ ಪಿಡಿಯೆನ್ನ ಕೈಯ್ಯ ॥ ೪ ॥ ಶ್ರೀ ॥

॥ ೧೩೩ ॥ ರಾಗ, ಸುರುಟ [ಧಾಟಿ:- ಪಾಲಿಸು ಶ್ರೀಹರಿಯೇ] ಆದಿತಾಳ

ಪಾಲಿಸು ಮಹಮ್ಮಾಯೆ । ಕರುಣ ಕ। ಟಾಕ್ಷದಿಂದಲಿ ತಾಯೆ ॥ಪಲ್ಲ॥ ದಾಕ್ಷಾಯಣಿ ದೈತ್ಯಾಂತಕಿ ವರ ನಿ। ಲಾಕ್ಷನ ರಾಣಿ ನಿರೀಕ್ಷಿಸು ಜನನೀ ॥ ರಕ್ಷಿಸು ಮಹಮಾಯೇ ॥ ಅನುಪಲ್ಲ ॥ ವಾಸವಮುಖವಿನುತೆ । ರವಿಸಂ। ಕಾಶೆ ಸುಗುಣಯೂಥೇ ॥ ಭಾಸುರ ಮಣಿಗಣಭೂಷೆ ತ್ರಿಲೋಕಾ । ಧೀಶೆ ಭಕ್ತ ಜನಪೋಷೆ ಪರೇಶೇ ॥ ಪಾಲಿಸು ಮಹಮ್ಮಾಯೇ ॥ ೧ ॥ ಗುಹಗಣಪರ ಮಾತೆ । ದುರಿತಾ । ಪಹೆ ಮರ್ಜನಘಾತೆ ॥ ಬಹು ಕಾಮಿತಪ್ರದೆ ಭಜಕ ಜನೋರ್ಚಿತೆ । ಮಹಿತೆ ಯೋಗಿಹೃದ್ಗುಹನಿವಾಸಿನಿಯೆ ॥ ಪಾಲಿಸೆ ಮಹ ಮ್ಮಾಯೆ ॥ ೨ ॥ ಶುಂಭಾಸುರಮಥನೀ । ಸುರನಿಕು। ರುಂಬಾರ್ಚಿತೆ ಸುಮ ನೀ ॥ ರಂಭಾದಿ ಸುರನಿತಂಬಿನಿ ಜನಕ । ದಂಬ ಸೇವಿತ ಪದಾಂಬುಜೆ ಗಿರಿಜೇ ॥ ಪಾಲಿಸು ಮಹಮ್ಮಾಯೆ ॥ ೩ ॥ ಅಷ್ಟಾಯುಧಪಾಣಿ । ಸದಾ ಸಂ । ತುಷ್ಟೆ ಸರಸವಾಣೀ ॥ ಸೃಷ್ಟಿಲಯೋದಯಕಾರಿಣಿ ರುದ್ರನ । ಪಟ್ಟದ ರಾಣಿ ಪರಾಕು ಕಲ್ಯಾಣೀ ॥ ಪಾಲಿಸು ಮಹಮ್ಮಾಯೆ ॥ ೪ ॥ ನೇತ್ರಾ ವತಿ ತಟದಾ । ವಟಪುರ । ಕ್ಷೇತ್ರಮಂದಿರೆ ಶುಭದಾ ॥ ಸುತ್ರಾಣಿ ಲಕ್ಷ್ಮೀ ನಾರಾಯಣ ಸ। ರ್ವತ್ರಭರಿತೆ ಲೋಕತ್ರಯನಾಯಕಿ ॥ ಪಾಲಿಸು ಮಹ ಮ್ಮಾಯೆ ॥ ೫ ॥ ಶ್ರೀ ॥

॥ ೧೩೪ ॥ ರಾಗ, ಭೈರವಿ [ಧಾಟಿ:- ಕರುಣದಿ ಕಾಯೋ । ಮಹಾ] ಅಷ್ಟತಾಳ

ದಯಮಾಡೆ ಬ್ಯಾಗೇ । ಶ್ರೀ ಪಂಚದುರ್ಗೆ । ದಯಮಾಡೆ ಬ್ಯಾಗೇ ॥ ॥ ಪಲ್ಲ ॥ ದಯಮಾಡೆ ಕೇವಲ ಭಯವಿಹ್ವಲನಲ್ಲಿ । ದಯಸಾಗರೆ ಸೌಭಾಗ್ಯ ಸಂಪದವ ನೀ ॥ ದಯಮಾಡೆ ॥ ಅನುಪಲ್ಲ ॥ ವೇದಾಂತವೇದ್ಯೇ । ನಿಖಿಲ ಜಗ । ದಾದಿವಿನೋದೇ ॥ ಭೂಧರಾತ್ಮಜೆ ಸರ್ವಾಧಾರೆ ಶಕ್ತಿ ಶ । ಲಾಧರೆ ಮಧುರ ಬಿಂಬಾಧರೆ ನಿನ್ನಯ ॥ ಪಾದವನು ಮರೆಹೊಕ್ಕೆ ಮನಸಿನ । ಭೇದ ವನು ಪರಿಹರಿಸಿ ಸರ್ವಪ । ರಾಧಗಳ ಕ್ಷಮಿಸಮ್ಮ ಕೈಟಭ । ಸೂದನನ ಸೋದರಿ ಮಹೇಶ್ವರಿ ॥ ದಯಮಾಡೆ ಬ್ಯಾಗೇ ॥ ೧ ॥ ಅಂಬುಜಚರಣೇ । ಮಾಧುರ್ಯೋರು । ರಂಭ ಸಮಾನೇ ॥ ಗಂಭೀರೆ ಮೇರುನಿತಂಬೆ ಸಿಂಹ

ಮಧ್ಯೇ । ಲಂಬೋದರ ಪರಿರಂಭ ಕರಾಂಬುಜೆ ॥ ಕುಂಭಿಕುಂಭಪಯೋಜೆ ಶೋಭಿಪ । ಕಂಬುಕಂಠೆ ಮುಖೇಂದು ಪದ್ಮದ । ಳಾಂಬಕಿಯೆ ಎನಗಿಂಬು ದೋರೆ ರೋ । ಲಂಬಕುಂತಳೆ ಶುಂಭಮರ್ದನಿ ॥ ದಯಮಾಡೆ ಬ್ಯಾಗೇ ॥ ॥ ೨ ॥ ಸಿಂಧೂರಗಮನೆ । ನಿಖಿಳಾಮರ । ವಂದಿತ ಚರಣೆ ॥ ಸುಂದರಾಂಗಿ ಸುಮಗಂಧಿ ವಿಬುಧಮುನಿ । ವೃಂದಸೇವಿತೆ ನಿತ್ಯಾನಂದ ಪ್ರಕಾಶಿನೀ ॥ ಅಂಧಕಾಸುರ ವೈರಿ ಹೃದಯಾ । ನಂದ ಪಾರಾವಾರ ಪೂರ್ಣಮಿ । ಚಂದ್ರೆ ಸದ್ಗುಣಸಾಂದ್ರೆ ಸುರತ ನ । ರೇಂದ್ರವರದೆ ಮೃಗೇಂದ್ರವಾಹಿನಿ ॥ ದಯ ಮಾಡೆ ಬ್ಯಾಗೇ ॥ ೩ ॥ ರಜತಾದ್ರಿವಾಸೇ । ಚಂಪಕನಾಸ । ಸುಜನೌಘಪೋಷೆ ॥ ನಿಜದಿ ನಿನ್ನಯ ಪಾದಾಂಬುಜವನ್ನು ನಂಬಿದೆ । ತ್ರಿಜಗವಂದಿತೆ ಮಹಾ ಗಜ ಗೌರಿ ಶಂಕರಿ ॥ ತ್ರಿಜಗಜನನಿ ಭವಾನಿ ಪಾರ್ವತಿ । ಭುಜಗಭೂಷಣ ರಾಣಿ ಕಲುಷ । ವ್ರಜವಿದಾರಿ ಮೌನೀಂದ್ರಮನ ನೀ । ರಜದಿವಾಕರೆ ಮಾನಿತೋದ್ಧರೆ ॥ ದಯಮಾಡೆ ಬ್ಯಾಗೇ ॥೪॥ ತಪ್ಪುಸಹಸ್ರ । ವಿಪ್ಪರು ಮನದೊ । ಳಿಪ್ಪ್ಯದಜಸ್ರ ॥ ಸರ್ಪಶಯನ ಲಕ್ಷ್ಮೀನಾರಾಯಣ ಪ್ರೀತಿ । ಯಪ್ಪಂತೆ ದಯಗೈಯ್ಯೆ ಜಗ ದಾದಿಮಾಯೆ ॥ ಕಪ್ಪುಕಂಠನ ಪ್ರೀಯೆ ವರ ಕಂ । ದರ್ಪ ಧಿಃಕೃತರೂಪೆ ಸಾಧುಪ । ದಪ್ರಸಾದವ ಪಾಲಿಸೆನ್ನಲಿ । ಬಪ್ಪನಾಡಿನ ಭದ್ರದಾಯಕಿ ॥ ದಯ ಮಾಡೆ ಬ್ಯಾಗೆ ॥ ೫ ॥ ಶ್ರೀಃ ॥

॥ ೧೩೫ ॥ ರಾಗ, ಮೋಹನ [ಧಾಟಿ:- ಗುರುಕೃಪಾ ಅಂಜನ ಪಾಯೊ] ಆದಿತಾಳ

ಭಕತಸಂಸಾರಿ ಹರಿ ಶಕಟಸಂಹಾರಿ । ಸಕಲಂತರ್ಯಾತ್ಮಕ ವರ ಗಿರಿಧಾರಿ ॥ ಪಲ್ಲ ॥ ಅಂತರ್ಬಹಿರ್ವ್ಯಾಪ್ತಾನಂತವತಾರಿ । ಸಂತಜನರ ಮನೋಭ್ರಾಂತಿನಿವಾರಿ ॥ ಭಕತ ಸಂಸಾರಿ ॥ ೧ ॥ ನಿಖಿಲ ಬ್ರಹ್ಮಾದಿ ಸುರನಿಕರ ಕೈವಾರಿ । ಪ್ರಕೃತಿ ನಿಯಾಮಕ ಪ್ರಭು ಕಂಸಾರಿ ॥ ಭಕತ ಸಂಸಾರಿ ॥ ೨ ॥ ಘನ ಕೃಪಾಸಾಗರ ಪ್ರಣತಾರ್ತಿಹಾರಿ । ಅನಘ ಲಕ್ಷ್ಮೀ ನಾರಾಯಣ ನಿರ್ವಿಕಾರಿ ॥ ಭಕತ ಸಂಸಾರಿ ॥ ೩ ॥

॥ ೧೩೬ ॥ ರಾಗ, ಧನಾಸರಿ [ಧಾಟಿ:- ಕರುಣಾಕರ ನೀನೆಂಬುವದ್ಯಾಕೋ] ಆದಿತಾಳ

ದಂಡಿಸದೆನ್ನನು ದಯದೋರ್ಸೈ ಕರ । ದಂಡದಳಾಂಬಕನೇ ॥ ಪಲ್ಲ ॥ ಚಂಡೀಶವಿನುತ ಬ್ರಹ್ಮಾಂಡಪಾಲ ಮಾ । ರ್ತಾಂಡ ಮಂಡಲಗ ಶುಂಡಾಲವರದ ॥ ॥ ಅನುಪಲ್ಲ ॥ ಕ್ಷೇಮದಿ ಶ್ರೀಹರಿ ನಾಮವ ವರ್ಣಿಸಿ । ನೇಮಾನುಷ್ಠಾನದೊಳಿರಲೂ ॥ ನಾ ಮಾಡಿದ ನಾನಾವಿಧ ಪಾಪದ । ತಾಮಸಗೊಳಿಸುವ ಕಾಮ

ಕ್ರೋಧಗಳಿಂ ॥ ದಂಡಿಸ ॥ ೧ ॥ ಗೀರ್ವಾಣನುಡಿಯೊಳೀರ್ವಾರ್ಥಗಳನ್ನು । ಸರ್ವಾರ್ಥವೆಂದು ನಾ ಪಠಿಸಿರಲು ॥ ಪೂರ್ವಾರ್ಜಿತಗಳ ದೂರ್ವೆಂದೆನ್ನಯ । ನಿರ್ವಹವಿಲ್ಲಾ ದುರ್ವ್ಯಸನಗಳಿಂ ॥ ದಂಡಿಸ ॥ ೨ ॥ ಶಿಷ್ಟಾಚಾರದೊಳಿಷ್ಟನಾಗಿ ಪರ । ಮೇಷ್ಠಿ ಜನಕ ಜಯ ಜಯವೆನಲು ॥ ಧೃಷ್ಟಾಲೋಚನೆ ಪುಟ್ಟಿಸಿ ಪಾಪದ । ಬಟ್ಟೆಯ ಹೊದ್ದಿಪ ದುಷ್ಟಸಂಘದಿಂ ॥ ದಂಡಿಸ ॥ ೩ ॥ ನಾರಾಯಣ ನರಹರಿ ಎನ್ನುವ ವ್ಯಾ । ಪಾರವ ನಾ ಮಾಡುತ್ತಿರಲು ॥ ಆರೋಪಣ ಅವರೋಹಣನಾದ ವಿ । ಕಾರಗೊಳಿಸ ಶ್ಯಾರೀರಪ್ರಕೃತಿಯಿಂ ॥ ದಂಡಿಸ ॥ ೪ ॥ ಆರ್ಕಾರಣ ರಿಪುಗಳಿಗೈ ಸರ್ವದೇ । ವರ್ಕಳ ಮಸ್ತಕಮಣಿ ನೀನೇ ॥ ತರ್ಕಾಗಮ್ಯ ಲಕ್ಷ್ಮೀನಾರಾಯಣ । ಅಕಾರಮಿತಭಾಸ ಕಾರ್ಕಳ ಪುರವರ ॥ ॥ ದಂಡಿಸ ॥ ೫ ॥ ಶ್ರೀಃ ॥

॥ ೧೩೭ ॥ ರಾಗ, ಧನಾಸರಿ [ಧಾಟಿ:- ಕರುಣಾಕರ ನೀನೆಂಬುವದ್ಯಾಕೊ] ಏಕತಾಳ

ಕರುಣಿಸಬಾರದೆ ಕಂಜನಾಭನೆ । ಕೈಯ್ಯ ಮುಗಿವೆನಯ್ಯಾ ॥ ವರ ಫಣಿಗಿರಿ ಸುಸ್ಥಿರಮಂದಿರ ಶ್ರೀ । ಗುರು ಜನಾರ್ದನ ಅಮರಾರ್ಚಿತ ಪದ ॥ ॥ ಪಲ್ಲ ॥ ಅಪರಾಧಗಳಾಲೋಚಿಸುವರೆ ಸರಿ । ಸ್ವಪರಾಜನಿಗಳವೇ ॥ ಕೃಪೆಯಿಂದಲಿ ಸಂರಕ್ಷಿಸದಿರ್ದಡೆ । ಅಪಕೀರ್ತಿಯು ನಿನಗಲ್ಲವೆ ಶ್ರೀಹರಿ ॥ ಕರುಣಿಸ ॥ ೧ ॥ ಕನಕ ಪುರಂದರ ಮುಖ್ಯ ದಾಸರಂತೆ । ಗುಣವೆನಗಿನಿತಿಲ್ಲಾ ॥ ಜನರ ವಿಡಂಬಕೆ ದಾಸನಾದರೂ । ಘನ ಮಹಿಮಾರ್ಣವ ಕನಕಾಂಬರಧರ ॥ ॥ ಕರುಣಿಸ ॥ ೨ ॥ ಲಕ್ಷ್ಮವಾತ್ಯಾತಕೆ ಲಕ್ಷ್ಮೀನಾರಾಯಣ । ರಕ್ಷಾಮಣಿ ನೀನೂ ॥ ಪಕ್ಷೀಂದ್ರವಾಹನ ಪಾಪವಿಮೋಚನ । ತ್ರ್ಯಕ್ಷಮಿತ್ರನೆನ್ನಕ್ಷಿ ಗೋಚರನಾಗಿ ॥ ಕರುಣಿಸಬಾರದೆ ॥ ೩ ॥ ಶ್ರೀಃ ॥

॥ ೧೩೮ ॥ ರಾಗ, ಭೈರವಿ [ಧಾಟಿ:- ಕರುಣಾಕರ ಧೀರ ಭವಾನಿಶಂಕರ] ಅಷ್ಟತಾಳ

ತಪ್ಪುಗಳೆಲ್ಲವ ಒಪ್ಪಿಗೊಳ್ಳಯ್ಯ ಶ್ರೀ । ಚಪ್ಪರ ಶ್ರೀನಿವಾಸಾ ॥ ಸರ್ಪರಾಜ ಗಿರಿಯಪ್ಪ ತಿಮ್ಮಪ್ಪ ಕಂ । ದರ್ಪಕತಾತನೇತಾ । ಸಜ್ಜನಪ್ರೀತಾ ॥ ॥ ಪಲ್ಲ ॥ ಮಾಧವ ನಿನ್ನಯ ಮಹಿಮೆಯನರಿದಪ । ರಾಧವ ಮಾಡಿದೇ ದಾರಿದ್ರದಾ ॥ ಬಾಧೆಯಿಂದ ತವ ಪಾದದರುಶನದ । ಹಾದಿಯ ಕಾಣದಾದೇ । ನಾ ದ್ರೋಹಿಯಾದೇ ॥ ತಪ್ಪು ॥ ೧ ॥ ತ್ರಾಣವಿರುವಾಗ ಕಾಣಿಕೆ ಹಾಕಿದೆ । ದೀನ ದಾರಿದ್ರ್ಯದ ಹೊತ್ತಿನಲೀ ॥ ಮೇಣದರಿಂದಲಿ ತೆಗೆದು ತೆಗೆದು ಪಂಜೆ ।

ಪ್ರಾಣಗಾಹುತಿಯ ಕೊಟ್ಟೆ। ಅಪರಾಧಪಟ್ಟೆ ॥ ತಪ್ಪು ॥ ೨ ॥ ಮಂದವಾರ ದಿನ ಕ್ಕೊಂದೂಟವನುಂಡು । ಸ್ವಸ್ಥದಿಂದಿರುವಾಗ ನೇಮವಿಟ್ಟೇ ॥ ಮಂದಭಾಗ್ಯ ಜ್ವರದಿಂದ ಪೀಡಿತನಾಗಿ । ಅಂದೆರಡೂಟವನೂ। ಮಾಡಿದೆ ನಾನೂ ॥ ತಪ್ಪು ॥ ॥ ೩ ॥ ಶನಿವಾರಕ್ಕೊಂದಾಣೆ ಕಾಣಿಕೆ ಹಾಕುತ । ಮಿನುಗುವ ಡಬ್ಬಿಯ ಮಾಡಿದೆನು ॥ ಎನಗೆ ದಾರಿದ್ರ್ಯವು ಕೊಟ್ಟ ಕಾರಣದಿಂದ । ಹಣವಿಲ್ಲ ಗುಣ ಸುಂಗಿತು । ಪಾದಕೆ ಗೊತ್ತು ॥ ತಪ್ಪು ॥ ೪ ॥ ಭಂಡಾರದ್ರೋಹ ಬ್ರಹ್ಮಾಂಡ ಶೋಕಾಗ್ನಿಯು । ಮಂಡೆಯೊಳುರಿವುದು ಖಂಡಿತದೀ ॥ ಪುಂಡರೀಕಾಕ್ಷ ಸತ್ಕರುಣಾಮೃತರಸ । ಕುಂಡದೊಳ್ಮೀಯಿಸಯ್ಯಾ । ವೆಂಕಟರಾಯಾ ॥ ॥ ತಪ್ಪು ॥ ೫ ॥ ದೊಡ್ಡ ದಾರಿದ್ರ್ಯದ ಗುಡ್ಡೆ ಬಿದ್ದುದರಿಂದ । ದುಡ್ಡಿಲ್ಲ ತೆಗದೆ ನಾ ದಡ್ಡನಾಗೀ ॥ ಅಡ್ಡಬಿದ್ದು ಕೈಯೊಡ್ಡಿ ಬೇಡುವೆ ಸ್ವರ್ಣ । ಗುಡ್ಡೆಯ ಮೇಲಿರುವಾ । ಮಹಾನುಭಾವಾ ॥ ತಪ್ಪು ॥ ೬ ॥ ದೃಢಭಕ್ತಿಯನು ಕೊಟ್ಟು ಸಲಹಬೇಕಲ್ಲದೆ । ಕೆಡಕು ಮಾಡುವರೇನೋ ಜಡಜನಾಭಾ ॥ ಕಡಲಶಯನ ಲಕ್ಷ್ಮೀನಾರಾಯಣ ನ । ಮ್ಮೊಡೆಯಶ್ರೀ ತಿರುಪತೀಶಾ । ರವಿಕೋಟಭಾಸಾ ॥ ॥ ತಪ್ಪು ॥ ೭ ॥ ಶ್ರೀಃ ॥

॥ ೧೩೯ ॥ ರಾಗ, ಭೈರವಿ [ಧಾಟಿ:- ಪಾಹಿ ಹರೇ ಸುಗುಣಸಾಂದ್ರ] ರೂಪಕತಾಳ

ಬಂದೆ ಭವತ್ಪದಯುಗಾರವಿಂದಕೇ । ಮಿಳಿಂದನಾಗೀ ॥ ಪಲ್ಲ ॥ ವಂದ ನೀಯರೆ । ಯತಿಕುಲಾಬ್ಧಿಚಂದ್ರರೇ । ಸುಕೃತೀಂದ್ರರೇ ॥ ಅ.ಪ. ॥ ಪರಮ ಪಾವನ ಭುವನೇಂದ್ರರ। ಕರಸಂಜಾತ ವರದೇಂದ್ರರ। ಕರಸರೋರುಹಭವರೇ ಮಹಾ। ಕರುಣಾಂತಃಕರಣಧೀರರೇ ॥ ಬಂದೆ ॥ ೧ ॥ ಸುಮತೀಂದ್ರಾದ್ಯತಿ ಇಂದ್ರರ । ವಿಮಲ ಹೃದಯಕಮಲ ಭಾಸ್ಕರ । ಅಮಮ ನಿಮ್ಮ ಕಾಂಬ ಯೋಗ । ಅಮಿತ ಸುಕೃತ ಭೋಗಪೂಗ ॥ ಬಂದೆ ॥ ೨ ॥ ಪೂರ್ಣಪ್ರಜ್ಞಾ ಚಾರ್ಯವರ್ಯ । ಸನ್ನುತ ಗುಣಧೈರ್ಯಧುರ್ಯ । ಧನ್ಯನಾದೆನಿಮ್ಮ ನಾನು । ಸನ್ನಿಧಾನವನ್ನು ಕಂಡೆನು ॥ ಬಂದೆ ॥ ೩ ॥ ಶ್ರೀಶಲಕ್ಷ್ಮೀನಾರಾಯಣ । ವ್ಯಾಸ ರಘುಪತಿಯ ಚರಣೋ । ಪಾಸಕರೆ ಪಾವನರೆ । ಕಾಶಿಮಠಾಧೀಶ್ವ ರರೆ ॥ ಬಂದೆ ॥ ೪ ॥ ಶ್ರೀಃ ॥

॥ ೧೪೦ ॥ ರಾಗ, ಕಲ್ಯಾಣಿ [ಧಾಟಿ:- ಏನನುಸುರುವೆನು । ಸದ್ಗುರು] ಅಷ್ಟತಾಳ

ಜನನೀ ರುದ್ರಾಣೀ । ರಕ್ಷಿಸು ಎನ್ನ । ಜಗದೀಶನ ರಾಣೀ ॥ ವನಜ ಭವ ಸುರಮುನಿಕುಲಾರ್ಚಿತೆ। ಕನಕವರ್ಣ ಶರೀರೆ ಕಮಲಾ । ನನೆ ಕರುಣ

ಸಾಗರೆ ನಮ್ಮಜ್ಜನ । ಮನಮುದಾಕರೆ ಮಾನಿತೋದ್ಧರೆ ॥ ಪಲ್ಲ ॥ ಆದಿ ಕೃತಾಯುಗದೀ । ಪ್ರತಿಷ್ಠಿತೆ । ಯಾದೆ ಧರಾತಳದೀ ॥ ಆದಿತೇಯರ ಬಾಧಿಸುವ ದಿತಿ । ಜಾಧವರ ಭೇದಿಸಿದೆ ಸಜ್ಜನ । ರಾದವರ ರಕ್ಷಿಸಿದೆ ತ್ರೈಜಗ । ದಾದಿಮಾಯೆ ವಿನೋದಪೂರಿಣಿ ॥ ಜನನೀ ॥ ೧ ॥ ಸಿಂಧೂರಸಮಯಾನೇ । ಸಾರಸ ಗುಣ । ವೃಂದೆ ಕೋಕಿಲಗಾನೇ ॥ ಸುಂದರಾಂಗಿ ಮೃಗೇಂದ್ರವಾಹಿನಿ । ಚಂದ್ರಚೂಡ ಮನೋಕ್ಷಿ ಸತತಾ । ನಂದ ಪೂರ್ಣ ಮುನೀಂದ್ರನುತೆ ಸುಮ । ಗಂಧಿ ಗೌರಿಶ್ರೀವಭವಾನೀ ॥ ಜನನೀ ॥ ೨ ॥ ಲಂಬೋದರ ಮಾತೆ । ಲಲಿತೆ ಜಗ । ದಂಬಿಕೆ ಗಿರಿಜಾತೇ ॥ ಕಂಬುಕಂಠಿ ಕದಂಬಿನೀನಿಕು । ರುಂಬಜಿತೆ ಧಮ್ಮಿಲ್ಲೆ ತವ ಪಾ । ದಾಂಬುಜವ ನಾ ನಂಬಿದೆನು ಎನ । ಗಿಂಬು ಪಾಲಿಸೆ ಶುಂಭಮರ್ದಿನಿ ॥ ಜನನೀ ॥ ೩ ॥ ಖಂಡಪರಶು ಪ್ರೀತೇ । ನಿಖಿಳ ಬ್ರ । ಹ್ಮಾಂಡೋದರಭರಿತೇ ॥ ಚಂಡಮುಂಡ ವೇತಾಂಡಧರನೋ । ದ್ದಂಡ ಸಿಂಹೆಯೆ ಖಂಡಲಾರ್ಚಿತೆ । ಪಾಂಡುತನುಜ ಕೋದಂಡವಿತರಣೆ । ಚಂಡಿಕೇ ಕರದಂಡಲೋಚನಿ ॥ ಜನನೀ ॥ ೪ ॥ ಘನ ವೇಣುಪುರವಾಸೆ । ಸರ್ವಾರ್ಥದಾ । ಯಿನಿ ತ್ರೈಜಗದೀಶೇ ॥ ಸನಕನುತ ಶ್ರೀಲಕ್ಷ್ಮೀನಾರಾ । ಯಣ ಭಗಿನಿ ಶ್ರೀಮಹಿಷಮರ್ದಿನಿ । ಮನುಮಥಾಮಿತರೂಪೆ ಕಾತ್ಯಾ । ಯಿನಿ ನಿರಾಮಯ ಮಂಜುಭಾಷಿಣಿ ॥ ಜನನೀ ॥ ೫ ॥ ಶ್ರೀಃ ॥

॥ ೧೪೧ ॥ ರಾಗ, ಮಾರವಿ [ಧಾಟಿ:- ಸಾಕು ಸಾಕು ನರಹರಿಯೆ] ಅಷ್ಟತಾಳ

ಬಾರಮ್ಮ ಸರಸ್ವತಿ । ಬಾ ದ್ರುಹಿಣಯುವತಿ । ಬಾ ನಿರ್ಮಲಮತಿ । ತೋರಿ ಭಾರತಿ ॥ ಪಲ್ಲ ॥ ಅಜನ ಪಟ್ಟದ ರಾಣಿ । ಭುಜಗ ಸದೃಶವೇಣಿ । ಭಜಕರ ಚಿಂತಾಮಣೀ । ಕೀರವಾಣೀ ॥ ಬಾರಮ್ಮ ॥ ೧ ॥ ವೇದಾಂತರಂಗಿಣಿ । ನಾದಸ್ವರೂಪಿಣಿ । ಪ್ರಾದುರ್ಭವಳಾಗು । ಸಾಧ್ವಿಕಲ್ಯಾಣೀ ॥ ॥ ಬಾರಮ್ಮ ॥ ೨ ॥ ಅಕ್ಷಯ ಸುಖಭಾಷೆ । ಆಶ್ರಿತಜನಪೋಷೆ । ಲಕ್ಷ್ಮೀನಾರಾಯಣನ ಸೊಸೆ । ಸುವಿಲಾಸೇ ॥ ಬಾರಮ್ಮ ॥ ೩ ॥ ಶ್ರೀಃ ॥

॥ ೧೪೨ ॥ ರಾಗ, ಕಲ್ಯಾಣಿ [ಧಾಟಿ:- ಜನನೀ ರುದ್ರಾಣಿ । ರಕ್ಷಿಸು] ಅಷ್ಟತಾಳ

ಜಯತು ಜಯ ನೃಹರಿ । ಬ್ರಹ್ಮಾದಿ ನಿರ್ಜರ । ಜಯತು ಜಾತ ಕೈವಾರೀ ॥ ॥ಪಲ್ಲ॥ ಜಯ ನಮೋ ಜಗದಾದಿ ಮಾಯಾ । ಶ್ರಯ ಚರಿತ್ರ ಪವಿತ್ರ ವಿಗತಾ । ಮಯ ಸದಾನಂದೈಕನಿಧಿ ಚಿ । ನ್ಮಯ ದಯಾರ್ಣವ ಭಯನಿವಾರಣ ॥ ॥ ಅನುಪಲ್ಲ ॥ ಸುಕುಮಾರ ಪ್ರಹಲ್ಲಾದನ । ಬಾಧಿಸೆ ಭರಾ । ನಕರೂಪ

ತಾಳ್ವಾಕ್ಷಣಾ ॥ ಸಕಲ ಲೋಕಾಲೋಕ ಭೀಷಣ । ಪ್ರಕಟ ನಖ ಮುಖ ಕ್ರೋಧವೈಷಿನಿ । ಪ್ರಕರ ಜ್ವಾಲಾಮಾಲ ಬದ್ಧ । ಭ್ರುಕುಟ ಲಾಲಿತ ಭಕತ ವತ್ಸಲ ॥ ಜಯತು ॥ ೧ ॥ ಪಾರಮೇಶ್ವರುದ್ರರೇ । ಮುಖ್ಯಸ್ಥ ವೃಂ। ದಾರಕರಿಹರುಮರೇ ॥ ವೀರಭದ್ರ ಸುಭದ್ರ ನಂದಿಪ್ರ। ವೀರ ಭೈರವ ಭೃಂಗಿ ಮುಖ್ಯರು । ಶ್ರೀರಮಣ ಕುರುಕರುಣ ಪಾರಾ । ವಾರ ಸಮ ಗಂಭೀರನೆಂಬರು ॥ ॥ ಜಯತು ॥ ೨ ॥ ಶಾಂತವಾಗದು ಕ್ರೋಧ । ಮಾಡಿದುದಾ । ನಂತ ಸಂಖ್ಯಾಪರಾಧ ॥ ಎಂತು ನಿಷ್ಕೃತಿ ಎಂದು ಚಿಂತಾ । ಕ್ರಾಂತರಾಗಿ ಪಿತಾಮಹಾದ್ಯರು । ಕಂತುಜನನಿಯು ಬೇಡಿಕೊಳೆ । ಅತ್ಯಂತ ಹರುಷವನಾಂತು ಬಂದಳು॥ ॥ ಜಯತು ॥ ೩ ॥ ಪಟ್ಟದರಸನ ರೂಪ । ಕಾಣುತ ಭಯ । ಪಟ್ಟಳಪೂರ್ವ ಕೋಪ ॥ ಶ್ರೇಷ್ಠಭಕ್ತಶಿಖಾಮಣಿಯು ಮುಂ । ದಿಟ್ಟೆರಗಿ ಸಂಸ್ತುತಿಸೆ ದನುಜಘ। ರಟ್ಟ ಹೃದಯನಿವಿಷ್ಟ ಕರುಣಾ । ದೃಷ್ಟಿಯಿಂದ ಸಂತುಷ್ಟಿಗೊಳಿಸಿದ ॥ ಜಯತು ॥ ೪ ॥ ಶ್ರೀಲಕ್ಷ್ಮೀನಾರಾಯಣ । ದೈತ್ಯೇಂದ್ರ ಹೃ । ತ್ಶೂಲ ಅಖಿಲ ಕಾರಣ ॥ ಕಾಲಕಾಲಾಂತಕ ತಮಾಲಸು । ನೀಲನಿಭ ನಿತ್ಯಾತ್ಮ ಸುರಮುನಿ। ಜಾಲಪಾಲ ವಿಶಾಲ ಗುಣನಿಧಿ । ಮೂಲಿಕಾಲಯ ಲೋಲ ನರಹರಿ ॥ ಜಯತು ॥ ೫ ॥ ಶ್ರೀಃ ॥

॥ ೧೪೩ ॥ ರಾಗ, ನಾಯಕಿ [ಧಾಟಿ:- ಕಾಂತೇ ಶ್ರೀಮಂತೇ] ಏಕತಾಳ

ರಕ್ಷಿಸು ಮನದಾ । ಪೇಕ್ಷೆಯ ಸಲಿಸುತ । ಲಕ್ಷ್ಮೀನರಹರಿ । ರಾಕ್ಷಸ ವೈರೀ ॥ ಪಲ್ಲ ॥ ಅಕ್ಷಮ ದುಶ್ಶೀಲ । ದುರ್ವ್ಯಾಪಾರದಿ । ಕುಕ್ಷಿಂಭರನೆಂದು। ಪೇಕ್ಷೆಯ ಮಾಡದೆ ॥ ಅನುಪಲ್ಲ ॥ ಉಭಯ ಶುಚಿತ್ವವು । ಊರ್ಜಿತವೆನೆ ಜಗ । ದ್ವಿಭು ವಿಶ್ವಂಭರ ವಿಬುಧಾರಾಧ್ಯ ॥ ಶುಭಮತಿ ಸಂಸ್ಥಿತಿ । ಯುಭಯವ ಪಾಲಿಸೊ । ತ್ರಿಭುವನ ಮೋಹನ ಪ್ರಭು ನೀನನುದಿನ ॥ ರಕ್ಷಿಸು ॥ ೧ ॥ ತಂದೆಯ ಮುನಿಸಿನ । ಕಂದನ ಸಲಹಿದ । ಸಿಂಧುಶಯನ ನಿತ್ಯಾನಂದ ಗುಣಾಬ್ಧೇ ॥ ಹಿಂದಣ ಪಾಪವು । ಮುಂದೆಸಗದ ರೀತಿ । ಮಂದರಾದ್ರಿಧರ ಮಾನಿಸು ಮುಮುಕರ ॥ ರಕ್ಷಿಸು ॥ ೨ ॥ ಪಾಪಾತ್ಮುನುರಲಿ । ಭೂಪಾಲಕನು ನಾ । ಶ್ರೀಪತಿ ಕರುಣದಿ ಕಾಪಾಡುವುದು ॥ ಗೋಪೀರಂಜನ । ಗೋದ್ವಿಜ ರಕ್ಷಣ । ಕಾಪುರುಷರ ಭಯ ನೀ ಪರಿಹರಿಸಯ್ಯ ॥ ರಕ್ಷಿಸು ॥ ೩ ॥ ಸರ್ವೇಂದ್ರಿಯ ಬಲ । ತುಷ್ಟಿಪುಷ್ಟಿಯನಿತ್ತು । ಸರ್ವಾಂತರ್ಯದೊಳಿರ್ಪನೆ ಸಲಹೋ ॥ ದುರ್ವಾರಾಮಿತ । ದುರ್ವಿಷಯದಿ ಜೀ । ಸರ್ವನು ಪನ್ನಗಪರ್ವತವಾಸನೇ ॥

॥ ರಕ್ಷಿಸು ॥ ೪ ॥ ಶರಣಾಗತನಾಗಿ । ಶರಗೊಡ್ಡಿಬೇಡುವೆ । ವರ ಮೂಲಿಕ ಪ್ರರ ಧೊರೆ ನರಹರಿಯೇ ॥ ಹರಿ ಲಕ್ಷ್ಮೀನಾರಾಯಣ । ತ್ರಿಜಗದ್ಭರಿತ ಮ । ತ್ತೀರಕ ಸ್ಥಿರಭಕ್ತಿಯನಿತ್ತು ॥ ರಕ್ಷಿಸು ॥ ೫ ॥ ಶ್ರೀ ॥

॥ ೧೪೪ ॥ ರಾಗ, ಶಂಕರಾಭರಣ [ಧಾಟಿ:- ಭಕ್ತಿಭಿಕ್ಷವಿಯುವೇ] ರೂಪಕತಾಳ

ಪಾಹಿ ಪಾರ್ಥಸಾರಥೇ । ಪಕ್ಷಿರಾಟ್ಟುರೂಥೇ । ಪಾಹಿ ಪಾರ್ಥಸಾರಥೇ॥ ॥ ಪಲ್ಲ ॥ ದೇಹಿದಾಸ್ಯ ಸದ್ಭಕ್ತಿಂ । ದೇವರಾಜವಿನುತ ಮಾಂ ॥ ಅನುಪಲ್ಲ ॥ ಮಂದರಧಾರೀ ಮುರಾರಿ । ಮುಕುಂದಾತ್ಮರೂಪ ಶೌರಿ । ಸಿಂಧುಶಯನ ಶೇಷಾಚಲ । ಮಂದಿರವರ ಮಧುಮುಡಾರಿ ॥ ಸುಂದರ ಲಕ್ಷ್ಮೀನಾರಾಯಣ । ನಿರ್ಗುಣ ನಿರ್ವಿಕಾರಿ । ನಂದನಂದನಾಚ್ಯುತ ಗೋವಿಂದಾನತ ಮನವಿಹಾರಿ॥ ॥ ಪಾಹಿ ॥ ೧ ॥ ಶ್ರೀ ॥

॥ ೧೪೫ ॥ ರಾಗ, ಮೋಹನ [ಧಾಟಿ:- ಹರೇ ವೆಂಕಟಾ । ಶೈಲವಲ್ಲಭಾ] ಏಕತಾಳ

ಹರೇ ಶಂಕರಾ ಪಾರ್ವತೀವರಾ । ಪಾಲಿಸೊ ನೀ ಎನ್ನಾ ॥ ಪಲ್ಲ ॥ ದುರಿತರಾಶಿಗಳ ದೂರಮಾಡು ಗಿರಿವರ ಮಹಾನುಭಾವಾ । ಶಿವಾಶ್ಶಿವ ॥ ॥ ಅನುಪಲ್ಲ ॥ ತ್ರಿಗುಣಾತ್ಮಕ ತ್ರಿದಶಾಲಯ ಪೂಜಿತ । ನಿಗಮಾಗಮ ವಿನುತಾ ॥ ಅಗಜಾಲಿಂಗಿತ ಆಶೀವಿಶಧರ ಮೃಗಧರಾಂಕಜೂಪಾ । ಹೃದ್ಗೂಡಾ ॥ ಹರೇ ॥ ೧ ॥ ಸರ್ವೋತ್ತಮ ಹರಿಯಹುದೆಂಬ ಜ್ಞಾನವು । ಸರ್ವಕಾಲಕ್ಕೀಯೋ ॥ ದುರ್ಮತಗಳನ್ನೆಲ್ಲ ದೂರಮಾಡೊ ಹರಿ । ಚರ್ಮಾಂಬರ ಧಾರಾ । ಪ್ರವೀರಾ ॥ ಹರೇ ॥ ೨ ॥ ಸಂಜೀವನ ಲಕ್ಷ್ಮೀನಾರಾಯಣಮಣಿ । ರಂಜಿತ ನಿರ್ಲೇಪಾ ॥ ಮಂಜುಳ ಕದರೆಯ ಮಂಜುನಾಥ ಭವ । ಭಂಜನ ಹರಿಪ್ರಿಯಾ । ಜಯಾಜಯ ॥ ಹರೇ ॥ ೩ ॥ ಶ್ರೀ ॥

॥ ೧೪೬ ॥ ಶ್ರೀರಾಗ [ಧಾಟಿ:- ವನಜಾಸನ ವಿನುತಾನತ] ರೂಪಕತಾಳ

ಪರಮೇಶ್ವರಿ ಪಾರ್ವತಿ ಸತಿ । ವರದೆ ಶ್ರೀ ವನದುರ್ಗೆ ॥ ಪಲ್ಲ ॥ ತರುಣಾರುಣ ಶತಕೋಟ । ಕಿರಣಾನನೆ ಮಾಂ ಪಾಹಿ ॥ ಅನುಪಲ್ಲ ॥ ಜಗದ್ಭರಿತೆ ಜನಾರ್ದನೆ । ಜಗದೇಕನುತ ಶರಣ್ಯೇ ॥ ನಿಗಮಾಗಮ ಶಿರೋರತುನೆ । ನಿಗೆ ಕೈಯುಗವಂ ಮುಗಿವೆ । ಅಗಜೇ ಶ್ರೀಜಗದಂಬಿಕೆ ॥ ಪರ ॥ ॥ ೧ ॥ ಸದಾನಂದೆ ಸರೋಜಾಕ್ಷಿ । ಸದಾವಳೀವಿನುತೇ ॥ ತ್ರಿದಶಾಲಯೆ ತ್ರಿಗುಣಾತ್ಮಕಿ । ಸದಯೇ ಹೃದಯೇ ಮುದದಿಂ । ಪದ ನಂಬಿದೆ ಪದುಮಾ

ಲಯೆ ॥ ಪರ ॥ ೨ ॥ ವಿರಾಜಿಸುವ ವಿಶ್ವೋತ್ತಮೆ । ವರ ಚಿತ್ರ ಪುರೇಶ್ವರೀ ॥ ಹರಿ ಲಕ್ಷ್ಮೀನಾರಾಯಣ । ಕರುಣಾಭರಣೆ ಶರಣೋದ್ಧರಣೆ । ಶ್ರೀಚರ ಣಾಂಬುಜೆ ॥ ಪರಮೇಶ್ವರಿ ॥ ೩ ॥ ಶ್ರೀಃ ॥

॥ ೧೪೭ ॥ ರಾಗ, ತೋಡಿ [ಧಾಟಿ:- ಕರುಣಿಸೆನ್ನ । ಹರಿಯು ರಮಣ] ರೂಪಕತಾಳ

ನಂಬಿದೆ ನಿನ್ನ । ನಿಂಬಿದೆ ಎಂದು । ಅಂಬುಜಾಯತಾಂಬಕ । ತ್ರ್ಯಂಬಕ ಸನ್ನುತ ॥ ಖಂಬದಿಂದ ಕಾಣಿಸಿದವ । ಗಂಭೀರ ಗುಣಾಂಭೋನಿಧಿ । ಡಿಂಬೋ ದ್ಧರ ನರಮೃಗ ವರ ॥ ಪಲ್ಲ ॥ ಭಾನುಕೋಟೀ ಭಾಸ್ಕರ ಪವ । ಮಾನನಯ್ಯ ಪ್ರಾಣದ ಸುತ್ರಾಣ ಸುಗುಣ ॥ ದೀನಜನ ಸಂತಾನಮಾನದ । ಆನಂದ ಗುಣಾನಂತ ವಿತಾನಾಬ್ಧಿ ಶಯನ ಹರಿ ॥ ನಂಬಿದೆ ॥ ೧ ॥ ಎಷ್ಟೊ ಪಾಪಿ ಕನಿಷ್ಟನೆಂದು । ಬಿಟ್ಟರೇನೊ ಬಿರಿದು ಹಿರಿದು ಬರುವದು ॥ ಸೃಷ್ಟಿಕರ್ತಾ ಅಷ್ಟಹರ್ತಾ। ಮುಷ್ಟಿಕಛಿದ ತುಷ್ಟಿಪ್ರದ ವಿಟ್ಠಲ ಕೈಗೊಟ್ಟುಳುಹೊ॥ ನಂಬಿದೆ॥ ॥ ೨ ॥ ಚಿತ್ತಸಾಕ್ಷಿ ಚಿನುಮಯಾತ್ಮ । ಸತ್ಯರೂಪ ಸದಯೋದಯ ಸದು ಪಾಶ್ರಯ ॥ ದೈತ್ಯಭಂಜನ ಸತ್ಯರಂಜನ । ಕ್ಷೇತ್ರಜ್ಞಪವಿತ್ರ ಕಥಾ । ಸ್ತೋ ತ್ರಾರ್ಹ ಶ್ರೀವತ್ಸಾಂಕಿತ ॥ ನಂಬಿದೆ ॥ ೩ ॥ ಮೂಲಿಕಾಪುರ ಮೌಳಿರತುನ । ನೀಲೇಂದೀವರಶ್ಯಾಮಲ ಕಲಿಮಲಭೀಷಣ ॥ ಕಾಲಕಾಲ ವಿಶಾಲ ಭುಜಬಲ । ಮೂಲೇಶ ಮುನೀಂದ್ರಾರ್ಚಿತ । ಶ್ರೀಲಕ್ಷ್ಮೀನಾರಾಯಣ ॥ ನಂಬಿದೆ ॥ ೪ ॥

॥ ೧೪೮ ॥ ರಾಗ, ನವರೋಜು [ಧಾಟಿ:-] ರೂಪಕತಾಳ

ನಮೋನಮಸ್ತೇ । ಉಮಾತನಯ ಕುಮಾರಾಗ್ರಜ । ನಮೋನಮಸ್ತೇ ॥ ॥ ಪಲ್ಲ ॥ ಅಮೋಘ ಶಮ । ದಮಾದಿ ಗುಣ । ಸಮೂಹಗತ । ವಿಮೋಹ ಸದಾ ॥ ನಮೋ ॥ ಅನುಪಲ್ಲ ॥ ಭಾರತವಾ । ಮಹಾಭಾರತವಾ । ಬಾದ ರಾಯಣನು ಪೇಳಿದಂತೆ ಬರೆದೆ । ಭಾರತವಾ ॥ ಮಾರಜಭ್ರಮೆಯ ದೂರ ಗೈದ ಸುವಿ । ಚಾರ ಧೀರ ಸುರ । ವಾರವಿನುತ ಪದ ॥ ನಮೋ ॥ ೧ ॥ ವಂದಿ ಸುವೇ । ನಾನೊಂದಿಸುವೇ । ವೃಂದಾರಕೇಂದ್ರ ಯೋಗೀಂದ್ರ ತವ ಚರಣಕ್ಕೆ। ವಂದಿಸುವೇ ॥ ವಂದಾರು ಮಂದಾರ ಚಂದನಚರ್ಚಿತ । ಚಂದ್ರಚೂಡ ಮನೋ । ನಂದ ಮೂರುತಿಯೆ ॥ ನಮೋ ॥ ೨ ॥ ಸುಕ್ಷೇಮದಾ । ಸುಜನ ಸುಕ್ಷೇಮದಾ । ಪಕ್ಷ ಪಾವನ ಮುಮುಕ್ಷುಜನಪ್ರಿಯ । ಸುಕ್ಷೇಮದಾ ॥ ಲಕ್ಷ್ಮೀನಾರಾಯಣನೆ ಲಕ್ಷಿತಾತ್ಮನೆ ವಿ । ಪಕ್ಷ ರಕ್ಷೋಗಣ । ಶಿಕ್ಷ ಸೂಕ್ಷ್ಮ ಮತೆ ॥ ನಮೋ ॥ ೩ ॥ ಶ್ರೀಃ ॥

॥ ೧೪೯ ॥ ರಾಗ, ನವರೋಜು [ಧಾಟಿ:- ಧನವ ಘಳಿಸಬೇಕಿಂಥಾದಾ] ಏಕತಾಳ

ಪ್ರಾಣಾಂತರ್ಗತ ಪ್ರಾಣಾ । ಅಣು । ರೇಣು ಚರಾಚರ ಪೂರ್ಣಾ॥ ಪಲ್ಲ ॥ ಕಾಣೆನು ನಿನ್ನ ಸಮಾನ ಮಾನದ ಪು । ರಾಣಪುರುಷ ಸುತ್ರಾಣ ವರೇಣ್ಯಾ ॥ ॥ ಅನುಪಲ್ಲ ॥ ಪಾಪಿಯು ನಾನೀ ಪಾಪಹ ಪಾವನ । ರೂಪು ದಯಾಪರ ಗೋಪಾಲಾ ॥ ಕಾಪಾಡೆನ್ನ ಸಮೀಪಕನಾಗಿ ದಯಾಪತಿ ಗೋಪತಿ ಶ್ರೀಪತಿ ನೀ ಗತಿ ॥ ಪ್ರಾಣಾಂ ॥ ೧ ॥ ಪಂಕಜನಾಭ ಶ್ರೀವೆಂಕಟರಮಣನೆ । ಕಿಂಕರ ಹೃದ್ಮುದಪ್ರೇರಕನೇ ॥ ಶಂಕರಪ್ರಿಯ ವಳಲಂಕಾಧಿಪ ಗುರು । ಶಂಖಚಕ್ರ ಗದಪದಾಬ್ಜಹಸ್ತನೇ ॥ ಪ್ರಾಣಾಂ ॥ ೨ ॥ ಚಟುಲ ನೇತ್ರಾವತಿತಟ ನಿಕಟ ಪ್ರಕಟ । ಭಟಪುರ ವರ ವೇಂಕಟಧಾಮಾ ॥ ವಟುವಾಮನ ಲಕ್ಷ್ಮೀನಾರಾಯಣ । ಪಟುವೀರ್ಯ ತಮೋಪಟಲ ನಿವಾರಣ ॥ ಪ್ರಾಣಾಂತರ್ಗತ ॥ ೩ ॥

॥ ೧೫೦ ॥ ರಾಗ, ಬೇಹಾಗ [ಧಾಟಿ:- ಝಾಲಿ ಜ್ಯಾಟೀ ಉಪವರ] ಏಕತಾಳ

ಮನವೆ ಶ್ರೀನಾರಾಯಣನನು ಸ್ಮರಿಸದೆ । ಮಾಯಾಪಾಶಕೆ ಸಿಲುಕುವರೇ ॥ ಪಲ್ಲ ॥ ವನಜನಾಭನ ಪದ ವನರುಹಯುಗ್ಮವ । ಅನುದಿನ ನೆನೆಯದೆ ಝಣುಗುವರೇ ॥ ವನಿತಾಲಂಪಟನಾಗುತ ಸಂತತ । ಮನಸಿಜಯಂತ್ರಕೆ ಮನಮರುಗುವರೇ ॥ ಅನುಪಲ್ಲ ॥ ತುಂಡುಸೂಳೆಯರ ದುಂಡುಕುಚವ ಪಿಡಿದು । ಗಂಡಸುತನವನು ಕೆಡಿಸುವರೇ ॥ ದಂಡಧರನ ಬಾಧೆ । ಎಂಡಲಿಯನು ಪಡ । ಕೊಂಡು ವೇದನೆಯನು ತಾಳುವರೇ ॥ ಕಂಡುಕಂಡು ನೀ ಗುಂಡಿಗೆ ಬೀಳ್ವರೆ । ಹೆಂಡಿರ ಸುಖರಸ ಉಂಡರು ಸಾಲದೆ ॥ ಮನವೆ ॥ ೧ ॥ ಬಂಧುಸುಖಕೆ ನೀ ಮುಂದುವರಿಯುತಲಿ । ಮುಂದ ಅಸಮದುಃಖ ತಾಳುವರೇ ॥ ಬಂದುದೆನ್ನ ಕಣ್ಣ ಮುಂದೆಯನುಭವಿಪೆ । ಎಂದಿಗೆನ್ನಾಜ್ಞೆಯು ಬಂದಪುದೋ ನಿಜ ॥ ಮನವೆ ॥ ೨ ॥ ಇಷ್ಟುದಿನದಿ ನೀ ಭ್ರಷ್ಟೆಯರಲಿ ಮೋಹ । ಪಟ್ಟ ಭಾಗ್ಯವನೆಲ್ಲ ತೋರೆಲೊ ನೀನೂ ॥ ಕಷ್ಟ ಮಾನಧನ ನಷ್ಟವಲ್ಲದೆ ಎಳ್ಳಿ । ನಿಷ್ಟು ಸುಖವನು ಕಾಣೆನಿನ್ನು ॥ ಇಷ್ಟಾರ್ಥಗಳೆಲ್ಲ ದೊರಕುವದೈಪರ । ಮೇಷ್ಟಿಪಿತನ ಮನವುಟ್ಟ ನೀ ಭಜಿಸೆಲೊ ॥ ಮನವೆ ॥ ೩ ॥ ವಿಷಯಪಳಂಚಿತನಾಗುತ ಸಂತತ । ಪಂಚಫಕೀರನು ಆಗುವರೇ ॥ ಮುಂಚೆ ಮಾಡಿದ ಕರ್ಮ ಸಾಲದೆಂದೆನುತಲಿ । ಸಂಚಿತ ಪಾಪವ ಸಂಗ್ರಹಿಸುವರೇ ॥ ಚಂಚಲಾಕ್ಷಿಯರ ಚಪಲದ ಮಾತನು । ವಂಚನೆ ಎಂಬುದ ತಿಳಿಯದೆ ಇರುವರೇ ॥ ಮನವೆ ॥ ೪ ॥ ಸಾರಿ ಸಾರಿ ಕೈಮುಗಿದು ಬೇಡುವೆನು ವಿ । ಕಾರ

ದುಃಬುರ್ದ್ಧಿಯ ಬಿಡು ಎಂದು ॥ ಭೂರಿ ತಪ್ಪುಗಳ ಕ್ಷಮಿಸಿ ಕ್ಯಾವ ಲಕ್ಷ್ಮೀ । ನಾರಾಯಣ ನೀನೆ ಗತಿಯೆಂದು ॥ ಪಾರಮಾರ್ಥಿಕ ವಿಚಾರವ ಮಾಡುತ । ಶ್ರೀರಮೇಶನ ಚರಣಾರವಿಂದವ ಸೇರೋ ॥ ಮನವೆ ॥ ೫ ॥ ಶ್ರೀ॥ ೬ ॥

॥ ೧೫೧ ॥ ರಾಗ, ಬೃಂದಾವನ [ಧಾಟಿ:- ನುತಿಸಲಳವೆ ಕೀರ್ತಿಯ। ಭುವ] ತ್ರಿವುಡೆತಾಳ

ಕಂಡೂ ಕೃತಾರ್ಥನಾದೆ। ಭುವನೇಂದ್ರರಂಘ್ರಿಯ। ಕಂಡೂ ಕೃತಾರ್ಥನಾದೆ ॥ ಪಲ್ಲ ॥ ಕಂಡೂ ಕೃತಾರ್ಥನಾದೆ ಭೂ । ಮಂಡಲದಿ ಪಸ ಗೊರ್ಂಡು ಮೆರೆದಿಹ। ಪುಂಡರೀಕದಳಾಕ್ಷ ಸತತಾ। ಖಂಡ ಸುಖ ಮಾ ತರ್ಾಂಡತೇಜರ ॥ ಅನುಪಲ್ಲ ॥ ವಾರಿರುಹಭವಾಂಡದ । ಭೂಮಧ್ಯ ವಿ । ಸ್ತಾರ ಜಂಬೂದ್ವೀಪದ । ನವಖಂಡದೊಳ್ । ಸಾರ ಭರತಖಂಡದ ॥ ಹಿಮ ಗಿರಿಯ ಪಾರ್ಶ್ವದ ॥ ತೋರು ವಿಂಧ್ಯಾಚಲದ ಮಧ್ಯಭಾ । ಗೀರಥಿಯ ಪಶ್ಚಿಮಭೂಭಾಗದ । ತೀರ ಕಾಶೀಮಠ ಸಂಸ್ಥಾನ ವಿ । ಚಾರಶಾಸ್ತ್ರವಿಶಾರ ದರ ಪದ ॥ ಕಂಡೂ ॥ ೧ ॥ ವರ ರಾಜೇಂದ್ರಯತೀಂದ್ರರ । ಕರಕಮಲ ಸಂಜಾ। ತರು ಗುರು ಸುರೇಂದ್ರರ । ಕರಪದ್ಮಮೂರ್ಧ್ವದಿ । ಧರಿಸೀರ್ದ ವಿಬುಧೇಂದ್ರರ ॥ ಕರಕಮಲಜಾತರ ॥ ಪರಮ ಸುಮತೇಂದ್ರರ ಸರೋ ರುಹ । ಕರಸಂಜಾತ ಮಹಾನುಭಾವರ । ಕರುಣನಿಧಿ ಕಮನೀಯ ಸದ್ಗುಣ । ಭರಿತ ಶ್ರೀಭುವನೇಂದ್ರರಂಘ್ರಿಯ ॥ ಕಂಡೂ ॥ ೨ ॥ ಸುಂದರಮುಖಶೋಭೆ ಯು । ಪೂರ್ಣಮಿ ಶುಭ । ಚಂದ್ರನನಿಭ ಕಾಂತಿಯು । ಶೋಭಿಪ ನವ । ಕುಂದರದನ ಪಂಕ್ತಿಯು ॥ ತಿಲಕದ ಛಾಯಾ ॥ ಮಂದಹಾಸಾನಂದ ಪುರಜನ । ವೃಂದಪೂಜಿತ ಪಾದಪದ್ಮ । ದ್ವಂದ ಸತತಾನಂದ ಸದ್ಗುಣ । ಸಾಂಪ್ರ ಶ್ರೀಭುವನೇಂದ್ರರಂಘ್ರಿಯ ॥ ಕಂಡೂ॥ ೩ ॥ ಶೃಂಗಾರರಸತೇಜರ । ಯಮನಿಯಮಾದ್ಯ । ಷ್ಟಾಂಗ ಯೋಗ ಸರ್ವಜ್ಞರ । ಪಾಪಾತ್ಮರ । ಕಂಗ ಳಿಗಗೋಚರ ॥ ಸತ್ಯಾವತಾರ ॥ ಮಂಗಳಾತ್ಮಕ ಸಂಗ ಸುಮನಸ । ರಂಗ ಸಾಧ್ಯವೇದಾಂಗ ಕರುಣಾ । ಪಾಂಗ ವಿಭುದೊಳಿತ್ತುಂಗವಂಗಜ । ಭಂಗ ಶ್ರೀಯತಿಪುಂಗವರ ಪದ ॥ ಕಂಡೂ ॥ ೪ ॥ ಎಷ್ಟೆಂದು ನಾ ಪೇಳಲೀ । ಸದ್ಗುರುವರ । ರಿಷ್ಟಕ್ಕೆ ತೋಷ ತಾಳಲೀ । ದಾರಿದ್ರದ । ಕಷ್ಟವೆಲ್ಲಪಹರಿ ಸಲಿ ॥ ದಯವಿರಲಿ ಯನ್ನಲಿ ॥ ಶ್ರೇಷ್ಠ ಗೌಡಸಾರಸ್ವತಾಸಾ । ಸಷ್ಟಿ ಕೊಂಕಣ ದೇಶ ವಿಪ್ರವಿ । ಶಿಷ್ಟವಡೆತನ ಪಟ್ಟವಾಳುವ । ಶ್ರೇಷ್ಠ ಯತಿವರರಂಘ್ರಿ ಕಮಲವ ॥ ಕಂಡೂ ॥ ೫ ॥ ಆಶೆಯೊಂದುಂಟೆನಗೆ । ಕಾವ್ಯವನ್ನೋದ ।

ಭ್ಯಾಸಗೈಯ್ಯುವದು ಮಿಗೆ । ಸನ್ನಿಧಾನದಿ । ಘೋಷಿಸಿ ಎನ್ನ ಹೀಗೆ ॥ ರಕ್ಷಿ
ಸಲು ಕಡೆಗೆ ॥ ಯೇಸು ಧನ್ಯನು ನಾನು ಕರುಣಾ । ರಾಶಿ ಸಜ್ಜನಪೋಷಿ
ನಿಗಮವಿಲಾಸರಂಘ್ರಿಯ ದಾಸದಾಸರ । ದಾಸ ನಾನು ದಯಾಶರಧಿಯರ ॥
॥ ಕಂಡೂ ॥ ೬ ॥ ಸತತ ಸದ್ಯತಿಧರ್ಮವಾ । ಪ್ರತಿಪಾಲಿತ । ಕ್ಷಿತಿಗತಿ ಪ್ರತಿ
ವಾಸವಾ । ಸಂತೆಸವುತಾ । ಮಿತ ಭಾಗ್ಯಸಂಪದವಾ ॥ ವಿಖ್ಯಾತವಾ ॥ ರತಿ
ಪತಿಯ ಪಿತ ಕೃತುಪಾಲಿತ ಸು । ನೃತಭಾಷಿತ ಲಕ್ಷ್ಮೀನಾರಾಯಣ । ಸತತ
ವೇದವ್ಯಾಸ ಶ್ರೀರಘು । ಪತಿ ಚರಣ ಪೂಜಿತರ ಪದವನು ॥ ಕಂಡೂ ॥ ೭ ॥

॥ ೧೫೭ ॥ ರಾಗ, ಕಾಂಬೋಧಿ [ಧಾಟಿ:- ಭಕ್ತಸುರ ತರುಲತೆ] ಝಂಪೆತಾಳ

ನಮೋ, ಯತಿಕುಲಶಿಖಾಮಣಿಯೆ ಸುಗುಣನಿಧಿಯೆ । ಮತಿಮತಾಂ ವರ ಮಾನಿನೇ ॥ ನಮೋ ॥ ಪಲ್ಲ ॥ ಭುವನೇಂದ್ರತೀರ್ಥ ಯತಿಪ್ರವರ ಕರಸಂಜಾತ । ಸುವಿವೇಕಿ ವರದೇಂದ್ರ ಕರಸಂಭವಾಯ ॥ ಅವಿರಳಾನಂದ ವೈಷ್ಣವ ನಿವಹಗೀರ್ವಾಣ। ತರವೆ ಸುಕೃತೇಂದ್ರ ಸದ್ಗುರವೇ ನಮೋಸ್ತು ॥ ನಮೋ ॥ ॥೧॥ ಕಾಶೀಮಠಾಧಿಪತಯೇಸುಸನ್ಯಾಸಿ । ನೇ ಸತ್ವಗುಣ ಭೂಷಾಯತೇ ॥ ವ್ಯಾಸರಘುಪತಿಚರಣ ದಾಸವತ್ಪೂಜಕ ವಿಶೇಷ ಭಕ್ತಿಜ್ಞಾನ ಶಾಲಿನೇತುಭ್ಯಂ॥ ॥ ನಮೋ ॥ ೨ ॥ ಆಜಾನಬಾಹವೇ ಗೌಡಸಾರಸ್ವತ ಮ । ಹಾಜನ ಸಮಾಜ ಮಂಡಲವಾಸಿನೇ ॥ ರಾಜೀವನಯನಾಯ ನಮಿತಜನನಿಕರ ಸುರ । ಭೂಜಾಯ ಭೂರಿ ರವಿತೇಜಸ್ವಿನೇ ॥ ನಮೋ ॥ ೩ ॥ ತುಷ್ಟಾಯ ಭಾಗವತನಿಷ್ಠಾಯ ದ್ವಿಜಕುಲವ । ರಿಷ್ಠಾಯ ಷಡ್ವರ್ಗ ಜಿಷ್ಣವೇ ತುಭ್ಯಂ ॥ ದುಷ್ಟಜನದೂರಾಯ ಧೀರಾಯ ಭಕ್ತದ । ತ್ತೇಷ್ಟಾಯ ಮಹತೇ ಸಹಿಷ್ಣವೇ ಮಹತೇ ॥ ನಮೋ ॥ ೪ ॥ ಬ್ರಹ್ಮಚರ್ಯಾದಿ ವ್ರತ ಧರ್ಮಾತ್ಮನೇ ವಿಹಿತ । ಕರ್ಮಣೇ ಸುಕೃತೇಂದ್ರ ಶರ್ಮಣೇತುಭ್ಯಂ ॥ ಬ್ರಹ್ಮಪಿತ ಲಕ್ಷ್ಮೀನಾರಾಯಣಾಂಘ್ರಿಧೃತಿ ಸು । ನಿರ್ಮಲಾಂತಃಕರಣ ಕರುಣನೀರಧಯೇ ॥ ನಮೋ ॥
॥ ೫ ॥ ಶ್ರೀಃ ॥

॥ ೧೫೮ ॥ ರಾಗ, ಹಂಸಧ್ವನಿ [ಧಾಟಿ:- ಮನವು ಬಾರದು ಸುಂದರಿ] ಆದಿತಾಳ

ಮನವು ನಿನ್ನಲಿ ನಿಲ್ಲಲಿ । ಅನು-ದಿನ- ನಿನ್ನ ನೆನದು । ಮನವು ನಿನ್ನಲಿ ನಿಲ್ಲಲಿ ॥ ಪಲ್ಲ ॥ ದುಃಖಸುಖ ಲೆಕ್ಕಿಸದೆ । ಮುಖ್ಯ ಫಲ ಮುಂದರಿಸೆ । ಮಿಕ್ಕುತ್ತ-ಸೊಕ್ಕಿ ಮೋ-ಹಕ್ಕೆ ಸಿಕ್ಕದೆ ॥ ಮನ ॥ ೧ ॥ ನಿನ್ನ ಗುಣ ವರ್ಣಿಸುತ । ನಿನ್ನವರ ಮನ್ನಿಸುತ । ನಿನ್ನ ಪಾ-ವನ್ನ ಲಾ-ವಣ್ಯ ಧ್ಯಾನಿಸೆ ॥

॥ ಮನ ॥ ೨ ॥ ಸಂತೋಷ ನಿರಂತರವು । ಸಂತಜನ ಸಹವಾಸವು ॥ ಶಾಂತತ್ವ-ವಾಂತು ಮ-ಹಾಂತ ಧೈರ್ಯದಿ ॥ ಮನ ॥ ೩ ॥ ಭಕ್ತಿ ಸುವಿರಕ್ತಿ ಜ್ಞಾನ । ಮುಕ್ತಿಗೆ ಮುಖ್ಯ ಕಾರಣ ॥ ಚಿತ್ತದೊ-ಳಿತ್ತೆಲ್ಲ -ಹೊತ್ತು ಹೊತ್ತಿಗೆ ॥ ಮನ ॥ ೪ ॥ ಪ್ರಿಯ ಶ್ರೀಲಕ್ಷ್ಮಿ ನಾ । ರಾಯಣ ಪರಾಯಣನ ॥ ಧೈರ್ಯದಂ-ತರ್ಯ ಗಂ-ಭೀರ್ಯ ಭಾವದಿ ॥ ಮನ ॥ ೫ ॥ ಶ್ರೀಃ ॥

॥ ೧೫೪ ॥ ರಾಗ, ಮೋಹನ [ಧಾಟಿ:–ಚಿಕ್ಕವನೇ ಇವನು] ತ್ರಿಪುಟತಾಳ

ಎಂದಿಗೆ ದೊರಕುವನು । ಗೋವಿಂದನು । ಎಂದಿಗೆ ದೊರಕುವನು ॥ ॥ ಪಲ್ಲ ॥ ಎಂದಿಗೆ ದೊರಕುವ । ಸುಂದರ ಪುರುಷನು । ಒಂದು ಗಳಿಗೆ ಯುಗ । ಒಂದಾಗಿ ಕಳೆದೆನು ॥ ಎಂ ॥ ಅನುಪಲ್ಲ ॥ ಸರಿ ರಾತ್ರಿ ವೇಳ್ಯದಲಿ । ಮೆಲ್ಲನೆ ಬಂದು । ಸರಸವನಾಡುತಲಿ ॥ ಪರಿ ಪರಿ ವಿಧದಲಿ ಸ್ಮರನ ಕಲೆಯ ತೋರಿ । ವಿರಹ ಗೊಳಿಸಿ ನಾಳೆ ಬರುವೆನೆನ್ನುತ ಪೋದ ॥ ಎಂದಿಗೆ ॥ ೧ ॥ ಧಿಮ್ಮೆನುತಿದೆ ಮನಸು । ಸುರತಸುಖವ । ನಿರ್ಮಲತನು ಕನಸು ॥ ನಿರ್ಮಲಾಂಗನ ಬಿಟ್ಟು ನಿಮಿಷ ಸೈರಿಸಲಾರೆ । ಒಮ್ಮೆ ಕಾಣಿಸಿದರೆ ಜನ್ಮ ಸಫಲ ಕಾಣೇ ॥ ॥ ಎಂದಿಗೆ ॥ ೨ ॥ ಭಾರಿಭಾರಿಗೆ ಆತನ । ನೆನಪಿನಿಂದ । ಸೂರೆಗೊಂಬುದು ಮನ್ಮನ ॥ ಕೇರಿಗೆ ಬಂದರೆ ಬಾರದಿರನು ಮನೆಗೆ । ಸೂರೆಗೊಂಬೆನು ಲಕ್ಷ್ಮೀನಾರಾಯಣನ ಮನ ॥ ಎಂದಿಗೆ ॥ ೩ ॥ ಪಂಕಜನಿಭ ಚರಣ । ಕೌಸ್ತುಭ ರತ್ನಾ । ಲಂಕೃತ ಶುಭಗ್ರೀವನ ॥ ಶಂಕರಾರ್ಚಿತನು ಮೀನಾಂಕಜನಕ ನಿಷ್ಕ । ಳಂಕ ಮಹಿಮನು ಶ್ರೀ ವೆಂಕಟರಮಣನು ॥ ಎಂದಿಗೆ ॥ ೪ ॥ ಅಂಗಜಕೋಟಿ ರೂಪ । ಪರಮ ಸದಯಾ । ಪಾಂಗ ನಿರತ ನಿರ್ಲೇಪ ॥ ಮಂಗಲಚರಿತ ಭುಜಂಗಶಯನ ಸರ । ಸಿಂಗ ವರದ ಮಾತಂಗ ಶ್ರೀರಂಗನು ॥ ಎಂದಿಗೆ ॥ ॥ ೫ ॥ ಚಂದಿರ ಶತ ವದನ । ಶೋಭಿಪ ನವ । ಕುಂದ ಕುಟ್ಮಲ ರದನ ॥ ಸಿಂಧುಶಯನ ಮುಚುಕುಂದಾಪ್ತ ಸಚ್ಚಿದಾ । ನಂದ ಗೋವಿಂದ ಮುಕುಂದ ನಂದನ ಕಂದ ॥ ಎಂದಿಗೆ ॥ ೬ ॥ ಅಕ್ಷರಾರ್ಚಿತ ದೇವನು । ಶರಣ ಜನ । ಪಕ್ಷ ಪರಾತ್ಪರನು ॥ ಪಕ್ಷೀಂದ್ರತುರಗ ಪದ್ಮಾಕ್ಷ ತ್ರಿಲೋಕ ವಿ । ಲಕ್ಷಣ ಮೂರ್ತಿ ಶ್ರೀಲಕ್ಷ್ಮೀನಾರಾಯಣ ॥ ಎಂದಿಗೆ ॥ ೭ ॥ ಶ್ರೀಃ ॥

॥ ೧೫೫ ॥ ರಾಗ, [ಧಾಟಿ:– ಶಾರದಾಂಬೆ ಸುಂದರತರ] ರೂಪಕತಾಳ

ನೀಲಮೇಘಶ್ಯಾಮ ರಾಮ । ನಿಖಿಳಲೋಕ ಕ್ಷೇಮಧಾಮ । ಪಾಲಿಸುವುದು ಹನುಮ ಪ್ರೇಮ । ಪಾವನಾತ್ಮ ಸೀತಾರಾಮ ॥ ಪಲ್ಲ ॥ ಸತ್ಯ

ಸಂಕಲ್ಪಾನುಸಾರ । ಚಿತ್ತ ಚಿನ್ಮಯಗಾತ್ರ ಶ್ರೀಧರ ॥ ನಿತ್ಯಮುಕ್ತ ಪೂರ್ಣ ನಾಮ । ಪ್ರತ್ಯಗಾತ್ಮ ಪೂರ್ಣಕಾಮ ॥ ೧ ॥ ಕಮಲನಾಭ ರವಿಶತಾಭ । ಸುಮನಸಾರ್ಚಿತಾಂಘ್ರಿ ಶೋಭ ॥ ಅಮಿತ ವಿಕ್ರಮ ಸಮರಭೀಮ । ಶಮಲ ಶಮನ ಸಾರ್ವಭೌಮ ॥ ೨ ॥ ಶಾರದೇಂದು ಸನ್ನಿಭಾನನ । ಮಾರುತಿ ಹೃದಯೈಕಸದನ ॥ ಧೀರ ಲಕ್ಷ್ಮೀನಾರಾಯಣ । ಸೂರಿಜನೋದ್ಧರಣ ನಿಪುಣ ॥ ೩ ॥

॥ ೧೫೬ ॥ ರಾಗ, ಬೇಹಾಗ [ಧಾಟಿ:- ನಳಿದಾಟಿವಳ್ ನಳಿನಾಂಬಕಿ] ರೂಪಕತಾಳ

ಕರುಣಾಕರ ಪರಮೇಶ್ವರ । ಗುರುತಮ ಕಲ್ಯಾಣಧಾಮ ॥ ಪಲ್ಲ ॥ ಸುರುಚಿರ ಪೀತಾಂಬರಧರ । ಸರಕೇಸರಿ ಕರಿವರವರದ ನಮೋ ನಮ ॥ ॥ ಅನುಪಲ್ಲ ॥ ಮಂದರಧರ ಮಧುಸೂದನ । ವೃಂದಾವನ ಸಂಚರಣ ॥ ಚಂದ್ರಕೋಟಿ ಸದೃಶಾನನ । ನಂದನೀಯ ನಂದಕುಮಾರ ವ್ರಜೇಶ್ವರ ॥ ॥ ೧ ॥ ಭುಜಗಶಯನ ಭೂತಭಾವನ । ಭಜಕಜನೋದ್ಧರಣ ನಿಪುಣ ॥ ಕುಜನ ಜನಾರಣ್ಯ ದಹನ । ವೃಜನಾರ್ದನ ದ್ವಿಜವರವಾಹನ ಮೋಹನ ॥ ॥ ೨ ॥ ಮಾತರಿಶ್ವಸಖ ಲೋಕೈಕ । ನಾಥ ಲಕ್ಷ್ಮೀನಾರಾಯಣ ॥ ವೀತಭಯವಿಧಾತ ರುಕ್ಮಿಣಿ । ಪ್ರೀತ ತ್ರಿಗುಣಾತೀತನೆ ಫಲ್ಗುಣಸೂತನೆ ॥ ೩ ॥

॥ ೧೫೭ ॥ ರಾಗ, ಆನಂದಭೈರವಿ [ಧಾಟಿ:- ಸೀಸೇ ದಯಾಮಯ ನಿರ್ಮಲ] ಅಷ್ಟತಾಳ

ಮಾತೆ ಸರಸ್ವತಿ ಮಂಜುಳ ಮೂರುತಿ । ಚೇತನಾತ್ಮಕಿ ಭಾರತಿ ॥ ಪ್ರೀತಿಯಿಂದೀವುದು ಪೀತಾಂಬರಧರನ । ಸಾತಿಶಯದ ಭಕುತಿ ॥ ಪಲ್ಲ ॥ ಗುರುಹಿರಿಯರ ಕಂಡು ಬೆರುಗುಗೊಳಿಸದೆ । ಕರುಣಿಸೆನಗೆ ಸನ್ಮತಿ ॥ ಪರಮಪಾವನ ವಿಷ್ಣುವರ ಪಾದಾಂಬುಜ ಮಧು । ಕರದಂತಿರಲಿ ಮನ್ಮತಿ ॥ ॥ ೧ ॥ ಶ್ರೀಶನ ಮೂರ್ತಿ ತಾರೇಶನಂದದಿ ಹೃದಯಾ । ಕಾಶದೊಳೂ ಕಾಣುತಿ ॥ ದೂಷಣ ಕಾಮಾದಿ ಕ್ಲೇಶವ ಬಿಡಿಸುತ । ಪೋಷಿಸೆನ್ನ ಹರಿಯ ಸ್ತುತಿ ॥ ೨ ॥ ವೈಷ್ಣವ ಶಾಸ್ತ್ರಕೆ ಹುಟ್ಟು ದ್ವೇಷಿಗಳಾಗಿ । ಮುಟ್ಟಿತವರ ಸಂತತಿ ॥ ಭ್ರಷ್ಟಶಾಸ್ತ್ರವನು ಬೊಬ್ಬಿಟ್ಟು ಪೇಳ್ವರು ಪರ । ಮೇಷ್ಟಿಯ ಪ್ರಾಣಸತಿ ॥ ೩ ॥ ಮನುಜರ ರೂಪದಿ ದನುಜರು ಭೂಮಿಯೊಳ್ । ಜನಿಸಿದ ಜಲಜನೇತ್ರೆ ॥ ಅನಘ ಲಕ್ಷ್ಮೀನಾರಾಯಣನ ದಾಸರಿಗೆಲ್ಲ । ಜನನೀಯೆ ನೀನೆ ಗತಿ ॥ ೪ ॥ ಶ್ರೀ ॥

॥ ೧೫೮ ॥ ರಾಗ, ಆನಂದಭೈರವಿ [ಧಾಟಿ:- ಬಾ ವೆಂಕಟಶೈಲಾಧಿಪ] ಆದಿತಾಳ

ಬಾ ಬಾ ಬಾ ಹರಿಯೆ । ಮೂಲೋಕದ ಧೊರೆಯೆ ॥ ಪಲ್ಲ ॥

ಸರ್ವೋತ್ತಮ ಸರ್ವಾಂತರ್ಯಾಮಿಕ। ಸರ್ವಾಧಾರ ಪ್ರವೀರ ಶೂರವರ ॥ ೧ ॥ ನಿತ್ಯ ಮುಕ್ತ ಪರಿಪೂರ್ಣ ಗುಣಾರ್ಣವ । ಸತ್ಯನಿಯಾಮಕ ಸತ್ಯವಾದರೆ ತ್ವರೆ ॥ ೨ ॥ ರೂಪತ್ರಯ ಭವ ತಾಪಶಮನ ಸ । ದ್ವ್ಯಾಪಕ ಸ್ಥಾಪಕ ಶ್ರೀ ಪುರುಷೋತ್ತಮ ॥ ೩ ॥ ಭಜಕರ ಭಾಗ್ಯ ನಿಧಿಯು ನೀನೆಂಬುದು । ನಿಜ ವಾಗಿರೆ ಶ್ರೀ ರಜಗಣೇಶ ಪತಿ ॥ ೪ ॥ ಶ್ರೀಲಕ್ಷ್ಮೀನಾರಾಯಣ ನಿರ್ಗುಣ । ಮೂಲೇಶ ಮುಕುಂದ ಮುನಿಂದ್ರ ವಂದಿತ ॥ ೫ ॥ ಶ್ರೀಃ ॥

॥ ೧೫೯ ॥ ರಾಗ, ಆನಂದಭೈರವಿ [ಧಾಟಿ:- ಕರುಣದಿ ಕಾಯೋ ಗೋಪಾಲಾ] ಅಷ್ಟತಾಳ

ನಂಬಿದೆ ನಿನ್ನ ಗಣೇಶಾ । ಜಗ । ದಂಬಿಕಾತನಯ ವಿಶ್ವಂಭರ ದಾಸಾ ॥ ॥ ಪಲ್ಲ ॥ ಲಂಬೋದರ ವಿಘ್ನೇಶ । ಶರ । ಣೆಂಬುದು ಸುರನಿಕುರುಂಬ ಮಹೇಶಾ ॥ ಅನುಪಲ್ಲ ॥ ತರುಣಾದಿತ್ಯ ಪ್ರಕಾಶ । ನಿನ್ನ । ಶರಣಾಗತನಾದೆ ಮೋಹನ್ನವೇಷ ॥ ಸುರುಚಿರ ಮಣಿಗಣ ಭೂಷ । ಜಗ । ದ್ಗುರುವೆ ಗುಹಾಗ್ರಜ ಪೊರೆಯೊ ನಿರ್ದೋಷಾ ॥ ೧ ॥ ಸಂತಜನರ ಮನೋವಾಸ। ಮೋಹ । ಭ್ರಾಂತಿಯಜ್ಞಾನಾಧ್ವಾಂತವಿನಾಶ ॥ ಶಾಂತಹೃದಯ ಸುಗುಣೋಲ್ಲಾಸ । ಏಕ । ದಂತ ದಯಾಸಾಗರ ದೀನಪೋಷಾ ॥ ೨ ॥ ಲಕ್ಷ್ಮೀನಾರಾಯಣನೆ ವ್ಯಾಸ । ಗುರು । ಶಿಕ್ಷಿತ ಸುಜ್ಞಾನ ತೇಜೋವಿಲಾಸ ॥ ಅಕ್ಷರ ಬ್ರಹ್ಮೋಪದೇಶ । ನಿತ್ಯ । ರಕ್ಷಿಸು ದನುಜಾರಣ್ಯ ಹುತಾಶಾ ॥ ೩ ॥ ಶ್ರೀಃ ॥

॥ ೧೬೦ ॥ ರಾಗ, ಪುಂಟಾರವ [ಧಾಟಿ:- ಚರಿಸುವ ಜಲದಲಿ ಮತ್ಸ್ಯನಿಗೆ] ಆದಿತಾಳ

ಶ್ರೀಗೌರೀಸುಕುಮಾರನಿಗೇ । ಯೋಗಿವರೇಣ್ಯ ಶುಭಾಕರಗೆ ॥ ರಾಗ ಲೋಭರಹಿತಗೆ ರಜತೇಶಗೆ। ಭಾಗೀರಥಿಸುತ ಭವಹರಗೆ ॥ ಮಂಗಲಂ ॥ ೧ ॥ ಪಾಶಾಂಕುಶ ವಿವಿಧಾಯುಧಗೇ । ಪಾಶಧರಾರ್ಚಿತ ಪಾವನಗೆ ॥ ವಾಸರ ಮಣಿ ಶತಭಾಸಗೆ ಈಶಗೆ । ಭಾಸುರ ಕನಕ ವಿಭೂಷಣಗೇ ॥ ಮಂಗಲಂ ॥ ॥ ೨ ॥ ಶೀಲಸುಗುಣಗಣವಾರಿಧಿಗೆ। ನೀಲೇಂದೀವರ ಲೋಚನಗೇ ॥ ಲೋಲ ಲಕ್ಷ್ಮೀನಾರಾಯಣ ರೂಪಗೆ । ಶಾಲಿಪುರೇಶ ಷಡಾನನಗೆ ॥ ಮಂಗಲಂ ॥ ೩ ॥

॥ ಹರಿದಾಸ ಲಕ್ಷ್ಮೀನಾರ್ಣಪ್ಪಯ್ಯಕೃತ ಪದಗಳು ಸಂಪೂ—

ಸ್ವಸ್ತಿ! ಪ್ರಜಾಭ್ಯಃ ಪರಿಪಾಲಯಂತಾಂ । ನ್ಯಾಯೇನ ಮಾರ್ಗೇಣ ಮಹಿಂ ಮಹೀಶಾಃ ॥
ಗೋಬ್ರಾಹ್ಮಣೇಭ್ಯಃ ಶಿವಮಸ್ತು ನಿತ್ಯಂ । ಲೋಕಾಸ್ಸಮಸ್ತಾಃ ಸುಖಿನೋ ಭವಂತು ॥ ೧ ॥

॥ ಪದ್ಯಸುಧಾದಾಯಿನಿ ಪ್ರಥಮಭಾಗ ಸಂಪೂರ್ಣಂ ॥

॥ ಶ್ರೀಕೃಷ್ಣಾರ್ಪಣಮಸ್ತು ॥

ಪ್ರಭಾಕರ ಮುದ್ರಾಯಂತ್ರ, ಉಡುಪಿ.

— ಇಲ್ಲಿ ದೊರೆಯುವ ಪದಗಳ ಪುಸ್ತಕಗಳು —

ಪದ್ಯರತ್ನಾಕರ ಭಾಗ 1	... ...	1—0—0
ಪದ್ಯರತ್ನಾಕರ ಭಾಗ 2	... ...	1—0—0
ಪದ್ಯರತ್ನಾಕರ ಭಾಗ 3	... ...	1—0—0
ಪದ್ಯರತ್ನಾಕರ 3 ಭಾಗಗಳೂ ಕೂಡಿರುವ ಮಜಭೂತ ಹಾಫ ಲೆದರ ಬೈಂಡ್ ಗಿಲ್ಟ್‌ಮಾಡಿದ ಪುಸ್ತಕ (ವಾಲ್ಯುಮು)		3—6—0
ಪದ್ಯಸುಧಾದಾಯಿನಿ (ಭಾಗ 1)	... ...	0-12—0
ತ್ರಿಕಾಲ ಭಜನ ಮಾಲಿಕಾ	... ...	0—8—0
ಪುರಂದರದಾಸರ ಕೀರ್ತನೆಗಳು ಭಾಗ 1, 2, 3 ಸಹಾ ಪ್ರತಿ 1ಕ್ಕೆ		0-10—0
ಪುರಂದರದಾಸರ ಕೀರ್ತನೆ 3 ಭಾಗಗಳೂ ಕೂಡಿರುವ ಉತ್ತಮ ಬ್ಯಾಂಡ್ ಮಾಡಿದ ವಾಲ್ಯುಮು 1ಕ್ಕೆ	...	2—4—0
ಕನಕದಾಸರ ಕೀರ್ತನೆಗಳು	... ...	0—8—0
ವಾದಿರಾಜರ ಕೀರ್ತನೆಗಳು	... ...	0—8—0
ಜಗನ್ನಾಥದಾಸರ ಕೀರ್ತನೆಗಳು	... ...	0-10—0
ಪುಷ್ಕರದಾಸರ ಕೀರ್ತನೆಗಳು	... ...	0—8—0
ಗೋಪಾಲದಾಸರ ಕೀರ್ತನೆಗಳು	... ...	0—8—0
ನಾನಾವಿಧ ಪದ್ಯರತ್ನಮಾಲಾ	... ...	0-12—0
ಹರಿಕೀರ್ತನೆಗಳು	... ...	0—1—0
ಉದಯರಾಗಗಳು	... ...	0—4—0

ಇನ್ನೂ ಅನೇಕ ನಮೂನೆ ಯಕ್ಷಗಾನ ಪುಸ್ತಕಗಳು ವಗೈರೆ ದೊರೆಯುತ್ತವೆ. ಕೆಟಲಾಗಿಗೆ ಬರಕೊಳ್ಳಿರಿ.

ವಿಳಾಸ:— ಮೆನೇಜರ, ಪ್ರಭಾಕರ ಮುದ್ರಾಯಂತ್ರ,

ಉಡುಪಿ, ದಕ್ಷಿಣ ಕನ್ನಡ.